ಭಾನುವಾರ, ನವೆಂಬರ್ 23, 2025 ₹ 7.00

www.prajavani.net


prajavani.net prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

## ದೀಪಾ ಕೃತಿಗೆ ಪ್ರಶಸ್ತಿ

ಪ್ಯಾರಾಲಿಂಪಿಕ್ ಪದಕ ವಿಜೇತೆ ದೀಪಾ ಮಲಿಕ್ ಸಹಲೇಖಕಿಯಾಗಿರುವ 'ಬ್ರಿಂಗ್ ಇಟ್ ಆನ್' ಕೃತಿಗೆ ನವದೆಹಲಿಯಲ್ಲಿ ನಡೆದ ಏಕಾಮ್ರಾ ಕ್ರೀಡಾ ಸಾಹಿತ್ಯ ಉತ್ಸವದಲ್ಲಿ 'ವರ್ಷದ ಕ್ರೀಡಾ ಪುಸ್ತಕ' ಪ್ರಶಸ್ತಿ ಲಭಿಸಿತು







## ಜಾಗೃತಿ

ಹೈದರಾಬಾದ್‌ನಲ್ಲಿ ಸೈಬರ್ ಅಪರಾಧಗಳ ಕುರಿತು ವಿದ್ಯಾರ್ಥಿಗಳು ಶನಿವಾರ ಜಾಗೃತಿ ಮೂಡಿಸಿದರು


ಲಾಂಚಿಂಗ್ ಫೇಸ್ 3
G SQUARE
Alchemy
ನ್ಯೂ ಕಾಂತರಾಜ್ ಅರಸ್ 80 ಅಡಿ ರಸ್ತೆ
ಶಾಲೆಗಾ
25,000 ಚದರ
ಸಲೂನ್‌ಗಳು ಮತ್ತು ಸ್ಪಾಗಳಿಗೆ 7000 ಚದರ. ಅಡಿ
ಬ್ಯಾಂಕ್ ಮತ್ತು ಎಟಿಎಂ ಗಳಿಗೆ 8000 ಚದರ. ಅಡಿ
80 ಅಡಿ ರಸ್ತೆ, ORR - PRR ಸಂಪರ್ಕ ಹಾಗೂ ವಾಣಿ
ಗಳಿಗೆ ಪ್ರವೇಶವನ್ನು ಹೊಂದಿರುವ 41 ಎಕ
ಕೋ ವರ್ಕಿಂಗ್ ಸ್ಥಳಗಳು 15,000 ಚದರ. ಅಡಿ
ಅಪಾರ್ಟ್ ಮೆಂಟ್ 25,000 ಚದರ. ಅಡಿ
ಔಟರ್ ರಿಂಗ್ ರೋಡ್
AVAIL UP TO 90%
LOAN FROM ALL LEADING BANKS
FOR COMMERCIAL APPROVED PLOTS


ಔಟರ್ ರಿಂಗ್ ರೋಡ್
ಆಸ್ಪತ್ರೆಗಳಿಗೆ
25,000 ಚದರ. ಅಡಿ
Hospital
ರೆಸ್ಟೋರೆಂಟ್‌ಗಳು
10,000 ಚದರ. ಅಡಿ
CAFE
SCHOOL
ಸ್ಯ ಸ್ಥಳಗಳು ಮತ್ತು ದೊಡ್ಡ ವಸತಿ ಪ್ಲಾಟ್
ರಿಯ ಏಕೈಕ ವಿಲ್ಲಾ ಸಮುದಾಯ
ಹೈಪರ್‌ಮಾರ್ಕೆಟ್‌ಗಳು
10,000 ಚದರ. ಅಡಿ
ರಿಟೇಲ್ ಮಾರಾಟ
ಮಳಿಗೆಗಳು
6000 ಚದರ. ಅಡಿ
SHOP
9.0M ROAD
18.0M Proposed
THE BLUEPRINT FOR ROYAL LIVING & INVESTMENT:
SIZE RANGING FROM 1,500 TO 25,000 SQ.FT.
80 FT. ROYAL ROAD ACCESS
53% GREEN OPEN SPACE
PLUG & PLAY PLOTS
RERA NO: PRM/KA/RERA/1268/378/PR/020125/007342
MUDA APPROVED RERA
FOR SITE VISIT CALL
97430 34000

G SQUARE 13 YEARS OF BUILDING Trust

G SQUARE GROUP
YOUR HOME. YOUR DREAM. YOUR CHOICE.
PLOTS | VILLAS | APTS.

LAUNCHING PH-3

# G SQUARE Alchemy

## MYSURU'S PREMIER VILLA COMMUNITY

### SMARTER INVESTMENT. PERFECT CONNECTIVITY. BIGGER RETURNS

## 300+ BOOKINGS IN PHASES 1 & 2.

120 REGISTERED, WITH 80+ CUSTOMERS STARTING CONSTRUCTION BY SANKRANTHI.






## EXPERIENCE VILLA LIVING, SPECIALLY CRAFTED FOR YOU

### SUSTAINABLE REASONS

7

- 13 Years of Trust
- India's Largest Plotted Developer
- 100% Appreciation
- 100% Solar-Powered Sites
- 20,000+ Happy Customers
- 4000+ Acres Delivered
- 5 Lakh+ Trees Across Our Sites

### PLOT + 3 BHK VILLA



₹96L

PLOT AREA: 1048 SQ.FT
VILLA AREA: 1572 SQ.FT

### PLOT + 4 BHK VILLA



₹1.29CR

PLOT AREA: 1408 SQ.FT
VILLA AREA: 2112 SQ.FT

## SALIENT FEATURES

- Total of 478 Residential Plots Ranging from 838 to 6632 sq.ft. + 3 Units of 25,000 sq.ft.
- 1 Min from Christ Public School
- 2 Mins from Outer Ring Road
- 2 Mins from Bogadi Road
- 10 Mins from Christ College
- 15 Mins from Apollo BGS Hospital
- 20 Mins from Bengaluru-Mysuru Expressway Junction
- All Inclusive Township - Plots, Villas and Apartments
- Easy Access to Mysore Airport
- 1 Year Free Maintenance
- Ready to Construct Villa Plot Community with 35+ World-Class Amenities
- Perfect Legal Documentation
- G Square Build Assist: Post-purchase guidance for Easy Villa Construction

## PLUG & PLAY PLOTS

- 24x7 Security
- CCTV Surveillance
- Black Top Roads
- Streetlights
- Underground Drainage Connection
- Domestic Water Supply
- Overhead Tank
- Sewage Treatment Plant
- Underground EB Connection
- Storm Water Drain

RERA No- PRM/KA/RERA/1268/378/PR/020125/007342

UP TO 90% BANK LOAN AVAILABLE
Canara Bank | HDFC BANK | ICICI Bank | punjab national bank | LIC HFL | AXIS BANK

G SQUARE BUILD ASSIST
A POST-PURCHASE GUIDANCE PROGRAM

CREDAI

CASH NOT ACCEPTED

FOR SITE VISIT CALL
97430 34000

ಭಾನುವಾರ, ನವೆಂಬರ್ 23, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 323 | ಪುಟ 20

● www.prajavani.net prajavani.net prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



**ಮಹಿತ್ ಚಿನ್ನಕ್ಕೆ ಗುರಿ**
ಭಾರತದ ಶೂಟರ್ ಮಹಿತ್ ಸಂಧು ಅವರು ಟೋಕಿಯೊದಲ್ಲಿ ನಡೆದ ಡೆಫಿಲಿಂಪಿಕ್ಸ್‌ನ 50 ಮೀ. ರೈಫಲ್ 3 ಪೊಸಿಷನ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದರು



**ಮತ್ಸ್ಯ ಮೇಳ**
ಬೆಂಗಳೂರಿನಲ್ಲಿ ನಡೆಯುತ್ತಿರುವ ಮತ್ಸ್ಯ ಮೇಳದಲ್ಲಿ ವಿದ್ಯಾರ್ಥಿಗಳು ಏಡಿಯನ್ನು ಮುಟ್ಟಿ ಸಂಭ್ರಮಿಸಿದರು

‘ಮೀನುಗಾರಿಕೆ ವಿ.ವಿ ಸ್ಥಾಪನೆಗೆ ಸಿದ್ಧ’ 5

ಮುಖ್ಯವಾಹಿನಿಗೆ ಗಿಗ್ ಕಾರ್ಮಿಕರು 8

# ಕಾಂಗ್ರೆಸ್ ಕಲಹ ಮತ್ತಷ್ಟು ತೀವ್ರ

## ಇನ್ನೂ ತೀವ್ರಗೊಂಡ ಬಣ ಜಗಳ ● ಖರ್ಗೆ ಭೇಟಿಯಾದ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಾಯಕತ್ವ ಬದಲಾವಣೆ, ಸಂಪುಟ ಪುನರ್‌ರಚನೆ ವಿಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಡುವಿನ ‘ಬಣ’ ರಾಜಕೀಯ ಶನಿವಾರ ಮತ್ತಷ್ಟು ತೀವ್ರಗೊಂಡಿದೆ.

ಯಾರ ಜತೆಗೆ ನಿಂತರೆ ಲಾಭ ಎಂಬ ಲೆಕ್ಕಾಚಾರದಲ್ಲಿರುವ ಶಾಸಕರು ಹಾಗೂ ಕಾಂಗ್ರೆಸ್ ನಾಯಕರು ಇಬ್ಬರು ನಾಯಕರನ್ನೂ ಭೇಟಿ ಮಾಡಿ, ತಮ್ಮ ಪರ ಲಾಬಿ ನಡೆಸುವಲ್ಲಿ ನಿರತರಾಗಿದ್ದಾರೆ. ಹೀಗಾಗಿ, ಸಿದ್ದರಾಮಯ್ಯ ಮತ್ತು ಶಿವಕುಮಾರ್ ಮನೆಗೆ ಶಾಸಕರು ಭೇಟಿ ನೀಡಿ ಸಮಾಲೋಚನೆ ನಡೆಸಿದರು.



ರಾಜ್ಯದ ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ದಿನಕ್ಕೊಂದು ಬೆಳವಣಿಗೆ, ತಂತ್ರ–ಪ್ರತಿತಂತ್ರದ ರಾಜಕಾರಣ ತಾರಕಕ್ಕೇರಿದ್ದರೂ ಆ ಪಕ್ಷದ ಹೈಕಮಾಂಡ್ ಮೌನ ವಹಿಸಿದೆ. ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆಯವರು ಬೆಂಗಳೂರಿನಲ್ಲಿಯೇ ಇದ್ದರೂ ಈ ಬಗ್ಗೆ ಬಹಿರಂಗವಾಗಿ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.

5

### ‘ಹೈಕಮಾಂಡ್ ತೀರ್ಮಾನ ನಾನೂ, ಶಿವಕುಮಾರ್ ಒಪ್ಪಬೇಕು’



**ಬೆಂಗಳೂರು:** ‘ಹೈಕಮಾಂಡ್ ಏನೇ ತೀರ್ಮಾನ ಮಾಡಿದರೂ ನಾನೂ ಒಪ್ಪಬೇಕು, ಡಿ.ಕೆ. ಶಿವಕುಮಾರ್ ಕೂಡಾ ಒಪ್ಪಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಖರ್ಗೆ ಅವರ ಭೇಟಿ ಬಳಿಕ ಮತನಾಡಿದ ಅವರು, ‘ಯಾವಾಗ ದೆಹಲಿಗೆ ನನ್ನನ್ನು ಕರೆಯುತ್ತಾರೋ ಆಗ ಹೋಗುತ್ತೇನೆ. ಹೈಕಮಾಂಡ್ ತೀರ್ಮಾನಕ್ಕೆ ನಾನು, ಎಲ್ಲ ನಾಯಕರೂ ಬದ್ಧರಾಗಿರಬೇಕು’ ಎಂದರು.

ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ ಅವರು, ‘ನಾನು ಕಳೆಗುಂದಿಲ್ಲ. ನಾನು ಯಾವಾಗಲೂ ಕಳೆಗುಂದುವ ಪ್ರಶ್ನೆಯೇ ಇಲ್ಲ. ಅತಿಯಾಗಿ ಖುಷಿಯಾಗಿಯೂ ಇರುವುದಿಲ್ಲ’ ಎಂದರು. ‘ನಾನು ಮತ್ತು ಖರ್ಗೆ ಒಂದೂವರೆ ತಾಸು ಚರ್ಚೆ ಮಾಡಿದ್ದೇವೆ. ಇದು ಸೌಹಾರ್ದ ಭೇಟಿ ಅಷ್ಟೆ. ಪಕ್ಷ ಸಂಘಟನೆ ಮತ್ತು ಸ್ಥಳೀಯ ಸಂಸ್ಥೆಗಳ ಚುನಾವಣೆ ಬಗ್ಗೆ ನಾವಿಬ್ಬರೂ ಚರ್ಚೆ ನಡೆಸಿದ್ದೇವೆ’ ಎಂದೂ ಹೇಳಿದರು.

### ಗಾಳ ಹಾಕಿ ಮೀನು ಹಿಡಿಯುವ ಕಲೆ ಗೊತ್ತು: ಡಿಕೆಶಿ

‘ಗಾಳ ಹಾಕಿ ಮೀನು ಹಿಡಿಯುವ ಕಲೆಗಾರಿಕೆ ನನಗಿದೆ. ಅದಕ್ಕೆ ಬಹಳ ತಾಳ್ಮೆ ಬೇಕು’ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

ಶನಿವಾರ ನಡೆದ ವಿಶ್ವ ಮೀನುಗಾರಿಕೆ ದಿನಾಚರಣೆ ಹಾಗೂ ಮತ್ಸ್ಯ ಮೇಳದಲ್ಲಿ ಮಾತನಾಡಿದ ಅವರು, ‘ಇಲ್ಲಿ ಪ್ರದರ್ಶನಕ್ಕೆ ಇಟ್ಟಿದ್ದ ಮಶೀರ್ ಫಿಶ್ ಅನ್ನು ಮುಖ್ಯಮಂತ್ರಿ ಅವರಿಗೆ ತೋರಿಸಿದೆ. ನಾನು ಸಣ್ಣವನಿದ್ದಾಗ ಸಂಗಮಕ್ಕೆ ಹೋಗಿ ಮೀನು ಹಿಡಿಯುತ್ತಿದ್ದೆ. ಮೀನು ಹಿಡಿಯುವುದು ಬೇರೆ, ಮಾರಾಟ ಮಾಡುವುದು ಬೇರೆ’ ಎಂದರು.

‘ಈ ಮೀನು ವ್ಯವಹಾರ ಜಾತಿ ಮೇಲೆ ಇಲ್ಲ, ನೀತಿ, ಛಲ ಹಾಗೂ ಆಸಕ್ತಿ ಮೇಲಿದೆ. ಮೀನುಗಾರನಿಗೆ ನಿತ್ಯ ಮೀನು ಸಿಗುವುದಿಲ್ಲ. ಕೆಲವೊಮ್ಮೆ ವಾರವಾದರೂ ಒಂದು ಮೀನೂ ಸಿಗುವುದಿಲ್ಲ. ಅಂತಹ ತಾಳ್ಮೆ ವೃತ್ತಿ ನಡೆಸುತ್ತಿರುವ ನೀವು ಶ್ರಮಜೀವಿಗಳು’ ಎಂದು ಸಮಾರಂಭದಲ್ಲಿ ಪಾಲ್ಗೊಂಡಿದ್ದ ಮೀನುಗಾರರನ್ನು ಉದ್ದೇಶಿಸಿ ಹೇಳಿದರು.

### ಜೇನುಕಲ್ ಸ್ವಾಮಿ ಪಾದುಕೆ ಪೂಜೆ



ಸದಾಶಿವನಗರದಲ್ಲಿರುವ ಡಿ.ಕೆ. ಶಿವಕುಮಾರ್ ಅವರ ಮನೆಯಲ್ಲಿ ಶುಕ್ರವಾರ ರಾತ್ರಿ ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕಿನ ಜೇನುಕಲ್ ಸಿದ್ದೇಶ್ವರಸ್ವಾಮಿ ಪಾದುಕೆ ಪೂಜೆ ನಡೆಯಿತು. ದೇವಸ್ಥಾನದ ಅರ್ಚಕರು ವಿಶೇಷ ಪೂಜೆ ನೆರವೇರಿಸಿದ್ದಾರೆ. ಈ ಕುರಿತು ಮಾಹಿತಿ ನೀಡಿದ ಅರ್ಚಕರೊಬ್ಬರು, ‘ಶಿವಕುಮಾರ್ ಅವರ ಮನೆಯಲ್ಲಿ ಪೂಜೆ ನೆರವೇರಿದೆ. ಅವರು ಏನು ಸಂಕಲ್ಪ ಮಾಡಿಕೊಂಡಿದ್ದಾರೆ ಎಂಬುದು ಗೊತ್ತಿಲ್ಲ’ ಎಂದರು. ಜೇನುಕಲ್ ಸಿದ್ದೇಶ್ವರ ಸ್ವಾಮಿ ದೇವಸ್ಥಾನಕ್ಕೆ ಜುಲೈ 26ರಂದು ಭೇಟಿ ನೀಡಿದ್ದ ಡಿ.ಕೆ. ಶಿವಕುಮಾರ್, ವಿಶೇಷ ಪೂಜೆ ಸಲ್ಲಿಸಿದ್ದರು.

ಇದನ್ನೇ ನೆಪವಾಗಿಟ್ಟುಕೊಂಡು ಶಾಸಕರಾದ ಸಿ.ಪಿ. ಯೋಗೇಶ್ವರ್, ಪ್ರಕಾಶ್ ಕೋಳಿವಾಡ, ಯಾಸೀರ್ ಅಹ್ಮದಖಾನ್ ಪಠಾಣ, ಶ್ರೀನಿವಾಸ್ ಮಾನೆ, ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಅವರು ಡಿ.ಕೆ. ಶಿವಕುಮಾರ್ ನಿವಾಸಕ್ಕೆ ಶುಕ್ರವಾರ ರಾತ್ರಿ ಭೇಟಿ ನೀಡಿದ್ದರು.

### ಕ್ರಾಂತಿಗೆ ಸಿದ್ಧರಾಗಿರಿ: ಎಚ್‌ಡಿಕೆ

‘ಕೆಲವೇ ತಿಂಗಳುಗಳಲ್ಲಿ ರಾಜ್ಯ ರಾಜಕಾರಣವು ಸ್ಫೋಟಕ ಬೆಳವಣಿಗೆಗೆ ಸಾಕ್ಷಿಯಾಗಲಿದೆ. ಆ ರಾಜಕೀಯ ಬೆಳವಣಿಗೆಗೆ ಜೆಡಿಎಸ್ ಕಾರ್ಯಕರ್ತರು ಸಿದ್ಧರಾಗಿರಬೇಕು’ ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷರೂ ಆಗಿರುವ ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಕರೆ ನೀಡಿದರು.

ಪಕ್ಷದ ಬೆಳ್ಳಿಹಬ್ಬದ ಅಂಗವಾಗಿ ನಗರದಲ್ಲಿ ಶನಿವಾರ ನಡೆದ ಜೆಡಿಎಸ್ ರಾಷ್ಟ್ರೀಯ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು, ‘ರಾಜ್ಯದಲ್ಲಿ ಈಗಿನ ರಾಜಕೀಯ ಬೆಳವಣಿಗೆಗಳನ್ನು ಗಮನಿಸಿದರೆ, ಮುಂದಿನ ದಿನಗಳಲ್ಲಿ ಯಾರೂ ಕೂಡ ನಿರೀಕ್ಷೆ ಮಾಡದಂತಹ ಬದಲಾವಣೆಗಳು ಆಗಲಿವೆ. ರಾಜ್ಯದಲ್ಲಿ ಯಾರು ಯಾವ ನಿರ್ಧಾರ ತೆಗೆದುಕೊಳ್ಳುತ್ತಾರೆ ಎಂದು ಹೇಳಲಾಗದ ಪರಿಸ್ಥಿತಿ ಸೃಷ್ಟಿಯಾಗಿದೆ. ಕೆಲವೇ ತಿಂಗಳಲ್ಲಿ ರಾಜಕೀಯ ಕ್ರಾಂತಿ ಆಗುವ ಸಾಧ್ಯತೆ ಇದೆ. ಹೀಗಾಗಿ, ಕಾರ್ಯಕರ್ತರು ಮತ್ತು ಮುಖಂಡರು ಜನರ ಬಳಿಯೇ ಇರಬೇಕು. ಜನರ ಸಂಕಷ್ಟಗಳಿಗೆ ಸ್ಪಂದಿಸಬೇಕು. ಯಾವುದೇ ಪರಿಸ್ಥಿತಿ ಎದುರಿಸಲು ಸಿದ್ಧರಿರಬೇಕು’ ಎಂದರು.



ಪ್ರೊ.ಮಾದೇವ ಭರಣಿ ಅವರ ಚಾಮರಾಜನಗರದ ಗುಂಡ್ಲುಪೇಟೆಯ ಅಂಚಿನಲ್ಲಿರುವ ತೋಟದಲ್ಲಿ ಕೆಲ ದಿನದ ಹಿಂದೆ ಕಳ್ಳರು ಶ್ರೀಗಂಧದ ಮರವನ್ನು ಕತ್ತರಿಸಿದ್ದರು

## ಕೃಷಿಕರ ಹಾಡು–ಪಾಡು ● ಮರಗಳ ರಕ್ಷಣೆಯೇ ಸವಾಲು

# ಶ್ರೀಗಂಧ ಕೃಷಿಗೆ ನೂರಾರು ಕಷ್ಟ

ಒಳನೋಟ

● ಗಾಣಧಾಳು ಶ್ರೀಕಂಠ

**ಬೆಂಗಳೂರು:** ‘ಏಳೆಂಟು ವರ್ಷಗಳ ಹಿಂದೆ ನನ್ನ ತೋಟದಲ್ಲಿದ್ದ 10 ಗಂಧದ ಮರಗಳು ಕಳವಾದವು. ಈವರೆಗೆ 200ಕ್ಕೂ ಹೆಚ್ಚು ಗಂಧದ ಮರಗಳನ್ನು ಯಾರೋ ಕಡಿದು ಒಯ್ದಿದ್ದಾರೆ. ಐದು ಪ್ರಕರಣದಲ್ಲಿ ಎಫ್‌ಐಆರ್ ಆಗಿದೆ. ಆದರೆ ಗಂಧದ ಮರಗಳ ಕಳ್ಳತನ ನಿಂತಿಲ್ಲ’ – ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆಯ ಕೃಷಿಕ ದಿನೇಶ್ ಅವರ ವಿಷಾದದ ಮಾತುಗಳಿವು.

‘ನಮ್ಮ ಜಮೀನಿನಲ್ಲಿ ಬೆಳೆದಿದ್ದ ಗಂಧದ ಮರಗಳ ಕಟಾವಿಗೆ ಅನುಮತಿ ಕೋರಿ ಅರಣ್ಯ ಇಲಾಖೆಗೆ ಅರ್ಜಿ ಸಲ್ಲಿಸಿದ್ದೆ. ವರ್ಷ ಕಳೆದರೂ ಅನುಮತಿ ಸಿಕ್ಕಿರಲಿಲ್ಲ. ಅರಣ್ಯ ಸಚಿವರಿಂದ ಹೇಳಿಸಿದ ನಂತರ ಪ್ರಕ್ರಿಯೆ ಮುಂದುವರಿಯಿತು. ಬೆಳೆದು ನಿಂತಿರುವ ಮರಗಳನ್ನು ರಕ್ಷಿಸಿಕೊಳ್ಳುವುದೇ ಬಹುದೊಡ್ಡ ಸವಾಲು’– ಕಲಬುರಗಿಯ ಕೃಷಿಕ ರಾಜೇಂದ್ರ ಯರನಾಳೆ ಅವರ ಬೇಸರದ ನುಡಿಗಳಿವು.

ಇದು ಎರಡೂವರೆ ದಶಕದಿಂದ ಶ್ರೀಗಂಧದ ಬೆಳೆಯುತ್ತಿರುವ ಬಹುತೇಕ ಬೆಳೆಗಾರರ ಪಡಿಪಾಟಲು!

ಶ್ರೀಗಂಧ ಜಗತ್ತಿನ ಅತ್ಯಂತ ಬೆಲೆ ಬಾಳುವ ಮರ. ಅರಣ್ಯ ಪ್ರದೇಶಗಳಲ್ಲಿ ನೈಸರ್ಗಿಕವಾಗಿ ಬೆಳೆಯುವ ಈ ಪರಾವಲಂಬಿ ಮರವನ್ನು ಕೃಷಿಯಾಗಿ ಬೆಳೆದು, ಮಾರಾಟ ಮಾಡುವುದಕ್ಕೆ ಸರ್ಕಾರದ ನಿರ್ಬಂಧವಿತ್ತು. 2001-2ರಲ್ಲಿ ಆ ನಿರ್ಬಂಧ ತೆರವುಗೊಳಿಸಿದ ಸರ್ಕಾರ, ‘ಶ್ರೀಗಂಧ ಬೆಳೆಯಿರಿ ಶ್ರೀಮಂತರಾಗಿರಿ’ ಎಂದು ಕೃಷಿಕರನ್ನು ಪ್ರೋತ್ಸಾಹಿಸಿತು. ಕೃಷಿಕರ ಮನದಲ್ಲಿ ‘ಸಿರಿವಂತಿಕೆ’ಯ ಕನಸನ್ನು ಬಿತ್ತಿ, ಬೆಳೆಯುವವರಿಗೆ ಗಂಧದ ಸಸಿಗಳನ್ನು ವಿತರಿಸಿ, ಅವುಗಳನ್ನು ಬೆಳೆಸಲು ಪ್ರೋತ್ಸಾಹಧನ ನೀಡಿತು.

ಸರ್ಕಾರದ ಪ್ರೋತ್ಸಾಹ, ‘ಉತ್ಪ್ರೇಕ್ಷಿತ ಪ್ರಚಾರ’ದಿಂದಾಗಿ, ಎರಡೂವರೆ ದಶಕಗಳಲ್ಲಿ ರಾಜ್ಯದಾದ್ಯಂತ ಸಾವಿರಾರು ಎಕರೆಯಲ್ಲಿ ಶ್ರೀಗಂಧ ವಿಸ್ತರಿಸಿಕೊಂಡಿದೆ. ಪ್ರಸ್ತುತ ರಾಜ್ಯದಲ್ಲಿರುವ ಗಂಧದ ಕೃಷಿಕರಲ್ಲಿ ಶೇ 95 ರಷ್ಟು ದೊಡ್ಡ ಹಿಡುವಳಿದಾರರೇ ಇದ್ದಾರೆ. ಇವರಲ್ಲೂ ಗಂಧ ಬೆಳೆದು ‘ಕೋಟಿ’ ಹಣ ಕಂಡವರು ಮಾತ್ರ ಕೆಲವರು.

4

### ‘ಹಣ ನೀಡಲು ಆರು ತಿಂಗಳು ಬೇಕು’

ಅರಣ್ಯ ಇಲಾಖೆ ಬೆಳೆಗಾರರು/ಕೃಷಿಕರಿಂದ ಶ್ರೀಗಂಧದ ಮರಗಳನ್ನು ಖರೀದಿಸಲು ಶಿವಮೊಗ್ಗ, ಧಾರವಾಡ ಮತ್ತು ಮೈಸೂರಿನಲ್ಲಿ ಖರೀದಿ ಕೇಂದ್ರಗಳನ್ನು ತೆರೆದಿದೆ. ಜೊತೆಗೆ, ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ (ಕೆಎಸ್‌ಡಿಎಲ್) ಸಂಸ್ಥೆ ಮತ್ತು ಕರ್ನಾಟಕ ರಾಜ್ಯ ಕರಕುಶಲ ನಿಗಮದ ಘಟಕಗಳಲ್ಲೂ ಶ್ರೀಗಂಧ ಮಾರಾಟಕ್ಕೆ ಸರ್ಕಾರ ಅವಕಾಶ ನೀಡಿದೆ.

‘ಶ್ರೀಗಂಧಕ್ಕೆ ಬೆಲೆ ನಿಗದಿ ಮಾಡುವಾಗ, ಹಾರ್ಟ್‌ವುಡ್ ಅನ್ನು 20 ವರ್ಗಗಳನ್ನಾಗಿ ಮಾಡುತ್ತೇವೆ. ಅದರ ಕಾಂಡವನ್ನು ಎ,ಬಿ,ಸಿ ಎಂದು ಮೂರು ವರ್ಗ, ಎಲೆ, ಚಕ್ಕೆ, ತೊಗಟೆ, ಬೇರು ಆಧರಿಸಿಯೂ ಗುಣಮಟ್ಟ ನಿಗದಿಯಾಗುತ್ತದೆ. ಶ್ರೀಗಂಧ ತಂದುಕೊಟ್ಟ 6 ತಿಂಗಳ ಒಳಗಾಗಿ ಹಣ ಪಾವತಿಸುತ್ತೇವೆ’ ಎಂದು ಶಿವಮೊಗ್ಗ ಶ್ರೀಗಂಧ ಕೋಠಿಯ ಉಸ್ತುವಾರಿ ಎಸಿಎಫ್ ಎಸ್.ಒ.ದಿನೇಶ್ ಹೇಳುತ್ತಾರೆ. ‘ಉತ್ಪನ್ನದ ವರ್ಗೀಕರಣ ಹಾಗೂ ಪರಿವರ್ತನೆ ನಂತರವೇ ಬೆಲೆ ನಿಗದಿ ಯಾಗುತ್ತದೆ. ಈ ಕಾರಣದಿಂದ ಕೆಲವೊಮ್ಮೆ ರೈತರಿಗೆ ಹಣ ನೀಡಿಕೆ ತಡವಾಗುತ್ತದೆ. ಸರ್ಕಾರದಿಂದ ಅನುದಾನ ಬಂದ ಹಾಗೆ ತ್ವರಿತವಾಗಿ ಹಣ ವಿತರಿಸಲಾಗುತ್ತಿದೆ. ಉತ್ಪನ್ನದ ಒಟ್ಟು ಮೌಲ್ಯದಲ್ಲಿ ಶೇ 10ರನ್ನು ಮೇಲ್ವಿಚಾರಣೆ ಶುಲ್ಕ ಎಂದು ಕಳೆದು ಶೇ 90ರಷ್ಟು ಹಣವನ್ನು ರೈತರಿಗೆ ನೀಡಲಾಗುತ್ತಿದೆ’ ಎನ್ನುತ್ತಾರೆ ಮೈಸೂರು ಶ್ರೀಗಂಧ ಕೋಠಿಯ ಉಸ್ತುವಾರಿ ಎಸಿಎಫ್ ವಿನೀತಾ.

ಈಗ ಪ್ರತಿ ಕೆ.ಜಿ ಶ್ರೀಗಂಧಕ್ಕೆ ₹12,000ದಿಂದ ₹13,700ರವರೆಗೆ ಬೆಲೆ ನಿಗದಿ ಮಾಡಿ ಖರೀದಿಸಲಾಗುತ್ತಿದೆ. ಸದ್ಯ ಮೊದಲ ದರ್ಜೆಯ ಶ್ರೀಗಂಧಕ್ಕೆ ಕೆ.ಜಿ.ಗೆ ₹17,700ರವರೆಗೂ ಬೆಲೆ ಇದೆ. ಗುಣಮಟ್ಟ ಕಡಿಮೆ ಆದಂತೆ ಬೆಲೆಯೂ ಇಳಿಯುತ್ತದೆ’ ಎನ್ನುತ್ತಾರೆ ಕೋಠಿಯ ಉಸ್ತುವಾರಿಗಳು.



ಜೊಹಾನಸ್‌ಬರ್ಗ್‌ನಲ್ಲಿ ಶನಿವಾರ ಆರಂಭಗೊಂಡ ಜಿ20 ಶೃಂಗಸಭೆಗೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಸ್ವಾಗತಿಸಿದ ದಕ್ಷಿಣ ಆಫ್ರಿಕಾದ ಅಧ್ಯಕ್ಷ ಸಿರಿಲ್ ರಾಮಫೋಸಾ ಹಾಸ್ಯ ಚಟಾಕಿ ಹಾರಿಸಿದ ಕ್ಷಣ — ಪಿಟಿಐ ಚಿತ್ರ

### ಜಿ20 ಸಭೆ: ಮೋದಿ ನಾಲ್ಕು ಉಪಕ್ರಮ

**ಜೊಹಾನಸ್‌ಬರ್ಗ್ ಜಿ20 ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದ ನಾಲ್ಕು ಉಪಕ್ರಮಗಳು ಹೀಗಿವೆ:**

- ಮಾದಕವಸ್ತು ಕಳ್ಳಸಾಗಾಣಿಕೆ ತಡೆ, ಭಯೋತ್ಪಾದನೆ ನಿಗ್ರಹ
- ಜಾಗತಿಕ ಆರೋಗ್ಯ ರಕ್ಷಣೆ ತುರ್ತು ಸ್ಪಂದನಾ ತಂಡ ರಚನೆ
- ಜಾಗತಿಕ ಸಾಂಪ್ರದಾಯಿಕ ಜ್ಞಾನ ಭಂಡಾರ ಸೃಷ್ಟಿ
- ಆಫ್ರಿಕಾದಲ್ಲಿ ಕೌಶಲ ದ್ವಿಗುಣ ಯೋಜನೆ

ವಿವರ 8

# ಅಲ್ ಫಲಾಹ್ ವಿ.ವಿಗೆ ಇದೆ 2008ರಿಂದ ಉಗ್ರರ ನಂಟು

**ಮುಖ್ಯಾಂಶಗಳು**

- ‘ವೈಟ್ ಕಾಲರ್‘ ಭಯೋತ್ಪಾದನೆ ಜಾಲ
- ತನಿಖೆ ಚುರುಕು

**ಫರೀದಾಬಾದ್, ಶ್ರೀನಗರ (ಪಿಟಿಐ):** ದೆಹಲಿಯ ಕೆಂಪು ಕೋಟೆ ಬಳಿ ನಡೆದ ಕಾರು ಸ್ಫೋಟದ ಕುರಿತು ತನಿಖೆ ನಡೆಸುತ್ತಿರುವ ಪೊಲೀಸರು, ಇಲ್ಲಿನ ಅಲ್ ಫಲಾಹ್ ವಿಶ್ವವಿದ್ಯಾಲಯದ ‘ವೈಟ್ ಕಾಲರ್‘ ಭಯೋತ್ಪಾದನೆಯ ಜಾಲವನ್ನು ಭೇದಿಸಿದ್ದಾರೆ.

ಈ ವಿಶ್ವವಿದ್ಯಾಲಯಕ್ಕೂ ಉಗ್ರರಿಗೂ ದೀರ್ಘಕಾಲದಿಂದ ನಂಟು ಇದೆ ಎನ್ನುವುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ ಎಂದು ಮೂಲಗಳು ತಿಳಿಸಿವೆ.

ಡಾ. ಉಮರ್ ನಬಿ ಸೇರಿದಂತೆ ದೆಹಲಿ ಸ್ಫೋಟದ ಪ್ರಮುಖ ಆರೋಪಿಗಳು ಅಲ್ ಫಲಾಹ್ ವಿಶ್ವವಿದ್ಯಾಲಯದಲ್ಲಿ ಉದ್ಯೋಗದಲ್ಲಿದ್ದರು. ಜತೆಗೆ, 2008ರಲ್ಲಿ ಜೈಪುರ, ಅಹಮದಾಬಾದ್, ಗೋರಖ್‌ಪುರದಲ್ಲಿ ನಡೆದಿದ್ದ ಸ್ಫೋಟಗಳ ಪ್ರಮುಖ ಆರೋಪಿ, ಸದ್ಯ ತಲೆಮರೆಸಿಕೊಂಡಿರುವ ಇಂಡಿಯನ್ ಮುಜಾಹಿದ್ದೀನ್ (ಐಎಂ) ಉಗ್ರ, ಬಾಂಬರ್ ಮಿರ್ಜಾ ಶದಾಬ್ ಬೇಗ್ ಕೂಡ ಈ ವಿಶ್ವವಿದ್ಯಾಲಯದ ಹಳೆಯ ವಿದ್ಯಾರ್ಥಿ. 2007ರಲ್ಲಿ ಬೇಗ್ ಅಲ್ ಫಲಾಹ್‌ನಿಂದ ಬಿ.ಟೆಕ್ ಪದವಿ ಪಡೆದಿದ್ದ. 2008ರಲ್ಲಿ ದೆಹಲಿಯಲ್ಲಿ ನಡೆದ ಬಾಟ್ಲಾ ಹೌಸ್ ಎನ್‌ಕೌಂಟರ್ ಬೆನ್ನಲ್ಲೇ, ಈತ ಸೌದಿ ಅರೇಬಿಯಾಕ್ಕೆ ಪರಾರಿಯಾಗಿದ್ದ.

ಉತ್ತರ ಪ್ರದೇಶದ ಅಜಂಗಢದ ರಾಜಾ ಕಾ ಕಿಲಾ ಮೊಹಲ್ಲಾದ ನಿವಾಸಿಯಾದ ಬೇಗ್, ಕೊನೆಯ ಬಾರಿ 2019ರಲ್ಲಿ ಅಫ್ಗಾನಿಸ್ತಾನದಲ್ಲಿ ಕಾಣಿಸಿಕೊಂಡಿದ್ದ. ನಂತರ ಈತನ ಬಗ್ಗೆ ತನಿಖಾ ಸಂಸ್ಥೆಗಳಿಗೆ ಯಾವುದೇ ಸುಳಿವು ಸಿಕ್ಕಿಲ್ಲ.

6

### ಶಿಕ್ಷಕರ ಸಂಬಳ ಬಿಡುಗಡೆಗೆ ಆದೇಶ

**ಬೆಂಗಳೂರು:** ‘ಯಾರನ್ನೇ ಆಗಲಿ, ವಿಶೇಷವಾಗಿ ಸಾರ್ವಜನಿಕ ಸೇವಾ ವಲಯಗಳಲ್ಲಿ ದುಡಿಯುವವರಿಗೆ ಸೂಕ್ತ ವೇತನ ನೀಡದೆ ಕೆಲಸ ಮಾಡಿ ಎಂದು ಬಲವಂತ ಮಾಡುವಂತಿಲ್ಲ’ ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ತಾಕೀತು ಮಾಡಿದೆ.

ವಿವರ 6

ಚಿನಕುರುಳಿ ಪ್ರಕಾಶ್ ಶೆಟ್ಟಿ




# ‘ಅತಿಥಿ’ಗಳಿಗೇ ನೈಜತೆ ಸಾಬೀತಿನ ಹೊಣೆ

● ಚಂದ್ರಹಾಸ ಹಿರೇಮಳಲಿ

**ಬೆಂಗಳೂರು:** ಸರ್ಕಾರಿ ಪದವಿ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರು ತಮ್ಮ ಪದವಿ ಪ್ರಮಾಣ ಪತ್ರಗಳ ನೈಜತೆಯನ್ನು ತಾವೇ ಸಾಬೀತು ಮಾಡಬೇಕಿದ್ದು, ಅದಕ್ಕೆ ತಗಲುವ ವೆಚ್ಚವನ್ನೂ ಅವರೇ ಭರಿಸಲು ಕಾಲೇಜು ಶಿಕ್ಷಣ ಇಲಾಖೆ ಸೂಚಿಸಿದೆ.

ಎರಡು ದಶಕಗಳಿಗೂ ಹೆಚ್ಚು ಸಮಯದಿಂದ ಅತಿಥಿ ಉಪನ್ಯಾಸಕರ ಸೇವೆಯನ್ನು ಕಾಲೇಜು ಶಿಕ್ಷಣ ಇಲಾಖೆ ಬಳಸಿಕೊಳ್ಳುತ್ತಾ ಬಂದಿದೆ. ಸ್ನಾತಕೋತ್ತರ ಪದವಿಯಲ್ಲಿ ಶೇ 55 ಅಂಕ ಪಡೆದವರನ್ನು ಸ್ಥಳೀಯ ಬೋಧನಾ ಅಗತ್ಯಕ್ಕೆ ಅನುಗುಣವಾಗಿ ನೇಮಕ ಮಾಡಿಕೊಳ್ಳಲಾಗುತ್ತಿತ್ತು. ನಂತರ ಯುಜಿಸಿ ನಿಯಮಗಳಿಗೆ ಅನುಗುಣವಾಗಿ ಇತರೆ ಅರ್ಹತೆಗಳನ್ನೂ ಪರಿಗಣಿಸಲಾಗುತ್ತಿದೆ.

6

### ನೈಜತೆಯ ಪ್ರಮಾಣ ಪತ್ರವೂ ನಕಲಿ?

ಅತಿಥಿ ಉಪನ್ಯಾಸಕರ ಶೈಕ್ಷಣಿಕ ದಾಖಲೆಗಳ ನೈಜತೆಯ ಪರಿಶೀಲನೆಯನ್ನು ಕಾಲೇಜು ಶಿಕ್ಷಣ ಇಲಾಖೆ 2017ರಲ್ಲಿ ನಡೆಸಿತ್ತು. ಅದಕ್ಕೆ ತಗಲುವ ವೆಚ್ಚವನ್ನೂ ಇಲಾಖೆಯೇ ಭರಿಸಿತ್ತು. 23 ಅಭ್ಯರ್ಥಿಗಳು ಪಡೆದಿದ್ದ ಪಿಎಚ್‌.ಡಿ ಪ್ರಮಾಣಪತ್ರಗಳು ನಕಲಿ ಎನ್ನುವುದು ಪತ್ತೆಯಾಗಿತ್ತು. ಅವರ ವಿರುದ್ಧ ಇಲಾಖೆಯ ಅಧಿಕಾರಿಗಳೇ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದರು. ‘ಈ ಬಾರಿ ದಾಖಲೆಗಳ ನೈಜತಾ ಪ್ರಮಾಣ ಪತ್ರ ಪಡೆಯುವ ಜವಾಬ್ದಾರಿಯನ್ನು ಅತಿಥಿ ಉಪನ್ಯಾಸಕರಿಗೇ ನೀಡಿದ್ದು, ಕೆಲವರು ನೀಡಿದ ನೈಜತಾ ಪ್ರಮಾಣ ಪತ್ರಗಳೇ ನಕಲಿಯಾಗಿವೆ. ಅವುಗಳನ್ನು ದೃಢಪಡಿಸಿಕೊಳ್ಳಲು ನಮಗೆ ಅಧಿಕಾರ ಇಲ್ಲ.



ಒಂದು ವೇಳೆ ಇಲಾಖೆಯೇ ಆ ಕೆಲಸ ಮಾಡಿದ್ದರೆ ಸಾಕಷ್ಟು ಅಭ್ಯರ್ಥಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬಹುದಿತ್ತು’ ಎನ್ನುತ್ತಾರೆ ಹೆಸರು ಹೇಳಲು ಬಯಸದ ಪ್ರಾಂಶುಪಾಲರೊಬ್ಬರು.

## ದರೋಡೆ ಪ್ರಕರಣ: ಕಾನ್‌ಸ್ಟೆಬಲ್ ಸೇರಿ ಆರು ಮಂದಿ ಬಂಧನ

# ₹6.29 ಕೋಟಿ ಜಪ್ತಿ, ಇಬ್ಬರು ನಾಪತ್ತೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಎಟಿಎಂ ಕೇಂದ್ರಕ್ಕೆ ಹಣ ತುಂಬಿಸಲು ತೆರಳುತ್ತಿದ್ದ ಸಿಎಂಎಸ್ ಏಜೆನ್ಸಿ ವಾಹನವನ್ನು ಅಡ್ಡಗಟ್ಟಿ ₹7.11 ಕೋಟಿ ದರೋಡೆ ಮಾಡಿದ ಪ್ರಕರಣದಲ್ಲಿ ಪೊಲೀಸ್ ಕಾನ್‌ಸ್ಟೆಬಲ್ ಸೇರಿ ಆರು ಮಂದಿಯನ್ನು ಬಂಧಿಸಿ, ₹6.29 ಕೋಟಿ ನಗದು ಜಪ್ತಿ ಮಾಡಲಾಗಿದೆ.

ಸಿಎಂಎಸ್ ಏಜೆನ್ಸಿ ವಾಹನದ ಮೇಲ್ವಿಚಾರಕ ಗೋಪಾಲ್ ಪ್ರಸಾದ್ ಅಲಿಯಾಸ್ ಗೋಪಿ, ಸಿಎಂಎಸ್ ಮಾಜಿ ಉದ್ಯೋಗಿ ಕ್ಸೇವಿಯರ್ ಅಲಿಯಾಸ್ ಪ್ರಜನ್, ಗೋವಿಂದಪುರ ಠಾಣೆಯ ಕಾನ್‌ಸ್ಟೆಬಲ್ ಅಣ್ಣಪ್ಪ ನಾಯ್ಕ್ ಅವರನ್ನು ಬೆಂಗಳೂರಿನಲ್ಲಿ ಹಾಗೂ ನವೀನ್, ರವಿ, ನೆಲ್ಸನ್ ಅವರನ್ನು ಹೈದರಾಬಾದ್‌ನಲ್ಲಿ ಬಂಧಿಸಲಾಗಿದೆ.

ನಗರದ ಹೊರವಲಯದಲ್ಲಿ ಆರೋಪಿಗಳು ಬಚ್ಚಿಟ್ಟಿದ್ದ ನಗದು ಜಪ್ತಿ ಮಾಡಿದ್ದು, ಚಿತ್ತೂರಿನಲ್ಲಿ ಇನೋವಾ ಕಾರು ವಶ ಪಡಿಸಿಕೊಳ್ಳಲಾಗಿದೆ. ಪ್ರಕರಣದಲ್ಲಿ ಭಾಗಿಯಾಗಿರುವ ಇಬ್ಬರು ನಾಪತ್ತೆ-ಯಾಗಿದ್ದು, ಅವರ ಪತ್ತೆಗೆ ಪ್ರತ್ಯೇಕ ತಂಡಗಳನ್ನು ರಚಿಸಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

6



ಗೋಪಾಲ್ ಪ್ರಸಾದ್ | ಅಣ್ಣಪ್ಪ ನಾಯ್ಕ್ | ಕ್ಸೇವಿಯರ್ | ರವಿ | ನೆಲ್ಸನ್ | ನವೀನ್

### ಪ್ರಕರಣದ ಸವಾಲುಗಳು

- ಕೃತ್ಯದ ವೇಳೆ ಮೊಬೈಲ್ ಬಳಸದ ಆರೋಪಿಗಳು
- ಸಿ.ಸಿ.ಟಿ.ವಿ ಕ್ಯಾಮೆರಾ ಇಲ್ಲದ ಸ್ಥಳ ದರೋಡೆಗೆ ಆಯ್ಕೆ
- ತನಿಖೆ ದಿಕ್ಕು ತಪ್ಪಿಸುವ ಸಲುವಾಗಿ ಹಲವು ಭಾಷೆಗಳಲ್ಲಿ ಸಂವಹನ
- ಕೃತ್ಯಕ್ಕೆ ಬಳಸಿರುವ ಮೂರು ವಾಹನಗಳಿಗೂ ನಕಲಿ ನಂಬರ್ ಪ್ಲೇಟ್ ಬಳಕೆ
- ದರೋಡೆಯಾದ ಹಣದ ನೋಟುಗಳ ಸರಣಿ ಸಂಖ್ಯೆಗಳ ದಾಖಲಾತಿ ಇಲ್ಲದ ಕಾರಣ ಗುರುತಿಸುವುದು ಕಷ್ಟ

### 200 ಸಿಬ್ಬಂದಿ ಕಾರ್ಯಾಚರಣೆ

ಪ್ರಕರಣದ ತನಿಖೆಗಾಗಿ ಇಬ್ಬರು ಡಿಸಿಪಿಗಳ ನೇತೃತ್ವದಲ್ಲಿ ಇಬ್ಬರು ಎಸಿಪಿಗಳು, ಪೊಲೀಸ್ ಇನ್‌ಸ್ಪೆಕ್ಟರ್‌ಗಳು, ಪೊಲೀಸ್ ಸಬ್ ಇನ್‌ಸ್ಪೆಕ್ಟರ್‌ಗಳು, ಪೊಲೀಸರು ಸೇರಿ 200 ಸಿಬ್ಬಂದಿಯನ್ನೊಳಗೊಂಡ 11 ತಂಡಗಳನ್ನು ರಚಿಸಲಾಗಿತ್ತು. ಸಿದ್ದಾಪುರ, ಜಯನಗರ, ಸಿಸಿಬಿ ಪೊಲೀಸರು ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು. ಘಟನೆ ನಡೆದ 54 ತಾಸಿನೊಳಗೆ ಆರೋಪಿಗಳ ಬಂಧನ ಹಾಗೂ ಹಣ ಜಪ್ತಿ ಮಾಡಿದ ತನಿಖಾ ತಂಡಕ್ಕೆ ₹5 ಲಕ್ಷ ನಗದು ಬಹುಮಾನವನ್ನು ಸೀಮಾಂತ್ ಕುಮಾರ್ ಸಿಂಗ್ ಘೋಷಿಸಿದರು.

ಪ್ರಜಾವಾಣಿ

# ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

## REAL ESTATE SELLING

### Sites

### Vishweshwariah Layout

**VISHWESHWARAIAH LAYOUT 6TH** Block BDA 30X40, WF, Near KLE Law College. Direct Owner Meeting: 9980860138

**VISHWESHWARAIAH LAYOUT,** BDA 6th Block, 20x30 West Facing, 30 Feet Road Direct Owner Contact: 6360050356

**BDA SITE** for Sale 30×40 East facing Builder Location Vishweshwaraiah Layout Near BDA Complex & 100 ft Ring Road Rs.13,500/- negotiable Contact: 8970306030

**40X60 NORTH** Facing site, SMV 5th block, DC converted, BBMP A & E Khata. Contact: 9900266984

### Vidyaranyapura

**IMMEDIATE REGISTRATION** 60'x40' BEL 2 Block, (Independent 4 BHK Duplex) Prime Location 16000/- S/F: 9844264852

### Whitefield

**GATED COMMUNITY** Plot/ Site for Sale near Hopefarm. Within 1 km WGS School, College, Bus stop, Market, Metro & Railway Station. Mob:9880248878

### Bidadi

**SITE FOR** SALE, 40x60 'E' Khatha, North facing, at Bidadi 2 Sites Available, No Agreement, 50 Lakhs each. Mobile: 9902722354, 9035200896, 9538995333

### Doddaballapur Road

**PRESTIGE NORTH-WEST** County 125X80 Prestige Marigold 50X80, Century Eden 40X50, Adarsh Savana 50X80, Supreme-Estates 9632974714

### Rajanukunte

**SALE 25X90** BIAAPA approved ready-to build site in developed layout near Rajanukunte. Rs.4500/ sft. 9741064589

### House

### Kumaraswamy Layout

**2040SFT 3BHK-DPLX4.30CR,19X40_4BHK** Tplx 2.10cr chikkalsandra 1270sft_2bhk,flat_6500/- 1000sft,2BHK Flat-72L 20x30,3units Home 1.20cr,:8904210201

### Nagarabhavi

**NAGARABHAVI RENT** Independent Triplex 4BHK Luxurious House Lift. 4-Car-Parks Borewell Master Bedrooms 1.1 Lakhs: 9036207777

### Vishweshwariah Layout

**20X30 FURNISHED** 3 BHK newly constructed duplex house ready to occupy for sale at BDA Vishweshwarayya 6th block, ground floor parking, three floor, cost Rs.1.20 Cr contact owners Ramesh 9341250356, Sharma 9449655262 Sathish 9342897697

### Vidyaranyapura

**4-STORY HOUSE** FOR SALE in Ramchandrapura, Jalahalli (Post) Bangalore 13. Size: 20X30. Built area 2700 Sqft: 1,75,00,000/- 9880450523.

### Mysore

**LUXURY HOUSE** FOR SALE in Mysore Brand New Three Floors 37 Squares. Ground 2BHK, First and Second 3BHK Duplex. Own Borewell 2 carparking with all modern facility. Contact: 99867-42260/ 99864-94502

### Flat

### Jigani

**PREMIUM CATEGORY** Senior Citizen Fully Serviced Facility in Jigani.Furnished Ready to Move in, Prices Starting from Rs. 45 Lakhs, Most Affordable in Bangalore. Call: 9742258578, 7353316201

**SALE 3BHK** 1596sqft Apartment Attibale NH. Parking Lift Security Park. Nearby Hospital School Market. 9686548479/ 9845824977

### Jakkur

**FLAT FOR** Sale Spacious 3BHK 1800 Sqft E/F Fully Furnished Gated Community with Good amenities 2.2Cr Negotiable Near Manyata Tech Park: 7026500097

### J P Nagar

**Flat for Sale 2/3 Bedroom in Majestic Fortune Apartment JP Nagar 7th Phase**
Majestic Fortune J.P. Nagar, 7th Phase O.C. Obtained Ready to move, Contact: 90191 63704 / 93412 28681

### Kanakapura Road

**OFF KANAKAPURA** Road Near Adigas Hotel 9th Main Bagegowda Layout 2-BHK Fully Furnished 1200Sq.ft Flat For Sale. Only Vegetarians Need Contact:-9845303631

**INVESTMENT PROPERTIES** AVAILABLE FOR SALE NEAR METRO STATIONS, KANAKAPURA ROAD. SARAKKI HOMES: 9663676464

### Nagarabhavi

**FLATS FOR-SALE** @ Nagarabhavi Chandra Layout 2 & 3BHK Ready to Move In Good Location Call:9538472420 9845066608

### Agricultural Land

### Out-Station

**AGRICULTURAL LAND** For-Sale at Yadgir Dist Naykal Village Near-to Main Road 11.28 Acres. 9880563629 9448473358

### Commerical

### Anjanapura

**COMMERCIAL SITE** FOR SALE Site no. 685 Anjanapura 8th block, north facing 50*80 Good location call: 8197062035.

### Hebbal

**ON BELLARY** Main Road Commercial Property East 25,000Sft Converted Near Nandi Upchar Hotel Clear-Titles Call:9341260828

### Farm House/ Land/ Resorts

### South

**VION PROPERTIES**
*Private Limited*
*(Builders, Devlopers, Promoters)*
Proudly Announces LAUNCH OF Farmland Villa Plots 5.5 Guntas Project "*VICTORY GARDENS*" ,Nelguli, Uttarahalli Hobli, Bangalore South - 560082
PRE LAUNCH OFFER
RS 2000/- SQFT ONLY
- *32 kms from Vidhana Soudha*
- *2.5 kms from Bangalore-Kanakpura Highway,*
- *Gated Community*
- *5.5 Guntas (5989 Sqft)*
- *Farmland Villa Plots*
- *Ready for Occupation*
- *Immediate Registration*
- *Clear Titles*
- *General Property*
- *4 kms to Bidadi 9000 Acres Township boundary*
- *Bank/NBFC Loans Arranged*

CONTACT
7411692219
8618576685
9482303339

### Industrial & Factory

### Tumkur Road

**SALE/ BUILT** to suit, 10 Acres Industrial Warehouse Land Opposite to Namaste Bangalore Hotel. 9141326819

## REAL ESTATE BUYING

### Sites

### Anjanapura

**WANTED BDA** & BBMP SITES Anjanapura Banashankari 6th Stage BCC & BCMC Layout JP nagar 8th/ 9th Phase Narayana Nagar 1st 2nd 3rd Block NPKL Layout Vishveshwaraiah Layout. Contact: 9845298419

**WANTED IMMEDIATELY** 50x80, 60x80 Vacant Land-in Anjanapura 5th`G`Block Close to Nice Road for Residential Purposes. Sellers directly Call:9884078597

### Banashankari

**BDA SITES** WANTED ARKAVATHY ANJANAPURA BANASHANKARI 6TH STAGE VISHWESHWARAIAH KEMPEGOWDA ANY BDA LAYOUT: 9845062822/ 8660751654

### Vishweshwariah Layout

***BUYING/ SELLING*** 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

## RENTAL PROPERTIES

### Accommodation Available

### Commercial

**5000 Sqft Commercial Office Space Availble For Rent**
Majestic Terraces Building in Electronic City Phase-1. Contact: 98440 23523

**COMMERCIAL SPACE** For Rent 1600sqft, First Floor, ITI Layout Main Road, Sector-7, HSR, Prime Location, Contact Owner: 9343594249 8217449006

**1000SQFT OFFICE** space Prime Area -18th Cross, Malleshwaram for rent. Contact 9535673309, 9448559144

### Flats

**2 BHK North Facing Fully Furnished Flat for Rent in Majestic Fortune Apartment**
2 BHK North Facing Fully Furnished Flat for Rent in Majestic Fortune Apartment J.P. Nagar Contact: 93412 28681

**"3BHK LUXURY_FLAT** Jayanagar with servant quarter vastu Rent Rs.1 Lakh "Sri.Ganesh Estates"- 9845286505"

## BUILDERS ESSENTIAL

### Water Proofing

**LEAKAGE... LEAKAGE...** Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

## JOB OPPORTUNITIES

### Teachers/ Professors

**SESHADRIPURAM INSTITUTIONS**
27, Nagappa Street, Seshadripuram Bengaluru-560 020. Phone: 22955350
Website: www.set.edu.in E-mail : set.edu.in@gmail.com
*Applications invited for the post of*
**ASSISTANT PROFESSOR for MBA & MCA PROGRAMME at Yelahanka, Seshadripuram & Tumakuru**

**MBA**

**Eligibility:** Bachelor's Degree in any discipline and Master's Degree in Business Administration / PGDM / C. A. / ICWA / M. Com. with First Class or equivalent and two years of professional experience after acquiring the degree of Master's Degree and consistently good academic record in appropriate specializations **(Business Analytics, Human Resource & Marketing, Entrepreneurship).**
Ph. D. desirable. NET / KSET compulsory

**MCA**

**Eligibility:** B. E. / B. Tech / B. S. and M. E. / M. Tech. / M. S. or Integrated M. Tech in relevant branch with First Class or equivalent in any one of the degree.
OR
B. E. / B. Tech and MCA with First Class or equivalent in any one of the two degrees
OR
Graduation of three years' duration with Mathematics as a compulsory subject and MCA with First Class or equivalent with 2 years of relevant experience after acquiring degree of MCA
Ph. D. desirable. NET / KSET compulsory

**Salary as per AICTE Norms**
**WALK-IN-INTERVIEW on Thursday, the 27th November 2025 @ 9.00 a. m.**
**Venue: Seshadripuram Educational Trust Office, 27, Nagappa Street, Seshadripuram, Bengaluru – 560 020.**
Eligible candidates should bring handwritten application along with resume, photos & copies of testimonials at the time of Interview.
**N. R. Pandith Aradhya** President — **Dr. Wooday P. Krishna** Honorary General Secretary

ವಿಶ್ವ ವೆಂಕಟೇಶ್ವರ ಇಂಟರ್‌ನ್ಯಾಷನಲ್ ಸ್ಕೂಲ್
**V.V.INTERNATIONAL SCHOOL**
Affiliated to CBSE upto Senior Secondary, New Delhi, Affiliation Number 830685
**V. V. PU & DEGREE COLLEGE**
**Invites applications for**
Vice Principal - (School & PU College)
Co-ordinators - (Pre-Primary, Primary & Secondary)
Pre-Primary - NTT/ ECE / Montessori
PRT & TGT - All Subjects
Post Graduates Teachers & Lecturers for School, PU & Degree College - (English, Kannada, Sanskrit, Hindi, Physics, Chemistry, Mathematics, Biology, Economics, Business Studies, Accountancy, Computer Science, Statistics)
Art & Craft, Music, Dance, Physical Instructor, Librarian
Call: 9448 516 410 / 9141 300 990 / 9141 300 991 / 7676 863 934
Sy. No. 72, Tirumala Garden, Kodipalya, Kengeri, Bengaluru - 560 060
E-mail: tirumalabalaji75@gmail.com
hr.vvinstitutions@gmail.com
www.vishwavenkateshwaradegreecollege.com | www.vvinternationalschool.com | www.kbcpucollege.com

**COMPETENT CBSE** maths teacher needed, capable of teaching 8th, 9th and 10th classes,for a school near Uppala, kasaragod district, Kerala.(30 kms from mangalore) Call 8921908624

**WANTED NTT** passed teacher for pre KG School RRnagar Bangalore Call 9448091814 or mail dsveeraiahmlc@gmail.com

### Marketing & Sales

**FUTURE KIDS PUBLICATIONS PVT LTD**
Publisher & Distributors of Educational Children Books required
**SR. SALES OFFICER and SALES OFFICER**
Minimum 1 to 5 Year Exp. in Sales / Marketing
Salary - Rs. 25k onwords +ESI+PF+Bonus+ +Conveyance + Incentive + Vehicle Maintenance
at No.381/29, 65th Cross, 5th Block, Rajajinagar, Bangalore-10.
Mobile No: 9986167032
080-23145345
fkvkbooks@gmail.com

**JOB VACANCY** at DG Renewable Energy. Marketing Officer (1 Position) Sales Executive (2 Positions) Only male candidate. Two wheeler must. Location: Horamavu, Bangalore-560043. Contact: 9481827127

**WANTED MANAGERS,** Sales Executives, Telecallers to work different parts of Bangalore earn 20,000-30,000: 8867627879

### Hotel

**MANAGERS/ SUPERVISOR** & Candidates with Hotel Management/ Business Administration Background for CAFE MYTHRI at Bommasandra Industrial Area, Bangalore- 560099. Contact: 080-26601239/ 97418-62781 Email: cafemythri@gmail.com

### Hospital & Medical Jobs

**ANM A** FEMALE & fulltime patient care giver NURSE for CHETANA VIHARA Assisted Living Centre, Shanthinagar, Bangalore- 560027. Boarding & Lodging provided. Contact: 080-26601239/ 97418-62781 Email: cvhospital.in @gmail.com

### Accounts & Finance

**WANTED: ACCOUNTS** ASSISTANT, COMPUTER OPERATOR with ESI,EPF knowledge, Good salary-for SHASHI DETECTIVE SERVICES PVT.LTD. Rajajinagar, Bangalore. Ph:23133633/ 23134876/9880495755. contact@shashisecurity.com

**WANTED EXPERIENCED** Accounts Assistant with Tally, GST, Computer Knowledge. Reply mundhralighting@gmail.com 9986033339

## BUSINESS

### Business to Business

### Business

**ADVERTISER INSTRUCTED** to Purchase Running Corrugated Box Unit in Around Bangalore. Contact : 98862 09466

### Finance

**ALL LOANS** AVAILABLE @4% YEARLY INTEREST PERSONAL BUSINESS PROJECT TAKEOVER MORTGAGE MINIMUM DOCUMENTATION QUICK DISBURSEMENT MAHALAKSHMI FINANCE 9984823862

### Business Offers

### Machinery & Tools

**CENTRIFUGE MANUFACTURING** company running for 30 years needs partners to continue 9341214070

## PERSONAL

### Change of Name

**CHANGE OF NAME**
I, **Malini J,** residing at No. 16, Bank of Baroda Colony, Puttenahalli, J.P. Nagar 7th Phase, Bengaluru-560078., have changed my name to **MALINI KANTAN** vide affidavit dated 21.11.2025 before notary B.G. Sriram, Bengaluru. Henceforth I shall be called **MALINI KANTAN** only

## PUBLIC NOTICE

# PUBLIC NOTICE

Our client ('client') is desirous of entering into certain transaction in connection with the immovable property morefully described in the 'Schedule' hereunder and is hereinafter referred to as the 'Schedule Property' with **Mr. Vijay Pawar,** son of Mr. Govind Narayanarao Pawar, residing at No. 23, Pulliyar Koil Street, Ashoknagar, Bangalore 560025 ('Owner'). The Owner has represented to our Client that he is the sole and the absolute owner of the Schedule Property, with unrestricted rights of alienation over the same.

Notice is hereby given to the general public that any person/s other than the Owner, asserting any right, title, charge, lien, claim/s or any interest whatsoever in respect of the Schedule Property is/ are hereby called upon to submit to the undersigned, their claim/s, if any, over the Schedule Property or their objections, if any, to the aforementioned transaction. The said claim/s or objections must be in writing, together with documentary proof of such claim/s or objections, so as to reach us at the address given below within a period of **21 (twenty one)** days from the date of publication of this Notice. If no such claim/s or objections are received within the said period of 21 (twenty one) days, it shall be deemed that no one else other than the Owner has/ have any right, title, charge, lien, claim/s or any interest whatsoever in respect of the Schedule Property. Further any claims or alleged interests, if any, which are not received within the said period of 21 (twenty one) days shall be deemed to have been consciously waived and disregarded for all intents and purposes and shall thereafter not be binding on our Client and our Client would be at liberty to proceed with the said transaction in connection with the Schedule Property.

**SCHEDULE**
**(Description of the Schedule Property)**

All that piece and parcel of immovable property bearing BBMP Municipal No. 10/2, PID No. 70-46-10/2, (earlier part of converted Survey No. 10 and Survey No. 12, situated at Akkithimmenahalli Village, Kasaba Hobli, Bangalore), measuring 43,560 Square Feet, situated at Kengal Hanumanthaiah Road, Ward No. 70 – Shanthi Nagar, Bangalore and bounded on:

**East by :** Properties belonging to Mr. Nallappa, Mr. Nagaiah and Mr. Chinnaiah;

**West by :** Property belonging to Mr. Channaiah, son of Mr. Donne Muniyappa and others and K.H. Road;

**North by :** Byatappa's Thopu; and

**South by :** Remaining land of Mr. Papaiah @ Pappanna.

**Date: 22.11.2025**
**Place: Bangalore**

**Ms. Brijita Prakash, Partner**
**J. Sagar Associates,**
**Advocates & Solicitors,**
18th Floor, SKAV 909, No. 9/1, Residency Road, Richmond Circle,
Bengaluru – 560025, Karnataka, India.
Ph. 080-43503600/080-43503676 / Email – brijita.prakash@jsalaw.com

**CHANGE OF NAME**
I, **Wazir Sabakousar Karimkhan** residing at Ward No. #21/1, K.E.B Layout, 6th Main, BTM 1st Stage, Bengaluru-560029, have changed my name to **SABAKAUSAR KUDAGI** vide affidavit dated 22-11-2025 sworn before Notary B.G. Sriram, Bangalore. Henceforth, I shall be called **SABAKAUSAR KUDAGI** only.



## FUTURE FOCUS

### Astrology

**JYOTHISHYA PRAVEENA ,** Jyothishya Visharada, Astro-Medical Numerologist, Vastu Education, Employment, Health Problems. Contact: 9448361191



**NARGUND GROUP OF INSTITUTIONS**
BANGALURU
**ADMISSION OPEN**

**NARGUND INTERNATIONL SCHOOL**
GRADE 1 TO 10
REGISTRATION OPEN
8310522965
web site: international-school.nargund.edu.in

**NARGUND INDEPENDENT PU COLLEGE**
COURSES OFFERED
- SCIENCE (PCMB & PCMC)
- COMMERCE (CEBA & HEBA)

9844518522
web site: pre-university.nargund.edu.in

**NARGUND COLLEGE OF PHARMACY**
COURSES OFFERED
D.Pharm | B.Pharm
Pharm.D | M.Pharm | Ph.D
70194 25622
web site: pharamacy.nargund.edu.in

**NARGUND COLLEGE OF PHYSIOTHERAPY**
COURSES OFFERED
BPT | MPT
9590210991
web site: physiotherapy.nargund.edu.in

nargund.edu.in
100 ft, Ringroad, 2nd, Main road, Dattatreyanagar, Hosakerehalli, BSK-3rd Stage, Bengaluru-560085
080-26720604, 7019425622

MORE Classifieds Ads on Subsequent Pages

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆಯಾಗುವ ಸಾಧ್ಯತೆಯಿದೆ

# ಕನ್ನಡಿಗರ ಹಿತಾಸಕ್ತಿಯ ನೀತಿ, ಯೋಜನೆ ರೂಪಿಸಿ

## ರಾಜ್ಯ ಸರ್ಕಾರದ ನಡೆಯನ್ನು ವಿರೋಧಿಸಿ ನಡೆದ 'ಕನ್ನಡಿಗರ ಆಗ್ರಹ ಸಮಾವೇಶ'ದಲ್ಲಿ ಹಕ್ಕೊತ್ತಾಯ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕನ್ನಡ – ಕರ್ನಾಟಕ ಕೇಂದ್ರಿತವಾದ ಮತ್ತು ಹಿತಾಸಕ್ತಿಗಳಿಗೆ ಪೂರಕವಾದ ನೀತಿ ಮತ್ತು ಯೋಜನೆಗಳನ್ನು ಜಾರಿಗೊಳಿಸಬೇಕು ಎಂಬ ಹಕ್ಕೊತ್ತಾಯವನ್ನು ಶನಿವಾರ ನಡೆದ ಕನ್ನಡಿಗರ ಆಗ್ರಹ ಸಮಾವೇಶದಲ್ಲಿ ಮಂಡಿಸಲಾಯಿತು.

'ದ್ವಿಭಾಷಾ ನೀತಿ'ಯನ್ನು ಮುಂದಿನ ಶೈಕ್ಷಣಿಕ ವರ್ಷದಿಂದಲೇ ಜಾರಿ ಮಾಡಬೇಕು. ರಾಜ್ಯದ ಎಲ್ಲ ಉದ್ಯಮಗಳಲ್ಲಿ ಶೇ 80ರಷ್ಟು ಉದ್ಯೋಗವನ್ನು ಕನ್ನಡಿಗರಿಗೇ ಮೀಸಲಿಡಲು 'ಸ್ಥಳೀಯ ಉದ್ಯೋಗ ಖಾತ್ರಿ' ಕಾಯ್ದೆ ತರಬೇಕು. ಕುವೆಂಪು ಅವರಿಗೆ ಮರಣೋತ್ತರವಾಗಿ 'ಭಾರತರತ್ನ ಪ್ರಶಸ್ತಿ' ಘೋಷಿಸುವ ನಿಟ್ಟಿನಲ್ಲಿ ನಿರಂತರ ಪ್ರಯತ್ನಿಸಬೇಕು.

**ಮುಖ್ಯಾಂಶಗಳು**

- 'ದ್ವಿಭಾಷಾ ನೀತಿ'ಯನ್ನು ಮುಂದಿನ ವರ್ಷದಿಂದಲೇ ಜಾರಿ ಮಾಡಿ
- ಎಲ್ಲ ಉದ್ಯಮಗಳಲ್ಲಿ ಶೇ 80ರಷ್ಟು ಉದ್ಯೋಗ ಕನ್ನಡಿಗರಿಗೇ ಮೀಸಲಿಡಿ

'ನಮ್ಮ ನೀರು, ನಮ್ಮ ಹಕ್ಕು. ಕಾವೇರಿ, ಕೃಷ್ಣಾ, ಮಹದಾಯಿ ಸೇರಿದಂತೆ ರಾಜ್ಯದ ಪಾಲಿನ ನಮ್ಮ ನ್ಯಾಯಯುತ ಹಕ್ಕಿನ ನೀರನ್ನು ಸಂಪೂರ್ಣವಾಗಿ ಬಳಸಿಕೊಳ್ಳುವ ಕಾರ್ಯ-ಯೋಜನೆಗಳನ್ನು ರೂಪಿಸಬೇಕು. ನ್ಯಾಯಾ-ಲಯಗಳಲ್ಲಿರುವ ಜಲವಿವಾದದ ಪ್ರಕರಣಗಳನ್ನು ಆದಷ್ಟು ಬೇಗ ವಿಲೇವಾರಿ ಮಾಡಿಸಿ ರಾಜ್ಯದ ಹಿತ ಕಾಪಾಡಬೇಕು. 'ರಾಷ್ಟ್ರೀಯ ಸಮಗ್ರ ಜಲ ನೀತಿ'ಯನ್ನು ರೂಪಿಸಲು ಕೇಂದ್ರ ಸರ್ಕಾರವನ್ನು ಆಗ್ರಹಿಸಬೇಕು. ಅಕ್ಕಪಕ್ಕದ ರಾಜ್ಯಗಳ ಮುಖಂಡರೊಂದಿಗೆ ಚರ್ಚಿಸಿ ಸರ್ವಪಕ್ಷಗಳ ನಿಯೋಗವನ್ನು ಪ್ರಧಾನಿ ಬಳಿಗೆ ಒಯ್ಯಬೇಕು.


ಕನ್ನಡ, ಕನ್ನಡಿಗ, ಕರ್ನಾಟಕದ ಹಿತಾಸಕ್ತಿಯನ್ನು ರಕ್ಷಿಸುವ ಹಕ್ಕೊತ್ತಾಯಗಳನ್ನು ಜಾರಿಗೊಳಿಸದ ರಾಜ್ಯ ಸರ್ಕಾರದ ನಡೆಯನ್ನು ವಿರೋಧಿಸಿ ಕನ್ನಡಿಗರ ಆಗ್ರಹ ಸಮಾವೇಶ ಶನಿವಾರ ನಡೆಯಿತು –ಪ್ರಜಾವಾಣಿ ಚಿತ್ರ

ಬೆಂಗಳೂರಿನಲ್ಲಿ ಸುಪ್ರೀಂ ಕೋರ್ಟ್ ವಿಭಾಗೀಯ ಪೀಠ ಸ್ಥಾಪಿಸಬೇಕು. ರಾಯಚೂರಿನಲ್ಲಿ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ (ಎಐಐಎಂಎಸ್) ಸ್ಥಾಪಿಸಲು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕು. ರೈಲ್ವೆ, ಬ್ಯಾಂಕು, ರಕ್ಷಣಾ ಇಲಾಖೆ ಸೇರಿದಂತೆ ಕೇಂದ್ರ ಸರ್ಕಾರದ ಎಲ್ಲ ಉದ್ಯೋಗಗಳಲ್ಲಿ ರಾಜ್ಯವಾರು ಮೀಸಲಾತಿ ನಿಗದಿಪಡಿಸುವುದಕ್ಕಾಗಿ 'ರಾಷ್ಟ್ರೀಯ ಉದ್ಯೋಗ ನೀತಿ' ಜಾರಿಗೊಳಿಸಲು ಕೇಂದ್ರವನ್ನು ಆಗ್ರಹಿಸಬೇಕು ಎಂದು ಒತ್ತಾಯಿಸಲಾಯಿತು.

ಹೋರಾಟಗಾರರಾದ ಜಾಣಗೆರೆ ವೆಂಕಟರಾಮಯ್ಯ, ರವಿ ಕೃಷ್ಣಾರೆಡ್ಡಿ, ಶಿವರಾಮೇಗೌಡ, ಪ್ರಕಾಶ್ ಮೂರ್ತಿ ಭೀಮಾ ಶಂಕರ ಪಾಟೀಲ, ರವಿ ಶೆಟ್ಟಿ ಬೈಂದೂರು, ಕನ್ನಡ ರಫಿ, ನರಸಿಂಹ, ರೂಪೇಶ್ ರಾಜಣ್ಣ, ಸೋಮಶೇಖರ್, ರಘು ಜಾಣಗೆರೆ, ದೀಪಕ್ ಸಿ.ಎನ್., ಎಲ್. ಜೀವನ್ ಭಾಗವಹಿಸಿದ್ದರು.

## ಆರ್‌ಎಸ್‌ಎಸ್ ವಿರುದ್ಧ ಜನಜಾಗೃತಿ ಅಭಿಯಾನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸಂವಿಧಾನ ಸಮರ್ಪಣಾ ದಿನದ ಅಂಗವಾಗಿ ಕರ್ನಾಟಕ ದಲಿತ ಸಂಘರ್ಷ ಸಮಿತಿಯು (ಅಂಬೇಡ್ಕರ್ ವಾದ) ನ.26ರಿಂದ 2026ರ ಜನವರಿ 26ರವರೆಗೆ ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ವಿರುದ್ಧ ಜನಜಾಗೃತಿ ಅಭಿಯಾನ ಹಮ್ಮಿಕೊಳ್ಳಲಿದೆ ಎಂದು ಮಾವಳ್ಳಿ ಶಂಕರ್ ತಿಳಿಸಿದರು.


ಮಾವಳ್ಳಿ ಶಂಕರ್

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ದೇಶಕ್ಕೆ ಕಂಟಕವಾಗಿರುವ ಆರ್‌ಎಸ್‌ಎಸ್ ಭಾರತೀಯರ ಮಿದುಳಿನಲ್ಲಿ ಅಸಮಾನತೆಯ, ವಿಷಪೂರಿತ ವೈದಿಕ ಧರ್ಮದ ಅಮಲನ್ನು ತುಂಬುತ್ತಿದೆ. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ತಾರತಮ್ಯ ನೀತಿಯನ್ನು ಅನುಸರಿಸುತ್ತಿದೆ. ದಲಿತ ಸಂಘರ್ಷ ಸಮಿತಿ ಇದರ ವಿರುದ್ಧ ನಿರಂತರವಾಗಿ ಜನರನ್ನು ಎಚ್ಚರಿಸುವ ಕೆಲಸ ಮಾಡುತ್ತಿದೆ' ಎಂದರು.

ಆರ್‌ಎಸ್‌ಎಸ್‌ನ ಸಂವಿಧಾನ ವಿರೋಧಿ ನೀತಿಯನ್ನು ಖಂಡಿಸಿ, ಪ್ರಬುದ್ಧ ಭಾರತ ನಿರ್ಮಾಣ ಮಾಡುವ ಸಂವಿಧಾನದ ಆಶಯಗಳನ್ನು ಜಾರಿಗೊಳಿಸಲು ಈ ಜನಜಾಗೃತಿ ಅಭಿಯಾನ ಆಯೋಜಿಸಲಾಗುವುದು. ಇದರ ಜೊತೆಗೆ ದಲಿತ ಸಂಘರ್ಷ ಸಮಿತಿಯ ಸದಸ್ಯತ್ವ ನೋಂದಣಿ ಆಂದೋಲವನ್ನು ಪ್ರಾರಂಭಿಸಲಾಗುವುದು' ಎಂದು ಮಾಹಿತಿ ನೀಡಿದರು.

## ಬಿಎಂಆರ್‌ಸಿಎಲ್‌ಗೆ ನಿರ್ದೇಶಕರ ನೇಮಕ

**ಬೆಂಗಳೂರು:** ಬಿಎಂಆರ್‌ಸಿಎಲ್ ಮಂಡಳಿಯ ನಿರ್ದೇಶಕರಾಗಿ (ಪ್ರಾಜೆಕ್ಟ್ ಮತ್ತು ಪ್ಲಾನಿಂಗ್) ಬಿಎಂಆರ್‌ಸಿಎಲ್ ಸುರಂಗ ಮಾರ್ಗ ವಿಭಾಗದ ಮುಖ್ಯ ಎಂಜಿನಿಯರ್ ಸುಬ್ರಹ್ಮಣ್ಯ ಗುಡ್ಗೆ ಅವರನ್ನು ನೇಮಕ ಮಾಡಲಾಗಿದೆ.


ಸುಬ್ರಹ್ಮಣ್ಯ ಗುಡ್ಗೆ

ಗುಡ್ಗೆ 2007ರಲ್ಲಿ ಬಿಎಂಆರ್‌ಸಿಎಲ್ ಸಂಸ್ಥೆಯಲ್ಲಿ ಉಪ ಮುಖ್ಯ ಎಂಜಿನಿಯರ್ (ಸಿವಿಲ್) ಆಗಿ ಕರ್ತವ್ಯಕ್ಕೆ ಸೇರಿದ್ದರು. ಭೂಗತ ಮೆಟ್ರೊ ಮಾರ್ಗಗಳಲ್ಲಿ ಕೆಲಸ ಮಾಡಿದ್ದಾರೆ. ನಮ್ಮ ಮೆಟ್ರೊಗೆ ಸೇರುವ ಮೊದಲು ಅವರು ಭಟ್ಕಳ ಮತ್ತು ಹೊನ್ನಾವರದಲ್ಲಿ ಪಿಎಸ್‌ಯು ಇಂಡಿಯನ್ ರೈಲ್ವೆ ಕನ್‌ಸ್ಟ್ರಕ್ಷನ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಮತ್ತು ಕೊಂಕಣ ರೈಲ್ವೆಯಲ್ಲಿ ಕಾರ್ಯ ನಿರ್ವಹಿಸಿದ್ದರು.

## ಏರ್‌ಟೆಲ್ ಜತೆಗೆ 'ಮಾರ್ಕ್' ಒಪ್ಪಂದ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸುದೀಪ್ ಅಭಿನಯದ 'ಮಾರ್ಕ್' ಚಿತ್ರ ತಂಡವು ಏರ್‌ಟೆಲ್ ಜತೆಗೆ ಒಪ್ಪಂದ ಮಾಡಿಕೊಂಡಿದೆ.

ಈ ಚಿತ್ರವು ಡಿಸೆಂಬರ್ 25ರಂದು ಕನ್ನಡ, ತಮಿಳು ಮತ್ತು ತೆಲುಗು ಭಾಷೆಯಲ್ಲಿ ಬಿಡುಗಡೆಯಾಗಲಿದೆ. ಒಪ್ಪಂದದ ಅನುಸಾರ ಏರ್‌ಟೆಲ್ 'ಮಾರ್ಕ್ ಎಕ್ಸ್‌ಕ್ಲೂಸಿವ್ ಪ್ಯಾಕ್' ಅನ್ನು ಪರಿಚಯಿಸಿದೆ. ಗ್ರಾಹಕರು ಹೊಸದಾಗಿ ಬಿಡುಗಡೆಯಾದ '9 ಸೀರೀಸ್' ನಂಬರ್‌ಗಳಿರುವ ಸಿಮ್ ಕಾರ್ಡ್‌ಗಳನ್ನು ಪಡೆಯಬಹುದಾಗಿದೆ.

ಅಭಿಮಾನಿಗಳಿಗಾಗಿ ಒಂದು ವಿಶೇಷ ಸ್ಪರ್ಧೆಯನ್ನು ಏರ್ಪಡಿಸಲಾಗುತ್ತಿದ್ದು, ಇದರಲ್ಲಿ ಗೆಲ್ಲುವ 100 ಅದೃಷ್ಟಶಾಲಿಗಳಿಗೆ 'ಮಾರ್ಕ್' ಚಿತ್ರದ ಟಿಕೆಟ್‌ಗಳನ್ನು ಬಹುಮಾನವಾಗಿ ನೀಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

## ಕೃತಕ ಕೈ, ಕಾಲು ಅಳವಡಿಕೆಗೆ ಚಾಲನೆ

ಪ್ರಜಾವಾಣಿ ವಾರ್ತೆ


**ಬೆಂಗಳೂರು:** ಬೆಂಗಳೂರು ರೌಂಡ್ ಟೇಬಲ್ 7 ಸಂಸ್ಥೆ ಹಮ್ಮಿಕೊಂಡಿರುವ ಕೃತಕ ಕಾಲು ಮತ್ತು ಕೈ ಅಳವಡಿಕೆಯ ಕಾರ್ಯಕ್ರಮಕ್ಕೆ ನಗರದಲ್ಲಿ ಶನಿವಾರ ಚಾಲನೆ ದೊರೆಯಿತು.

ಬೆಂಗಳೂರು ಲೇಡೀಸ್ ಸರ್ಕಲ್ 19 ಮತ್ತು ಕರ್ನಾಟಕ ಮಾರ್ವಾಡಿ ಯೂತ್ ಫೆಡರೇಷನ್ (ಕೆಎಂವೈಎಫ್) ಸಹಯೋಗದಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮಕ್ಕೆ, ಸಂಸ್ಥೆಯು ಈ ವರ್ಷ ₹ 30 ಲಕ್ಷ ಹಣವನ್ನು ದಾನಿಗಳಿಂದ ಸಂಗ್ರಹಿಸಿದೆ. ಈ ಹಣದಲ್ಲಿ ಮಿಲ್ಲರ್ಸ್ ರಸ್ತೆಯಲ್ಲಿರುವ ಭಗವಾನ್ ಮಹಾವೀರ್ ಜೈನ್ ಆಸ್ಪತ್ರೆಯಲ್ಲಿ ಕೃತಕ ಕಾಲು ಮತ್ತು ಕೈ ಅಳವಡಿಸಲಾಗುತ್ತಿದ್ದು, ಈ ವರ್ಷ ಸಾವಿರ ಕೃತಕ ಅಂಗಗಳು ಮತ್ತು ನೂರು ಕೈಗಳನ್ನು ಉಚಿತವಾಗಿ ಒದಗಿಸುವುದಾಗಿ ಘೋಷಿಸಿದೆ.

ಬೆಂಗಳೂರು ರೌಂಡ್ ಟೇಬಲ್ 7ರ ಅಧ್ಯಕ್ಷ ಅಭಿಷೇಕ್ ಅಹುಜಾ, 'ದಶಕಗಳಿಂದ ಈ ಕಾರ್ಯಕ್ರಮ ನಡೆಸಿಕೊಂಡು ಬಂದಿದ್ದು, 47 ವರ್ಷಗಳಲ್ಲಿ ಆರು ಸಾವಿರ ಕೃತಕ ಅಂಗಾಂಗಗಳನ್ನು ಅಳವಡಿಸಲಾಗಿದೆ. ಪ್ರತಿಯೊಂದು ಕೃತಕ ಕೈಗಳನ್ನು ₹5 ಸಾವಿರ ವೆಚ್ಚದಲ್ಲಿ ತಯಾರಿಸಲಾಗುತ್ತದೆ. ಭಗವಾನ್ ಮಹಾವೀರ್ ಜೈನ್ ಆಸ್ಪತ್ರೆಯು ಅರ್ಹರಿಗೆ ಕೃತಕ ಅಂಗಗಳನ್ನು ಅಳವಡಿಸುತ್ತದೆ' ಎಂದು ಹೇಳಿದರು.

ಬೆಂಗಳೂರು ಲೇಡೀಸ್ ಸರ್ಕಲ್ 19ರ ಅಧ್ಯಕ್ಷೆ ನತಾಶಾ ಅಹುಜಾ, 'ಕೃತಕ ತೋಳುಗಳನ್ನು ನೀಡುವುದರಿಂದ ಬದುಕಿನಲ್ಲಿ ಹೊಸ ಭರವಸೆ ಮೂಡಲಿದೆ' ಎಂದರು.

# ಶ್ರೀಗಂಧ ಕೃಷಿಗೆ ನೂರಾರು ಕಷ್ಟ



**ಒಂದನೇ ಪುಟದಿಂದ..**

ಅರಣ್ಯ ಇಲಾಖೆ ಪ್ರಕಾರ, ರಾಜ್ಯದಲ್ಲಿ 4,699 ಹೆಕ್ಟೇರ್ ಪ್ರದೇಶದಲ್ಲಿ ಶ್ರೀಗಂಧದ ಕೃಷಿ ಇದೆ. ಆದರೆ, ಬೆಳೆಗಾರರ ಪ್ರಕಾರ 20 ಸಾವಿರ ಎಕರೆಗೂ ಹೆಚ್ಚು ಪ್ರದೇಶದಲ್ಲಿ ಶ್ರೀಗಂಧದ ಮರಗಳಿವೆ. ಹೆಚ್ಚು ಶ್ರೀಗಂಧ ಬೆಳೆಯುವ ರಾಜ್ಯದ ಹತ್ತು ಜಿಲ್ಲೆಗಳಲ್ಲಿ ಶಿವಮೊಗ್ಗ, ಚಿಕ್ಕಮಗಳೂರು ಹಾಗೂ ಕೋಲಾರ ಅಗ್ರಸ್ಥಾನದಲ್ಲಿವೆ.

**ಕಳ್ಳತನವೇ ಪ್ರಮುಖ ಸವಾಲು:** 2005-06ರ ನಂತರ ರಾಜ್ಯದಲ್ಲಿ ಶ್ರೀಗಂಧದ ಕೃಷಿ ಆರಂಭವಾಯಿತು. ದಶಕ ತುಂಬುವ ಹೊತ್ತಿಗೆ ಶ್ರೀಗಂಧದ ಗಿಡಗಳು ಮರಗಳಾದಂತೆ, ಅವುಗಳ ಕಳ್ಳತನವೂ ಆರಂಭವಾಯಿತು. ಕಳ್ಳತನದ ತೀವ್ರತೆ ಎಷ್ಟಿದೆ ಎಂದರೆ, ವಾರಕ್ಕೆ ರಾಜ್ಯದಲ್ಲಿ ಯಾವುದಾದರೂ ಒಂದು ಕಡೆ ಗಂಧದ ಮರಗಳ್ಳತನದ ಒಂದೋ ಎರಡೋ ಪ್ರಕರಣಗಳು ವರದಿಯಾಗುತ್ತಲೇ ಇರುತ್ತವೆ. ವರ್ಷಗಟ್ಟಲೆ ಶ್ರಮವಹಿಸಿ ಬೆಳೆಸಿದ ಮರಗಳು ಕಟಾವಿಗೆ ಬರುವ ವೇಳೆಗೆ ಕಳ್ಳರ ಪಾಲಾಗುತ್ತಿವೆ. ಗಂಧದ ಮರವನ್ನು ಮುಕ್ತವಾಗಿ ಬೆಳೆಸುವ ನಿರ್ಬಂಧ ಸಡಿಲಗೊಳಿಸಿ ಇಪ್ಪತ್ತು ವರ್ಷಗಳ ಕಳೆದರೂ, ಕಳವಿನ ಪ್ರಮಾಣ ಹೆಚ್ಚಾಗುತ್ತಲೇ ಇದೆ.

'ಶ್ರೀಗಂಧದ ಮರಗಳ ಕಟಾವು, ಸಾಗಣೆಗಾಗಿ ಅರಣ್ಯ ಇಲಾಖೆಗೆ ಪರವಾನಗಿಗಾಗಿ ಅರ್ಜಿ ಸಲ್ಲಿಸಿದ ಕೆಲವೇ ತಿಂಗಳುಗಳಲ್ಲಿ ಕಳ್ಳತನ ನಡೆಯುತ್ತಿದೆ' ಎಂದು ಕೋಲಾರದ ಶ್ರೀಗಂಧ ಕೃಷಿಕ ಶ್ರೀನಿವಾಸರೆಡ್ಡಿ ಕಳ್ಳತನದ ಮಗ್ಗುಲೊಂದನ್ನು ತೆರೆದಿಡುತ್ತಾರೆ. 'ಮರಗಳ್ಳತನದ ಭಯದಿಂದಾಗಿ ಕೆಲವು ಬೆಳೆಗಾರರು ಜಮೀನಿನಲ್ಲಿ ಶ್ರೀಗಂಧದ ಮರಗಳಿವೆ ಎಂಬುದನ್ನು ಪಹಣಿಯಲ್ಲಿ ಉಲ್ಲೇಖಿಸಲು ಯೋಚಿಸುತ್ತಾರೆ. ಬಹಿರಂಗವಾಗಿ ಮಾಹಿತಿ ಹಂಚಿಕೊಳ್ಳಲು ಹಿಂದೇಟು ಹಾಕುತ್ತಿದ್ದಾರೆ' ಎಂದು ಬೆಳೆಗಾರರು ಹೇಳುತ್ತಾರೆ. 'ತೋಟಗಳ ಲ್ಲಿರುವ ಶ್ರೀಗಂಧದ ಮಾಹಿತಿ ಯಾವುದೋ ಒಂದು ಮೂಲದಿಂದ ಸೋರಿಕೆಯಾಗುತ್ತದೆ. ಮರಗಳ್ಳತನದ ದೂರು ನೀಡಿದರೂ ಪೊಲೀಸರು ಸರಿಯಾದ ತನಿಖೆ ನಡೆಸಿ, ಅವರನ್ನು ಹಿಡಿಯುತ್ತಿಲ್ಲ' ಎಂದು ಬೆಳೆಗಾರರು ಅರಣ್ಯ ಮತ್ತು ಪೊಲೀಸ್ ಇಲಾಖೆಯ ಕಾರ್ಯ ವೈಖರಿ ಬಗ್ಗೆ ಸಂಶಯ ವ್ಯಕ್ತಪಡಿಸುತ್ತಾರೆ. ಅದಕ್ಕೆ ಕೆಲವೊಂದು ಘಟನೆಗಳನ್ನು ಉದಾಹರಣೆಯಾಗಿ ಉಲ್ಲೇಖಿಸುತ್ತಾರೆ.

ಗಂಧದ ಮರದ ಮೌಲ್ಯ ನಿರ್ಧಾರವಾಗುವುದು ಮರದೊಳಗಿನ 'ಹಾರ್ಟ್‌ವುಡ್'ನ (ಚೇಗು) ಗುಣ-ಗಾತ್ರದ ಮೇಲೆ. ಮರ ತಜ್ಞರ ಪ್ರಕಾರ ಗಂಧದ ಸಸಿ ನಾಟಿ ಮಾಡಿದ 6 ರಿಂದ 8 ವರ್ಷಗಳ ನಂತರ ಮರದಲ್ಲಿ ಚೇಗು ಬೆಳವಣಿಗೆ ಶುರುವಾಗುತ್ತದೆ. ಆದರೆ, ಹಣದ ದುರಾಸೆಗೆ ಕಳ್ಳರು ಎಳೆಯ ಮರಗಳನ್ನೇ ಕದ್ದೊಯ್ಯುತ್ತಿ ದ್ದಾರೆ. ಕೆಲವು ಕಡೆ ಮರಗಳನ್ನು ಸ್ವಲ್ಪ ಕೊಯ್ದು ಗಂಧದ ಪರಿಮಳ ಬಾರದಿದ್ದರೆ ಅರ್ಧಕ್ಕೆ ಬಿಟ್ಟು ಹೋಗುತ್ತಿದ್ದಾರೆ. ಕಳ್ಳರ ಹಾವಳಿ ತಡೆಯಲಾಗದೇ, ಹಲವು ಬೆಳೆಗಾರರು, 'ಗಂಧದ ಸಹವಾಸವೇ ಬೇಡ' ಎನ್ನುತ್ತಾ ಕಿರಿ ವಯಸ್ಸಿನ ಮರಗಳನ್ನು ತೆಗೆಸಿ, ಆ ಜಾಗದಲ್ಲಿ ಅಡಿಕೆ, ತೆಂಗು, ಹಣ್ಣಿನ ಗಿಡಗಳಂತಹ ಬೇರೆ ಬೆಳೆಗಳನ್ನು ಬೆಳೆಯುತ್ತಿದ್ದಾರೆ.

**ಮರಗಳ ರಕ್ಷಣೆಗೆ ಹರಸಾಹಸ:** 'ಶ್ರೀಗಂಧದ ಮರಗಳನ್ನು ರಕ್ಷಿಸಿಕೊಳ್ಳುವುದು ಬೆಳೆದವರ ಜವಾಬ್ದಾರಿ' ಎಂದು ಅರಣ್ಯ ಇಲಾಖೆ ಹೇಳುತ್ತದೆ. ಶ್ರೀಗಂಧದ ಕೃಷಿಕರು, ಬೆಳೆದ ಮರಗಳ ರಕ್ಷಣೆಗೆ ಹಲವಾರು ವಿಧಾನಗಳನ್ನು ಅನುಸರಿಸುತ್ತಿದ್ದಾರೆ. ಕೆಲವರು ಮರಗಳಿಗೆ ಚೈನ್ ಲಿಂಕ್ ಮೆಷ್ ಬೇಲಿ ಹಾಕುತ್ತಿದ್ದಾರೆ. ಜಮೀನಿನ ಸುತ್ತ ಬಿದಿರಿನ ಮರಗಳನ್ನು ಬೆಳೆಸಿದ್ದಾರೆ. ಹತ್ತಾರು ನಾಯಿಗಳನ್ನು ಸಾಕಿದ್ದಾರೆ. ಸೋಲಾರ್ ದೀಪ, ಸೋಲಾರ್ ವಿದ್ಯುತ್ ಬೇಲಿ ಹಾಕಿಸಿದ್ದಾರೆ. ಪರವಾನಗಿ ಸಹಿತ ಬಂದೂಕುಗಳನ್ನು ಇಟ್ಟುಕೊಂಡಿದ್ದಾರೆ. ಫ್ಲಡ್‌ಲೈಟ್ ಬೆಳಕು, ಸಿಸಿಟಿವಿ ಕ್ಯಾಮೆರಾ ಅಳವಡಿಕೆಯಂತಹ ಪ್ರಯತ್ನಗಳನ್ನೂ ಮಾಡಿದ್ದಾರೆ. 'ಇವುಗಳನ್ನು ದಾಟಿಯೂ ಕಳ್ಳತನಗಳು ನಡೆಯುತ್ತಿವೆ. ನಮ್ಮ ಹೈಟೆಕ್ ರಕ್ಷಣೆಗಿಂತ, ಕಳ್ಳರ ಉಪಕರಣಗಳು ಹರಿತವಾಗಿವೆ' ಎನ್ನುತ್ತಾರೆ ರೈತರು. 'ನನ್ನ ತೋಟಕ್ಕೆ ಸೋಲಾರ್ ಬೇಲಿ, ಸಿಸಿಟಿವಿ ಕ್ಯಾಮೆರಾ ಅಳವಡಿಕೆ, ನಾಯಿಗಳ ಸಾಕಣೆ ಎಲ್ಲ ಮಾಡಿದ್ದರೂ ಕಳ್ಳತನ ನಿಂತಿಲ್ಲ' ಎಂದು ಅಸಹಾಯಕತೆ ವ್ಯಕ್ತಪಡಿಸುತ್ತಾರೆ ಗುಂಡ್ಲುಪೇಟೆ ಸಮೀಪದಲ್ಲಿ ಗಂಧದ ಮರಗಳನ್ನು ಬೆಳೆಸಿದರುವ ಪ್ರೊ. ಮಾದೇವ್ ಭರಣಿ.

ಅಂದ ಹಾಗೆ, ಈವರೆಗೂ ಶ್ರೀಗಂಧ ಕಳ್ಳತನದ ಬಹುಪಾಲು ಪ್ರಕರಣಗಳಲ್ಲಿ ಕಳವು ಮಾಡಿದವರನ್ನಷ್ಟೇ ಬಂಧಿಸಿದ್ದಾರೆ. ಆದರೆ, ಕಳ್ಳರು ಕದ್ದ ಮರಗಳನ್ನು ಖರೀದಿಸುವ ಒಬ್ಬ ರಿಸೀವರ್(ಅಕ್ರಮ ಖರೀದಿದಾರ)ನನ್ನೂ ಪೊಲೀಸರು ಹಿಡಿದಿಲ್ಲ ಎಂಬುದು ಬೆಳೆಗಾರರ ಆರೋಪ. 'ಶ್ರೀಗಂಧ ಕಳವಿನ ಈ ಪ್ರಕರಣಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಕಳ್ಳತನದ ದೊಡ್ಡ ಜಾಲವಿದ್ದಂತೆ ಕಾಣುತ್ತಿದೆ. ಸರ್ಕಾರ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಿ ಈ ಜಾಲವನ್ನು ಪತ್ತೆ ಹಚ್ಚಿ ಕ್ರಮ ಕೈಗೊಳ್ಳಬೇಕು' ಎಂದು ಅಖಿಲ ಕರ್ನಾಟಕ ಶ್ರೀಗಂಧ ಮತ್ತು ವನಕೃಷಿಕರ ಸಂಘದ ಅಧ್ಯಕ್ಷ ಕೆ.ಅಮರನಾರಾಯಣ್ ಸರ್ಕಾರವನ್ನು ಒತ್ತಾಯಿಸುತ್ತಾರೆ.

**ಶ್ರೀಗಂಧ ಕಳ್ಳತನ ಪ್ರಕರಣಗಳ ವಿವರ (ವೃತ್ತವಾರು)***

| ವೃತ್ತ | ದಾಖಲಾದ ಪ್ರಕರಣ | ಬಂಧಿತರು | ವಶಕ್ಕೆ ಪಡೆದಿದ್ದು (ಕೆ.ಜಿಗಳಲ್ಲಿ) |
|---|---|---|---|
| ಬೆಂಗಳೂರು | 71 | 15 | 1681 |
| ಬೆಳಗಾವಿ | 57 | 3 | 533 |
| ಬಳ್ಳಾರಿ | 32 | 21 | 915 |
| ಚಾಮರಾಜನಗರ | 41 | 18 | 2,536 |
| ಚಿಕ್ಕಮಗಳೂರು | 89 | 78 | 3,636 |
| ಧಾರವಾಡ | 77 | 24 | 5,481 |
| ಕಲಬುರಗಿ | 35 | 26 | 1,900 |
| ಹಾಸನ | 88 | 25 | 4,886 |
| ಕೆನರಾ | 11 | 2 | 612 |
| ಕೊಡಗು | 49 | 27 | 1,500 |
| ಮೈಸೂರು | 118 | 33 | 2,418 |
| ಮಂಗಳೂರು | 4 | 8 | 167 |
| ಶಿವಮೊಗ್ಗ | 138 | 102 | 4,920 |
| ಒಟ್ಟು | 810 | 408 | 44,400 |

* ಆಗಸ್ಟ್ 18, 2025ರವರೆಗಿನ ಮಾಹಿತಿ

(ಮಾಹಿತಿ ಮೂಲ: ಅರಣ್ಯ ಇಲಾಖೆ)

**ಗಂಧದ ಮರ ಬೆಳೆದಂತೆ ಚೇಗಿನ (ಹಾರ್ಟ್‌ವುಡ್ ) ಪ್ರಮಾಣ ವೃದ್ಧಿಯಾಗುತ್ತದೆ. ಕಿರಿ ವಯಸ್ಸಿನ ಮರಗಳಲ್ಲಿ ಚೇಗು ಪ್ರಮಾಣ ಕಡಿಮೆ ಇದ್ದು, ತೊಗಟೆ–ಚೇಗು ನಡುವಿನ ಬಿಳಿ ಭಾಗ (ಸ್ಯಾಪ್‌ವುಡ್) ಹೆಚ್ಚಿರುತ್ತದೆ. ಇದಕ್ಕೆ ಬೆಲೆ ಕಡಿಮೆ. ಹೀಗಾಗಿ ಗಿಡ ನೆಟ್ಟು 15–20 ವರ್ಷಗಳ ನಂತರವೇ ಮರ ಕತ್ತರಿಸಿ ಮಾರಬೇಕು.**

**ಡಾ. ಎ.ಎನ್. ಅರುಣ್ ಕುಮಾರ್,** ಹಿರಿಯ ವಿಜ್ಞಾನಿ, ಮರ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆ, ಬೆಂಗಳೂರು

## ಕದ್ದ ಮಾಲು ಹೋಗುವುದೆಲ್ಲಿಗೆ ?

2020 ರಿಂದ 2025ರವರೆಗೆ ರಾಜ್ಯದಲ್ಲಿ 13 ಜಿಲ್ಲೆಗಳಲ್ಲಿ 810 ಶ್ರೀಗಂಧ ಕಳವು ಪ್ರಕರಣ ದಾಖಲಾಗಿದೆ. 408 ಆರೋಪಿಗಳನ್ನು ಬಂಧಿಸಲಾಗಿದೆ. 48.94 ಟನ್ ಶ್ರೀಗಂಧ ವಶಪಡಿಸಿ ಕೊಳ್ಳಲಾಗಿದೆ ಎಂದು ಸರ್ಕಾರ, ಇತ್ತೀಚೆಗೆ ವಿಧಾನಸಭಾ ಅಧಿವೇಶನದಲ್ಲಿ ಮಾಹಿತಿ ನೀಡಿದೆ. ಕಳೆದ ಮೂರು ವರ್ಷಗಳಲ್ಲಿ ಧಾರವಾಡದಲ್ಲಿ 23, ಬಾಗಲಕೋಟೆಯಲ್ಲಿ ಏಳು, ಉತ್ತರ ಕನ್ನಡ ಜಿಲ್ಲೆಯಲ್ಲಿ 20ಕ್ಕೂ ಹೆಚ್ಚು ಶ್ರೀಗಂಧ ಮರಗಳ ಕಳವು ಪ್ರಕರಣ ದಾಖಲಾಗಿವೆ. ಆದರೆ, ಎಷ್ಟೋ ಪ್ರಕರಣಗಳಲ್ಲಿ ಕಳವಾಗಿರುವ ಎಲ್ಲಾ ಶ್ರೀಗಂಧದ ಮರಗಳು ಪತ್ತೆಯಾಗುತ್ತಿಲ್ಲ, ಕಳ್ಳರೂ ಪತ್ತೆಯಾಗುವುದಿಲ್ಲ. ಪತ್ತೆಯಾಗದ ಮರಗಳು ಎಲ್ಲಿ ಮಾರಾಟವಾಗುತ್ತವೆ. ಅರಣ್ಯ ಹಾಗೂ ಪೊಲೀಸ್ ಇಲಾಖೆಯ ಕಣ್ಣು ತಪ್ಪಿಸಿ ಬೇರೆ ಕಡೆಗೆ ಮಾರಾಟವಾಗುವುದು ಹೇಗೆ? ಕದ್ದ ಮರಗಳನ್ನು ಯಾರು ಖರೀದಿಸುತ್ತಾರೆ? ಇದು ಯಕ್ಷಪ್ರಶ್ನೆಯಾಗಿದೆ.

**ದೂರು ಸ್ವೀಕಾರ ವಿಳಂಬ:** ಗಂಧದ ಮರ ಕಳವಾದಾಗ ದೂರು ನೀಡಲು ಪೊಲೀಸ್ ಠಾಣೆಗೆ ಹೋದರೆ ಪೊಲೀಸರು ಅರಣ್ಯ ಇಲಾಖೆ ಕಡೆಗೆ, ಅರಣ್ಯ ಇಲಾಖೆಗೆ ಹೋದರೆ ಪೊಲೀಸರ ಕಡೆ ಕೈತೋರುತ್ತಾರೆ. ಈ ಕಾರಣಕ್ಕಾಗಿ, ಕೆಲವರು ಮರ ಕಳ್ಳತನವಾದರೂ, ದೂರು ಕೊಡಲು ಹಿಂದೇಟು ಹಾಕುತ್ತಾರೆ. ಇತ್ತೀಚೆಗೆ ಪೊಲೀಸ್ ಮಹಾ ನಿರ್ದೇಶಕರ ದೂರು ದಾಖಲಿಸಿಕೊಳ್ಳುವುದನ್ನು ಕಡ್ಡಾಯ ಗೊಳಿಸಿ ಆದೇಶಿಸಿದ್ದಾರೆ. ಇಷ್ಟಾದರೂ ವ್ಯವಸ್ಥೆಗೆ ರೋಸತ್ತ ರೈತರು ಶ್ರೀಗಂಧ ಮರಗಳ ಕಳ್ಳತನ ಪ್ರಕರಣಗಳನ್ನು ದಾಖಲಿಸಲು ಆಸಕ್ತಿವಹಿಸುತ್ತಿಲ್ಲ ಎಂಬ ಮಾಹಿತಿ ಇವೆ.

ಬೆಳೆಗಾರರಿಗೆ ಮರಗಳವು, ದೂರು ದಾಖಲಿನ ಸಮಸ್ಯೆ ಒಂದೆಡೆಯಾದರೆ, ಬೆಳೆದ ಮರಗಳನ್ನು ಕಟಾವು ಮಾಡಲು ಹಾಗೂ ಮಾರುಕಟ್ಟೆಗೆ ಸಾಗಿಸಲು ಅರಣ್ಯ ಇಲಾಖೆಗೆ ಅನುಮತಿ ಪಡೆಯುವುದು ಸವಾಲಿನ ಕೆಲಸವಾಗಿದೆ. 'ಕೆಲವು ಪ್ರಕರಣಗಳಲ್ಲಿ ಅರ್ಜಿ ಸಲ್ಲಿಸಿ ವರ್ಷ ಕಳೆದರೂ ಕಟಾವು–ಸಾಗಾಟಕ್ಕೆ ಅನುಮತಿ ಸಿಕ್ಕಿಲ್ಲ. ಇಷ್ಟೆಲ್ಲ ಸಾಹಸ ಮಾಡಿ ಪರವಾನಗಿ ಪಡೆದು ಸರ್ಕಾರ ನಿಗದಿಪಡಿಸಿರುವ 'ಕೋಠಿ'(ಖರೀದಿ ಕೇಂದ್ರ)ಗಳಿಗೆ ಗಂಧದ ಮರಗಳನ್ನು ಕಳಹಿಸಿದರೂ, ಅಲ್ಲಿ ಮರಗಳ ಹರಾಜು ನಡೆದು, ಮಾರಾಟವಾಗಿ ಬೆಳೆಗಾರರಿಗೆ ಹಣ ಸಿಗುವುದಕ್ಕೆ ಮತ್ತೆ ವರ್ಷಗಳೇ ಬೇಕಾಗುತ್ತವೆ' ಎಂದು ಶ್ರೀಗಂಧ ಬೆಳೆಗಾರರ ಸಂಘದವರು ದಾಖಲೆ ಸಹಿತ ಉದಾಹರಣೆಗಳನ್ನು ನೀಡುತ್ತಾರೆ.

## ಮೌಲ್ಯವರ್ಧನೆಗೂ ಅನುಮತಿ ಇಲ್ಲ

ಶ್ರೀಗಂಧದ ಮರದಲ್ಲಿ, ಚೇಗು, ಅದರ ಮೇಲಿರುವ ಬಿಳಿ ಪದರ(ಸ್ಯಾಪ್‌ವುಡ್), ತೊಗಟೆ, ಬೇರು ಎಲ್ಲವುದಕ್ಕೂ ಅದರದ್ದೇ ಆದ ಬೆಲೆ ಇದೆ. ಬಹುಶಃ ಕೆ.ಜಿ ಲೆಕ್ಕದಲ್ಲಿ ಮಾರಾಟವಾಗುವ ಏಕೈಕ ಮರ ಇದು. ಇಂಥ 'ಬಹುಪಯೋಗಿ' ಶ್ರೀಗಂಧ ಕೊರಡನ್ನು ಯಾರು ಬೇಕಾದರೂ 3 ಕೆ.ಜಿವರೆಗೂ ಖರೀದಿಸಿ, ದಾಸ್ತಾನಿಟ್ಟು-ಕೊಳ್ಳಲು ಸರ್ಕಾರ ಅನುಮತಿ ನೀಡಿದೆ. ಆದರೆ, ಅರಣ್ಯ ಕಾನೂನಿನ ಪ್ರಕಾರ, ಶ್ರೀಗಂಧ ಬೆಳೆದವರಿಗೂ ಇಲಾಖೆಯ ಅನುಮತಿ ಇಲ್ಲದೇ ಒಂದೇ ಒಂದು ಮರದ ಒಂದು ತುಂಡನ್ನೂ ದಾಸ್ತಾನು ಮಾಡಿಕೊಳ್ಳಲು ಅವಕಾಶವಿಲ್ಲ.

'ಎಷ್ಟೋ ಮರಗಳವು ಪ್ರಕರಣಗಳಲ್ಲಿ ಕಳ್ಳರು ಮರದ ಕಾಂಡ ಕತ್ತರಿಸಿಕೊಂಡು ಹೋಗಿ, ಒಂದಷ್ಟು ತುಂಡುಗಳು, ಬೇರು ಸಹಿತ ಮರದ ಬಡ್ಡೆ ಉಳಿಸಿರುತ್ತಾರೆ. ಇವುಗಳನ್ನು ಬಳಸಲು ಬೆಳೆಗಾರರು ಇಲಾಖೆಗೆ ಅನುಮತಿ ಕೇಳಿದರೆ, ತಕ್ಷಣಕ್ಕೆ ನೀಡುವುದಿಲ್ಲ. ಹೀಗಾಗಿ ಕೆಲವೊಮ್ಮೆ ಅವೆಲ್ಲ ಅಲ್ಲೇ ಮಣ್ಣುಪಾಲಾಗುತ್ತವೆ. ಇಂಥ ಉಳಿಕೆಗಳನ್ನು ಮೌಲ್ಯವರ್ಧಿಸಿ ಉತ್ಪನ್ನಗಳನ್ನಾಗಿಸಲು ಬೆಳೆದವರಿಗೆ ಅನುಮತಿ ನೀಡಿದರೆ, ಒಂದಷ್ಟು ಹಣ ಸಿಗುತ್ತದೆ. ಈ ನಿಟ್ಟಿನಲ್ಲಿ ಅರಣ್ಯ ಇಲಾಖೆಯ ನಿಯಮಗಳು ಬದಲಾಗಬೇಕು' ಎಂದು ಬೆಳೆಗಾರ ದಿನೇಶ್ ಅಭಿಪ್ರಾಯಪಡುತ್ತಾರೆ.

ಇಷ್ಟೆಲ್ಲ ಅಡೆತಡೆಗಳ ನಡುವೆ ಸೆಂಟ್ರಲ್ ವಿಸ್ತಾ ಮೇಲ್ವಿಚಾರಣಾ ಸಮಿತಿಯು ಇತ್ತೀಚೆಗೆ ಬಿಡುಗಡೆ ಮಾಡಿದ ಶ್ರೀಗಂಧದ ಅಭಿವೃದ್ಧಿ ಸಮಿತಿಯ ವರದಿಯಲ್ಲಿ, ಶ್ರೀಗಂಧವನ್ನು ಕೃಷಿ ಉತ್ಪನ್ನವಾಗಿ ಪರಿಗಣಿಸುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿದೆ. ಅಖಿಲ ಕರ್ನಾಟಕ ಅಖಿಲ ಕರ್ನಾಟಕ ಶ್ರೀಗಂಧ ಮತ್ತು ವನಕೃಷಿಕರ ಸಂಘ ಕೂಡ 'ಶ್ರೀಗಂಧ ಕೃಷಿ ಯೋಜನೆ, ರೈತರ ಕಲ್ಯಾಣ ಹಾಗೂ ಆರ್ಥಿಕ ಸದೃಢತೆಗಾಗಿ ರೂಪಿಸಲಾಗಿದೆ. ಇದು ಅರಣ್ಯ ಇಲಾಖೆ ವ್ಯಾಪ್ತಿ-ಯಲ್ಲಿರುವ ಕಾರಣ, ಈ ಕೃಷಿಯ ಅಭಿವೃದ್ಧಿಗಾಗಿ ಬ್ಯಾಂಕ್‌ನಿಂದ ಸಾಲ, ವಿಮೆ ಸೌಲಭ್ಯಗಳು ಸಿಗುತ್ತಿಲ್ಲ. ಹಾಗಾಗಿ ಕೃಷಿ ಜಮೀನಿನಲ್ಲಿ ಬೆಳೆಯುವ ಶ್ರೀಗಂಧವನ್ನು ಅರಣ್ಯ ಇಲಾಖೆಯಿಂದ ತೋಟಗಾರಿಕೆ ಇಲಾಖೆಗೆ ವರ್ಗಾಯಿಸಿ' ಎಂದು ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ. ಮಾತ್ರವಲ್ಲ, ರಾಜ್ಯದಲ್ಲಿ ಶ್ರೀಗಂಧದ ಕೃಷಿಕರು ಎದುರಿಸುತ್ತಿರುವ ಈ ಸಮಸ್ಯೆಗಳ ಕುರಿತು ಸರ್ಕಾರಕ್ಕೆ ಪತ್ರಗಳ ಮೂಲಕ ತಿಳಿಸಿ, ಪರಿಹಾರಕ್ಕಾಗಿ ಒತ್ತಾಯಿಸಿದ್ದಾರೆ.

ಇಂಥ ಶ್ರೀಗಂಧದ ಪರಿಮಳ ನಾಡಿನ ಬೆಳೆದವರ ಬಾಳಲ್ಲಿ ಪರಿಮಳ ತರಬೇಕಿತ್ತು. ಬದಲಿಗೆ, ಬೆಳೆದವರು ಉಸಿರು ಕಟ್ಟುವಂತಾಗಿದೆ. ಬೆಳೆದಿರುವುದನ್ನು ಕಡಿದು ಮಾರಲಾಗದೇ, ರಕ್ಷಿಸಿಕೊಳ್ಳಲೂ ಆಗದೇ ಒದ್ದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಇಂಥ ಪರಿಸ್ಥಿತಿಯಲ್ಲಿ ಶ್ರೀಗಂಧ ಕೃಷಿ ಬಗ್ಗೆ 'ಸಂಶೋಧನೆ ಮತ್ತು ಅಭಿವೃದ್ಧಿ'ಯ ಜೊತೆಗೆ, ಇನ್ನಷ್ಟು ರೈತ ಸ್ನೇಹಿ 'ನೀತಿ'ಗಳನ್ನು ಸರ್ಕಾರ ನಿರೂಪಿಸಬೇಕಿದೆ ಎನ್ನುತ್ತಾರೆ ತಜ್ಞರು.

ಪರಿಕಲ್ಪನೆ: **ಯತೀಶ್ ಕುಮಾರ್ ಜಿ.ಡಿ.**
**(ಪೂರಕ ಮಾಹಿತಿ: ಆರ್.ಜಿತೇಂದ್ರ, ಜಿ.ಎಚ್.ವೆಂಕಟೇಶ್, ಬಸವರಾಜ ಸಂಪಳ್ಳಿ, ಬಸವರಾಜ ಹವಾಲ್ದಾರ, ಬಿ.ಜೆ.ಧನ್ಯಪ್ರಸಾದ್, ಗಣಪತಿ ಹೆಗಡೆ)**


### 36 ಟನ್ ಮಾರಿದ ಲೋಕೇಶ್ವರ

ಶ್ರೀಗಂಧ ಬೆಳೆದು ಟನ್‌ಗಳಲ್ಲಿ ಮಾರಾಟ ಮಾಡಿ ಯಶಸ್ವಿಯಾದವರ ಸಂಖ್ಯೆ ವಿರಳ. ಇಂಥ ಯಶಸ್ವಿ ಕೃಷಿಕರಲ್ಲಿ ಶಿವಮೊಗ್ಗದ ಎ.ಲೋಕೇಶ್ವರ ಒಬ್ಬರು. ಇವರು 2006ರಲ್ಲಿ ಶ್ರೀಗಂಧ ಕೃಷಿ ಆರಂಭಿಸಿದರು. ಅನೇಕ ಏಳು–ಬೀಳುಗಳ ನಡುವೆ ಗಂಧ ಬೆಳೆದು 2021–2023ರ ಅವಧಿಯಲ್ಲಿ 36 ಟನ್‌ನಷ್ಟು ಶ್ರೀಗಂಧ ಮಾರಾಟ ಮಾಡಿದ್ದಾರೆ.


ಮೊದಲು 12 ಎಕರೆಯಲ್ಲಿ 6 ಸಾವಿರ, 7 ಎಕರೆಯಲ್ಲಿ 3 ಸಾವಿರ ಶ್ರೀಗಂಧದ ಗಿಡಗಳನ್ನು ಅಡಿಕೆ ನಡುವೆ ನಾಟಿ ಮಾಡಿದರು. ನೀರು, ಗೊಬ್ಬರ, ಪೋಷಕಾಂಶಗಳ ಪೂರೈಕೆಯ ಆರೈಕೆ. ಜೊತೆಗೆ, ನಾಲ್ಕೈದು ಕಾವಲುಗಾರರು, ನಾಯಿಗಳು, ಹೊನಲು ಬೆಳಕಿನಂತಹ ರಕ್ಷಣಾ ಕ್ರಮಗಳ ನಡುವೆ ಶ್ರೀಗಂಧ ಬೆಳೆದರು.

'ಇಷ್ಟೆಲ್ಲ ರಕ್ಷಣೆ ಇದ್ದರೂ ನೂರಾರು ಮರಗಳು ಕಳವಾದವು. ಪೊಲೀಸು, ಕಂಪ್ಲೇಂಟ್ ಅಂತ ಸುತ್ತಾಡಿ ಸಾಕಾಯ್ತು. ನನ್ನ ನೋಡಿ ಸಾಕಷ್ಟು ಜನರು ನೂರಾರು ಎಕರೆಯಲ್ಲಿ ಬೆಳೆದಿದ್ದಾರೆ. ಹಾಗೆ ಬೆಳೆದವರೂ ಕಳ್ಳತನ ತಡೆಯದೇ ತೆಗೆದು ಹಾಕಿದ್ದಾರೆ. ಸಣ್ಣ ರೈತರು ಶ್ರೀಗಂಧ ಬೆಳೆಯುವುದು ಸ್ವಲ್ಪ ಕಷ್ಟ' ಎನ್ನುತ್ತಾರೆ ಅವರು.

**2021–2025ರವರೆಗೆ ಹೆಚ್ಚು ಶ್ರೀಗಂಧ ಬೆಳೆದ ಪ್ರಮುಖ ಜಿಲ್ಲೆಗಳು**




### ಮಾರಾಟದ ದಿನವೇ ಶೇ 25ರಷ್ಟು ಹಣ ನೀಡಿ'



'ರೈತರು ಒಮ್ಮೆಲೆ ಸಾವಿರಾರು ಶ್ರೀಗಂಧದ ಸಸಿ ನೆಡಬಾರದು. ಶ್ರೀಗಂಧ ಎಲ್ಲ ನೆಲದಲ್ಲೂ ಬೆಳೆಯುವುದಿಲ್ಲ. ಮೊದಲು 100–200 ಸಸಿ ನೆಟ್ಟು ನಂತರ ಶ್ರೀಗಂಧ ಕೃಷಿಯ ಬಗ್ಗೆ ನಿರ್ಧಾರ ತಳೆಯಬೇಕು' ಎಂಬುದು ಅರಣ್ಯ ಮತ್ತು ಪರಿಸರ ಇಲಾಖೆಯ ನಿವೃತ್ತ ಕಾರ್ಯದರ್ಶಿ ಎ.ಸಿ. ಲಕ್ಷ್ಮಣ್ ಸಲಹೆ

'ಶ್ರೀಗಂಧದ ಕಟಾವು ಮತ್ತು ಸಾಗಣೆಗೆ ಸಂಬಂಧಿಸಿದ ನಿಯಮಗಳನ್ನು ಸರಳೀಕರಿಸಲು ಕೈಗಾರಿಕಾ ವಲಯದಿಂದ ಲಾಬಿ ನಡೆದಿದೆ. ಈ ವಿಚಾರದಲ್ಲಿ ಮುಕ್ತ ಅವಕಾಶ ನೀಡಿದರೆ, ಶ್ರೀಗಂಧದ ಕಳವು ಇನ್ನಷ್ಟು ಹೆಚ್ಚುವ ಅಪಾಯವಿದೆ. ಹೀಗಾಗಿ ಸರ್ಕಾರ ರೈತರ ಸ್ನೇಹಿ ನೀತಿ ರೂಪಿಸಿ, ಅವರ ಹಿತ ಕಾಯಬೇಕು' ಎಂದು ಸಲಹೆ ನೀಡುತ್ತಾರೆ.

'ಸರ್ಕಾರಕ್ಕೆ ಶ್ರೀಗಂಧ ಮಾರುವ ರೈತರಿಗೆ ಮಾರಾಟದ ದಿನವೇ ಶೇ 25ರಷ್ಟು ಹಣ ಪಾವತಿಸಿ, ಕಾಲಮಿತಿಯೊಳಗೆ ಉಳಿದ ಹಣವನ್ನೂ ಸಂದಾಯ ಮಾಡುವ ವ್ಯವಸ್ಥೆಯಾಗ-ಬೇಕು. ಆಗ ರೈತರು ಆಸಕ್ತಿಯಿಂದ ಶ್ರೀಗಂಧ ಬೆಳೆಯುತ್ತಾರೆ' ಎನ್ನುವುದು ಅವರ ಅಭಿಪ್ರಾಯ.

### ಅನುಮತಿ ಪ್ರಕ್ರಿಯೆ ಚುರುಕಿಗೆ ಕ್ರಮ: ಖಂಡ್ರೆ



ಪಹಣಿಯಲ್ಲಿ ಶ್ರೀಗಂಧ ಬೆಳೆಯ ಉಲ್ಲೇಖವಿದ್ದರೆ, ಮರ ಕಟಾವು ಮತ್ತು ಸಾಗಾಟಕ್ಕೆ ಅನುಮತಿ ನೀಡಲು ಕಂದಾಯ ಇಲಾಖೆ ಅಭಿಪ್ರಾಯ ಕೇಳುವ ಅಗತ್ಯ-ವಿರುವುದಿಲ್ಲ. ಪಹಣಿಯಲ್ಲಿ ಶ್ರೀಗಂಧದ ಬೆಳೆ ದಾಖಲಾಗದಿದ್ದರೆ, ಆಗ ಕಂದಾಯ ಇಲಾಖೆ ಅಭಿಪ್ರಾಯ ಕೇಳಿ ಅನುಮತಿ ನೀಡುವುದಕ್ಕೆ ವಿಳಂಬವಾಗುತ್ತದೆ. ಆದರೂ, ಈ ಪ್ರಕ್ರಿಯೆಯನ್ನು ಇನ್ನಷ್ಟು ಚುರುಕಾಗಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಪ್ರತಿಕ್ರಿಯಿಸಿದ್ದಾರೆ.

'ಶ್ರೀಗಂಧ ಬೆಳೆಯನ್ನು ತೋಟಗಾರಿಕೆ ಬೆಳೆ ಎಂದು ಘೋಷಿಸಿದರೆ, ಅರಣ್ಯ ಇಲಾಖೆಗೆ ಶ್ರೀಗಂಧದ ಮೇಲೆ ಯಾವುದೇ ನಿಯಂತ್ರಣ ವಿರುವುದಿಲ್ಲ. ಆಗ ಕಾಡಿನಲ್ಲಿ ಬೆಳೆದಿರುವ ಗಂಧದ ಮರಗಳೂ ಕಳುವಾಗುವ ಅಪಾಯ-ವಿರುತ್ತದೆ. ಹೀಗಾಗಿ ಈ ಬೇಡಿಕೆ ಈಡೇರಿಕೆ ಕಷ್ಟ' ಎಂದೂ ಹೇಳಿದ್ದಾರೆ.

ಗಂಧದ ಮರಗಳ್ಳತನದ ವಿಷಯದಲ್ಲಿ ಯಾವುದೋ ಒಂದು ಪ್ರಕರಣವನ್ನೇ ಆಧಾರವಾಗಿಟ್ಟುಕೊಂಡು ಅದನ್ನೇ ಸಾರ್ವತ್ರೀಕರಿಸಿ ಇಲಾಖೆಯನ್ನು ದೂರುವುದು ಸರಿಯಲ್ಲ. ಗಂಧದ ಮರ ಕಳವಾದರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಬಹುದು. ಹಾಗೇನಾದರೂ ಸಿಬ್ಬಂದಿ ಮಾಹಿತಿ ನೀಡಿದ್ದಲ್ಲಿ, ಅದು ತನಿಖೆಯಲ್ಲಿ ಬಹಿರಂಗವಾಗುತ್ತದೆ ಎಂದು ವಿವರಿಸಿದ್ದಾರೆ.

ಗಂಧದ ಮರ ಕಳ್ಳತನ ಪ್ರಕರಣದ ತನಿಖೆಗೆ ಎಸ್‌ಐಟಿ ರಚಿಸಬೇಕೆಂಬ ಬೆಳೆಗಾರರ ಬೇಡಿಕೆಗೆ ಪ್ರತಿಕ್ರಿಯಿ ಸಿರುವ ಅವರು, 'ಶ್ರೀಗಂಧ ಮರ ಕಳವು ಪ್ರಕರಣಗಳನ್ನು ಎಲ್ಲ ಪೊಲೀಸ್ ಠಾಣೆಗಳಲ್ಲೂ ಕಡ್ಡಾಯವಾಗಿ ದಾಖಲಿಸಿ ಕೊಳ್ಳಬೇಕೆಂದು ಡಿಜಿಪಿ ಸೂಚಿಸಿದ್ದಾರೆ. ಎಲ್ಲ ಪ್ರಕರಣಗ-ಳನ್ನೂ ಪೊಲೀಸರೇ ತನಿಖೆ ನಡಸಿ ಕ್ರಮ ಕೈಗೊಳ್ಳುತ್ತಾರೆ' ಎಂದು ಅವರು ಸ್ಪಷ್ಟಪಡಿಸಿದ್ದಾರೆ.



ಚಾಮರಾಜನಗರದ ಗುಂಡ್ಲುಪೇಟೆಯ ಅಂಚಿನಲ್ಲಿರುವ ತೋಟ ಒಂದರಲ್ಲಿ ಕೆಲ ದಿನದ ಹಿಂದೆ ಕಳ್ಳರು ಶ್ರೀಗಂಧದ ಮರವನ್ನು ಕತ್ತರಿಸಿರುವುದು

## ಗುಂಡಣ್ಣ




### 25 ವರ್ಷಗಳ ಹಿಂದೆ

ಗುರುವಾರ, 23-11-2000

● **ಕೇಂದ್ರ-ತಮಿಳುನಾಡಿನ ನೆರವಿನಿಂದ ವೀರಪ್ಪನ್ ಬೇಟೆ: ಕೃಷ್ಣ ಭರವಸೆ**

ಬೆಂಗಳೂರು, ನ.22– ಕೇಂದ್ರ ಮತ್ತು ತಮಿಳುನಾಡು ಸರ್ಕಾರಗಳ ನೆರವು ಮತ್ತು ಸಹಕಾರ ಪಡೆದು ಕರ್ನಾಟಕವನ್ನು 'ವೀರಪ್ಪನ್ ಪಿಡುಗಿನಿಂದ' ಮುಕ್ತಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಎಸ್.ಎಂ ಕೃಷ್ಣ ಅವರು ವಿಧಾನಸಭೆಯಲ್ಲಿ ಇಂದು ಆಶ್ವಾಸನೆ ನೀಡಿದರು.

ವೀರಪ್ಪನ್ ಪ್ರಕರಣ ಕರ್ನಾಟಕಕ್ಕೆ ಕಪ್ಪು ಚುಕ್ಕೆಯಾಗಿದೆ ಎಂದ ಅವರು, ವೀರಪ್ಪನ್ ಹಾವಳಿ, ರಾಜ್‌ಕುಮಾರ್ ಅಪಹರಣ ಹಾಗೂ ಅವರ ಬಿಡುಗಡೆವರೆಗಿನ ಘಟನಾವಳಿಗಳನ್ನು ವಿವರಿಸಿದರು.

### 75 ವರ್ಷಗಳ ಹಿಂದೆ

ಗುರುವಾರ, 23-11-1950

● **ಸಕ್ಕರೆ, ಗೋಧಿ ದಾಸ್ತಾನು ಪರಿಸ್ಥಿತಿ ಉತ್ಕಟವಾಗಿದೆ**

ಬೆಂಗಳೂರು, ನ.21–ಸಂಸ್ಥಾನದಲ್ಲಿ, ಅದರಲ್ಲೂ ಬೆಂಗಳೂರು ನಗರದಲ್ಲಿ ಸಕ್ಕರೆ ಹಾಗೂ ಗೋಧಿ ದಾಸ್ತಾನು ಪರಿಸ್ಥಿತಿ ಉತ್ಕಟವಾಗಿದೆ. ಗೋಧಿ ಮತ್ತು ಸಕ್ಕರೆಯನ್ನು ತತ್‌ಕ್ಷಣ ಸರಬರಾಜು ಮಾಡಬೇಕು ಎಂದು ಸರ್ಕಾರ ಕೇಂದ್ರವನ್ನು ಒತ್ತಾಯ ಮಾಡಿದೆ.

ಆಹಾರ ಸಚಿವ ಟಿ.ಮರಿಯಪ್ಪನವರು ಇಂದು ಇತ್ತ ಭೇಟಿಯಲ್ಲಿ ನವೆಂಬರ್ ತಿಂಗಳಿಗೆ ಕೇಂದ್ರ ಸರ್ಕಾರ ಅಲಾಟ್ ಮಾಡಿದ್ದ 13 ಸಾವಿರ ಟನ್ ಆಹಾರಧಾನ್ಯದಲ್ಲಿ ಒಂದು ಕಾಲು ಇನ್ನೂ ಸರಬರಾಜು ಆಗಿಲ್ಲವೆಂದು ತಿಳಿಸಿದರು.

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

**23 ನವೆಂಬರ್ 2025 ಭಾನುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ:** ಮಾರ್ಗಶಿರ ಶುಕ್ಲ ತೃತೀಯ ಗಂ. 19-25 ನಕ್ಷತ್ರ: ಮೂಲ ಗಂ. 19-28 ಯೋಗ: ಧೃತಿ ಗಂ. 12-09 ಕರಣ: ತೈತಿಲ ಗಂ 6.20 ವೃಶ್ಚಿಕ ಮಾಸದ 08 ನೇ ದಿನ. ಮಳೆ ನಕ್ಷತ್ರ : ಅನುರಾಧ 2 ನೇ ಪಾದ. ರಾಹುಕಾಲ : ಸಾಯಂಕಾಲ 04-30 - 06-00 ಸೂರ್ಯೋದಯ : 06-37 ಸೂರ್ಯಾಸ್ತ : 05-57 ಮುಸ್ಲಿಂ ದಿನಾಂಕ : 1 ಜುಮಾದುಸ್ಸಾನಿ ಅದೃಷ್ಟ ಸಂಖ್ಯೆ : 2, 10

**ಮೇಷ:** ಬಹುಜನರ ಅಭಿಪ್ರಾಯವನ್ನು ಕೇಳಿ ನೀವು ಆರಂಭಿಸಲು ಹೊರಟ ಕೆಲಸದಲ್ಲಿ ವಿಭಿನ್ನ ಅಭಿಪ್ರಾಯದಿಂದಾಗಿ ಗೊಂದಲಕ್ಕೆ ಒಳಗಾಗುವಿರಿ. ಪ್ರಾಪಂಚಿಕ ವಿಷಯಗಳಲ್ಲಿ ಮಹತ್ವಾಕಾಂಕ್ಷೆ ಇರುವವರಿಗೆ ಶುಭ ದಿನ.

**ವೃಷಭ:** ವೈದ್ಯರು ಹೊಸ ಖಾಸಗಿ ಕಾರ್ಯಾಲಯವನ್ನು ಮಾಡುವ ಯೋಚನೆ ಮಾಡುವಿರಿ. ಧರ್ಮ ಕಾರ್ಯದಿಂದ ಶ್ರೇಯೋಭಿವೃದ್ಧಿಯಾಗುವುದು. ಅನುಭವದ ಕೊರತೆಯಿಂದಾಗಿ ಕೆಲಸಗಳಲ್ಲಿ ವಿಳಂಬವಾಗಬಹುದು.

**ಮಿಥುನ:** ಯಾವುದೇ ರೀತಿಯ ಅವಘಡಗಳಿಗೆ ನೇರವಾಗಿ ನೀವೇ ಹೊಣೆಯಾಗಿರುತ್ತೀರಿ. ಮಗನಲ್ಲಿ ಅನುಭವದ ಕೊರತೆಯನ್ನು ಕಂಡು ಬೇಸರಿಸುವಿರಿ. ಇದ್ದುದರಲ್ಲಿ ಖುಷಿ ಪಡುವುದು ಅಗತ್ಯವಾಗಿದೆ.

**ಕರ್ಕಾಟಕ:** ಪ್ರಾಣಿ ದಯಾ ಸಂಘದಲ್ಲಿ ಕೆಲಸ ಮಾಡುತ್ತಿರುವವರಿಗೆ ಇಂದಿನ ಹೃದಯ ವಿದ್ರಾವಕ ಘಟನೆಯು ಕಣ್ಣೀರಿಗೆ ಕಾರಣವಾಗುತ್ತದೆ. ಕಂಪನಿಯ ಕೆಲಸಕ್ಕಾಗಿ ತುರ್ತು ಪ್ರಯಾಣ ಮಾಡಬೇಕಾದ ಸಂದರ್ಭ ಬರುವುದು.

**ಸಿಂಹ:** ಆತ್ಮೀಯ ಸ್ನೇಹಿತರ ಸಂಪರ್ಕದಿಂದ ಜೀವನ ನಡೆಸಲು ಬೇಕಾದ ಉಪಾಯವನ್ನು ಹೊಂದುವಿರಿ. ಸ್ಥಿರವಾಗಿ ನಡೆಯುತ್ತಿದ್ದ ನಿಮ್ಮ ಉದ್ಯೋಗದಲ್ಲಿ ಅಭದ್ರತೆ ಕಾಡಬಹುದು. ಪ್ರಾಪಂಚಿಕ ಬದುಕಿನ ಬಗ್ಗೆ ತಿಳಿದುಕೊಳ್ಳಿ.

**ಕನ್ಯಾ:** ಹೂಡಿಕೆಯಿಂದ ಅಧಿಕ ಲಾಭ ಬಂದಿರುವ ಸುದ್ದಿ ತಿಳಿದು ಅತೀವ ಸಂತೋಷಗೊಳ್ಳುವಿರಿ. ಮಾತು ಅತಿರೇಕವಾಗದಂತೆ ಎಚ್ಚರ ವಹಿಸುವಿರಿ. ನಟನಾ ವೃತ್ತಿಯವರಿಗೆ ಖ್ಯಾತಿ ಮತ್ತು ಸಂಪತ್ತು ಹರಿದು ಬರಲಿದೆ.

**ತುಲಾ:** ಮಗಳು ವಿವಾಹ ವಿಚಾರದಲ್ಲಿ ತೋರುತ್ತಿರುವ ಅಸಡ್ಡೆಯು ನಿಮ್ಮ ಅಸಮಾಧಾನಕ್ಕೆ ಕಾರಣವಾಗುವುದು. ಕಂಕಣ ಭಾಗ್ಯ ಕೂಡಿಬಂದಾಗ ತಳ್ಳಿಹಾಕುವುದು ತರವಲ್ಲ. ಕೈಗಾರಿಕಾ ಕ್ಷೇತ್ರದಲ್ಲಿ ಹೆಚ್ಚಿನ ಲಾಭಪಡೆಯುವಿರಿ.

**ವೃಶ್ಚಿಕ:** ದ್ಯುತಿತಂತು ಸಾಧನಗಳ ತಯಾರಕ ಹಾಗೂ ಮಾರಾಟಗಾರರಿಗೆ ಲಾಭದಾಯಕ ದಿನವಾಗಿರುತ್ತದೆ. ಉನ್ನತ ವ್ಯಾಸಂಗಕ್ಕೆ ಅವಕಾಶ ಲಭಿಸುತ್ತದೆ. ಸದ್ಗುರು ದತ್ತಾತ್ರೇಯರ ಆರಾಧನೆಯಿಂದ ಜ್ಞಾನ ಸಂಪಾದಿಸಿಕೊಳ್ಳಿರಿ.

**ಧನು:** ಕೆಲ ವಿಚಾರಗಳನ್ನು ಅರಿತ ಮೇಲೆ ನೀವಿರುವ ಜಾಗದಲ್ಲಿ ನೀವು ಅಂದುಕೊಂಡ ರೀತಿಯ ಭವಿಷ್ಯ ಇರುವುದೇ ಎಂಬ ಚಿಂತೆ ಉಂಟಾಗುತ್ತದೆ. ತಂದೆಯ ನಿರ್ಧಾರಗಳನ್ನು ಗೌರವಿಸುವುದರಿಂದ ನಿಮ್ಮ ಗೌರವ ವೃದ್ಧಿಸುತ್ತದೆ.

**ಮಕರ:** ಊರಿನಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಅದರಲ್ಲೂ ವಿಶೇಷವಾಗಿ ಸುಗಮ ಸಂಗೀತದಲ್ಲಿ ನೀವು ಭಾಗವಹಿಸುವಿರಿ. ಏಕ ಕಾಲದಲ್ಲಿ ಹತ್ತಾರು ಕೆಲಸಗಳನ್ನು ಮಾಡುವಂತಹ ಉತ್ಸಾಹ ಉಂಟಾಗುವುದು.

**ಕುಂಭ:** ವೃತ್ತಿಯಲ್ಲಿ ಬಡ್ತಿಯನ್ನು ಬಯಸುವ ನೀವು ಅದರೊಂದಿಗೆ ಸ್ಥಾನ ಬದಲಾವಣೆಗೂ ಸಹ ತಯಾರಿರಬೇಕಾಗುತ್ತದೆ. ನಿಮ್ಮ ಜೀವನದ ಹಳೆಯ ನೆನಪುಗಳನ್ನು ಮರೆತು ಭವಿಷ್ಯದತ್ತ ಗಮನಹರಿಸುವುದು ಉತ್ತಮ.

**ಮೀನ:** ರಕ್ಷಕರು ಕಾವಲಿಗೆ ಇರುವ ಸಮಯದಲ್ಲಿ ಯಾವುದೇ ಸೋಮಾರಿತನ ಮಾಡಬೇಡಿ, ನಿಮ್ಮ ನಿರ್ಲಕ್ಷ್ಯ ಹಲವು ನಷ್ಟಕ್ಕೆ ಕಾರಣವಾಗಬಹುದು. ನಿಮ್ಮ ಒಳ್ಳೆಯ ಕನಸುಗಳಿಗೆ ಜೀವ ಬಂದಂತೆ ಭಾಸವಾಗುತ್ತದೆ.

## ಪದಬಂಧ 6232


ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**

1. ರಾಜ ಕುಳಿತುಕೊಳ್ಳುವ ಆಸನ (4)
3.ಉಳಿಕೆಯನ್ನು ನಿಲ್ಲಿಸಿಕೊಂಡಿರುವವನು (4)
5.ಸ್ಫುಟವಾಗಿ ಗೋಚರಿಸದೆ ಅಸ್ಪಷ್ಟವಾಗಿರುವುದು (3)
7.ಬಿಡುವಿನ ದಿನ (2)
9.ತಾರಾಗಣದಲ್ಲಿರುವ ನೆಲೆ ಕಾಣಿಸಿತೇ? (2)
10. ದನದೊಳಗಿನ ಹತೋಟಿ! (3)
11.ಹುಲ್ಲು, ಸೊಪ್ಪು ಮೊದಲಾದವುಗಳ ಕಟ್ಟು (2)
12.ಪುಣ್ಯಕ್ಷೇತ್ರದಲ್ಲಿರುವ ಮಗ ತಿರುಗಿದ್ದಾನಲ್ಲಾ? (2)
14.ವನದ ಬಗ್ಗೆ ಬರೆದಿರುವ ಪದ್ಯ (3)
16.ಈತ ಅತೀ ಬುದ್ಧಿವಂತ (4)
17.ತರಹೇವಾರಿ ಕಾಯಿಪಲ್ಯೆ (4)

**ಮೇಲಿಂದ ಕೆಳಕ್ಕೆ**

1.ಅಡಿಕೆ ಹೂವಿನ ಗೊಂಚಲು (3)
2.ಚಿತ್ತವಿಲ್ಲಿ ಉಲ್ಟಾಪಲ್ಟಾ ಆಗಿಬಿಟ್ಟಿದೆ (2)
3.ತಂಬಾಕು ಕತ್ತರಿಸಲು ಬಳಸಿದ ಕಿರುಗತ್ತಿ (2)
4.ಪಣ ವಿಟ್ಟು ಗಳಿಸಿದ ಐಶ್ವರ್ಯ ಇಲ್ಲಿದೆ (3)
6.ಚಿನ್ನದ ಹಬ್ಬವಿದು (7)
8.ಮೈಮರೆಯದೆ ಎಚ್ಚರವಾಗಿರುವಿಕೆ (5)
9.ಮೋಕ್ಷದಾಯಕ ಮಂತ್ರ (5)
11.ಕೋಟೆಯ ಸುತ್ತಲಿನ ಕುಣಿ (3)
13.ಪುರಿಯಲ್ಲಿರುವ ರಾಜಕೀಯ ವ್ಯಕ್ತಿ (3)
14.ಕರಣದಲ್ಲಿರುವ ಅತ್ಯಂತ ಚಿಕ್ಕ ಚೂರುಕಾಣುತ್ತಿದೆಯೇ? (2)
15.ನಗುತಲಿದ್ದವದವ ಹೀಗೆ ಶರಣಾದ! (2)



**6231ನೇ ಪದಬಂಧದ ಉತ್ತರ**

**ಎಡದಿಂದ ಬಲಕ್ಕೆ:** 1.ಕಡಸು 3.ತಮ 5.ರಾಮನಗರ 7.ವಸ್ತ್ರ 8.ಕಾರವಾರ 10.ಕೂರ್ಮ 11.ಹಾವು 12.ಮಾಸು 13.ತಾಯಿ 14.ಜಾಣತನ 16.ಮಂಗ 17.ಸುರಸುಂದರಿ 19.ಟಕ್ಕು 20.ಪುಲ್ಲಿಂಗ

**ಮೇಲಿಂದ ಕೆಳಕ್ಕೆ:** 1.ಕಸವರ 2.ಸುರಾ 4.ಮನೋಧರ್ಮ 6.ಗಹ್ವರ 8.ಕಾವು 9.ವಾರಣ 10.ಕೂಸು 11.ಹಾಯಿ 12.ಮಾನ 13.ತಾಕಲಾಟ 14.ಜಾಗರ 15.ಅಂಗರಾಗ 18.ರಿಪು

## ಸುಡೊಕು 6616

**ಹೀಗೆ ಆಡಿ:** ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

| | | | | | | | | |
|---|---|---|---|---|---|---|---|---|
| 1 | | | | 2 | | | 8 | 4 |
| | | 7 | | | 9 | | 5 | 2 |
| | 8 | | | 4 | | | | |
| 2 | | | | | | | 6 | |
| | | 4 | | 3 | | | | 1 |
| 5 | | | | | | | | 3 |
| | | 5 | | 9 | | | 7 | 6 |
| 7 | | | 2 | | 6 | 8 | | |
| 9 | 4 | | | 7 | | | | 5 |

**6615 ಸುಡೊಕು**

| | | | | | | | | |
|---|---|---|---|---|---|---|---|---|
| 9 | 4 | 1 | 5 | 6 | 7 | 2 | 3 | 8 |
| 6 | 7 | 8 | 2 | 3 | 9 | 1 | 4 | 5 |
| 5 | 3 | 2 | 4 | 1 | 8 | 9 | 6 | 7 |
| 2 | 8 | 5 | 1 | 9 | 6 | 4 | 7 | 3 |
| 1 | 6 | 4 | 7 | 5 | 3 | 8 | 2 | 9 |
| 3 | 9 | 7 | 8 | 2 | 4 | 6 | 5 | 1 |
| 4 | 1 | 3 | 9 | 7 | 2 | 5 | 8 | 6 |
| 8 | 5 | 6 | 3 | 4 | 1 | 7 | 9 | 2 |
| 7 | 2 | 9 | 6 | 8 | 5 | 3 | 1 | 4 |

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.  To know more about The Printers (Mysore) Private Ltd, visit www.printersmysore.com.

# ‘ಎಲ್ಲ ಇಲಾಖೆಗಳಲ್ಲೂ ಶೇ 50 ಅನುದಾನ ಕಡಿತ’

ಪ್ರಜಾವಾಣಿ ವಾರ್ತೆ

**ನವದೆಹಲಿ:** ‘ಕಾಂಗ್ರೆಸ್ ಸರ್ಕಾರ ಎರಡೂವರೆ ವರ್ಷ ಪೂರೈಸಿರುವುದೇ ದೊಡ್ಡ ಸಾಧನೆ. ಹೆಚ್ಚಿನ ಇಲಾಖೆಗಳು 2024–25ನೇ ಸಾಲಿನಲ್ಲಿ ಶೇ 50ರಷ್ಟು ಅನುದಾನ ಖರ್ಚು ಮಾಡಿಲ್ಲ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಆರೋಪಿಸಿದರು.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ವಾರದಲ್ಲಿ ಮೂರು ದಿನ ಸಿದ್ದರಾಮಯ್ಯ ಹಾಗೂ ನಾಲ್ಕು ದಿನ ಡಿ.ಕೆ. ಶಿವಕುಮಾರ್ ದೆಹಲಿಯಲ್ಲಿ ಇರುತ್ತಾರೆ. ಇವರಿಬ್ಬರ ಒಳಜಗಳದಿಂದ ಆಡಳಿತ ಯಂತ್ರ ಸಂಪೂರ್ಣ ಕುಸಿದು ಬಿದ್ದಿದೆ’ ಎಂದು ದೂರಿದರು.

‘ಬಿಜೆಪಿ ಸರ್ಕಾರವು 2021–22ನೇ ಸಾಲಿನಲ್ಲಿ ಕೃಷಿ ಇಲಾಖೆಗೆ 6,409 ಕೋಟಿ ಅನುದಾನ ನೀಡಿ ₹6,491 ಕೋಟಿ ಖರ್ಚು ಮಾಡಿತ್ತು. ಕಾಂಗ್ರೆಸ್ ಸರ್ಕಾರ 2024–25ನೇ ಸಾಲಿನಲ್ಲಿ ₹5,035 ಕೋಟಿ ಮೀಸಲಿಟ್ಟು ಈ ವರೆಗೆ ₹2,231 ಕೋಟಿ ಮಾತ್ರ ಖರ್ಚು ಮಾಡಿದೆ’ ಎಂದು ಅವರು ಆರೋಪಿಸಿದರು.

‘ರಾಜ್ಯದಲ್ಲಿ ಉನ್ನತ ಶಿಕ್ಷಣ ಸಚಿವರು ಎಲ್ಲಿದ್ದಾರೋ ಗೊತ್ತಿಲ್ಲ. ಈ ಇಲಾಖೆಯಲ್ಲಿ ಶೇ 50ರಷ್ಟು ಅನುದಾನ ಕಡಿತವಾಗಿದೆ. ಪ್ರಾಥಮಿಕ ಶಿಕ್ಷಣ ಇಲಾಖೆಗೆ ಈ ವರ್ಷ ₹34,391 ಕೋಟಿ ಮೀಸಲಿಟ್ಟು ₹22,910 ಕೋಟಿಯನ್ನಷ್ಟೇ ಖರ್ಚು ಮಾಡಲಾಗಿದೆ. ಎಲ್ಲ ಇಲಾಖೆಗಳಲ್ಲೂ ಶೇ 40–50ರಷ್ಟು ಅನುದಾನ ಕಡಿಮೆ ಮಾಡಿದ್ದಾರೆ. ಇದುವೇ ಕಾಂಗ್ರೆಸ್ ಸರ್ಕಾರದ ಎರಡೂವರೆ ವರ್ಷಗಳ ಸಾಧನೆ’ ಎಂದು ವ್ಯಂಗ್ಯವಾಡಿದರು.



ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಬಿ.ಎಲ್.ಸಂತೋಷ್ ಅವರನ್ನು ಬಿ.ವೈ. ವಿಜಯೇಂದ್ರ ಶನಿವಾರ ಭೇಟಿ ಮಾಡಿ ಸಮಾಲೋಚಿಸಿದರು

**ಯತ್ನಾಳಗೆ ಎಚ್ಚರಿಕೆ:** ‘ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿಕೆಗಳನ್ನು ಗಮನಿಸಿದ್ದೇನೆ. ನನ್ನ ಬಗ್ಗೆ ಏನೂ ಬೇಕಾದರೂ ಟೀಕೆ ಮಾಡಲಿ. ಹಿರಿಯ ನಾಯಕ ಬಿ.ಎಸ್. ಯಡಿಯೂರಪ್ಪ ವಿರುದ್ಧ ಏಕವಚನದಲ್ಲಿ ಟೀಕೆ ಮಾಡುವುದನ್ನು ನಿಲ್ಲಿಸಬೇಕು. ಯಡಿಯೂರಪ್ಪ ಬಗ್ಗೆ ಮಾತನಾಡಲು ಇವರು ಯಾರು’ ಎಂದು ಪ್ರಶ್ನಿಸಿದರು.

‘ಯತ್ನಾಳ ಹೊಸ ಪಕ್ಷ ಕಟ್ಟುವುದಾದರೆ ಕಟ್ಟಲಿ. ಅವರಿಗೆ ಶುಭವಾಗಲಿ. ಊರಿಗೆಲ್ಲ ಬುದ್ಧಿ ಹೇಳುವ ಯತ್ನಾಳ ಅವರು ವಾಜಪೇಯಿ ಸರ್ಕಾರ ವಿಶ್ವಾಸಮತ ಯಾಚಿಸಿದ ಸಂದರ್ಭದಲ್ಲಿ ಹೇಗೆ ನಡೆದುಕೊಂಡಿದ್ದಾರೆ ಎಂಬುದು ಗೊತ್ತಿದೆ’ ಎಂದರು.

### ‘ಡಿಕೆಶಿ ಬಿಜೆಪಿ ಸಂಪರ್ಕದಲ್ಲಿಲ್ಲ’

ಡಿ.ಕೆ. ಶಿವಕುಮಾರ್ ಅವರು ಬಿಜೆಪಿ ಸಂಪರ್ಕದಲ್ಲಿದ್ದಾರೆ ಎಂಬ ಸುದ್ದಿಯನ್ನು ತಳ್ಳಿಹಾಕಿದ ವಿಜಯೇಂದ್ರ, ಕಾಂಗ್ರೆಸ್‌ನ ಆಂತರಿಕ ವಿಚಾರಗಳಲ್ಲಿ ನಮಗೆ ಆಸಕ್ತಿ ಇಲ್ಲ ಎಂದರು.

ಕೇಂದ್ರ ಗೃಹ ಸಚಿವ ಅಮಿತ್ ಶಾ ಜತೆಗೆ ಶಿವಕುಮಾರ್ ಸಂಪರ್ಕದಲ್ಲಿದ್ದಾರೆ ಎಂದು ಕೆಲವು ಕಾಂಗ್ರೆಸ್ ನಾಯಕರೇ ಸುದ್ದಿ ಹರಡುತ್ತಿದ್ದಾರೆ. ಇದರಲ್ಲಿ ಸತ್ಯಾಂಶ ಇಲ್ಲ ಎಂದು ಅವರು ಸ್ಪಷ್ಟಪಡಿಸಿದರು.

## ‘ಜೈನ, ಬೌದ್ಧ, ಸಿಖ್, ಕ್ರಿಶ್ಚಿಯನ್ ಭವನಕ್ಕೂ ಅನುದಾನ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಕಳೆದ ಮೂರು ವರ್ಷಗಳಲ್ಲಿ ಜೈನ, ಬೌದ್ಧ, ಸಿಖ್ ಸಮುದಾಯದ ಸಂಘ ಸಂಸ್ಥೆಗಳಿಗೂ ಸಮುದಾಯ ಭವನ ನಿರ್ಮಾಣಕ್ಕೆ ಇಲಾಖೆಯಿಂದ ಅನುದಾನ ನೀಡಲಾಗಿದೆ’ ಎಂದು ಅಲ್ಪಸಂಖ್ಯಾತ ಕಲ್ಯಾಣ ಸಚಿವ ಬಿ. ಝಡ್. ಜಮೀರ್ ಅಹ್ಮದ್ ಖಾನ್ ತಿಳಿಸಿದ್ದಾರೆ.

‘ಜೈನ ಸಮುದಾಯಕ್ಕೆ 148 ಭವನಗಳಿಗೆ ₹26 ಕೋಟಿ, ಬೌದ್ಧ ಸಮುದಾಯಕ್ಕೆ 11 ಭವನಗಳಿಗೆ ₹3 ಕೋಟಿ, ಸಿಖ್ ಸಮುದಾಯದ ಒಂದು ಭವನಕ್ಕೆ ₹50 ಲಕ್ಷ, ಕ್ರಿಶ್ಚಿಯನ್ ಸಮುದಾಯದ 188 ಭವನಗಳಿಗೆ ₹47 ಕೋಟಿ ಅನುದಾನ ಹಂಚಿಕೆ ಮಾಡಲಾಗಿದೆ’ ಎಂದು ವಿವರಿಸಿದ್ದಾರೆ.

ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಬಹೂಪಯೋಗಿ ಭವನ ನಿರ್ಮಾಣಕ್ಕೆ ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಯಿಂದ ಮುಸ್ಲಿಂ ಸಮುದಾಯಕ್ಕೆ ಅನುದಾನ ನೀಡಿರುವುದಕ್ಕೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಆಕ್ಷೇಪಿಸಿದರು.

ಇದಕ್ಕೆ ಪ್ರತಿಕ್ರಿಯಿಸಿರುವ ಜಮೀರ್, ‘ಅಶೋಕ ಅವರು ಮುಸ್ಲಿಂ ತುಷ್ಟೀಕರಣ ಎಂದಿರುವುದು ಸರಿಯಲ್ಲ’ ಎಂದಿದ್ದಾರೆ. ‘ಮುಸ್ಲಿಂ ಸಮುದಾಯದ ಶಾದಿ ಮಹಲ್ ನಿರ್ಮಾಣಕ್ಕೆ ಎಲ್ಲ ಸರ್ಕಾರದ ಅವಧಿಯಲ್ಲೂ ಅನುದಾನ ಒದಗಿಸಲಾಗುತ್ತಿದೆ. ಅದೇ ರೀತಿ ಈಗಲೂ ನೀಡಲಾಗಿದೆ’ ಎಂದಿದ್ದಾರೆ.

# ‘ರಾಜ್ಯ, ಕೇಂದ್ರ ರೈತರ ನೆರವಿಗೆ ಬರಲಿ’

## ರೈತರ ಪರ ಹೋರಾಟಕ್ಕೆ ಜೆಡಿಎಸ್ ಬೆಳ್ಳಿಹಬ್ಬ ಸಮಾವೇಶದಲ್ಲಿ ನಿರ್ಣಯ



ಜೆಡಿಎಸ್ ಸಮಾವೇಶವನ್ನು ಉದ್ದೇಶಿಸಿ ಎಚ್‌.ಡಿ.ದೇವೇಗೌಡ ಅವರು ಮಾತನಾಡಿದರು. ಎಚ್‌.ಡಿ.ಕುಮಾರಸ್ವಾಮಿ ಉಪಸ್ಥಿತರಿದ್ದರು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದ ರೈತರ ಪರವಾಗಿ ಪಕ್ಷವು ಹೋರಾಡಬೇಕು. ಜತೆಗೆ ಪಕ್ಷ ಸಂಘಟನೆಗೆ ಬಲ ತುಂಬಬೇಕು ಎಂದು ನಿರ್ಣಯಗಳನ್ನು ಜೆಡಿಎಸ್ ಬೆಳ್ಳಿಹಬ್ಬದ ರಾಷ್ಟ್ರೀಯ ಸಮಾವೇಶದಲ್ಲಿ ಕೈಗೊಳ್ಳಲಾಗಿದೆ.

ಬೆಳ್ಳಿಹಬ್ಬದ ಸಲುವಾಗಿ ಶನಿವಾರ ಆಯೋಜಿಸಿದ್ದ ಸಮಾವೇಶದಲ್ಲಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ.ದೇವೇಗೌಡ, ‘ಜೆಡಿಎಸ್ ಎಂದಿಗೂ ರೈತರ ಪರವಾಗಿ ನಿಂತಿದೆ. ಈ ಬಾರಿ ರಾಜ್ಯದಲ್ಲಿ ಪ್ರಾಕೃತಿಕ ವಿಕೋಪಗಳ ಕಾರಣದಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಆದರೆ ರೈತರ ನೆರವಿಗೆ ಸರ್ಕಾರ ಧಾವಿಸಿಲ್ಲ’ ಎಂದರು.

‘ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೈತರ ನೆರವಿಗೆ ಮುಂದಾಗಬೇಕು. ನೆರೆಯಿಂದ ಆಸ್ತಿಗಳನ್ನು ಕಳೆದುಕೊಂಡವರಿಗೆ ಪರಿಹಾರ ಒದಗಿಸಬೇಕು. ಈ ಕಾರ್ಯದಲ್ಲಿ ಜೆಡಿಎಸ್ ರೈತರ ಪರವಾಗಿ ನಿಲ್ಲಬೇಕು’ ಎಂದರು. ಸಮಾವೇಶದಲ್ಲಿ ಈ ವಿಷಯ ಕುರಿತು ಚರ್ಚಿಸಿದ ನಂತರ, ನಿರ್ಣಯವನ್ನು ಅಂಗೀಕರಿಸಲಾಯಿತು.

**ಸಿದ್ದರಾಮಯ್ಯ ಕೊಡುಗೆ ಏನು?:** ‘ಕಾಂಗ್ರೆಸ್‌ನ ಕೆಟ್ಟ ಆಡಳಿತದಿಂದ ಜನರು ಬೇಸತ್ತು ಹೋಗಿದ್ದಾರೆ. ಜಾತಿ ಹೆಸರಿನಲ್ಲಿ ಜನರನ್ನು ಒಡೆಯುತ್ತಿದ್ದಾರೆ. ಸಿದ್ದರಾಮಯ್ಯ ಅವರು 25-30 ವರ್ಷದಿಂದಲೂ ಅಧಿಕಾರದಲ್ಲಿಯೇ ಇದ್ದಾರೆ. ಈ ರಾಜ್ಯಕ್ಕೆ ಏನು ಕೊಡುಗೆ ನೀಡಿದ್ದಾರೆ? ಉಪ ಮುಖ್ಯಮಂತ್ರಿ, ಮುಖ್ಯಮಂತ್ರಿ, ಪ್ರತಿಪಕ್ಷ ನಾಯಕರಾಗಿ ಕೆಲಸ ಮಾಡಿದ್ದಾರೆ. ಏನು ಸಾಧನೆ ಮಾಡಿದ್ದಾರೆ’ ಎಂದು ಜೆಡಿಎಸ್ ರಾಜ್ಯ ಘಟಕ ಅಧ್ಯಕ್ಷ ಎಚ್‌.ಡಿ.ಕುಮಾರಸ್ವಾಮಿ ಪ್ರಶ್ನಿಸಿದರು.

‘ಈ ಎಲ್ಲದರ ವಿರುದ್ಧ, ಜನರ ಪರವಾಗಿ ನಾವು ಹೋರಾಡಬೇಕು. ರಾಜ್ಯದ ಜನರು ನಮಗೆ ಐದು ವರ್ಷ ಅಧಿಕಾರ ನೀಡಬೇಕು. ಅವರಿಗೆ ಎಷ್ಟು ಒಳ್ಳೆಯದನ್ನು ಮಾಡಲು ಸಾಧ್ಯವೋ, ಅದೆಲ್ಲವನ್ನೂ ಮಾಡುತ್ತೇನೆ. ಇಲ್ಲದೇ ಇದ್ದರೆ ಜನರಿಗೆ ಮುಖ ತೋರಿಸುವುದಿಲ್ಲ’ ಎಂದು ಶಪಥ ಮಾಡಿದರು.

### ‘ಸ್ವತಂತ್ರ ಸರ್ಕಾರ ರಚಿಸಬೇಕು’

- ಜೆಡಿಎಸ್ ಅನ್ನು ಸ್ವತಂತ್ರವಾಗಿ ಅಧಿಕಾರಕ್ಕೆ ತರಬೇಕು. ಕುಮಾರಸ್ವಾಮಿ ಅವರು ಮತ್ತೆ ಮುಖ್ಯಮಂತ್ರಿ ಆಗಬೇಕು ಎಂದು ಸಮಾವೇಶದಲ್ಲಿ ಕರೆ
- ಎಚ್‌.ಡಿ.ದೇವೇಗೌಡ ಅವರು ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾಗಿ ಪುನರಾಯ್ಕೆ. ಎಲ್ಲ ಕಾರ್ಯಕರ್ತರು, ಮುಖಂಡರು ಪಕ್ಷ ಸಂಘಟನೆಗೆ ಒತ್ತು ನೀಡಬೇಕು ಎಂಬ ನಿರ್ಣಯ ಅಂಗೀಕಾರ
- ಬೆಳ್ಳಿಹಬ್ಬದ ಅಂಗವಾಗಿ ಪಕ್ಷದ ಚಿಹ್ನೆ ತೆನೆಹೊತ್ತ ರೈತ ಮಹಿಳೆ, ಎಚ್‌.ಡಿ ದೇವೇಗೌಡರು ಮತ್ತು ಕುಮಾರಸ್ವಾಮಿ ಅವರ ಚಿತ್ರ ಇರುವ ಬೆಳ್ಳಿ ನಾಣ್ಯಗಳ ಜನಾರ್ಪಣೆ. ಬೆಳ್ಳಿ ನಾಣ್ಯ ಪಡೆಯಲು 99640 02028 ವಾಟ್ಸ್‌ಆ್ಯಪ್ ವಾಣಿಗೆ ಚಾಲನೆ
- ಮೂರು ತಿಂಗಳಲ್ಲಿ ಪ್ರತಿ ಜಿಲ್ಲೆಗಳಲ್ಲೂ ಬೆಳ್ಳಿಹಬ್ಬ ಸಂಭ್ರಮಾಚರಣೆ. ತಾಲ್ಲೂಕು ಕೇಂದ್ರಗಳಲ್ಲೂ ಬೆಳ್ಳಿಹಬ್ಬ ಕಾರ್ಯಕ್ರಮ

**ಜೆಡಿಎಸ್‌ನಲ್ಲಿರುವಂತಹ ನಿಷ್ಠಾವಂತ ಕಾರ್ಯಕರ್ತರು ಎರಡು ರಾಷ್ಟ್ರೀಯ ಪಕ್ಷಗಳಲ್ಲೂ ಇಲ್ಲ. ಕುಮಾರಸ್ವಾಮಿ ಅವರು ಮತ್ತೆ ಸಿ.ಎಂ ಆಗಬೇಕು ಎಂಬುದು ನಮ್ಮ ಕಾರ್ಯಕರ್ತರ ಆಸೆ. ಜೆಡಿಎಸ್ ಅನ್ನು ಸ್ವತಂತ್ರವಾಗಿ ಅಧಿಕಾರಕ್ಕೆ ತರಬೇಕು ಎಂಬುದು ಎಚ್‌.ಡಿ.ದೇವೇಗೌಡ ಅವರ ಒತ್ತಾಸೆ. ಇದಕ್ಕಾಗಿ ನಾವೆಲ್ಲರೂ ದುಡಿಯಬೇಕು. 2028ರ ವಿಧಾನಸಭಾ ಚುನಾವಣೆಯಲ್ಲಿ 80–90 ಸ್ಥಾನಗಳನ್ನು ಗೆಲ್ಲಬೇಕು**

**ನಿಖಿಲ್ ಕುಮಾರಸ್ವಾಮಿ,** ಜೆಡಿಎಸ್ ಯುವ ಘಟಕದ ಅಧ್ಯಕ್ಷ

### ‘ಉತ್ತರಕ್ಕೆ ನಿತೀಶ್, ದಕ್ಷಿಣಕ್ಕೆ ಕುಮಾರಸ್ವಾಮಿ’

‘ದೇಶದಲ್ಲಿ ಪ್ರಾದೇಶಿಕ ಪಕ್ಷಗಳು ಇನ್ನೂ ಪ್ರಬಲವಾಗಿವೆ ಎಂಬುದನ್ನು ಬಿಹಾರದ ಚುನಾವಣೆಯಲ್ಲಿ ಜೆಡಿಯು ಮತ್ತು ನಿತೀಶ್ ಕುಮಾರ್ ಮತ್ತೆ ಸಾಬೀತು ಮಾಡಿದ್ದಾರೆ. ಉತ್ತರಕ್ಕೆ ನಿತೀಶ್, ದಕ್ಷಿಣಕ್ಕೆ ಕುಮಾರಸ್ವಾಮಿ. ಪಕ್ಷವನ್ನು ಅಧಿಕಾರಕ್ಕೆ ತರಲು ಎಲ್ಲರೂ ದುಡಿಯಬೇಕು’ ಎಂದು ಎಚ್‌.ಡಿ. ದೇವೇಗೌಡ ಅವರು ಕರೆ ನೀಡಿದರು.

‘ನಾವು ಎಂದಿಗೂ ಎನ್‌ಡಿಎ ಮೈತ್ರಿಕೂಟವನ್ನು ಬಿಡುವುದಿಲ್ಲ. ಆದರೆ ಪಕ್ಷವನ್ನು ಬಲಪಡಿಸಬೇಕು. ತುರ್ತು ಪರಿಸ್ಥಿತಿ ಹೇರಿದಾಗ ಜಯಪ್ರಕಾಶ ನಾರಾಯಣ ಅವರ ಜತೆಯಲ್ಲಿ ನಾವು, ಅವತ್ತಿನ ಬಿಜೆಪಿಯವರು ಒಟ್ಟಿಗೆ ಕೆಲಸ ಮಾಡಿದ್ದೇವೆ. ಹೀಗಾಗಿ ನಾವು ರಾಷ್ಟ್ರದ ಹಿತದೃಷ್ಟಿಯಿಂದ ಒಟ್ಟಾಗಿ ಕೆಲಸ ಮಾಡಬೇಕಿದೆ. ಕಾಂಗ್ರೆಸ್ ಪಕ್ಷದ ಕೆಟ್ಟ ಆಡಳಿತಕ್ಕೆ ಪಾಠ ಕಲಿಸಬೇಕಿದೆ. ನಾವು ಮೋದಿ ಅವರ ನೇತೃತ್ವದಲ್ಲಿ ವಿಶ್ವಾಸ ಇಟ್ಟಿದ್ದೇವೆ. ಅವರ ನೇತೃತ್ವದಲ್ಲಿ ಬಲಿಷ್ಠ ಸರ್ಕಾರ ಇದೆ. ಇದನ್ನು ನಾವು ಮರೆಯಬಾರದು’ ಎಂದರು.

### ‘ಸಿದ್ದರಾಮಯ್ಯ ಆಕ್ಸ್‌ಫರ್ಡ್ ಪದವಿ ಪಡೆದವರಾ?’

‘ಸಿದ್ದರಾಮಯ್ಯ ಅವರನ್ನು ಹಣಕಾಸು ಮಂತ್ರಿ ಮಾಡಿದ್ದೇ ನಾನು. ವೀರಪ್ಪ ಮೊಯಿಲಿ ಅವರ ಸರ್ಕಾರದಲ್ಲಿ ಸರ್ಕಾರಿ ನೌಕರರಿಗೆ ವೇತನ ನೀಡಲು ಹಣ ಇರಲಿಲ್ಲ. ಅಂತಹ ಸ್ಥಿತಿಯನ್ನು ನಿರ್ವಹಿಸಲು ಸಿದ್ದರಾಮಯ್ಯನೇ ಸರಿಯಾದ ವ್ಯಕ್ತಿ ಎಂದು ಹಣಕಾಸು ಮಂತ್ರಿ ಹುದ್ದೆ ಸಿಗುವಂತೆ ಮಾಡಿದ್ದೆ. ಅವರೇನು ಆಕ್ಸ್‌ಫರ್ಡ್‌ನಿಂದ ಅರ್ಥಶಾಸ್ತ್ರ ಪದವಿ ಪಡೆದವರಾ? ಹೀಗಿದ್ದೂ ಹಣಕಾಸು ಮಂತ್ರಿ ಮಾಡಿದೆ. ಅದೇ ನಾನು ಮಾಡಿದ ದೊಡ್ಡ ತಪ್ಪು’ ಎಂದು ದೇವೇಗೌಡ ಹೇಳಿದರು.

‘ಸಿದ್ದರಾಮಯ್ಯ ಕೈಕೊಡುತ್ತಾನೆ ಎಂದು ರಾಮಕೃಷ್ಣ ಹೆಗಡೆ ಹಲವು ಬಾರಿ ಹೇಳಿದ್ದರು. ಅದು ಹಾಗೇ ಆಯಿತು’ ಎಂದರು.

‘ಕಾಂಗ್ರೆಸ್–ಜೆಡಿಎಸ್ ಮೈತ್ರಿ ಸರ್ಕಾರ ರಚನೆಯಾಗುವಾಗ ಸಿದ್ದರಾಮಯ್ಯ ಅವರನ್ನೇ ಮುಖ್ಯಮಂತ್ರಿ ಮಾಡಿ ಎಂದು ಸೋನಿಯಾ ಗಾಂಧಿ ಅವರನ್ನು ಕೇಳಿಕೊಂಡಿದ್ದೆ. ಸಿದ್ದರಾಮಯ್ಯಗೆ ಅನುಮಾನವಿದ್ದರೆ ಸೋನಿಯಾ ಗಾಂಧಿ ಅವರ ಬಳಿ ಸತ್ಯ ತಿಳಿದುಕೊಳ್ಳಲಿ’ ಎಂದು ಸವಾಲು ಹಾಕಿದರು.


‘ಆದರೆ ಸೋನಿಯಾ ಅವರು ಧರ್ಮಸಿಂಗ್ ಅವರನ್ನು ಮುಖ್ಯಮಂತ್ರಿ ಆಗಿಸಿದರು. ಸಿದ್ದರಾಮಯ್ಯ ನಮ್ಮ ಮೇಲೆ ಮುನಿಸಿಕೊಂಡು ಅಹಿಂದ ಸಮಾವೇಶ ಮಾಡಲು ಹೊರಟರು. ಪಕ್ಷದ ವೇದಿಕೆಯಲ್ಲೇ ಮಾಡಿ ಎಂದಿದ್ದೆ. ಅದನ್ನು ಕೇಳದಿದ್ದ ಕಾರಣ ಪಕ್ಷದಿಂದ ಹೊರಹಾಕಿದೆ. ಕಾಂಗ್ರೆಸ್‌ನಲ್ಲೂ ಅವರು ಹಿಂದುಳಿದವರ ಸಮಾವೇಶ ಮಾಡಿದರು’ ಎಂದು ಹೇಳಿದರು.

---

### ಚಿಟಿಕೆ ಸುದ್ದಿ

### ‘ಕಚ್ಚಾಟದಿಂದಾಗಿ ಆಡಳಿತ ನಿಷ್ಕ್ರಿಯ’

**ಬೆಂಗಳೂರು:** ‘ಮುಖ್ಯಮಂತ್ರಿ ಹುದ್ದೆಗಾಗಿ ನಡೆಯುತ್ತಿರುವ ಕಚ್ಚಾಟದಿಂದಾಗಿ ರಾಜ್ಯದಲ್ಲಿ ಆಡಳಿತ ಯಂತ್ರ ನಿಷ್ಕ್ರಿಯವಾಗಿದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಆರೋಪಿಸಿದರು.



ಆರ್.ಅಶೋಕ

ಸುದ್ದಿಗಾರರ ಜತೆ ಶನಿವಾರ ಮಾತನಾಡಿ, ‘ಡಿ.ಕೆ.ಶಿವಕುಮಾರ್ ಅವರನ್ನು ಮುಖ್ಯಮಂತ್ರಿ ಕುರ್ಚಿಯಲ್ಲಿ ಕೂರಿಸಬೇಕೆಂದು ಅವರ ಪರ ಶಾಸಕರು ಹೋರಾಟ ಮಾಡುತ್ತಿದ್ದಾರೆ. ಈ ಹೋರಾಟ ನಿರ್ಣಾಯಕ ಹಂತಕ್ಕೆ ಬಂದಿದೆ. ರಾಹುಲ್ ಗಾಂಧಿ ಮತ್ತು ಮಲ್ಲಿಕಾರ್ಜುನ ಖರ್ಗೆ ಅವರು ಈ ಬಗ್ಗೆ ತೀರ್ಮಾನ ನೀಡದೇ ಇದ್ದರೆ, ಸರ್ಕಾರ ನಡೆಯುವುದಿಲ್ಲ’ ಎಂದರು.

‘ರಾಜ್ಯದ ಮುಖ್ಯಮಂತ್ರಿ ಯಾರಾಗಿರುತ್ತಾರೆ ಎಂಬುದನ್ನು ಕಾಂಗ್ರೆಸ್ ಹೈಕಮಾಂಡ್ ಕೂಡಲೇ ಸ್ಪಷ್ಟಪಡಿಸಬೇಕು’ ಎಂದರು.

### ಕಥಾ ಸ್ಪರ್ಧೆಗೆ ಆಹ್ವಾನ

**ಬೆಂಗಳೂರು:** ಸಮಾಜಮುಖಿ ಪ್ರಕಾಶನವು 2025ನೇ ಸಾಲಿನ ‘ಸಮಾಜಮುಖಿ ವಾರ್ಷಿಕ ಕಥಾ ಸ್ಪರ್ಧೆ’ಗೆ ಕಥೆಗಳನ್ನು ಆಹ್ವಾನಿಸಿದೆ.

ಬಹುಮಾನಕ್ಕೆ ಆಯ್ಕೆಯಾಗುವ ಐದು ಕಥೆಗಳ ಲೇಖಕರಿಗೆ ತಲಾ ₹5 ಸಾವಿರ ನಗದು, ಪ್ರಶಸ್ತಿ ಪತ್ರ ಹಾಗೂ ಸ್ಮರಣಿಕೆ ನೀಡಲಾಗುತ್ತದೆ. ಮೆಚ್ಚುಗೆ ಪಡೆದ ಹತ್ತು ಕಥೆಗಳಿಗೆ ಸಮಾಜಮುಖಿ ವಾರ್ಷಿಕ ಕಥಾ ಸಂಕಲನದಲ್ಲಿ ಅವಕಾಶ ಒದಗಿಸಲಾಗುತ್ತದೆ. ಅಪ್ರಕಟಿತ ಕಥೆಗಳಿಗೆ 2 ಸಾವಿರ ಪದಗಳ ಮಿತಿಯಿದ್ದು, ನುಡಿ ಅಥವಾ ಯೂನಿಕೋಡ್ ಲಿಪಿಯಲ್ಲಿರಬೇಕು. ಕಥೆಗಳನ್ನು ಡಿ.31ರೊಳಗೆ samajamukhi2017@gmail.comಗೆ ಕಳುಹಿಸಬೇಕು ಎಂದು ಪ್ರಕಾಶನದ ಚಂದ್ರಕಾಂತ ವಡ್ಡು ತಿಳಿಸಿದ್ದಾರೆ.

### ಕಳ್ಳತನ: ಪುರಸಭೆ ಮಾಜಿ ಅಧ್ಯಕ್ಷ ಬಂಧನ

**ಮದ್ದೂರು:** ನೆರೆಮನೆ ಮಹಿಳೆಯನ್ನು ಬೆದರಿಸಿ ಚಿನ್ನ, ವಜ್ರಾಭರಣಗಳನ್ನು ದೋಚಿ ತಲೆಮರೆಸಿಕೊಂಡಿದ್ದ ಆರೋಪದ ಮೇರೆಗೆ ಪುರಸಭೆ ಮಾಜಿ ಅಧ್ಯಕ್ಷ ಎಂ.ಕೆ.ಮರಿಗೌಡ ಎಂಬವರನ್ನು ಪೊಲೀಸರು ಬಂಧಿಸಿದ್ದಾರೆ.

ನಗರದ ದೊಡ್ಡಿಬೀದಿಯ ನಿವಾಸಿ ಆರೋಪಿಯು ಆ. 26ರಂದು ನೆರೆಮನೆಯ ನಿವಾಸಿ, ಇಂಡೇನ್ ಗ್ಯಾಸ್ ಏಜೆನ್ಸಿ ಮಾಲೀಕ ಚಂದ್ರಶೇಖರ್ ಅವರ ಪತ್ನಿ ಸುಶೀಲಮ್ಮ ಬೆದರಿಸಿ ಕೃತ್ಯ ಎಸಗಿದ್ದ. ಮಹಿಳೆಯು ದೂರು ನೀಡಿದ್ದರು.

ಸಂತ್ರಸ್ತರ ಮನೆಯ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳ ಆಧಾರದಲ್ಲಿ ವಿಚಾರಣೆ ನಡೆಸಿದ್ದರು. ಆರೋಪಿ ತಪ್ಪೊಪ್ಪಿಕೊಂಡಿದ್ದು, ಮಳವಳ್ಳಿ, ಮದ್ದೂರಿನ ಗಿರವಿ ಅಂಗಡಿಗಳಲ್ಲಿ ಅಡವಿಟ್ಟಿದ್ದ ₹15 ಲಕ್ಷ ಮೌಲ್ಯದ ಆಭರಣಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

---

# ‘ಸರ್ಕಾರದಿಂದ ಪುಸ್ತಕೋದ್ಯಮ ಕಡೆಗಣನೆ’

## ಹೋರಾಟ ತೀವ್ರಗೊಳಿಸಲು ಪ್ರಕಾಶಕರ, ಲೇಖಕರ ಮತ್ತು ಮುದ್ರಕರ ಒಕ್ಕೂಟದಿಂದ ನಿರ್ಧಾರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಪುಸ್ತಕಗಳನ್ನು ಖರೀದಿಸಿ ಗ್ರಂಥಾಲಯಗಳಿಗೆ ಪೂರೈಸುವ ಏಕಗವಾಕ್ಷಿ ಸೇರಿ ವಿವಿಧ ಯೋಜನೆಗಳನ್ನು ಸ್ಥಗಿತಗೊಳಿಸುವ ಮೂಲಕ ರಾಜ್ಯ ಸರ್ಕಾರ ಪುಸ್ತಕೋದ್ಯಮವನ್ನು ಕಡೆಗಣಿಸುತ್ತಿದೆ’ ಎಂದು ಕರ್ನಾಟಕ ರಾಜ್ಯ ಪ್ರಕಾಶಕರ, ಲೇಖಕರ ಮತ್ತು ಮುದ್ರಕರ ಒಕ್ಕೂಟದ ಪ್ರತಿನಿಧಿಗಳು ಅಸಮಾಧಾನ ವ್ಯಕ್ತಪಡಿಸಿದರು.

ಶನಿವಾರ ನಡೆದ ಒಕ್ಕೂಟದ ಸಭೆಯಲ್ಲಿ ಸರ್ಕಾರದ ನಡೆ ಖಂಡಿಸಿದ ಪ್ರತಿನಿಧಿಗಳು, ಮುಂದಿನ ದಿನಗಳಲ್ಲಿ ಸರ್ಕಾರದ ವಿರುದ್ಧ ಧರಣಿ–ಪ್ರತಿಭಟನೆಯ ಮೂಲಕ ಹೋರಾಟ ತೀವ್ರಗೊಳಿಸಲು ನಿರ್ಧರಿಸಿದರು.



ಕರ್ನಾಟಕ ಪ್ರಕಾಶಕರ ಸಂಘದ ಅಧ್ಯಕ್ಷೆ ಡಾ.ವಸುಂಧರಾ ಭೂಪತಿ, ‘ಸಾರ್ವಜನಿಕ ಗ್ರಂಥಾಲಯ ಇಲಾಖೆ ಸಚಿವರ ದಿವ್ಯ ನಿರ್ಲಕ್ಷ್ಯದಿಂದ ಪುಸ್ತಕೋದ್ಯಮ ಸೊರಗುತ್ತಿದೆ. ಒಟ್ಟಾಗಿ ಹೋರಾಟ ನಡೆಸಬೇಕಿದೆ’ ಎಂದರು.

ಕರ್ನಾಟಕ ಬರಹಗಾರ ಮತ್ತು ಪ್ರಕಾಶಕರ ಸಂಘದ ಅಧ್ಯಕ್ಷ ನಿಡಸಾಲೆ ಪುಟ್ಟಸ್ವಾಮಯ್ಯ, ‘ಇಲಾಖೆಯು ಪ್ರಕಾಶಕರು, ಲೇಖಕರು ಮತ್ತು ಮುದ್ರಕರನ್ನು ಕಡೆಗಣಿಸುತ್ತಿದೆ. ಇಲಾಖೆಯ ಆಯುಕ್ತರು ಮೈಮರೆತು ಕಾರ್ಯನಿರ್ವಹಿಸುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಆಯುಕ್ತರ ಕಚೇರಿ ಮತ್ತು ಇಲಾಖೆ ಸಚಿವರ ಮನೆಯ ಮುಂಭಾಗ ರಾಜ್ಯದ ಸಾಹಿತಿಗಳು, ಪ್ರಕಾಶಕರು ಮತ್ತು ಮುದ್ರಕರು ಒಟ್ಟಾಗಿ ಧರಣಿ ನಡೆಸುತ್ತೇವೆ. ಅದಕ್ಕೂ ಬಗ್ಗದಿದ್ದರೆ ಪ್ರತಿಯೊಂದು ಜಿಲ್ಲಾ ಕೇಂದ್ರದಲ್ಲಿಯೂ ಪ್ರತಿಭಟನೆ ನಡಿಸಿ, ಹೋರಾಟವನ್ನು ತೀವ್ರಗೊಳಿಸಲಾಗುವುದು’ ಎಂದು ಎಚ್ಚರಿಕೆ ನೀಡಿದರು.

ಪತ್ರಕರ್ತೆ ಹಾಗೂ ಪ್ರಕಾಶಕಿ ಆರ್. ಪೂರ್ಣಿಮಾ, ‘ಈ ಹೋರಾಟ ಬಹಳ ಹಿಂದೆಯೇ ಆಗಬೇಕಿತ್ತು. ಈಗಲಾದರೂ ದೊಡ್ಡಮಟ್ಟದಲ್ಲಿ ಹೋರಾಟ ನಡೆಸದಿದ್ದರೆ ಉಳಿಗಾಲವಿಲ್ಲ’ ಎಂದರು.

ಪುಸ್ತಕೋದ್ಯಮದ ಪ್ರಮುಖರಾದ ದಾಮಿನಿ ಸತೀಶ್, ಅಭಿನವ ರವಿಕುಮಾರ್, ವಸುಧೇಂದ್ರ, ಚಂದ್ರಕೀರ್ತಿ, ಪ್ರವೀಣ್ ಜಗಾಟ, ಬಸವರಾಜ ಕೊನೆಕ್, ಬಿ.ಕೆ. ಸುರೇಶ್, ರಾಜೇಂದ್ರ ಪ್ರಸಾದ್, ವಿಶಾಲಾಕ್ಷಿ ಶರ್ಮ, ಅವಿರತ ಹರೀಶ್, ಸ್ವಾನ್ ಕೃಷ್ಣಮೂರ್ತಿ, ಸಿರಿವರ ರವೀಂದ್ರನಾಥ್, ರಘುವೀರ್, ಕೃಷ್ಣ ಚೆಂಗಡಿ ಉಪಸ್ಥಿತರಿದ್ದರು.

### ‘ಬೆಲೆ ಹೆಚ್ಚಿಸಿಲ್ಲ’

ಪ್ರಕಾಶಕ ಲೋಕಪ್ಪ, ‘ಸರ್ಕಾರವು ಕಾಲಕ್ಕೆ ತಕ್ಕಂತೆ ಪುಸ್ತಕಗಳ ಪುಟವಾರು ಬೆಲೆಯನ್ನು ಹೆಚ್ಚಿಸಿಲ್ಲ. ಇದರಿಂದ ಪುಸ್ತಕೋದ್ಯಮವು ಸಂಕಷ್ಟದ ದಿನಗಳನ್ನು ಎದುರಿಸುತ್ತಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

ಸೃಷ್ಟಿ ನಾಗೇಶ್, ‘ಸ್ವಯಂ ಉದ್ಯೋಗ ಮಾಡುವಂತೆ ಯುವಜನರಿಗೆ ಸರ್ಕಾರ ಪ್ರೇರೇಪಿಸುತ್ತಿದೆ. ಆದರೆ, ಗ್ರಂಥಾಲಯ ಇಲಾಖೆಯ ಆಮೆ ವೇಗದ ಕಾರ್ಯವೈಖರಿಯು ಯುವ ಪ್ರಕಾಶಕರ ಹಾಗೂ ಬರಹಗಾರರ ಉತ್ಸಾಹವನ್ನು ಕುಂಠಿತಗೊಳಿಸಿದೆ. ಇಲಾಖೆಯಲ್ಲಿ ಪ್ರಕಾಶಕರನ್ನು ಪ್ರೋತ್ಸಾಹಿಸಲು ಸರ್ಕಾರ ಹಿಂದೆ ಜಾರಿಗೆ ತಂದಿದ್ದ ಯೋಜನೆಗಳು ಹಳ್ಳ ಹಿಡಿದಿವೆ’ ಎಂದರು.

## ಎಸ್‌ಟಿಗೆ ಸೇರಿಸಲು ಕೇಂದ್ರಕ್ಕೆ ಕಾಡುಗೊಲ್ಲರ ಮನವಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ನಮ್ಮ ಜಾತಿಯನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಕ್ರಮ ತೆಗೆದುಕೊಳ್ಳಿ’ ಎಂದು ಕಾಡುಗೊಲ್ಲ ಸಮುದಾಯದ ಮುಖಂಡರ ನಿಯೋಗವು ಕೇಂದ್ರ ಸಚಿವ ವಿ.ಸೋಮಣ್ಣ ಅವರಿಗೆ ಮನವಿ ಸಲ್ಲಿಸಿದೆ.

ಚಿತ್ರದುರ್ಗದ ಯಾದವಾನಂದ ಮಠದ ಪೀಠಾಧ್ಯಕ್ಷ ಶ್ರೀ ಕೃಷ್ಣ ಯಾದವಾನಂದ ಸ್ವಾಮೀಜಿ ಅವರ ನೇತೃತ್ವದಲ್ಲಿ ಸಮುದಾಯದ ಮುಖಂಡರು ಸೋಮಣ್ಣ ಅವರನ್ನು ಶನಿವಾರ ಭೇಟಿ ಮಾಡಿದರು.

‘ರಾಜ್ಯ ಸರ್ಕಾರವು ಕಾಡುಗೊಲ್ಲರ ಕುಲಶಾಸ್ತ್ರೀಯ ಅಧ್ಯಯನ ಮಾಡಿದ್ದು, ಸಮುದಾಯದವರು ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿದ್ದಾರೆ. ಅವರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು ಎಂದು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿದೆ. ಅದನ್ನು ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಗಮನಕ್ಕೆ ತನ್ನಿ’ ಎಂದು ಕೋರಿದರು.

ಶ್ರೀ ಕೃಷ್ಣ ಯಾದವಾನಂದ ಸ್ವಾಮೀಜಿ, ‘ಕಾಡುಗೊಲ್ಲರನ್ನು ಮುಖ್ಯವಾಹಿನಿಗೆ ತರಲು ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕಿದೆ’ ಎಂದು ಕೋರಿದರು.

**ಕಾಡುಗೊಲ್ಲ ಸಂಘಟನೆಗಳು ಭಿನ್ನಾಭಿಪ್ರಾಯ ಬಿಟ್ಟು ಕೆಲಸ ಮಾಡಬೇಕು. ಸಮುದಾಯದ ಮಕ್ಕಳು ಶಿಕ್ಷಣ ಪಡೆದುಕೊಳ್ಳಲು ಪ್ರೋತ್ಸಾಹ ನೀಡಬೇಕು**


**ವಿ. ಸೋಮಣ್ಣ,** ಕೇಂದ್ರ ಸಚಿವ

# ‘ಕೆಪಿಎಸ್ ನೆಪದಲ್ಲಿ ಸರ್ಕಾರಿ ಶಾಲೆ ಮುಚ್ಚದಿರಿ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಸರ್ಕಾರವು ಕೆಪಿಎಸ್ ಶಾಲೆಗಳ ಹೆಸರಿನಲ್ಲಿ ಸರ್ಕಾರಿ ಶಾಲೆಗಳನ್ನು ಮುಚ್ಚುವ ನೀತಿಯನ್ನು ಕೈಬಿಡಬೇಕು. ಇಲ್ಲದಿದ್ದರೆ ಇದರ ವಿರುದ್ಧ ಜನಾಂದೋಲನ ರೂಪಿಸಲಾಗುತ್ತದೆ’ ಎಂದು ದಲಿತ ಸಂಘರ್ಷ ಸಮಿತಿಗಳ ಒಕ್ಕೂಟ ಮತ್ತು ಜಾಗೃತ ನಾಗರಿಕರು ಸಂಘಟನೆಗಳು ಒತ್ತಾಯಿಸಿವೆ.

ಗಾಂಧಿ ಭವನದಲ್ಲಿ ಶನಿವಾರ ಆಯೋಜಿಸಿದ್ದ ದುಂಡು ಮೇಜಿನ ಸಭೆಯನ್ನು ಉದ್ದೇಶಿಸಿ ಸಾಹಿತಿ ಎಸ್.ಜಿ. ಸಿದ್ದರಾಮಯ್ಯ, ‘ಒಂದೂ ಶಾಲೆಯನ್ನು ಮುಚ್ಚುವುದಿಲ್ಲ ಎಂದು ಶಾಲಾ ಶಿಕ್ಷಣ ಸಚಿವರು ಹೇಳಿಕೆ ನೀಡಿದ್ದಾರೆ. ಆದರೆ ಚನ್ನಪಟ್ಟಣದಲ್ಲಿ ಇಲಾಖೆಯು, ‘ಶಾಲಾ ಶಿಕ್ಷಕರು–ಪೀಠೋಪಕರಣ ಸಮೇತ ಕೆಪಿಎಸ್ ಶಾಲೆಗೆ ವರ್ಗಾವಣೆ’ ಎಂದು ಆದೇಶಿಸಿದ್ದಾರೆ. ಇವೆರಡೂ ವ್ಯತಿರಿಕ್ತವಾದುದು. ಸಚಿವರು ಇದನ್ನು ಸ್ಪಷ್ಟಪಡಿಸಬೇಕು’ ಎಂದು ಒತ್ತಾಯಿಸಿದರು.



‘ಮಕ್ಕಳಿಗೆ ಒಳ್ಳೆಯ ಶಿಕ್ಷಣ ನೀಡಬೇಕು ಎಂಬ ಉದ್ದೇಶಕ್ಕೆ ಮತ್ತು ಕೆಪಿಎಸ್ ಶಾಲೆಗಳಿಗೆ ನಮ್ಮ ವಿರೋಧವಿಲ್ಲ. ಆದರೆ ಇದರ ಹೆಸರಿನಲ್ಲಿ ಸರ್ಕಾರಿ ಶಾಲೆಗಳನ್ನು ಮುಚ್ಚಬಾರದು ಎಂಬುದು ನಮ್ಮ ಒತ್ತಾಯ’ ಎಂದರು.

ದಲಿತ ಸಂಘರ್ಷ ಸಮಿತಿಗಳ ಒಕ್ಕೂಟದ ಸಂಚಾಲಕ ಮಾವಳ್ಳಿ ಶಂಕರ್, ‘ಮಕ್ಕಳು ವಾಸಿಸುತ್ತಿರುವ ಪ್ರದೇಶದಲ್ಲೇ ಇರುವ ಶಾಲೆಗಳಲ್ಲಿ ಶಿಕ್ಷಣ ಸಿಗಬೇಕು ಎಂಬುದು ಶಿಕ್ಷಣ ಹಕ್ಕು ಕಾಯ್ದೆಯ ನಿಯಮ. ಕೆಪಿಎಸ್ ಅಡಿಯಲ್ಲಿ ಮಕ್ಕಳು ಸಮೀಪದ ಶಾಲೆ ಬಿಟ್ಟು, ದೂರದ ಶಾಲೆಗೆ ಹೋಗುವಂತೆ ಮಾಡಲಾಗುತ್ತಿದೆ. ಯುಪಿಎ ಸರ್ಕಾರ ತಂದಿದ್ದ ಕಾಯ್ದೆಗೆ ವಿರುದ್ಧವಾಗಿ ರಾಜ್ಯದ ಕಾಂಗ್ರೆಸ್ ಸರ್ಕಾರ ನಡೆದುಕೊಳ್ಳುತ್ತಿದೆ’ ಎಂದರು.

ಶಿಕ್ಷಣ ತಜ್ಞ ನಿರಂಜನಾರಾಧ್ಯ, ‘ಕೇಂದ್ರ ಸರ್ಕಾರದ ಎನ್‌ಇಪಿ ವಿರೋಧಿಸಿ ಕಾಂಗ್ರೆಸ್ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿತು ಮತ್ತು ಎನ್‌ಇಪಿಯನ್ನು ವಾಪಸ್ ಪಡೆಯಿತು. ಆದರೆ ಎನ್‌ಇಪಿಯಲ್ಲಿದ್ದ ನೀತಿಗಳನ್ನೇ ಶಿಕ್ಷಣ ಸಚಿವರು ಒಂದೊಂದಾಗಿ ಜಾರಿಗೆ ತರುತ್ತಿದ್ದಾರೆ’ ಎಂದು ಆರೋಪಿಸಿದರು.

## ಮತ್ಸ್ಯಮೇಳದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ

# ‘ಮೀನುಗಾರಿಕೆ ವಿ.ವಿ ಸ್ಥಾಪನೆಗೆ ಸಿದ್ಧ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಮೀನುಗಾರಿಕೆ ವಿಶ್ವವಿದ್ಯಾಲಯ ಸ್ಥಾಪಿಸಲು ಸರ್ಕಾರ ಸಿದ್ಧವಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದರು.

ವಿಶ್ವ ಮೀನುಗಾರಿಕೆ ದಿನಾಚರಣೆಯ ಅಂಗವಾಗಿ ಮೀನುಗಾರಿಕೆ ಇಲಾಖೆ ಆಯೋಜಿಸಿರುವ ಮತ್ಸ್ಯಮೇಳಕ್ಕೆ ಶನಿವಾರ ಚಾಲನೆ ನೀಡಿ ಅವರು ಮಾತನಾಡಿದರು.

‘ಒಳನಾಡು ಮತ್ತು ಕರಾವಳಿ ಪ್ರದೇಶದ ಮೀನುಗಾರರಿಗೆ ಬೇಕಾದ ಎಲ್ಲ ರೀತಿಯ ಸೌಲಭ್ಯಗಳನ್ನು ಒದಗಿಸಲಾಗುವುದು. ರಾಜ್ಯದಲ್ಲಿ 320 ಕಿ.ಮೀ. ಕರಾವಳಿ ಪ್ರದೇಶ, 5.5 ಲಕ್ಷ ಹೆಕ್ಟೇರ್ ಒಳನಾಡು ಜಲ ಪ್ರದೇಶ ಇದೆ. ಮೀನು ರಫ್ತು ಮಾಡುವುದರಲ್ಲಿ ಭಾರತ ನಾಲ್ಕನೇ ಸ್ಥಾನದಲ್ಲಿದೆ. ಮೀನು ಉತ್ಪಾದನೆಯಲ್ಲಿ ದೇಶದಲ್ಲಿಯೇ ರಾಜ್ಯ ಮೂರನೇ ಸ್ಥಾನದಲ್ಲಿದೆ. ಒಟ್ಟಾರೆ ಮೀನುಗಾರಿಕೆ ಕ್ಷೇತ್ರವು 10 ಲಕ್ಷಕ್ಕೂ ಹೆಚ್ಚು ಜನರ ಜೀವನಕ್ಕೆ ಆಸರೆಯಾಗಿದೆ’ ಎಂದರು.

‘ನಮ್ಮ ಸರ್ಕಾರ ಬಂದ ಮೇಲೆ ಯಾಂತ್ರೀಕೃತ ದೋಣಿಗಳ ಡೀಸೆಲ್ ಮೇಲಿನ ವಾರ್ಷಿಕ ಮಿತಿಯನ್ನು 1.5 ಲಕ್ಷ ಕಿಲೋ ಲೀಟರ್‌ನಿಂದ 2 ಲಕ್ಷ ಕಿಲೋ ಲೀಟರ್‌ಗೆ ಹೆಚ್ಚಿಸಲಾಗಿದೆ. ನಾಡ ದೋಣಿಗಳಿಗೆ ಸೀಮೆ ಎಣ್ಣೆಯನ್ನು ಪ್ರತಿ ಲೀಟರ್‌ಗೆ ₹35 ರಿಯಾಯಿತಿ ದರದಲ್ಲಿ ವಿತರಣೆ ಮಾಡುತ್ತಿದ್ದೇವೆ. ₹7 ಕೋಟಿ ವೆಚ್ಚದಲ್ಲಿ ಸಮುದ್ರದಲ್ಲಿ ಕಾರ್ಯಾಚರಣೆ ನಡೆಸುವ ಆಂಬುಲೆನ್ಸ್ ಸೇವೆ ಜಾರಿಗೊಳಿಸಲಾಗುತ್ತಿದೆ’ ಎಂದು ಮಾಹಿತಿ ನೀಡಿದರು.

### ಮುಖ್ಯಾಂಶಗಳು

- ಕರಾವಳಿಗೆ ಪ್ರತ್ಯೇಕ ಪ್ರವಾಸೋದ್ಯಮ ನೀತಿ
- ಸಮುದ್ರದಲ್ಲಿ ಕಾರ್ಯಾಚರಣೆ ನಡೆಸುವ ಆಂಬುಲೆನ್ಸ್ ಸೇವೆ ಜಾರಿಗೆ ಸಿದ್ಧತೆ
- ಕ್ಷೇತ್ರ ಅವಲಂಬಿಸಿರುವ 10 ಲಕ್ಷಕ್ಕೂ ಹೆಚ್ಚು ಜನ

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, ‘ಮುಂದಿನ ದಿನಗಳಲ್ಲಿ ಕರಾವಳಿ ಭಾಗಕ್ಕೆ ಪ್ರತ್ಯೇಕ ಪ್ರವಾಸೋದ್ಯಮ ನೀತಿಯನ್ನು ರೂಪಿಸಲಾಗುವುದು. ಮೀನುಗಾರಿಕೆಗೆ ಉತ್ತೇಜನ ನೀಡಲು ಹಲವಾರು ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗುವುದು’ ಎಂದರು.

‘ಸಿದ್ದರಾಮಯ್ಯ ನೇತೃತ್ವದಲ್ಲಿ 10 ಸಾವಿರಕ್ಕೂ ಹೆಚ್ಚು ಕೆರೆಗಳನ್ನು ತುಂಬಿಸುವ ಕೆಲಸ ಮಾಡಿದ್ದೇವೆ. ಸಣ್ಣ ಕೆರೆಗಳ ಜವಾಬ್ದಾರಿಯನ್ನು ಸೊಸೈಟಿಗಳಿಗೆ ನೀಡುತ್ತೇವೆ. ಉಳಿದ ಕೆರೆಗಳನ್ನು ಹರಾಜು ಪ್ರಕ್ರಿಯೆ ಮೂಲಕ ಮೀನುಗಾರಿಕೆ ಮಾಡಲು ನೀಡಲಾಗುವುದು. ಇದನ್ನು ಬಳಸಿಕೊಂಡು ಮೀನುಗಾರಿಕೆ ವೃತ್ತಿಯಲ್ಲಿ ತೊಡಗಬೇಕು’ ಎಂದರು.

ಇದೇ ಸಂದರ್ಭದಲ್ಲಿ ಒಳನಾಡು ಭಾಗದ ಪ್ರಗತಿಪರ ಮೀನುಗಾರರಾದ ಯಾದಗಿರಿ ಜಿಲ್ಲೆಯ ಕನುಮಿಲ್ಲಿ ಶ್ರೀನಿವಾಸರಾವ್, ಬಳ್ಳಾರಿ ಜಿಲ್ಲೆಯ ಸಿ.ಎಚ್. ಮಾಹಕಾಳಿ, ಹಾವೇರಿ ಜಿಲ್ಲೆಯ ಯಾಸೀನ್ ಅಬ್ದುಲ್‌ಸಾಬ್ ಮುಜಾವರ, ಮಂಡ್ಯ ಜಿಲ್ಲೆಯ ಬಿ.ಸಿ. ಸುಶೀಲಮ್ಮ ಹಾಗೂ ಉಡುಪಿ ಜಿಲ್ಲೆಯ ಡೆರಿಕ್ ವಿಲಿಯಮ್ ಕ್ರಾಸ್ತಾ, ಶ್ರೀಧರ್ ಹೆಗ್ಡೆ, ಉತ್ತರ ಕನ್ನಡ ಜಿಲ್ಲೆಯ ಲಿಂಗಯ್ಯ ಜಟ್ಟಪ್ಪ ಮೊಗೇರ ಅವರಿಗೆ ‘ಪ್ರಗತಿಪರ ಮೀನುಗಾರ’ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮೃತ ಮೀನುಗಾರರ ಕುಟುಂಬಗಳ ವಾರಸುದಾರರಾದ ಉತ್ತರ ಕನ್ನಡ ಜಿಲ್ಲೆಯ ಮಹಾದೇವಿ ನಾರಾಯಣ ಅಂಬಿಗ ಹಾಗೂ ನೂತನ ಸುನೀಲ ಹರಿಕಂತ್ರ ಅವರಿಗೆ ತಲಾ ₹10 ಲಕ್ಷ, ಉಡುಪಿ ಜಿಲ್ಲೆಯ ರತ್ನಾ ಬಾಯಿ ಅವರಿಗೆ ₹8 ಲಕ್ಷ ಪರಿಹಾರ ಧನದ ಚೆಕ್ ವಿತರಿಸಲಾಯಿತು.



ಮೀನಿನ ಖಾದ್ಯ ಸವಿದ ಮಹಿಳೆ –ಪ್ರಜಾವಾಣಿ ಚಿತ್ರ

# ಕಾಂಗ್ರೆಸ್ ಕಲಹ ಮತ್ತಷ್ಟು ತೀವ್ರ

ಒಂದನೇ ಪುಟದಿಂದ...

ಖರ್ಗೆ ಅವರ ಸೂಚನೆ ಮೇರೆಗೆ ಸದಾಶಿವ ನಗರದಲ್ಲಿರುವ ಅವರ ನಿವಾಸಕ್ಕೆ ಶನಿವಾರ ರಾತ್ರಿ ತೆರಳಿದ ಸಿದ್ದರಾಮಯ್ಯ ಅವರು ಒಂದು ತಾಸಿಗೂ ಹೆಚ್ಚು ಮಾತುಕತೆ ನಡೆಸಿದರು. ಆದರೆ, ಅವರಿಬ್ಬರ ನಡುವಿನ ಖಾಸಗಿ ಮಾತುಕತೆಯ ವಿವರ ಬಹಿರಂಗಗೊಂಡಿಲ್ಲ. ಈ ಬೆಳವಣಿಗೆಯು ಹೈಕಮಾಂಡ್ ಸ್ಪಷ್ಟ ನಿರ್ಧಾರ ಕೈಗೊಳ್ಳುವ ಮುನ್ಸೂಚನೆ ಎಂದೇ ವಿಶ್ಲೇಷಿಸಲಾಗಿದೆ. ಜೊತೆಗೆ, ಹೈಕಮಾಂಡ್ ನಡೆ ಯಾವ ಕಡೆ ಎಂಬ ಕುತೂಹಲವೂ ಮೂಡಿದೆ.

ಅಧಿಕಾರ ಹಂಚಿಕೆ, ಸಂಪುಟ ಪುನರ್‌ರಚನೆ ವಿಚಾರದಲ್ಲಿ ಉಂಟಾಗಿರುವ ಗೊಂದಲ ನಿವಾರಣೆ ಮಾಡುವಂತೆ ಸಚಿವರು, ಶಾಸಕರು ಆಗ್ರಹಿಸುತ್ತಿದ್ದಾರೆ. ಕಿತ್ತಾಟ ಇನ್ನಷ್ಟು ಜಾಸ್ತಿಯಾಗುವ ಸಾಧ್ಯತೆ ಇರುವುದರಿಂದ ಸೂಕ್ತ ನಿರ್ಧಾರವೊಂದನ್ನು ಕೈಗೊಳ್ಳಲೇಬೇಕಾದ ಅನಿವಾರ್ಯಕ್ಕೆ ಹೈಕಮಾಂಡ್ ತಲುಪಿದೆ ಎಂಬ ಚರ್ಚೆ ಕಾಂಗ್ರೆಸ್ ವಲಯದಲ್ಲಿ ನಡೆಯುತ್ತಿದೆ.

**ಖಂಡ್ರೆ ಭೇಟಿ:** ಅರಣ್ಯ ಸಚಿವ ಈಶ್ವರ ಖಂಡ್ರೆ ಶನಿವಾರ ಮಧ್ಯಾಹ್ನ ಖರ್ಗೆ ಅವರನ್ನು ಭೇಟಿ ಮಾಡಿದರು. ನಂತರ ಪ್ರತಿಕ್ರಿಯಿಸಿದ ಅವರು, ‘ತುಟಿಕ್ ಪಿಟಿಕ್ ಅನ್ನಬಾರದೆಂದು ವರಿಷ್ಠರು ಹೇಳಿದ್ದಾರೆ. ಹಾಗೆಯೇ ನಾವು ಕೂಡ ಇದ್ದೇವೆ’ ಎಂದರು. ಸಚಿವ ಸ್ಥಾನದ ಆಕಾಂಕ್ಷಿಯಾಗಿರುವ ಶಾಸಕ ಅಜಯ್ ಸಿಂಗ್ ಕೂಡಾ ಖರ್ಗೆ ಅವರನ್ನು ಭೇಟಿ ಮಾಡಿದರು.

**ಸಿ.ಎಂ ಭೇಟಿಯಾದ ಶಾಸಕರ ದಂಡು:** ಡಿ.ಕೆ. ಶಿವಕುಮಾರ್ ಅವರನ್ನು ಶುಕ್ರವಾರ ರಾತ್ರಿ ಭೇಟಿ ಮಾಡಿದ್ದ ಶಾಸಕರಾದ ಸಿ.ಪಿ. ಯೋಗೇಶ್ವರ್, ಶ್ರೀನಿವಾಸ ಮಾನೆ, ಯಾಸೀರ್ ಅಹ್ಮದ್ ಖಾನ್ ಪಠಾಣ, ಬಿ.ಕೆ. ಸಂಗಮೇಶ್ವರ ಅವರು ಮುಖ್ಯಮಂತ್ರಿ ಅವರನ್ನು ಶನಿವಾರ ಬೆಳಿಗ್ಗೆ ಭೇಟಿ ಮಾಡಿದರು. ಸಂಪುಟ ಪುನರ್ ರಚನೆಯಾದರೆ, ತಮ್ಮನ್ನು ಕೈಬಿಡಬಹುದೆಂಬ ಆತಂಕಕ್ಕೆ ಒಳಗಾಗಿರುವ ಮಂಕಾಳ ವೈದ್ಯ ಅವರೂ ಭೇಟಿ ಮಾಡಿ ಚರ್ಚೆ ನಡೆಸಿದರು.

ಮುಖ್ಯಮಂತ್ರಿಯನ್ನು ಭೇಟಿ ಮಾಡಿದ ಬಳಿಕ ಮಾತನಾಡಿದ ಸಂಗಮೇಶ್ವರ, ‘ನಾಲ್ಕು ಬಾರಿ ಶಾಸಕನಾಗಿರುವ ನಾನು ಸಚಿವ ಸ್ಥಾನದ ಆಕಾಂಕ್ಷಿ. ಈ ಬಾರಿ ಸಚಿವ ಸ್ಥಾನ ಸಿಗಬಹುದು ಎನ್ನುವ ನಂಬಿಕೆಯಿದೆ. ಯಾವುದೇ ಸಹಿ ಸಂಗ್ರಹ ನಡೆಯುತ್ತಿಲ್ಲ. ಅವೆಲ್ಲ ಊಹಾಪೋಹ’ ಎಂದರು.

### ‘ಹಿಂದುಳಿದ ವರ್ಗದವರ ಕಾಲೆಳೆಯಲು ಅವಕಾಶ ಕೊಡದಿರಿ’

**ನರಗುಂದ:** ‘ರಾಜ್ಯದಲ್ಲಿ ಹಿಂದುಳಿದ ವರ್ಗದವರು ಮುಖ್ಯಮಂತ್ರಿಗಳಾಗಿದ್ದು ಕೇವಲ ಐದೇ ಮಂದಿ. ಅದರಲ್ಲಿ ಸಿದ್ದರಾಮಯ್ಯನವರು ಮಾತ್ರ ಎರಡನೇ ಅವಧಿಗೆ ಮುಖ್ಯಮಂತ್ರಿ ಆಗಿದ್ದಾರೆ. ಹಿಂದುಳಿದ ವರ್ಗದವರ ಕಾಲೆಳೆಯಲು ಜನರು ಅವಕಾಶ ಕೊಡಬಾರದು’ ಎಂದು ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಹೇಳಿದರು.



ಯತೀಂದ್ರ

ಇಲ್ಲಿ ಶನಿವಾರ ನಡೆದ ಕನಕಭವನದ ಅಡುಗೆ ಮನೆ ನಿರ್ಮಾಣದ ಕಾಮಗಾರಿ ಭೂಮಿಪೂಜೆ ಹಾಗೂ 538ನೇ ಕನಕ ಜಯಂತ್ಯುತ್ಸವದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಈವರೆಗೆ ದಲಿತ, ಅಲ್ಪಸಂಖ್ಯಾತರು ಮುಖ್ಯಮಂತ್ರಿ ಆಗಿಲ್ಲ. ಹಿಂದುಳಿದ ವರ್ಗದ ಸಿದ್ದರಾಮಯ್ಯ ಅವರು ಅಧಿಕಾರ ದೊರೆತಿದ್ದು, ಎರಡನೇ ಅವಧಿ ಪೂರ್ಣಗೊಳಿಸುವರು. ಆದರೆ, ಹಿಂದುಳಿದವರ ಅಧಿಕಾರ ತಂತಿಮೇಲಿನ ನಡಿಗೆಯಂತೆ. ಯಾವಾಗ ಕೆಡುವುತ್ತಾರೋ ತಿಳಿಯದು’ ಎಂದರು.

‘ಸಿದ್ದರಾಮಯ್ಯ ಅವರು ಅಲ್ಪಸಂಖ್ಯಾತ, ಹಿಂದುಳಿದ ವರ್ಗ ಮತ್ತು ದಲಿತರ ಅಭಿವೃದ್ಧಿಗೆ ಶ್ರಮಪಟ್ಟಿದ್ದು, ಅಹಿಂದ ಸಮುದಾಯ ಸಂಪೂರ್ಣ ಅವರ ಬೆನ್ನಿಗೆ ನಿಂತಿದೆ. ಮುಂದೆಯೂ ನಿಲ್ಲಬೇಕು’ ಎಂದು ಅವರು ಹೇಳಿದರು.

‘ಹಿಂದುಳಿದವರು ಅನುಭವಿಸುವ ಅಧಿಕಾರ ತಂತಿ ಮೇಲಿನ ನಡಿಗೆಯಂತೆ. ಯಾವಾಗ ಕೆಡುವುತ್ತಾರೋ ತಿಳಿಯದು’ ಎಂದರು.

### ‘ಹೈಕಮಾಂಡ್ ಮಧ್ಯಪ್ರವೇಶ ಮಾಡಲಿ’



ಬಾಲಕೃಷ್ಣ

‘ಅಧಿಕಾರ ಹಂಚಿಕೆ ಕುರಿತಾದ ಗೊಂದಲವನ್ನು ಹೈಕಮಾಂಡ್ ಮಧ್ಯಪ್ರವೇಶ ಮಾಡಿ ಇತ್ಯರ್ಥಪಡಿಸಬೇಕು. ಇಲ್ಲದಿದ್ದರೆ ಪಕ್ಷದಲ್ಲಿ, ಕಾರ್ಯಕರ್ತರಲ್ಲಿ ಗೊಂದಲ ಉಂಟಾಗಲಿದೆ’ ಎಂದು ಮಾಗಡಿ ಕ್ಷೇತ್ರದ ಶಾಸಕ ಎಚ್‌.ಸಿ. ಬಾಲಕೃಷ್ಣ ಹೇಳಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು ‘ಶಾಸಕರು, ಕಾರ್ಯಕರ್ತರಿಗೆ ಸ್ಪಷ್ಟತೆ ಸಿಗಬೇಕು’ ಎಂದರು. ‘ಶಾಸಕರು ಗುಂಪು ಕಟ್ಟಿಕೊಂಡು ದೆಹಲಿಗೆ ಹೋಗಿಲ್ಲ. ಕೇವಲ ಮೂರ್ನಾಲ್ಕು ಶಾಸಕರು ಹೋಗಿದ್ದಾರೆ. ಅವರು ಅವರ ಕೆಲಸಕ್ಕೆ ಹೋಗಿದ್ದಾರೆ. ಗುಂಪು ಕಟ್ಟಿಕೊಂಡು ಅಂದರೆ, 15 ಶಾಸಕರು ಇರಬೇಕು. ಶಾಸಕರೆಲ್ಲರೂ ಅವರ ಕೆಲಸಕ್ಕೆ ಹೋಗಿದ್ದಾರೆ. ಅಧಿಕಾರ ಹಂಚಿಕೆಯು ಶಾಸಕರ ನಂಬರ್ ಗೇಮ್ ಮೇಲೆ ನಿಂತಿಲ್ಲ. ಹೈಕಮಾಂಡ್ ತೀರ್ಮಾನದ ಮೇಲೆ ನಿಂತಿದೆ’ ಎಂದರು.

‘ಡಿ.ಕೆ. ಶಿವಕುಮಾರ್ ಅವರು ಯಾರಿಗೂ ಬೆಂಬಲ ಕೊಡಿ ಎಂದು ಸೂಚಿಸಿಲ್ಲ. ಶಾಸಕರ ಬೆಂಬಲ ಕೋರುವ ಕೆಲಸ ನಡೆದಿಲ್ಲ. ಕೆಲವರು ವೈಯಕ್ತಿಕ ಹೇಳಿಕೆ ಕೊಡುತ್ತಿರಬಹುದು. ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಆಗಲು ಅವರದ್ದೇ ಆದ ಶಕ್ತಿ ಇದೆ’ ಎಂದೂ ಹೇಳಿದರು.

# ಶಿಕ್ಷಕರ ಸಂಬಳ ಬಿಡುಗಡೆಗೆ ಆದೇಶ

## ವೇತನರಹಿತ ಬಲವಂತದ ದುಡಿಮೆ
## • ದಂಡದ ಎಚ್ಚರಿಕೆ ನೀಡಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಯಾರನ್ನೇ ಆಗಲಿ, ವಿಶೇಷವಾಗಿ ಸಾರ್ವಜನಿಕ ಸೇವಾ ವಲಯಗಳಲ್ಲಿ ದುಡಿಯುವವರಿಗೆ ಸೂಕ್ತ ವೇತನ ನೀಡದೆ ಕೆಲಸ ಮಾಡಿ ಎಂದು ಬಲವಂತ ಮಾಡುವಂತಿಲ್ಲ ಎಂಬ ಸ್ಥಾಪಿತ ಕಾನೂನನ್ನು ಪ್ರತಿಯೊಬ್ಬರೂ ಕಡ್ಡಾಯವಾಗಿ ಪಾಲನೆ ಮಾಡಬೇಕು' ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ತಾಕೀತು ಮಾಡಿದೆ.

ಪ್ರಕರಣವೊಂದರ ವಿಚಾರಣೆ ನಡೆಸಿದ ಹೈಕೋರ್ಟ್, ಚಾತಕಪಕ್ಷಿಗಳಂತೆ ಕಾಯುತ್ತಿರುವ ಶಿಕ್ಷಕರ ಸಂಬಳವನ್ನು ಕೂಡಲೇ ಬಿಡುಗಡೆ ಮಾಡುವಂತೆ ರಾಜ್ಯ ಪ್ರಾಥಮಿಕ ಶಿಕ್ಷಣ ಇಲಾಖೆಗೆ ನಿರ್ದೇಶಿಸಿದೆ.

'ಕಳೆದ 19 ತಿಂಗಳಿನಿಂದ ತಡೆಹಿಡಿಯಲಾಗಿರುವ ನಮ್ಮ ಸಂಬಳವನ್ನು ಬಿಡುಗಡೆ ಮಾಡಲು ಧಾರವಾಡದ ಪ್ರಾಥಮಿಕ ಶಿಕ್ಷಣ ಇಲಾಖೆ ಹೆಚ್ಚುವರಿ ಆಯುಕ್ತರಿಗೆ ನಿರ್ದೇಶಿಸಬೇಕು' ಎಂದು ಕೋರಿ ಅನಿಲ್ ಎಂ.ಕಾನವಾಡೆ ಸೇರಿದಂತೆ ನಾಲ್ವರು ಶಿಕ್ಷಕರು ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಆದೇಶಿಸಿದೆ.

**ಮುಖ್ಯಾಂಶಗಳು**
- 19 ತಿಂಗಳಿಂದ ಸಂಬಳರಹಿತ ಕೆಲಸ
- ನಾಲ್ವರು ಶಿಕ್ಷಕರ ರಿಟ್ ಅರ್ಜಿ ಪುರಸ್ಕೃತ



**ಆರ್ಥಿಕ ಬಲವಂತವು ಆಯ್ಕೆಯ ಎಲ್ಲಾ ಪರ್ಯಾಯಗಳನ್ನು ಕಸಿದುಕೊಳ್ಳುತ್ತದೆ. ಬಡವನೊಬ್ಬ ಪಡೆಯುವ ಸಂಬಳ ಕನಿಷ್ಠ ವೇತನಕ್ಕಿಂತ ಕಡಿಮೆಯಿದ್ದರೂ ಶ್ರಮ ಅಥವಾ ಸೇವೆ ಸಲ್ಲಿಸುವಂತೆ ಅವನನ್ನು ಅನಿವಾರ್ಯಗೊಳಿಸುತ್ತದೆ.**
**ಎಂ.ನಾಗಪ್ರಸನ್ನ,** ನ್ಯಾಯಮೂರ್ತಿ

'ಪ್ರತಿಯೊಬ್ಬ ಅರ್ಜಿದಾರರಿಗೆ ಲಭ್ಯವಾಗಬೇಕಿರುವ ₹12 ಲಕ್ಷಕ್ಕೂ ಹೆಚ್ಚಿನ ಸಂಬಳ ಬಾಕಿಯನ್ನು ಡಿ.4ರ ಒಳಗಾಗಿ ಬಿಡುಗಡೆ ಮಾಡಬೇಕು. ಇಲ್ಲವಾದಲ್ಲಿ, ಪ್ರತಿಯೊಬ್ಬ ಅರ್ಜಿದಾರರಿಗೆ ವ್ಯಾಜ್ಯದ ವೆಚ್ಚವಾಗಿ ₹25 ಸಾವಿರ ದಂಡ ಕಟ್ಟಬೇಕಾಗುತ್ತದೆ' ಎಂದು ನ್ಯಾಯಪೀಠ ಸರ್ಕಾರಕ್ಕೆ ಎಚ್ಚರಿಸಿದೆ.

'ರಿಟ್ ಅರ್ಜಿ ಪ್ರಕ್ರಿಯೆಗಳು ಬಾಕಿ ಇರುವ ಕಾರಣ ಸಂಬಳ ನೀಡಿಲ್ಲ ಎಂಬ ಸರ್ಕಾರದ ಪ್ರತಿವಾದ ಸಂಪೂರ್ಣ ಅಸಮರ್ಥನೀಯ. ಪರಿಶ್ರಮಕ್ಕೆ ತಕ್ಕ ಕೂಲಿ ನೀಡದೆ ಅಥವಾ ಜಬರ್‌ದಸ್ತಿನಿಂದ ಕೆಲಸ ಮಾಡಿಸಿಕೊಳ್ಳುವ ಬೇಗಾರ್ ಪದ್ಧತಿಯು ಅನಿಷ್ಟದ ಪ್ರತೀಕ. ಯಾವುದೇ ಕ್ಷೇತ್ರದಲ್ಲಿ ಯಾರನ್ನೇ ಆಗಲಿ ವೇತನ ರಹಿತ ಕಾರ್ಮಿಕರ ನೊಗದಡಿಯಲ್ಲಿ ಕೆಲಸ ಮಾಡಿ ಎಂದು ಒತ್ತಾಯಿಸುವುದು ಸಲ್ಲ' ಎಂದು ನ್ಯಾಯಪೀಠ ಕಿಡಿ ಕಾರಿದೆ.

'ಅರ್ಜಿದಾರರು ಪ್ರತಿವಾದಿ ದೇಶಭೂಷಣ ಶಾಲೆಯಲ್ಲಿ 2023ರಿಂದ ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದರೂ, ಮೇ 2024ರಿಂದ ಸುಮಾರು 19 ತಿಂಗಳು ವೇತನ ಪಡೆದಿಲ್ಲ' ಎಂಬುದು ಆಘಾತಕಾರಿ ವಿಚಾರ. 'ಸಂಬಳವಿಲ್ಲದೆ ಕೆಲಸ ಮಾಡಲು ಬಲವಂತಪಡಿಸುವುದು ಸಂವಿಧಾನದ 23ನೇ ವಿಧಿಯ ಸ್ಪಷ್ಟ ಉಲ್ಲಂಘನೆ' ಎಂದು ಅಸಮಾಧಾನ ವ್ಯಕ್ತಪಡಿಸಿದೆ.

'ದೇಶಭೂಷಣ ಶಾಲೆಯು ಸರ್ಕಾರದಿಂದ ಅನುದಾನ ಪಡೆಯುತ್ತಿದೆ. ಕಾನೂನಾತ್ಮಕ ವ್ಯಾಜ್ಯಗಳು ಬಗೆಹರಿದಿಲ್ಲ ಎಂಬ ಸಬೂಬು ತೋರಿಸಿ ಸಂಬಳ ತಡೆಹಿಡಿದಿರುವುದು ಅಕ್ಷಮ್ಯ. ಅರ್ಜಿದಾರರು ನಾಲ್ಕನೆಯ ಸುತ್ತಿನಲ್ಲಿ ಹೈಕೋರ್ಟ್ ಮೆಟ್ಟಿಲೇರಿ ಕಾನೂನಿನ ಹೋರಾಟ ನಡೆಸುತ್ತಿರುವುದು ವಿಷಾದಕರ' ಎಂದ ನ್ಯಾಯಪೀಠ, ಮಾನವ ಶ್ರಮದ ನೈತಿಕ ನಿಯಮಗಳನ್ನು ತೀರ್ಪಿನಲ್ಲಿ ನಮೂದಿಸಿದೆ. ಅರ್ಜಿದಾರರ ಪರ ಹೈಕೋರ್ಟ್ ವಕೀಲೆ ವೈಭವಿ ಇನಾಂದಾರ್ ವಾದ ಮಂಡಿಸಿದ್ದರು.


ಚಿಕ್ಕೋಡಿ ತಾಲ್ಲೂಕು ಕೊಥಳಿಯ ದೇಶಭೂಷಣ ಪ್ರೌಢಶಾಲೆಯಲ್ಲಿ ದುಡಿಯುತ್ತಿರುವ ಇಂಗಳಿ ಗ್ರಾಮದ ಸಹಾಯಕ ಶಿಕ್ಷಕ ಅನಿಲ್ ಎಂ.ಕಾನವಾಡೆ, ರಾಯಬಾಗ ತಾಲ್ಲೂಕಿನ ಮುಗಳಖೋಡದ ದೈಹಿಕ ಶಿಕ್ಷಕ ಜಿನೇಂದ್ರ ಆರ್.ಬಾಬಣ್ಣವರ, ರಾಹುಲ್ ಎಸ್.ಬಾಬಣ್ಣವರ ಮತ್ತು ಚಿಕ್ಕೋಡಿಯ ಪೂಜಾ ಎಸ್.ಪಾಟೀಲ ಅವರು ಈ ಅರ್ಜಿ ಸಲ್ಲಿಸಿದ್ದರು.

---

**ಚಿಟಿಕೆ ಸುದ್ದಿ**

## 'ಪ್ರತ್ಯೇಕ ರಾಜ್ಯಕ್ಕೆ ಬೇಡಿಕೆ ಸೂಕ್ತವಲ್ಲ'

**ಹುಕ್ಕೇರಿ (ಬೆಳಗಾವಿ ಜಿಲ್ಲೆ):** 'ಉತ್ತರ ಕರ್ನಾಟಕಕ್ಕೆ ಅನ್ಯಾಯ ಆಗಿದ್ದಲ್ಲಿ, ಪ್ರತಿಭಟಿಸಿ ನ್ಯಾಯ ಪಡೆಯಬೇಕು. ಗಟ್ಟಿಧ್ವನಿಯಲ್ಲಿ ಬೇಡಿಕೆಗಳನ್ನು ಮಂಡಿಸಬೇಕು. ಪ್ರತ್ಯೇಕ ರಾಜ್ಯದ ಬೇಡಿಕೆ ಸೂಕ್ತವಲ್ಲ. ಇದನ್ನು ನಾನು ಒಪ್ಪುವುದಿಲ್ಲ' ಎಂದು ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದರು.



ಬಸವರಾಜ ಹೊರಟ್ಟಿ

'ಉತ್ತರ ಕರ್ನಾಟಕ ಜಿಲ್ಲೆಗಳ ಸಮಸ್ಯೆ ಕುರಿತ ಚರ್ಚೆಯಲ್ಲಿ ಈ ಭಾಗದ ಶಾಸಕರು ಸಕ್ರಿಯವಾಗಿ ಭಾಗವಹಿಸುವುದಿಲ್ಲ. ನಿರಾಸಕ್ತಿ ತೋರಿ ಹೊರಹೋಗುತ್ತಾರೆ. ದಕ್ಷಿಣ ಕರ್ನಾಟಕದ ಶಾಸಕರೇ ಹೆಚ್ಚು ಮಾತನಾಡುತ್ತಾರೆ' ಎಂದೂ ಇಲ್ಲಿ ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

'ಬೆಳಗಾವಿಯ ಚಳಿಗಾಲದ ಅಧಿವೇಶನದ ಹಿನ್ನೆಲೆಯಲ್ಲಿ ಶಾಸಕರ ವಸತಿಗಾಗಿ ₹ 20 ಕೋಟಿ ವ್ಯಯವಾಗುತ್ತದೆ. ಹೀಗಾಗಿ ಅಲ್ಲಿ ಶಾಸಕರ ಭವನ ನಿರ್ಮಿಸಲು ಸಲಹೆ ನೀಡಿರುವೆ' ಎಂದು ಹೇಳಿದರು.

'ಚಳಿಗಾಲದ ಅಧಿವೇಶನದಲ್ಲಿ ನನ್ನ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿದರೆ ತಲೆಕೆಡಿಸಿಕೊಳ್ಳುವುದಿಲ್ಲ. ನಾನು ಯಾವುದೇ ತಪ್ಪು ಮಾಡಿಲ್ಲ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

## 'ನಿಮ್ಮಲ್ಲಿ ಮತಗಳಿವೆ, ನನ್ನಲ್ಲಿ ಹಣವಿದೆ...'

**ಪುಣೆ (ಪಿಟಿಐ):** 'ನಿಮ್ಮಲ್ಲಿ ಮತಗಳಿವೆ. ನನ್ನಲ್ಲಿ ಹಣ ಇದೆ. ನೀವು ತಿರಸ್ಕರಿಸಿದರೆ, ನಾನು ತಿರಸ್ಕರಿಸುತ್ತೇನೆ' –ಇದು ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಅವರು ಮತದಾರರಿಗೆ ನೀಡಿದ ಎಚ್ಚರಿಕೆ.

ಬಾರಾಮತಿ ತಾಲ್ಲೂಕಿನ ಮಾಲೇಗಾಂವ್ ನಗರ ಪಂಚಾಯಿತಿಯಲ್ಲಿ ಎನ್‌ಸಿಪಿ ಅಭ್ಯರ್ಥಿಗಳ ಪರ ಪ್ರಚಾರದ ವೇಳೆ ಈ ರೀತಿ ಹೇಳಿಕೆ ನೀಡಿದ್ದಾರೆ. ಮಹಾರಾಷ್ಟ್ರದ ಬಿಜೆಪಿ–ಎನ್‌ಸಿಪಿ, ಶಿವಸೇನಾ ಸರ್ಕಾರದಲ್ಲಿ ಅಜಿತ್ ಪವಾರ್ ಹಣಕಾಸು ಸಚಿವರಾಗಿದ್ದಾರೆ.

'ಅಭಿವೃದ್ಧಿಗೆ ಅನುದಾನ ಒದಗಿಸಲು ಹಣದ ಕೊರತೆಯಿಲ್ಲ. ನಮ್ಮ ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸದಿದ್ದರೆ, ಅವರು ಕೂಡ ನಿಮ್ಮನ್ನು ತಿರಸ್ಕರಿಸಲಿದ್ದಾರೆ' ಎಂದು ಎಚ್ಚರಿಕೆ ನೀಡಿದರು.


---

**ಸುದ್ದಿ 2 ನಿಮಿಷ**

## 'ರಾಜ್ಯ ಸರ್ಕಾರ ಆವರ್ತ ನಿಧಿಯಿಂದ ಮೆಕ್ಕೆಜೋಳ ಖರೀದಿಸಲಿ'

**ಲಕ್ಷ್ಮೇಶ್ವರ:** '10 ಲಕ್ಷ ಮೆಟ್ರಿಕ್ ಟನ್ ಮೆಕ್ಕೆಜೋಳ ಖರೀದಿಸುವ ಭರವಸೆ ನೀಡಿ, ಕೇಂದ್ರದತ್ತ ಕೈ ತೋರಿಸುವ ಬದಲು ರಾಜ್ಯ ಸರ್ಕಾರವೇ ಆವರ್ತ ನಿಧಿಯಿಂದ ₹ 300 ಕೋಟಿ ವ್ಯಯಿಸಿ ಮೆಕ್ಕೆಜೋಳ ಖರೀದಿಸಲಿ' ಎಂದು ಸಂಸದ ಬಸವರಾಜ ಬೊಮ್ಮಾಯಿ ಒತ್ತಾಯಿಸಿದರು.

ಇಲ್ಲಿನ ಶಿಗ್ಲಿ ಕ್ರಾಸ್‌ನಲ್ಲಿ ಲಕ್ಷ್ಮೇಶ್ವರ, ಶಿರಹಟ್ಟಿ ಹಾಗೂ ಮುಂಡರಗಿ ತಾಲ್ಲೂಕಿನ ರೈತರು ನಡೆಸುತ್ತಿರುವ ಅಹೋರಾತ್ರಿ ಧರಣಿಯ ಸ್ಥಳಕ್ಕೆ ಭೇಟಿ ನೀಡಿ ಮಾತನಾಡಿ, 'ಕೇಂದ್ರ ಮತ್ತು ರಾಜ್ಯ ಸರ್ಕಾರ ಒಂದೇ ನೀತಿಯಡಿ ಕೆಲಸ ಮಾಡಿದರೆ ರೈತರಿಗೆ ಅನುಕೂಲ. ಸಂಘರ್ಷ ಮಾಡಿದರೆ ನಷ್ಟವಾಗುತ್ತದೆ. ರೈತರು ಯಾವುದೇ ಪಕ್ಷಕ್ಕೆ ಸೇರಿದವರಲ್ಲ' ಎಂದರು.



'ರೈತರ ರಕ್ಷಣೆಗೆ ರಾಜ್ಯ ಸರ್ಕಾರ ಮುಂದಾಗಬೇಕು. ₹2,400 ದರ ನಿರೀಕ್ಷೆಯಲ್ಲಿ ರೈತರು ಮೆಕ್ಕೆಜೋಳ ತರುತ್ತಿದ್ದಾರೆ, ಆದರೆ ದರ ₹1,600ಕ್ಕೆ ಕುಸಿದಿದೆ. ಈಗ ಸರ್ಕಾರವೇ ಖರೀದಿಗೆ ಮುಂದಾದರೆ, ದರವೂ ಏರಿಕೆ ಆಗುತ್ತದೆ' ಎಂದು ಅಭಿಪ್ರಾಯಪಟ್ಟರು.

## ಗವಾಯಿ ಅವಧಿಯಲ್ಲಿ 10 ಪರಿಶಿಷ್ಟ ನ್ಯಾಯಮೂರ್ತಿಗಳ ನೇಮಕ

**ನವದೆಹಲಿ(ಪಿಟಿಐ):** ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ (ಸಿಜೆಐ) ಬಿ.ಆರ್. ಗವಾಯಿ ಅವರು ಕಾರ್ಯ ನಿರ್ವಹಿಸಿದ ಆರು ತಿಂಗಳ ಅವಧಿಯಲ್ಲಿ ಪರಿಶಿಷ್ಟ ಜಾತಿಯ 10 ಹಾಗೂ ಹಿಂದುಳಿದ ವರ್ಗಗಳು ಮತ್ತು ಇತರೆ ಹಿಂದುಳಿದ ವರ್ಗಗಳ 11 ನ್ಯಾಯಮೂರ್ತಿಗಳನ್ನು ದೇಶದ ವಿವಿಧ ಹೈಕೋರ್ಟ್‌ಗಳಿಗೆ ನೇಮಿಸಲಾಗಿದೆ.

ಗವಾಯಿ ಅವರು ಹೈಕೋರ್ಟ್‌ಗಳಿಗೆ ನ್ಯಾಯಮೂರ್ತಿಗಳನ್ನು ನೇಮಿಸುವ ಸುಪ್ರೀಂ ಕೋರ್ಟ್‌ನ ತ್ರಿಸದಸ್ಯರ ಕೊಲಿಜಿಯಂ ನೇತೃತ್ವವಹಿಸಿದ್ದರು. ದೇಶದ ವಿವಿಧ ಹೈಕೋರ್ಟ್‌ಗಳಿಗೆ ನ್ಯಾಯಮೂರ್ತಿಗಳನ್ನು ನೇಮಕ ಮಾಡಲು ಸರ್ಕಾರಕ್ಕೆ 129 ಹೆಸರುಗಳನ್ನು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿದ್ದರು.

ಗವಾಯಿ ಅವರು ಸಿಜೆಐ ಆಗಿ ಪ್ರಮಾಣ ವಚನ ಸ್ವೀಕರಿಸಿದಾಗಿನಿಂದ ಈವರೆಗೆ ಕೇಂದ್ರ ಸರ್ಕಾರ 93 ನ್ಯಾಯಮೂರ್ತಿಗಳನ್ನು ನೇಮಿಸಲು ಅನುಮೋದನೆ ನೀಡಿದೆ.

---

# ಎಸ್‌ಐಆರ್: ಮೂವರು ಬಿಎಲ್‌ಒಗಳ ಸಾವು

ಪ್ರಜಾವಾಣಿ ವಾರ್ತೆ/ಪಿಟಿಐ

**ಕೋಲ್ಕತ್ತ/ರಾಯಸೇನ್/ನವದೆಹಲಿ (ಪಿಟಿಐ):** ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯಲ್ಲಿ ಬೂತ್ ಮಟ್ಟದ ಅಧಿಕಾರಿಯಾಗಿ (ಬಿಎಲ್‌ಒ) ಕಾರ್ಯ ನಿರ್ವಹಿಸುತ್ತಿದ್ದ ಪಶ್ಚಿಮ ಬಂಗಾಳದ ಒಬ್ಬರು ಹಾಗೂ ಮಧ್ಯಪ್ರದೇಶದ ಇಬ್ಬರು ಶುಕ್ರವಾರ ಮೃತಪಟ್ಟಿದ್ದಾರೆ.

'ಎಸ್‌ಐಆರ್ ಪ್ರಕ್ರಿಯೆ ಪೂರ್ಣಗೊಳಿಸಲು ಇದ್ದ ಒತ್ತಡ ಮತ್ತು ಕೆಲಸ ಹೊರೆಯೇ ಸಾವಿಗೆ ಕಾರಣ' ಎಂದು ಮೃತರ ಕುಟುಂಬಗಳು ಆರೋಪಿಸಿವೆ. 'ಎಸ್‌ಐಆರ್ ಕಾರಣದಿಂದ ರಾಜ್ಯದಲ್ಲಿ ಬಿಎಲ್‌ಒಗಳನ್ನೂ ಸೇರಿದಂತೆ ಇಲ್ಲಿಯವರೆಗೆ ಸುಮಾರು 34 ಮಂದಿ ಮೃತಪಟ್ಟಿದ್ದಾರೆ' ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದರು.

ಪಶ್ಚಿಮ ಬಂಗಾಳದ ನಾದಿಯಾ ಜಿಲ್ಲೆಯಲ್ಲಿ ಅರೆಕಾಲಿಕ ಶಿಕ್ಷಕಿ ರಿಂಕೂ ತರಫ್ದಾರ್ (52) ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 'ಸಾಯುವುದಕ್ಕೂ ಮುನ್ನ ಅವರು ಬರೆದಿಟ್ಟಿದ್ದ ಪತ್ರವೊಂದು ದೊರೆತಿದೆ' ಎಂದು ಪೊಲೀಸರು ಮಾಹಿತಿ ನೀಡಿದರು.



ಪಶ್ಚಿಮ ಬಂಗಾಳದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ಆರಂಭಗೊಂಡಿದ್ದು, ಭಾರತಕ್ಕೆ ಅಕ್ರಮವಾಗಿ ಪ್ರವೇಶಿಸಿದ್ದ ಬಾಂಗ್ಲಾದೇಶದ ನಾಗರಿಕರು ಮರಳಿ ಸ್ವದೇಶಕ್ಕೆ ಮರಳಲು ಉತ್ತರ 24 ಪರಗಣ ಜಿಲ್ಲೆಯ ಹಕೀಂಪುರ ತಪಾಸಣಾ ಕೇಂದ್ರದಲ್ಲಿ ಶನಿವಾರ ಕಾಯುತ್ತಿದ್ದ ದೃಶ್ಯ ಕಂಡುಬಂತು –ಪಿಟಿಐ ಚಿತ್ರ

'ರಿಂಕೂ ಅವರ ಆತ್ಮಹತ್ಯೆ ಮತ್ತೊಂದು ಎಚ್ಚರಿಕೆ ಗಂಟೆ. ತಮ್ಮ ಮರಣ ಪತ್ರದಲ್ಲಿ ಅವರು ಚುನಾವಣಾ ಆಯೋಗವನ್ನು ದೂರಿದ್ದಾರೆ. ಎಸ್‌ಐಆರ್‌ಗೆ ಇನ್ನೆಷ್ಟು ಜೀವಗಳು ಬಲಿಯಾಗಬೇಕು?' ಎಂದು ಮಮತಾ ಅವರು 'ಎಕ್ಸ್‌'ನಲ್ಲಿ ಪೋಸ್ಟ್ ಹಂಚಿಕೊಂಡಿದ್ದಾರೆ. ರಿಂಕೂ ಅವರ ಮರಣ ಪತ್ರವನ್ನೂ ಹಂಚಿಕೊಂಡಿದ್ದಾರೆ. ಬಿಜೆಪಿ ನಾಯಕ ರಾಹುಲ್ ಸಿನ್ಹಾ ಅವರು ಪ್ರತಿಕ್ರಿಯಿಸಿ, 'ಇದೊಂದು ನಕಲಿ ಮರಣ ಪತ್ರ' ಎಂದರು.

**ಇಬ್ಬರ ಸಾವು:** ಮಧ್ಯ ಪ್ರದೇಶದ ರಾಯಸೇನ್ ಮತ್ತು ದಮೋಹ್ ಜಿಲ್ಲೆಗಳಲ್ಲಿ ಬಿಎಲ್‌ಒಗಳಾಗಿ ಕಾರ್ಯನಿರ್ವಹಿಸುತ್ತಿದ್ದ ಶಿಕ್ಷಕರಾದ ರಮಾಕಾಂತ್ ಪಾಂಡೆ (50) ಮತ್ತು ಸೀತಾರಾಮ್ ಗೊಂಡ್ (50) ಅವರು ಅನಾರೋಗ್ಯದ ಕಾರಣದಿಂದ ಮೃತಪಟ್ಟಿದ್ದಾರೆ. ರಾಯಸೇನ್‌ನಲ್ಲಿ ಶಿಕ್ಷಕ ನಾರಾಯಣ ದಾಸ್ ಸೋನಿ ಎಂಬುವರು ಕಳೆದ ಆರು ದಿನಗಳಿಂದ ಕಾಣೆಯಾಗಿದ್ದಾರೆ.

**ಮರಣ ಪತ್ರದಲ್ಲೇನಿದೆ?**

'ನನಗೆ ಬದುಕಬೇಕು ಎಂಬ ಇಚ್ಛೆ ಇತ್ತು. ಅಮಾನವೀಯ ಕೆಲಸದ ಹೊರೆಯನ್ನು ತಾಳಲಾಗುತ್ತಿಲ್ಲ. ನಾನೊಬ್ಬ ಅರೆಕಾಲಿಕ ಶಿಕ್ಷಕಿ. ನನ್ನ ಶ್ರಮಕ್ಕೆ ಹೋಲಿಸಿದರೆ, ನನ್ನ ಸಂಬಳವು ಬಹಳ ಕಡಿಮೆ ಇದೆ. ಹಾಗಿದ್ದರೂ ಅವರು ನನ್ನ ಈ ಕೆಲಸದಿಂದ ಬಿಡುಗಡೆಗೊಳಿಸುತ್ತಿಲ್ಲ. ಶೇ 95ರಷ್ಟು ಆನ್‌ಲೈನ್ ಕೆಲಸವನ್ನು ಪೂರ್ಣಗೊಳಿಸಿದ್ದೇನೆ. ಆನ್‌ಲೈನ್ ಕೆಲಸಗಳನ್ನು ನಿರ್ವಹಿಸಲು ಸಾಧ್ಯವಾಗುತ್ತಿಲ್ಲ. ಈ ಬಗ್ಗೆ ಬಿಡಿಒ ಅಧಿಕಾರಿಗಳಿಗೆ ನನ್ನ ಮೇಲ್ವಿಚಾರಕರಿಗೆ ತಿಳಿಸಿದ್ದೇನೆ. ಆದರೆ, ಯಾವ ಕ್ರಮವನ್ನು ತೆಗೆದುಕೊಂಡಿಲ್ಲ. ಈ ರೀತಿ ಆಗುವುದಕ್ಕೆ ಚುನಾವಣಾ ಆಯೋಗವೇ ಹೊಣೆ' ಎಂದು ಮರಣ ಪತ್ರದಲ್ಲಿ ಆರೋಪಿಸಲಾಗಿದೆ.

**ಮತಗಳ್ಳತನ: ಕಾಂಗ್ರೆಸ್ ಮಹಾ ರ‍್ಯಾಲಿ**

ಮತಗಳ್ಳತನದ ವಿರುದ್ಧ ನವದೆಹಲಿಯ ರಾಮ್‌ಲೀಲಾ ಮೈದಾನದಲ್ಲಿ ಡಿ.14ರಂದು ಮಹಾ ರ‍್ಯಾಲಿ ಆಯೋಜಿಸಲಾಗುವುದು ಎಂದು ಕಾಂಗ್ರೆಸ್ ಹೇಳಿದೆ. ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಭಾಗವಹಿಸಲಿದ್ದಾರೆ.

ರಾಹುಲ್ ಗಾಂಧಿ ಅವರು ಚುನಾವಣಾ ಆಯೋಗದ ವಿರುದ್ಧ ಮತಗಳ್ಳತನ ಆರೋಪ ಹೊರಿಸಿ ಮಾಧ್ಯಮಗೋಷ್ಠಿ ನಡೆಸಿದ ಬಳಿಕ, ಆರೋಪಗಳ ಪರವಾಗಿ ಪಕ್ಷವು ಸಹಿ ಸಂಗ್ರಹ ಮಾಡಲು ಆರಂಭಿಸಿತ್ತು. ಇದನ್ನು ಮುಖ್ಯವಾಗಿ ರ‍್ಯಾಲಿಯಲ್ಲಿ ಪಕ್ಷ ಚರ್ಚಿಸಲಿದೆ ಎನ್ನಲಾಗಿದೆ. ಈ ರ‍್ಯಾಲಿಯು ಮತಗಳ್ಳರ ಮುಷ್ಠಿಯಲ್ಲಿರುವ ಭಾರತದ ಪ್ರಜಾಪ್ರಭುತ್ವವನ್ನು ಮರಳಿ ಪಡೆಯುವ ಹೋರಾಟದ ಆರಂಭ ಎಂದು ಪಕ್ಷ ಹೇಳಿಕೊಂಡಿದೆ.

---

## ಮೆಕ್ಕೆಜೋಳ, ಹೆಸರುಕಾಳು ದರ ಕುಸಿತ: ಪ್ರಧಾನಿಗೆ ಸಿ.ಎಂ ಪತ್ರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮೆಕ್ಕೆಜೋಳ, ಹೆಸರುಕಾಳು ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳ ನಿವಾರಣೆಗೆ ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಬೇಕು ಎಂದು ಕೋರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದಾರೆ.

ಕರ್ನಾಟಕದಲ್ಲಿ ಲಕ್ಷಾಂತರ ರೈತರ ಜೀವನಕ್ಕೆ ಆಧಾರವಾಗಿರುವ ಮೆಕ್ಕೆಜೋಳ ಮತ್ತು ಹೆಸರುಕಾಳು ಬೆಲೆಗಳು ಕುಸಿದಿವೆ. ಭಾರತ ಸರ್ಕಾರ ಘೋಷಿಸಿರುವ ಕನಿಷ್ಠ ಬೆಂಬಲ ಬೆಲೆಗಿಂತ (ಎಂಎಸ್‌ಪಿ) ಮಾರುಕಟ್ಟೆ ಬೆಲೆ ಕಡಿಮೆ ಇದೆ. ಖಾರಿಫ್ ಋತುವಿನಲ್ಲಿ 17.94 ಲಕ್ಷ ಹೆಕ್ಟೇರ್ ಮೆಕ್ಕೆಜೋಳ, 4.16 ಲಕ್ಷ ಹೆಕ್ಟೇರ್ ಹೆಸರುಕಾಳು ಬೆಳೆಯಲಾಗಿದೆ. 54.74 ಲಕ್ಷ ಟನ್ ಮೆಕ್ಕೆಜೋಳ, 1.98 ಲಕ್ಷ ಟನ್ ಹೆಸರುಕಾಳು ಉತ್ಪಾದನೆಯ ನಿರೀಕ್ಷೆ ಇದೆ. ಇದು ಸಮೃದ್ಧಿಯ ಅವಕಾಶವಾಗಬೇಕಿತ್ತು. ಆದರೆ, ಪ್ರಸ್ತುತ ಮಾರುಕಟ್ಟೆ ಸ್ಥಿತಿಯು ಸಂಕಷ್ಟ ತಂದಿದೆ ಎಂದು ಪತ್ರದಲ್ಲಿ ವಿವರಿಸಿದ್ದಾರೆ.

ಕೇಂದ್ರ ಸರ್ಕಾರವು ಪ್ರತಿ ಟನ್ ಮೆಕ್ಕೆಜೋಳಕ್ಕೆ ₹2,400 ಹಾಗೂ ಹೆಸರುಕಾಳಿಗೆ ₹8,768 ಎಂಎಸ್‌ಪಿ ಘೋಷಿಸಿದ್ದರೂ, ಮಾರುಕಟ್ಟೆ ಬೆಲೆ ಜೋಳಕ್ಕೆ ₹1,600-1,800, ಹೆಸರುಕಾಳಿಗೆ ₹5,400 ಆಸುಪಾಸಿನಲ್ಲಿದೆ. ಸುಮಾರು 32 ಲಕ್ಷ ಟನ್ ಮೆಕ್ಕೆಜೋಳ ಮಾರುಕಟ್ಟೆಯಲ್ಲಿ ಹೆಚ್ಚುವರಿಯಾಗಿ ಲಭ್ಯವಿದ್ದು, ಸ್ಥಳೀಯ ಕೈಗಾರಿಕೆಗಳ ಬಳಕೆಯ ಸಾಮರ್ಥ್ಯಕ್ಕಿಂತ ಹೆಚ್ಚಾಗಿದೆ ಎಂದಿದ್ದಾರೆ.

ತಕ್ಷಣ ಎಂಎಸ್‌ಪಿ ದರದಲ್ಲಿ ಖರೀದಿ ಆರಂಭಿಸಲು ನಿರ್ದೇಶನ ನೀಡಬೇಕು. ಮೆಕ್ಕೆಜೋಳದಿಂದ ಉತ್ಪಾದಿತ ಎಥೆನಾಲ್‌ಗೆ ಮೂಲ ದರ ಲೀಟರ್‌ಗೆ ₹66.07 ಇದ್ದು, ₹5.79 ಹೆಚ್ಚುವರಿ ಪ್ರೋತ್ಸಾಹಧನ ನೀಡಲಾಗುತ್ತಿದೆ. ಆದರೆ, ಕರ್ನಾಟಕದ ಅನೇಕ ಎಥೆನಾಲ್ ಘಟಕಗಳು ರೈತರನ್ನು ಬಿಟ್ಟು ಮಧ್ಯವರ್ತಿಗಳಿಂದ ಮೆಕ್ಕೆಜೋಳ ಖರೀದಿಸುತ್ತಿವೆ. ಇದು ಎಂಎಸ್‌ಪಿ ಹಾಗೂ ಕೇಂದ್ರ ಸರ್ಕಾರದ ಪ್ರೋತ್ಸಾಹಧನ ಉದ್ದೇಶವನ್ನೇ ವಿಫಲಗೊಳಿಸುತ್ತದೆ. ನೇರವಾಗಿ ಮೆಕ್ಕೆಜೋಳ ಖರೀದಿಸುವಂತೆ ಆದೇಶಿಸಬೇಕು. ಇಲ್ಲದಿದ್ದರೆ ಎಥೆನಾಲ್ ಉತ್ಪಾದಕರಿಗೆ ನೀಡುತ್ತಿರುವ ಪ್ರೋತ್ಸಾಹಧನವನ್ನು ಮರುಪರಿಶೀಲಿಸಬೇಕು ಎಂದು ಕೋರಿದ್ದಾರೆ.

ಕರ್ನಾಟಕಕ್ಕೆ ಎಥೆನಾಲ್ ಹಂಚಿಕೆ ಪ್ರಮಾಣವನ್ನು ಹೆಚ್ಚಿಸಬೇಕು. ಧಾನ್ಯ ಆಧಾರಿತ ಎಥೆನಾಲ್ ಉತ್ಪಾದನೆಯಲ್ಲಿ ಕರ್ನಾಟಕ ಮತ್ತು ಮಹಾರಾಷ್ಟ್ರ ಮಧ್ಯೆ ಇರುವ ಹಂಚಿಕೆಯ ವ್ಯತ್ಯಾಸವನ್ನು ಸರಿಪಡಿಸಬೇಕು. ಮೆಕ್ಕೆಜೋಳದ ಆಮದು ಕಾರಣ ದೇಶದ ರೈತರಿಗೆ ದೊಡ್ಡ ಹೊಡೆತ ಬಿದ್ದಿದೆ. ಆಮದು ತಕ್ಷಣ ನಿಲ್ಲಿಸಬೇಕು ಎಂದು ಒತ್ತಾಯಿಸಿದ್ದಾರೆ.

---

## ಅಲ್ ಫಲಾಹ್ ವಿ.ವಿಗೆ ಇದೆ 2008ರಿಂದ ಉಗ್ರರ ನಂಟು

**ಒಂದನೇ ಪುಟದಿಂದ..**

ದೆಹಲಿ ಸ್ಫೋಟದ ಬೆನ್ನಲ್ಲೇ, ಇತ್ತೀಚೆಗೆ ಪಂಜಾಬ್ ಪೊಲೀಸರು ಅಲ್–ಫಲಾಹ್ ವಿ.ವಿಗೆ ಭೇಟಿ ನೀಡಿ, ಪಠಾಣ್‌ಕೋಟ್‌ನಲ್ಲಿ ಬಂಧಿಸಲಾಗಿದ್ದ 45 ವರ್ಷದ ವೈದ್ಯರೊಬ್ಬರ ಕುರಿತು ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಿಂದ ಮಾಹಿತಿ ಪಡೆದಿದ್ದರು ಎಂದು ಮೂಲಗಳು ತಿಳಿಸಿವೆ.

ಬಂಧಿತ ವೈದ್ಯ ಅಲ್–ಫಲಾಹ್ ವಿವಿಯಲ್ಲೂ ಕೆಲಕಾಲ ಉಪನ್ಯಾಸಕನಾಗಿ ಕಾರ್ಯನಿರ್ವಹಿಸಿದ್ದ. ಈತನಿಗೂ ದೆಹಲಿ ಸ್ಫೋಟದ ಆರೋಪಿ ಡಾ. ಉಮರ್ ನಬಿಗೂ ಇರುವ ನಂಟಿನ ಕುರಿತು ತನಿಖೆ ನಡೆಯುತ್ತಿದೆ ಎಂದು ಮೂಲಗಳು ತಿಳಿಸಿವೆ.

**ಮತ್ತೊಬ್ಬ ವ್ಯಕ್ತಿಯ ಬಂಧನ**

ಅಲ್ ಫಲಾಹ್ ವಿಶ್ವವಿದ್ಯಾಲಯದ 'ವೈಟ್‌ಕಾಲರ್' ಭಯೋತ್ಪಾದನೆಗೆ ಸಂಬಂಧಿಸಿದಂತೆ ಜಮ್ಮು–ಕಾಶ್ಮೀರ ಪೊಲೀಸ್ ವಿಶೇಷ ತನಿಖಾ ತಂಡವು ಶನಿವಾರ ಮತ್ತೊಬ್ಬ ವ್ಯಕ್ತಿಯನ್ನು ಬಂಧಿಸಿದೆ.

ಶ್ರೀನಗರದ ಬಟಮಾಲೂ ನಿವಾಸಿ ತುಫೈಲ್ ನಿಯಾಜ್ ಭಟ್ ಬಂಧಿತ ಆರೋಪಿ.

ತುಫೈಲ್ ನಿಯಾಜ್ ಭಟ್ ಸೇರಿದಂತೆ ಇದುವರೆಗ ಒಟ್ಟು ಏಳು 'ವೈಟ್‌ಕಾಲರ್' ಉಗ್ರರನ್ನು ಬಂಧಿಸಿದಂತಾಗಿದೆ. ರಾಷ್ಟ್ರೀಯ ತನಿಖಾ ತಂಡವು ನ.20ರಂದು ಅಲ್–ಫಲಾಹ್ ವಿಶ್ವವಿದ್ಯಾಲಯದ ಮೂವರು ವೈದ್ಯರು ಮತ್ತು ಒಬ್ಬ ಉಪನ್ಯಾಸಕನನ್ನು ವಶಕ್ಕೆ ಪಡೆದಿತ್ತು. ಇದಕ್ಕೂ ಮುನ್ನ ವಿವಿಯ ಉಪನ್ಯಾಸಕ ಮುಝಮ್ಮಿಲ್ ಗನ್ನೈ, ಆದಿಲ್ ರ‍್ಯಾಥರ್, ಶಾಹೀನಾ ಸಾಯೀದ್, ಮೌಲ್ವಿ ಇಫ್ರಾನ್ ಅಹಮದ್ ವಾಗೆ ಅವರನ್ನು ಜಮ್ಮು–ಕಾಶ್ಮೀರ ಪೊಲೀಸರು ಬಂಧಿಸಿದ್ದರು.

ಶುಕ್ರವಾರ ಕ್ಯಾಬ್ ಚಾಲಕನನ್ನು ಮತ್ತೆ ಬಂಧಿಸಿರುವ ಎನ್‌ಐಎ ವಿಚಾರಣೆಗೆ ಒಳಪಡಿಸಿದೆ. ಈತನ ಮನೆಯಿಂದ, ಗ್ರೈಂಡರ್, ಕೆಲವು ಎಲೆಕ್ಟ್ರಾನಿಕ್ ವಸ್ತುಗಳನ್ನು ವಶಕ್ಕೆ ಪಡೆಯಲಾಗಿದೆ. ಮುಝಮ್ಮಿಲ್ ಗನ್ನೈ, ಈ ಕ್ಯಾಬ್ ಚಾಲಕನ ಮೂಲಕ ಅಲ್–ಫಲಾಹ್ ವಿಶ್ವವಿದ್ಯಾಲಯದ ಕೆಲವು ವಿದ್ಯಾರ್ಥಿಗಳಿಗೆ ಸಿಮ್‌ಕಾರ್ಡ್ ಪೂರೈಸಿದ್ದ ಎಂಬ ಮಾಹಿತಿ ತನಿಖೆಯಿಂದ ತಿಳಿದುಬಂದಿದೆ.

---

### ನಷ್ಟದಿಂದಾಗಿ ಟ್ರಾವೆಲ್ಸ್ ಏಜೆನ್ಸಿ ಮುಚ್ಚಿದ್ದ ಆರೋಪಿ
# ದರೋಡೆ ಸೂತ್ರಧಾರ ರವಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸಿಎಂಎಸ್ ಏಜೆನ್ಸಿ ವಾಹನವನ್ನು ಅಡ್ಡಗಟ್ಟಿ ₹7.11 ಕೋಟಿ ದರೋಡೆ ಮಾಡಿದ್ದ ಪ್ರಕರಣ ಮಹತ್ವದ ತಿರುವು ಪಡೆದಿದ್ದು, ಬಂಧಿತ ಆರೋಪಿಗಳ ಪೈಕಿ ರವಿ ಎಂಬಾತ ಇಡೀ ಪ್ರಕರಣದ ಸೂತ್ರಧಾರ ಎಂಬುದು ಪೊಲೀಸ್ ತನಿಖೆಯಲ್ಲಿ ಗೊತ್ತಾಗಿದೆ.

ಮಾಜಿ ಸೈನಿಕನ ಮಗನಾದ ರವಿ, ಎಂಎಸ್‌ಸಿ ವ್ಯಾಸಂಗ ಮಾಡಿದ್ದು, ನಗರದಲ್ಲಿ ಟ್ರಾವೆಲ್ಸ್ ಏಜೆನ್ಸಿ ನಡೆಸುತ್ತಿದ್ದ. ಆದರೆ, ನಷ್ಟವಾಗಿದ್ದರಿಂದ ಏಜೆನ್ಸಿ ಮುಚ್ಚಿ ಮನೆಯಲ್ಲಿದ್ದ. ಆಗ ಹಣ ದರೋಡೆಗೆ ಸಂಚು ರೂಪಿಸಿದ್ದ ಎಂಬುದು ಗೊತ್ತಾಗಿದೆ.

ನಗರದಲ್ಲಿ ವಾಸವಿರುವ ರವಿ ಪತ್ನಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಅವರು ತನ್ನ ಪತಿ ದರೋಡೆಯಲ್ಲಿ ಭಾಗಿಯಾಗಿರುವುದನ್ನು ಒಪ್ಪಿಕೊಂಡಿದ್ದಾರೆ. ಕೃತ್ಯದಲ್ಲಿ ರವಿಯ ಸಹೋದರ ಹಾಗೂ ಅವರ ತಂದೆಯ ಪಾತ್ರದ ಬಗ್ಗೆಯೂ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಸಿಎಂಎಸ್ ಏಜೆನ್ಸಿ ವಾಹನದ ಮೇಲ್ವಿಚಾರಕ ಗೋಪಾಲ್ ಪ್ರಸಾದ್, ಸಿಎಂಎಸ್ ಮಾಜಿ ಉದ್ಯೋಗಿ ಕ್ಸೇವಿಯರ್ ಹಾಗೂ ಕಾನ್‌ಸ್ಟೆಬಲ್ ಅಣ್ಣಪ್ಪ ನಾಯ್ಕ್ ಬಾರ್‌ನಲ್ಲಿ ಪರಿಚಿತರಾಗಿದ್ದರು. ರವಿ, ನವೀನ್ ಮತ್ತು ನೆಲ್ಸನ್ ಸ್ನೇಹಿತರು ಹಾಗೂ ಚಿತ್ತೂರಿನವರು. ಟ್ರಾವೆಲ್ಸ್ ಏಜೆನ್ಸಿ ನಡೆಸುತ್ತಿದ್ದ ರವಿಗೆ ಗೋಪಾಲ್, ಅಣ್ಣಪ್ಪ ಅವರ ಪರಿಚಯವಿತ್ತು. ವ್ಯವಹಾರದಲ್ಲಿ ನಷ್ಟ ಹೊಂದಿದ್ದ ಕಾರಣ, ದೊಡ್ಡ ಮೊತ್ತದ ದರೋಡೆಗೆ ಸಂಚು ರೂಪಿಸಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

**ಆರೋಪಿಗಳ ಪಾತ್ರವೇನು?**

ರವಿ ತನ್ನ ಸ್ನೇಹಿತರು ಹಾಗೂ ಇತರೆ ಆರೋಪಿಗಳ ಜತೆ ಚರ್ಚಿಸಿ, ಯೋಜನೆ ರೂಪಿಸಿದ್ದ. ಎಲ್ಲೆಲ್ಲಿ ಇಲಾಖೆಯ ಸಿ.ಸಿ.ಟಿ.ವಿ ಕ್ಯಾಮೆರಾಗಳಿವೆ? ಯಾವ ಹೆಸರು ಹೇಳಿದರೆ ಏಜೆನ್ಸಿ ವಾಹನದ ಸಿಬ್ಬಂದಿ ಆತಂಕಕ್ಕೆ ಒಳಗಾಗುತ್ತಾರೆ? ಕಾರಿನ ನಂಬರ್ ಪ್ಲೇಟ್ ಬದಲಾವಣೆ ಮಾಡಿಕೊಂಡು ಹೇಗೆ ಪರಾರಿ ಆಗಬೇಕು? ಎಂಬ ಯೋಜನೆಯನ್ನು ಅಣ್ಣಪ್ಪ ನಾಯ್ಕ್ ರೂಪಿಸಿದ್ದ ಎಂದು ಹೇಳಲಾಗಿದೆ.

ಏಜೆನ್ಸಿ ವಾಹನದಲ್ಲಿ ಅಳವಡಿಸಿರುವ ಸಿ.ಸಿ.ಟಿ.ವಿ ಕ್ಯಾಮೆರಾಗಳು, ಸಿಬ್ಬಂದಿ ಸಂಖ್ಯೆ ಹಾಗೂ ತುರ್ತು ಬಟನ್ ಒತ್ತುವ ಮೊದಲೇ ಸಿಬ್ಬಂದಿಯನ್ನು ಕೆಳಗಿಳಿಸಬೇಕು ಎಂಬುದರ ಬಗ್ಗೆ ಕ್ಸೇವಿಯರ್ ಮಾಹಿತಿ ನೀಡಿದ್ದ. ಯಾವ ದಿನ, ಯಾವ ಮಾರ್ಗದಲ್ಲಿ ಹೆಚ್ಚು ಹಣ ವಾಹನದಲ್ಲಿ ಕೊಂಡೊಯ್ಯಲಾಗುತ್ತದೆ ಎಂಬುದರ ಕುರಿತು ಗೋಪಾಲ್ ತಿಳಿಸಿದ್ದ ಎಂದು ಮೂಲಗಳು ಹೇಳಿವೆ.

ಪರಿಚಿತ ಟ್ರಾವೆಲ್ ಏಜೆನ್ಸಿಗಳಿಂದ ಎರಡು ವಾಹನಗಳನ್ನು ಬಾಡಿಗೆಗೆ ಪಡೆದು ತಂದಿದ್ದ ರವಿ, ಅವುಗಳನ್ನು ದರೋಡೆಗೆ ಬಳಸಿದ್ದ. ಈ ವಾಹನಗಳಿಗೆ ನವೀನ್ ಮತ್ತು ನೆಲ್ಸನ್ ಚಾಲಕರಾಗಿದ್ದರು. ಎಲ್ಲಿ ಸಂಚಾರ ದಟ್ಟಣೆ ಇರುವುದಿಲ್ಲ, ಎಷ್ಟು ಚೆಕ್ ಪೋಸ್ಟ್‌ಗಳು ಇವೆ. ಎಷ್ಟು ಹೊತ್ತಿಗೆ ನಿಗದಿತ ಸ್ಥಳ ತಲುಪುತ್ತೇವೆ ಎಂಬುದರ ಬಗ್ಗೆ ರವಿ ಮಾಹಿತಿ ಸಂಗ್ರಹಿಸಿದ್ದ. ಕೃತ್ಯ ನಡೆದ ಒಂದೂವರೆ ತಾಸಿನಲ್ಲಿ ಕೆ.ಆರ್.ಪುರ, ಹೊಸಕೋಟೆ, ಕೋಲಾರ ಮಾರ್ಗವಾಗಿ ಹಣದೊಂದಿಗೆ ವಾಹನ ಆಂಧ್ರಪ್ರದೇಶದ ಗಡಿ ತಲುಪಿತ್ತು. ಘಟನೆ ನಡೆದ ಒಂದೂವರೆ ತಾಸಿನ ಬಳಿಕ ಪೊಲೀಸರಿಗೆ ವಿಷಯ ಗೊತ್ತಾಗಿತ್ತು.

ಅಣ್ಣಪ್ಪ ನಾಯ್ಕ್ ಹಾಗೂ ಕ್ಸೇವಿಯರ್ ನಡುವಿನ ಮೊಬೈಲ್ ಸಂಭಾಷಣೆ ಮಾಹಿತಿ ಆಧಾರದ ಮೇಲೆ ಬಂಧಿಸಲಾಗಿದೆ. ದರೋಡೆ ನಡೆಯುವುದಕ್ಕೆ ವಾರದ ಹಿಂದೆ ಇಬ್ಬರೂ ಮೊಬೈಲ್‌ನಲ್ಲಿ ಮಾತನಾಡಿರುವುದು ಗೊತ್ತಾಗಿದೆ. ಶಿವಮೊಗ್ಗ ಜಿಲ್ಲೆಯ ಅಪ್ಪಣ್ಣ 2018ರಲ್ಲಿ ಇಲಾಖೆಗೆ ಸೇರಿದ್ದ.

---

## ತೆಲಂಗಾಣ: 37 ನಕ್ಸಲರು ಶರಣು

**ಹೈದರಾಬಾದ್:** ಮೂವರು ರಾಜ್ಯ ಸಮಿತಿ ಸದಸ್ಯರೂ ಸೇರಿದಂತೆ ಸುಮಾರು 37 ನಕ್ಸಲರು ತೆಲಂಗಾಣ ಪೊಲೀಸರ ಮುಂದೆ ಶರಣಾಗಿ, ಸಮಾಜದ ಮುಖ್ಯವಾಹಿನಿಗೆ ಸೇರ್ಪಡೆಯಾಗಿದ್ದಾರೆ.

ತೆಲಂಗಾಣ ಪೊಲೀಸ್ ಮಹಾ ನಿರ್ದೇಶಕ ಬಿ.ಶಿವಧರ್ ರೆಡ್ಡಿ ಸಮ್ಮುಖದಲ್ಲಿ ಇವರೆಲ್ಲರೂ ಪೊಲೀಸರಿಗೆ ಶರಣಾದರು.

'ಕೊಯ್ಯಾಡ ಸಾಂಬಯ್ಯ ಅಲಿಯಾಸ್ ಆಜಾದ್, ಅಪ್ಪಾಸಿ ನಾರಾಯಣ ಅಲಿಯಾಸ್ ರಮೇಶ್, ಮುಚ್ಚಕಿ ಸೊಮಡಾ ಅಲಿಯಾಸ್ ಯರ್ರಾ ಸೇರಿ ಹಲವು ಪ್ರಮುಖರು ಸಮಾಜದ ಮುಖ್ಯವಾಹಿನಿಗೆ ಸೇರಿದ್ದಾರೆ. ಇವರೆಲ್ಲರೂ ಎ.ಕೆ–47 ಸೇರಿದಂತೆ ಎಂಟು ಬಂದೂಕುಗಳು, 343 ಸಜೀವ ಮದ್ದುಗುಂಡುಗಳು ಸೇರಿದಂತೆ ಹಲವು ಶಸ್ತ್ರಾಸ್ತ್ರ ಮತ್ತು ಸ್ಫೋಟಕಗಳನ್ನು ಪೊಲೀಸರಿಗೆ ಒಪ್ಪಿಸಿದ್ದಾರೆ ಎಂದು ಡಿಜಿಪಿ ತಿಳಿಸಿದ್ದಾರೆ.

---

# ₹6.29 ಕೋಟಿ ಜಪ್ತಿ, ಇಬ್ಬರು ನಾಪತ್ತೆ

**ಒಂದನೇ ಪುಟದಿಂದ...**

ನವೆಂಬರ್ 19ರ ಮಧ್ಯಾಹ್ನ 1.20ರ ಸಮಯದಲ್ಲಿ ಎಟಿಎಂ ಕೇಂದ್ರಕ್ಕೆ ಹಣ ತುಂಬಲು ಹೊರಟಿದ್ದ ಸಿಎಂಎಸ್ ಏಜೆನ್ಸಿ ವಾಹನವನ್ನು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಅಧಿಕಾರಿಗಳ ಸೋಗಿನಲ್ಲಿ ಅಡ್ಡಗಟ್ಟಿದ್ದ ಆರೋಪಿಗಳು, ಶಸ್ತ್ರ ತೋರಿಸಿ, ಬೆದರಿಸಿ ₹7.11 ಕೋಟಿ ದರೋಡೆ ಮಾಡಿದ್ದರು.

ಮೂರು ತಿಂಗಳಿಂದ ದರೋಡೆಗೆ ಸಂಚು ರೂಪಿಸಿದ್ದ ಆರೋಪಿಗಳು, ಕೃತ್ಯಕ್ಕೆ 15 ದಿನಗಳ ಹಿಂದೆಯೇ ಸ್ಥಳ ನಿಗದಿ ಮಾಡಿದ್ದರು. ನಕಲಿ ನಂಬರ್ ಪ್ಲೇಟ್ ಅಳವಡಿಸಿದ ಕಾರಿನಲ್ಲಿ ಅಶೋಕ ಪಿಲ್ಲರ್ - ಜಯನಗರ - ಡೇರಿ ಸರ್ಕಲ್ ಮಾರ್ಗದಲ್ಲಿ ಬಂದು, ಸಿಎಂಎಸ್ ಏಜೆನ್ಸಿ ವಾಹನವನ್ನು ಅಡ್ಡಗಟ್ಟಿ, ತಾವು ಆರ್‌ಬಿಐ ಅಧಿಕಾರಿಗಳೆಂದು ಭದ್ರತಾ ಸಿಬ್ಬಂದಿ ಹಾಗೂ ಕಸ್ಟೋಡಿಯನ್ ಸಿಬ್ಬಂದಿಯನ್ನು ಕೆಳಗಿಳಿಸಿದ್ದರು.

ನಂತರ ಮತ್ತೊಬ್ಬ ಆರೋಪಿ, ಕಸ್ಟೋಡಿಯನ್ ವಾಹನದೊಳಗೆ ಕುಳಿತು ಚಾಲಕನಿಗೆ ಡೇರಿ ಸರ್ಕಲ್‌ನತ್ತ ಚಲಾಯಿಸುವಂತೆ ಸೂಚಿಸಿದ್ದ. ಭದ್ರತಾ ಸಿಬ್ಬಂದಿ ಹಾಗೂ ಕಸ್ಟೋಡಿಯನ್ ಸಿಬ್ಬಂದಿಯನ್ನು ಕಾರಿನಲ್ಲಿ ಕರೆದೊಯ್ದಿದ್ದ ಆರೋಪಿಗಳು, ಅವರ ಮೊಬೈಲ್ ಕಿತ್ತುಕೊಂಡು, ಅವರನ್ನು ನಿಮ್ಹಾನ್ಸ್ ಬಳಿ ಕೆಳಗಿಳಿಸಿ ಪರಾರಿಯಾಗಿದ್ದರು ಎಂದು ಸಿಂಗ್ ವಿವರಿಸಿದರು.



ಆರೋಪಿಗಳಿಂದ ವಶಪಡಿಸಿಕೊಂಡಿರುವ ನಗದು ಪ್ರದರ್ಶಿಸಿದ ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಹಾಗೂ ಅಧಿಕಾರಿಗಳು –ಪ್ರಜಾವಾಣಿ ಚಿತ್ರ

ಕೃತ್ಯ ನಡೆದ ನಂತರ ಪೊಲೀಸರಿಗೆ ಖಚಿತ ಮಾಹಿತಿ ಲಭ್ಯವಾಗುವಷ್ಟರಲ್ಲಿ ಒಂದೂವರೆ ತಾಸು ಆಗಿತ್ತು. ಮಾಹಿತಿ ಲಭ್ಯವಾಗುತ್ತಿದ್ದಂತೆ, ಗಡಿಭಾಗದ ಜಿಲ್ಲೆಗಳ ಪೊಲೀಸ್ ವರಿಷ್ಠಾಧಿಕಾರಿಗಳು, ನೆರೆ ರಾಜ್ಯಗಳ ಪೊಲೀಸರಿಗೆ ಮಾಹಿತಿ ನೀಡಲಾಗಿತ್ತು. ಇಬ್ಬರು ಡಿಸಿಪಿಗಳ ನೇತೃತ್ವದಲ್ಲಿ 11 ತಂಡಗಳನ್ನು ರಚಿಸಲಾಯಿತು. ಕೇರಳ, ತಮಿಳುನಾಡು, ತೆಲಂಗಾಣ, ಆಂಧ್ರಪ್ರದೇಶ, ಗೋವಾ, ತೆಲಂಗಾಣಕ್ಕೆ ತೆರಳಿ ಮಾಹಿತಿ ಕಲೆ ಹಾಕಲಾಯಿತು. ಪ್ರಕರಣ ಸಂಬಂಧ 30 ಮಂದಿಯನ್ನು ವಿಚಾರಣೆಗೆ ಒಳಪಡಿಸಲಾಗಿದೆ ಎಂದರು.

ಸಿ.ಸಿ.ಟಿ.ವಿ ಕ್ಯಾಮೆರಾಗಳ ದೃಶ್ಯಾವಳಿ ಪರಿಶೀಲನೆ, ಬಾತ್ಮೀದಾರರ ಮಾಹಿತಿ ಹಾಗೂ ತಾಂತ್ರಿಕ ವಿಶ್ಲೇಷಣೆ ಆಧರಿಸಿ ಕಾರ್ಯಾಚರಣೆ ನಡೆಸಿದಾಗ, ಕೃತ್ಯದಲ್ಲಿ 6 ರಿಂದ 8 ಜನರು ಭಾಗಿಯಾಗಿರುವುದು ಗೊತ್ತಾಯಿತು. ಆಂಧ್ರಪ್ರದೇಶದ ಚಿತ್ತೂರಿನಲ್ಲಿ ಇನೊವಾ ಪತ್ತೆಯಾಯಿತು, ಅದಕ್ಕೆ ನಕಲಿ ನಂಬರ್ ಪ್ಲೇಟ್ ಬಳಸಲಾಗಿತ್ತು. ಖಚಿತ ಮಾಹಿತಿ ಆಧರಿಸಿ ಆರು ಮಂದಿಯನ್ನು ಬಂಧಿಸಲಾಗಿದ್ದು, ಉಳಿದ ಆರೋಪಿಗಳನ್ನು ಶೀಘ್ರವೇ ಬಂಧಿಸಲಾಗುವುದು ಎಂದು ತಿಳಿಸಿದರು.

ವರ್ಷದ ಹಿಂದೆ ಸಂಭವಿಸಿದ ಅಪಘಾತದಿಂದಾಗಿ ಕ್ಸೇವಿಯರ್ ಕೆಲಸ ಬಿಟ್ಟಿದ್ದರೂ ಸಂಸ್ಥೆ ಸಿಬ್ಬಂದಿ ಜತೆ ಸಂಪರ್ಕದಲ್ಲಿದ್ದ. ಬಂಧಿತರು ಎಲ್ಲರೂ ಪರಿಚಿತರು. ಹಣ ಮಾಡುವ ಉದ್ದೇಶದಿಂದ ಕೃತ್ಯವೆಸಗಿದ್ದಾರೆ. ತನಿಖೆ ಪ್ರಗತಿಯಲ್ಲಿರುವ ಕಾರಣ ಹೆಚ್ಚಿನ ಮಾಹಿತಿ ನೀಡಲು ಸಾಧ್ಯವಿಲ್ಲ. ಕೃತ್ಯದಲ್ಲಿ ಭಾಗಿಯಾಗಿರುವ ಕಾನ್‌ಸ್ಟೆಬಲ್ ಅಣ್ಣಪ್ಪ ನಾಯ್ಕ್ ವಿರುದ್ಧ ಶಿಸ್ತು ಕ್ರಮಕ್ಕೆ ಶಿಫಾರಸು ಮಾಡಲಾಗುವುದು ಎಂದು ಹೇಳಿದರು.

ಆರೋಪಿಗಳನ್ನು ಡಿಸೆಂಬರ್ 1ರ ವರೆಗೆ ಪೊಲೀಸ್ ಕಸ್ಟಡಿಗೆ ನೀಡಿ ಬೆಂಗಳೂರಿನ 2ನೇ ಎಸಿಎಂಎಂ ನ್ಯಾಯಾಲಯ ಶನಿವಾರ ಆದೇಶ ಹೊರಡಿಸಿದೆ.

**ಸಿಎಂಎಸ್ ಏಜೆನ್ಸಿ ಲೋಪ: ಆರ್‌ಬಿಐಗೆ ಪತ್ರ**

ಸಿಎಂಎಸ್ ಏಜೆನ್ಸಿಯು ಆರ್‌ಬಿಐ ಮಾರ್ಗಸೂಚಿ ಪಾಲಿಸದಿರುವುದು ತನಿಖೆ ವೇಳೆ ಗೊತ್ತಾಗಿದೆ. ಹೀಗಾಗಿ, ಸಂಸ್ಥೆ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿ ಆರ್‌ಬಿಐಗೆ ಪತ್ರ ಬರೆಯಲಾಗುವುದು ಹಾಗೂ ಪ್ರಕರಣದಲ್ಲಿ ಸಿಎಂಎಸ್ ಸಂಸ್ಥೆ ಸಿಬ್ಬಂದಿಯ ಪಾತ್ರದ ಬಗ್ಗೆಯೂ ತನಿಖೆ ನಡೆಸಲಾಗುವುದು ಎಂದು ಸೀಮಾಂತ್ ಕುಮಾರ್ ಸಿಂಗ್ ತಿಳಿಸಿದರು.

ಹಣ ಸಾಗಿಸುವ ವಾಹನದಲ್ಲಿ ಚಾಲಕ ಹೊರತುಪಡಿಸಿ ಇಬ್ಬರು ಭದ್ರತಾ ಸಿಬ್ಬಂದಿ ಹಾಗೂ ಇಬ್ಬರು ಕಸ್ಟೋಡಿಯನ್ ಸಿಬ್ಬಂದಿ ಇರಬೇಕು. ಹಣ ಇರುವ ವಾಹನ ಒಂದೇ ಸಮಯ, ಒಂದೇ ಮಾರ್ಗವನ್ನು ಪದೇ ಪದೇ ಬಳಸಬಾರದು. ಸಿಬ್ಬಂದಿಯು ಹಣ ನಿರ್ವಹಣೆಯ ಕುರಿತು ತರಬೇತಿ ಪಡೆದಿರಬೇಕು, ಸಿಬ್ಬಂದಿಯ ಹಿನ್ನೆಲೆಯ ಕುರಿತು ಪರಿಶೀಲನೆ ಆಗಿರಬೇಕು. ಕಂಪನಿಯ ಯಾವುದಾದರೂ ಉದ್ಯೋಗಿಯನ್ನು ಕೆಲಸದಿಂದ ವಜಾಗೊಳಿಸಿದರೆ ಪೊಲೀಸರಿಗೆ ಮಾಹಿತಿ ನೀಡಿರಬೇಕು. ಆದರೆ, ಸಿಎಂಎಸ್ ಸಂಸ್ಥೆಯಿಂದ ಕೆಲ ಲೋಪದೋಷ ಆಗಿರುವುದು ಕಂಡು ಬಂದಿದೆ ಎಂದರು.

---

# 'ಅತಿಥಿ'ಗಳಿಗೇ ನೈಜತೆ ಸಾಬೀತಿನ ಹೊಣೆ

**ಒಂದನೇ ಪುಟದಿಂದ...**

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಬೋಧಕರಾಗಿ ಕೆಲಸ ಮಾಡುವವರು ಸ್ನಾತಕೋತ್ತರ ಪದವಿಯ ಜತೆಗೆ ರಾಷ್ಟ್ರೀಯ ಅರ್ಹತಾ ಪರೀಕ್ಷೆ (ಎನ್‌ಇಟಿ) ಇಲ್ಲವೇ ಕರ್ನಾಟಕ ರಾಜ್ಯ ಅರ್ಹತಾ ಪರೀಕ್ಷೆ (ಕೆ-ಸೆಟ್) ತೇರ್ಗಡೆಯಾಗಿರಬೇಕು, ಪಿಎಚ್‌.ಡಿ ಪಡೆದಿರಬೇಕು ಎಂದು ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ನಿಯಮ ರೂಪಿಸಿದೆ. ಪ್ರಥಮ ದರ್ಜೆ ಕಾಲೇಜುಗಳಲ್ಲೂ ಇಂತಹ ಅರ್ಹತೆ ಹೊಂದಿರುವ ಅತಿಥಿ ಉಪನ್ಯಾಸಕರನ್ನೇ ನೇಮಕ ಮಾಡಿಕೊಳ್ಳಬೇಕು ಎಂದು ಸೂಚಿಸಿದೆ. ಈ ಪ್ರಕರಣ ಕೋರ್ಟ್ ವಿಚಾರಣೆಯಲ್ಲಿದ್ದು, ಅಂತಿಮ ತೀರ್ಪಿಗೆ ಒಳಪಟ್ಟು 2025–26ನೇ ಸಾಲಿನ ಸೆಮಿಸ್ಟರ್‌ಗೆ ಹಿಂದಿನ ವರ್ಷ ಕೆಲಸ ಮಾಡಿದ್ದ ಅತಿಥಿ ಉಪನ್ಯಾಸಕರನ್ನೇ ಮುಂದುವರಿಸಲಾಗಿದೆ. ಹೀಗೆ ಮುಂದುವರಿಸುವಾಗ ಹಲವು ನಿಬಂಧನೆಗಳನ್ನು ವಿಧಿಸಲಾಗಿದೆ.

ರಾಜ್ಯದ ಪದವಿ ಕಾಲೇಜುಗಳಲ್ಲಿ ಕೆಲಸ ಮಾಡುತ್ತಿರುವ ಅತಿಥಿ ಉಪನ್ಯಾಸಕರ ಶೈಕ್ಷಣಿಕ ದಾಖಲೆಗಳನ್ನು ಆಯಾ ಕಾಲೇಜುಗಳ ಪ್ರಾಂಶುಪಾಲರು ಪರಿಶೀಲಿಸಬೇಕು. ವಿದ್ಯಾರ್ಹತೆ ಪ್ರಮಾಣಪತ್ರಗಳು, ಕಲ್ಯಾಣ ಕರ್ನಾಟಕ ಮೀಸಲಾತಿ, ಸೇವಾ ಪ್ರಮಾಣಪತ್ರ ಸೇರಿದಂತೆ ಎಲ್ಲ ಮೂಲದಾಖಲೆಗಳನ್ನು ಪರಿಶೀಲಿಸಿ, ದೃಢಪಡಿಸಿಕೊಳ್ಳಬೇಕು. ಸ್ನಾತಕೋತ್ತರ ಪದವಿಗಳ ಅಂಕಪಟ್ಟಿ, ಘಟಿಕೋತ್ಸವ ಪ್ರಮಾಣಪತ್ರ, ಪಿಎಚ್‌.ಡಿ, ಎಂ.ಫಿಲ್, ಕೆ–ಸೆಟ್, ಎನ್‌ಇಟಿಗಳ ನೈಜತೆಯನ್ನು ಅತಿಥಿ ಉಪನ್ಯಾಸಕರೇ ದೃಢೀಕರಿಸಬೇಕು. ಅದಕ್ಕೆ ತಗಲುವ ಖರ್ಚನ್ನು ಅವರೇ ಭರಿಸಬೇಕು ಎಂದು ಕಾಲೇಜು ಶಿಕ್ಷಣ ಇಲಾಖೆ ಹೇಳಿದೆ.

'ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕೆಲಸ ಮಾಡುತ್ತಿರುವ ಅತಿಥಿ ಉಪನ್ಯಾಸಕರು ನಕಲಿ ದಾಖಲೆಗಳನ್ನು ಸಲ್ಲಿಸುತ್ತಿರುವ ಬಗ್ಗೆ ದೂರುಗಳು ಬಂದಿವೆ. ಹಾಗಾಗಿ, ಅವರ ಎಲ್ಲ ಶೈಕ್ಷಣಿಕ ದಾಖಲೆಗಳ ನೈಜತಾ ಪ್ರಮಾಣಪತ್ರವನ್ನು ಸಂಬಂಧಿಸಿದ ವಿಶ್ವವಿದ್ಯಾಲಯಗಳಿಂದ ಒಂದು ಬಾರಿ ಪಡೆಯುವುದನ್ನು ಕಡ್ಡಾಯ ಮಾಡಲಾಗಿದೆ. ಸಲ್ಲಿಸಿದ ನೈಜತಾ ಪ್ರಮಾಣ ಪತ್ರಗಳನ್ನು ಇಲಾಖೆಯ ಇಎಂಐಎಸ್ ತಂತ್ರಾಂಶದಲ್ಲಿ ಆಯಾ ಕಾಲೇಜುಗಳ ಪ್ರಾಂಶುಪಾಲರು ದಾಖಲಿಸಬೇಕು. ಮುಂದಿನ ಶೈಕ್ಷಣಿಕ ವರ್ಷಕ್ಕೆ ಅವರೇ ಮುಂದುವರಿದರೆ ಮತ್ತೆ ನೈಜತೆಯ ಪ್ರಮಾಣಪತ್ರ ಸಲ್ಲಿಸುವ ಅಗತ್ಯವಿಲ್ಲ' ಎಂದು ಕಾಲೇಜು ಶಿಕ್ಷಣ ಇಲಾಖೆ ಆಯುಕ್ತೆ ಕೆ.ಎನ್.ಮಂಜುಶ್ರೀ ಸೂಚಿಸಿದ್ದಾರೆ.

**ಆರ್ಥಿಕ ಹೊರೆ; ಅತಿಥಿಗಳ ಆಕ್ಷೇಪ**

ಕಾಲೇಜು ಶಿಕ್ಷಣ ಇಲಾಖೆಯ ನಿರ್ಧಾರಕ್ಕೆ ಅತಿಥಿ ಉಪನ್ಯಾಸಕರ ಸಂಘಟನೆಗಳು ಆಕ್ಷೇಪ ವ್ಯಕ್ತಪಡಿಸಿವೆ.

'ಸ್ನಾತಕೋತ್ತರ ಪದವಿಯ ಅಂಕಪಟ್ಟಿ, ಘಟಿಕೋತ್ಸವ ಪ್ರಮಾಣಪತ್ರ, ಪಿಎಚ್‌.ಡಿ, ಎಂ.ಫಿಲ್, ಎನ್‌ಇಟಿ ಅಥವಾ ಕೆ–ಸೆಟ್‌ಗಳ ನೈಜತೆ ದೃಢೀಕರಿಸಿಕೊಳ್ಳಲು ಯಾವುದೇ ಅಭ್ಯಂತರವಿಲ್ಲ. ಆದರೆ, ಪ್ರತಿಯೊಂದು ದಾಖಲೆಯ ನೈಜತಾ ಪ್ರಮಾಣಪತ್ರಕ್ಕೆ ಆಯಾ ವಿಶ್ವವಿದ್ಯಾಲಯಗಳು ದುಬಾರಿ ಶುಲ್ಕ ನಿಗದಿ ಮಾಡಿವೆ. ಇದು ಕಡಿಮೆ ಗೌರವಧನ ಪಡೆಯುವ ಅತಿಥಿ ಉಪನ್ಯಾಸಕರಿಗೆ ಹೊರೆಯಾಗುತ್ತದೆ' ಎನ್ನುತ್ತಾರೆ ಅತಿಥಿ ಉಪನ್ಯಾಸಕರ ರಾಜ್ಯ ಸಮನ್ವಯ ಸಮಿತಿ ಅಧ್ಯಕ್ಷ ಎಚ್.ಸೋಮಶೇಖರ ಶಿಮೊಗ್ಗಿ.

'ಶೈಕ್ಷಣಿಕ ದಾಖಲೆಗಳ ನೈಜತೆಯ ಪ್ರಮಾಣಪತ್ರ ಪಡೆಯಲು ₹11,500 ಖರ್ಚಾಗಿದೆ. ಮರು ಆಯ್ಕೆಗೊಂಡ ನಂತರ ಇದುವರೆಗೆ ಗೌರವಧನ ಪಡೆದಿಲ್ಲ. ಮೊದಲೇ ಸಂಕಷ್ಟದಲ್ಲಿ ಇದ್ದೇವೆ. ಸರ್ಕಾರ ಮತ್ತಷ್ಟು ಹೊರೆ ಮಾಡಿದೆ' ಎಂದು ಅತಿಥಿ ಉಪನ್ಯಾಸಕಿ ಶೈಲಾ ದೂರಿದರು.

**ಅತಿಥಿ ಉಪನ್ಯಾಸಕರ ನೈಜತಾ ಪ್ರಮಾಣಪತ್ರವನ್ನು ಇಲಾಖೆಯೇ ತೆಗೆದುಕೊಳ್ಳಬೇಕು. ಈಗ ಹೊರಡಿಸಿರುವ ಆದೇಶವನ್ನು ಹಿಂಪಡೆಯಬೇಕು. ಕೆಲವರು ಈಗಾಗಲೇ ಭರಿಸಿರುವ ಮೊತ್ತವನ್ನು ವಾಪಸ್ ನೀಡಬೇಕು**
**ಎಚ್.ಸೋಮಶೇಖರ ಶಿಮೊಗ್ಗಿ,** ಅಧ್ಯಕ್ಷ, ಅತಿಥಿ ಉಪನ್ಯಾಸಕರ ರಾಜ್ಯ ಸಮನ್ವಯ ಸಮಿತಿ

**ಅಂಕಿ ಅಂಶಗಳು**

| | |
|---|---|
| 440 | ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು |
| 10,972 | ಅತಿಥಿ ಉಪನ್ಯಾಸಕರು |
| 4,068 | ಯುಜಿಸಿ ವಿದ್ಯಾರ್ಹತೆ ಹೊಂದಿದವರು |
| 6,904 | ಯುಜಿಸಿ ವಿದ್ಯಾರ್ಹತೆ ಪಡೆಯದವರು |

# ಕುಲದೀಪ್ ಯಾದವ್ ಸ್ಪಿನ್ ಮೋಡಿ

## ‘ಸಮಬಲದ’ ಅವಕಾಶ ಕಲ್ಪಿಸಿದ ಗುವಾಹಟಿ ಪಿಚ್ • ಬವುಮಾ ಬಳಗಕ್ಕೆ ಸಮಾಧಾನಕರ ಆರಂಭ • ಕೊನೆಯ ಅವಧಿಯಲ್ಲಿ ಬೌಲರ್‌ಗಳ ಪ್ರತಾಪ

• ಮಧು ಜವಳಿ



ಪಿಟಿಐ ಚಿತ್ರ

**ಗುವಾಹಟಿ:** ಕೋಲ್ಕತ್ತದಲ್ಲಿ ಹೋದ ವಾರ ನಡೆದಿದ್ದ ಟೆಸ್ಟ್ ಪಂದ್ಯಕ್ಕೆ ಸಿದ್ಧಗೊಳಿಸಲಾಗಿದ್ದ ಪಿಚ್ ಮತ್ತು ಗುವಾಹಟಿಯಲ್ಲಿ ಇರುವ ಅಂಗಳಕ್ಕೂ ಅಜಗಜಾಂತರವಿದೆ.

ಕೋಲ್ಕತ್ತ ಟೆಸ್ಟ್ ಮತ್ತು ಪರ್ತ್‌ನಲ್ಲಿ ಕಳೆದ ಎರಡು ದಿನ ನಡೆದ ಇಂಗ್ಲೆಂಡ್–ಆಸ್ಟ್ರೇಲಿಯಾ ನಡುವಣ ಆ್ಯಷಸ್ ಟೆಸ್ಟ್ ಪಂದ್ಯಕ್ಕೂ ಸಾಮ್ಯತೆಗಳಿವೆ. ಆದರೆ ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಣ ಸರಣಿಯ ಎರಡನೇ ಪಂದ್ಯ ಆಯೋಜನೆಯಾಗಿರುವ ಅಸ್ಸಾಂ ಕ್ರಿಕೆಟ್ ಮೈದಾನದ ಪಿಚ್ ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸಿತು. ಅದರಿಂದಾಗಿ ಮೊದಲ ದಿನದಾಟದಲ್ಲಿ ಬ್ಯಾಟರ್ ಮತ್ತು ಬೌಲರ್‌ಗಳಿಬ್ಬರಿಗೂ ತಮ್ಮ ಸಾಮರ್ಥ್ಯವನ್ನು ಒರೆಗೆ ಹಚ್ಚಲು ವೇದಿಕೆಯಾಯಿತು. ಬ್ಯಾಟರ್‌ಗಳು ಏಕಾಗ್ರತೆ ಮತ್ತು ತಾಳ್ಮೆಯಿಂದ ಆಡಬೇಕಾಯಿತು. ವೇಗಿಗಳಿಗೆ ಶಿಸ್ತು ಮತ್ತು ಸಹನೆಯೇ ಅಸ್ತ್ರವಾದವು. ಸ್ಪಿನ್ನರ್‌ಗಳು ದುಡುಕಲಿಲ್ಲ. ತಿರುವು ಮತ್ತು ನಿರೀಕ್ಷಿತ ವೇಗ ಸಿಗುವವರೆಗೂ ಕಾಯ್ದರು. ಇದರಿಂದಾಗಿ ಯಶಸ್ಸು ಎಂಬುದು ಜೋಕಾಲಿಯಂತೆ ಒಮ್ಮೆ ಆಚೆ ಮತ್ತೊಮ್ಮೆ ಈಚೆ ಜೀಕಿತು.

ಬೆಳಿಗ್ಗೆ ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಪ್ರವಾಸಿ ತಂಡವು ದಿನದಾಟದ ಮುಕ್ತಾಯಕ್ಕೆ 81.5 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 247 ರನ್ ಗಳಿಸಿತು. ಟಾಸ್ ವಿಷಯದಲ್ಲಿ ದುರದೃಷ್ಟ ಈ ಪಂದ್ಯದಲ್ಲಿಯೂ ಭಾರತ ತಂಡವನ್ನು ಕಾಡಿತು. ಮೊದಲೆರಡು ಅವಧಿಗಳಲ್ಲಿ (1ಕ್ಕೆ82 ಮತ್ತು 1ಕ್ಕೆ74) ಬ್ಯಾಟರ್‌ಗಳು ಒಂದಿಷ್ಟು ಮೇಲುಗೈ ಸಾಧಿಸಿದರು. ಅತ್ಯಮೂಲ್ಯವೆನಿಸಿದ ಸ್ಪರ್ಧಾತ್ಮಕ ಆಟವನ್ನಾಡುವ ತಂತ್ರ ರೂಪಿಸಿದರು. ಆದರೆ ದಿನದಾಟದ ಅಂತಿಮ ಅವಧಿಯಲ್ಲಿ ಭಾರತದ ಬೌಲರ್‌ಗಳು ತಮ್ಮ ಪ್ರತಾಪ ಮೆರೆದರು. ಈ ಅವಧಿಯಲ್ಲಿ ನಾಲ್ಕು ವಿಕೆಟ್‌ಗಳನ್ನು ಕಬಳಿಸುವ ಮೂಲಕ ತುಸು ಮೇಲುಗೈ ಸಾಧಿಸಿದರು.

ಮಧ್ಯಾಹ್ನ ದಕ್ಷಿಣ ಆಫ್ರಿಕಾ ತಂಡವು 201 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡಾಗಲೇ ಆತಿಥೇಯ ಬೌಲರ್‌ಗಳು ಪಂದ್ಯದ ಮೇಲೆ ಹಿಡಿತ ಸಾಧಿಸಲು ಪ್ರಯತ್ನಿಸಿದರು. ಆದರೆ ಟೋನಿ ಡಿ ಝೊರ್ಜಿ (28 ರನ್) ಮತ್ತು ಸೆನುರನ್ ಮುತ್ತುಸಾಮಿ (ಔಟಾಗದೇ 25) ಆರನೇ ವಿಕೆಟ್ ಜೊತೆಯಾಟದಲ್ಲಿ 45 ರನ್ ಸೇರಿಸಿದರು. ಇದರಿಂದಾಗಿ ಪ್ರವಾಸಿ ಬಳಗವು ಚೇತರಿಸಿಕೊಂಡಿತು.

ಹೊಸ ಚೆಂಡಿನೊಂದಿಗೆ ಬೌಲಿಂಗ್ ಮಾಡಿದ ಸಿರಾಜ್ ಅವರಿಗೆ ಕೊನೆಗೂ ಅದೃಷ್ಟ ಒಲಿಯಿತು. ಅವರ ಎಸೆತವನ್ನು ಆಡುವ ಭರದಲ್ಲಿ ಝೊರ್ಜಿ ಅವರು ವಿಕೆಟ್‌ಕೀಪರ್ ಪಂತ್ ಅವರಿಗೆ ಕ್ಯಾಚ್ ಆದರು. ದಕ್ಷಿಣ ಆಫ್ರಿಕಾದ ಬ್ಯಾಟರ್‌ಗಳ ಸತ್ವಪರೀಕ್ಷೆ ನಡೆಯಿತು. ರಿಯಾನ್ ರಿಕೆಲ್ಟನ್ (35; 82ಎ), ನಾಯಕ ತೆಂಬಾ ಬವುಮಾ (41; 92ಎ) ಮತ್ತು ಟ್ರಿಸ್ಟನ್ ಸ್ಟಬ್ಸ್ (49; 112ಎ) ಅವರು ತಾಳ್ಮೆಯಿಂದ ಆಡಿ ರನ್ ಗಳಿಸಿದರು. ಆದರೆ ಸಹನೆ ಕಳೆದುಕೊಂಡು ಕೆಟ್ಟ ಹೊಡೆತಕ್ಕೆ ಕೈಹಾಕಿ ದಂಡ ತೆತ್ತರು. ವೇಗಿ ಜಸ್‌ಪ್ರೀತ್ ಬೂಮ್ರಾ (38ಕ್ಕೆ1) ಮತ್ತು ಎಡಗೈ ಸ್ಪಿನ್ನರ್ ಕುಲದೀಪ್ ಯಾದವ್ (48ಕ್ಕೆ3) ತಮ್ಮ ಪೂರ್ಣ ಸಾಮರ್ಥ್ಯ ವಿನಿಯೋಗಿಸಿ ಯಶಸ್ವಿಯಾದರು.

ಚೆಂಡು ಉತ್ತಮವಾಗಿ ಪುಟಿದೇಳುತ್ತಿದ್ದ ಪಿಚ್‌ನಲ್ಲಿ ಬೂಮ್ರಾ ಮತ್ತು ಸಿರಾಜ್ ಆರಂಭಿಕ ಓವರ್‌ಗಳನ್ನು ಉತ್ತಮವಾಗಿ ಬೌಲಿಂಗ್ ಮಾಡಿದರು. ಏಡನ್ ಮರ್ಕರಂ ಮತ್ತು ರಿಕೆಲ್ಟನ್ ಅವರ ರನ್ ಗಳಿಕೆ ಕಷ್ಟವಾಯಿತು. ಏಳನೇ ಓವರ್‌ನಲ್ಲಿ ಬೂಮ್ರಾ ಎಸೆತವನ್ನು ಆಡಲು ಪ್ರಯತ್ನಿಸಿದ ಮರ್ಕರಂ ಬ್ಯಾಟ್‌ಗೆ ಬಡಿದ ಚೆಂಡು ಗಾಳಿಯಲ್ಲಿ ಸಾಗಿತು. ಆದರೆ ಫೀಲ್ಡರ್ ಕೆ.ಎಲ್. ರಾಹುಲ್ ಸುಲಭ ಕ್ಯಾಚ್ ಕೈಚೆಲ್ಲಿದರು. ಮರ್ಕರಂ ತಮ್ಮ ಖಾತೆ ತೆರೆಯಲು 17 ಎಸೆತಗಳನ್ನು ಆಡಿದರು. ನಂತರ ಇಬ್ಬರೂ ಆರಂಭಿಕರು ಹಂತಹಂತವಾಗಿ ಆಟಕ್ಕೆ ಕುದುರಿಕೊಂಡರು. ಚಹಾ ವಿರಾಮಕ್ಕೂ ಮುಂಚಿನ ಓವರ್‌ನಲ್ಲಿ ಬೂಮ್ರಾ ಅವರು ಮರ್ಕರಂ ವಿಕೆಟ್ ಎಗರಿಸಿದರು. ವಿರಾಮದ ನಂತರದ ಓವರ್‌ನಲ್ಲಿ ಕುಲದೀಪ್ ಎಸೆತ ಆಡುವ ಯತ್ನದಲ್ಲಿ ರಿಕೆಲ್ಟನ್, ವಿಕೆಟ್‌ಕೀಪರ್ ಪಂತ್‌ಗೆ ಕ್ಯಾಚಿತ್ತರು.

ದಕ್ಷಿಣ ಆಫ್ರಿಕಾ ತಂಡವು ವೇಗಿ ಕಾರ್ಬಿನ್ ಬಾಷ್ ಅವರ ಬದಲಿಗೆ ಸ್ಪಿನ್ನರ್ ಮುತ್ತುಸಾಮಿ ಅವರಿಗೆ ಸ್ಥಾನ ನೀಡಿದೆ. ಭಾರತ ತಂಡವು ಶುಭಮನ್ ಗಿಲ್ ಮತ್ತು ಅಕ್ಷರ್ ಪಟೇಲ್ ಅವರ ಬದಲಿಗೆ ಸಾಯಿ ಸುದರ್ಶನ್ ಮತ್ತು ನಿತೀಶ್ ರೆಡ್ಡಿ ಅವರನ್ನು ಕಣಕ್ಕಿಳಿಸಿದೆ.

### ಸ್ಕೋರ್ ಕಾರ್ಡ್

**ಮೊದಲ ಇನಿಂಗ್ಸ್: ದಕ್ಷಿಣ ಆಫ್ರಿಕಾ 6ಕ್ಕೆ 247 (81.5 ಓವರ್‌ಗಳಲ್ಲಿ)**

ಮರ್ಕರಂ ಬಿ ಬೂಮ್ರಾ 38 (81ಎ, 4x5)
ರಿಕೆಲ್ಟನ್ ಸಿ ಪಂತ್ ಬಿ ಕುಲದೀಪ್ 35 (82ಎ, 4x5)
ಸ್ಟಬ್ಸ್ ಸಿ ರಾಹುಲ್ ಬಿ ಕುಲದೀಪ್ 49 (112ಎ, 4x4, 6x2)
ಬವುಮಾ ಸಿ ಜೈಸ್ವಾಲ್ ಬಿ ಜಡೇಜ 41 (92ಎ, 4x5)
ಝೊರ್ಜಿ ಸಿ ಪಂತ್ ಬಿ ಸಿರಾಜ್ 28 (59ಎ, 4x3, 6x1)
ಮಲ್ಡರ್ ಸಿ ಜೈಸ್ವಾಲ್ ಬಿ ಕುಲದೀಪ್ 13 (18ಎ, 4x2)
ಮುತ್ತುಸಾಮಿ ಔಟಾಗದೇ 25 (45ಎ, 4x4)
ವೆರೆಯೆನ್ ಔಟಾಗದೇ 1 (4ಎ)
**ಇತರೆ:** 17 (ಬೈ 8, ಲೆಗ್‌ಬೈ 7, ನೋಬಾಲ್ 2)
**ವಿಕೆಟ್ ಪತನ:** 1-82 (ಏಡೆನ್ ಮರ್ಕರಂ, 26.5), 2-82 (ರಿಯಾನ್ ರಿಕೆಲ್ಟನ್, 27.2), 3-166 (ತೆಂಬಾ ಬವುಮಾ, 57.2), 4-187 (ಟ್ರಿಸ್ಟನ್ ಸ್ಟಬ್ಸ್, 63.1), 5-201 (ವಿಯಾನ್ ಮಲ್ಡರ್, 67.2), 6-246 (ಟೋನಿ ಡಿ ಝೊರ್ಜಿ, 81.1)
**ಬೌಲಿಂಗ್:** ಜಸ್‌ಪ್ರೀತ್ ಬೂಮ್ರಾ 17–6–38–1, ಮೊಹಮ್ಮದ್ ಸಿರಾಜ್ 17.5–3–59–1, ನಿತೀಶ್ ಕುಮಾರ್ ರೆಡ್ಡಿ 4–0–21–0, ವಾಷಿಂಗ್ಟನ್ ಸುಂದರ್ 14–3–36–0, ಕುಲದೀಪ್ ಯಾದವ್ 17–3–48–3, ರವೀಂದ್ರ ಜಡೇಜ 12–1–30–1

## ಏಕದಿನ ಕ್ರಿಕೆಟ್ ಸರಣಿಗೆ ಶುಭಮನ್ ಗಿಲ್ ಅನುಮಾನ



**ಗುವಾಹಟಿ (ಪಿಟಿಐ):** ಶುಭಮನ್ ಗಿಲ್ ಅವರು ದಕ್ಷಿಣ ಆಫ್ರಿಕಾ ಎದುರು ನಡೆಯಲಿರುವ ಏಕದಿನ ಕ್ರಿಕೆಟ್ ಸರಣಿಯಲ್ಲಿ ಆಡುವುದು ಅನುಮಾನವಾಗಿದೆ. ಅವರ ಬದಲಿಗೆ ಭಾರತ ತಂಡಕ್ಕೆ ರಿಷಭ್ ಪಂತ್ ಅಥವಾ ಕೆ.ಎಲ್. ರಾಹುಲ್ ಅವರನ್ನು ನಾಯಕರನ್ನಾಗಿ ನೇಮಕ ಮಾಡುವ ಸಾಧ್ಯತೆ ಇದೆ.

ಈಚೆಗೆ ದಕ್ಷಿಣ ಆಫ್ರಿಕಾ ಎದುರಿನ ಮೊದಲ ಟೆಸ್ಟ್ ಪಂದ್ಯದಲ್ಲಿ ಬ್ಯಾಟಿಂಗ್ ಮಾಡುವಾಗ ಕುತ್ತಿಗೆಯ ಸ್ನಾಯು ಸೆಳೆತಕ್ಕೊಳಗಾಗಿದ್ದರು. ಅದರಿಂದಾಗಿ ಅವರು ಮೈದಾನ ತೊರೆದು ಚಿಕಿತ್ಸೆಗಾಗಿ ತೆರಳಿದ್ದರು. ಗುವಾಹಟಿಯಲ್ಲಿ ನಡೆಯುತ್ತಿರುವ ಎರಡನೇ ಟೆಸ್ಟ್‌ನಲ್ಲಿಯೂ ಅವರು ಆಡಲಿಲ್ಲ.

ಅವರ ಕುತ್ತಿಗೆ ಗಾಯವು ಪೂರ್ಣ ಗುಣಮುಖವಾಗಲು ಇನ್ನೂ ಸ್ವಲ್ಪ ಸಮಯದ ಅಗತ್ಯವಿದೆ. ಆದ್ದರಿಂದ ಅವರು ಏಕದಿನ ಸರಣಿಗೆ ಫಿಟ್ ಆಗುವುದು ಅನುಮಾನವೆಂದು ಮೂಲಗಳು ತಿಳಿಸಿವೆ.

ಮೂರು ಪಂದ್ಯಗಳ ಏಕದಿನ ಕ್ರಿಕೆಟ್ ಸರಣಿಯು ಇದೇ 30ರಂದು ಆರಂಭವಾಗಲಿದೆ.

## ಎರಡೇ ದಿನದಲ್ಲಿ ಮುಗಿದ ಟೆಸ್ಟ್: ಇಂಗ್ಲೆಂಡ್‌ಗೆ ನಿರಾಸೆ

# ಹೆಡ್ ಅಬ್ಬರ; ಆಸ್ಟ್ರೇಲಿಯಾ ಜಯಭೇರಿ



| ಟ್ರಾವಿಸ್ ಹೆಡ್ | |
|---|---|
| ರನ್ | 123 |
| ಎಸೆತ | 83 |
| ಬೌಂಡರಿ | 16 |
| ಸಿಕ್ಸರ್ | 4 |

ಎಪಿ / ಪಿಟಿಐ ಚಿತ್ರ

**ಪರ್ತ್ (ಎಪಿ):** ಪರ್ತ್ ಪಿಚ್‌ನಲ್ಲಿ ನಾಲ್ಕನೇ ಇನಿಂಗ್ಸ್ ಬ್ಯಾಟಿಂಗ್ ಮಾಡುವ ಬಗ್ಗೆ ಇದ್ದ ವ್ಯಾಖ್ಯಾನವನ್ನು ಟ್ರಾವಿಸ್ ಹೆಡ್ ಬದಲಿಸಿದರು. ಶನಿವಾರ ಇಂಗ್ಲೆಂಡ್ ಬೌಲರ್‌ಗಳ ಎದುರು ಅವರು ಪಾರಮ್ಯ ಮೆರೆದರು. ಅದರಿಂದಾಗಿ ಆತಿಥೇಯ ಆಸ್ಟ್ರೇಲಿಯಾ ತಂಡವು ಆ್ಯಷಸ್ ಸರಣಿಯ ಮೊದಲ ಟೆಸ್ಟ್ ಪಂದ್ಯದಲ್ಲಿ 8 ವಿಕೆಟ್‌ಗಳ ಅಮೋಘ ಜಯ ಸಾಧಿಸಿತು. ಕೇವಲ ಎರಡೇ ದಿನಗಳಲ್ಲಿ ಟೆಸ್ಟ್ ಪಂದ್ಯ ಮುಕ್ತಾಯವಾಯಿತು.

ಈ ಪಂದ್ಯದ ಮೊದಲ ಐದು ಅವಧಿಗಳಲ್ಲಿ ನಡೆದ ಮೂರು ಇನಿಂಗ್ಸ್‌ಗಳಲ್ಲಿ ವೇಗಿಗಳು ಒಟ್ಟು 30 ವಿಕೆಟ್‌ಗಳನ್ನು ಹಂಚಿಕೊಂಡರು. ಒಟ್ಟು 113 ಓವರ್‌ಗಳಲ್ಲಿ 468 ರನ್‌ಗಳು ದಾಖಲಾದವು. ಮೊದಲ ದಿನವೊಂದರಲ್ಲಿಯೇ 19 ವಿಕೆಟ್‌ಗಳು ಮತ್ತು ಎರಡನೇ ದಿನ ಚಹಾ ವಿರಾಮಕ್ಕೂ ಮುನ್ನ 11 ವಿಕೆಟ್‌ಗಳು ಪತನಗೊಂಡವು. ಇಂತಹ ಪಿಚ್‌ನಲ್ಲಿ 69 ಎಸೆತಗಳಲ್ಲಿ ಶತಕ ಹೊಡೆದ ಟ್ರಾವಿಸ್ ಹೆಡ್ ಅವರ ಆಟದಿಂದ 205 ರನ್‌ಗಳ ಗುರಿಯನ್ನು ಆಸ್ಟ್ರೇಲಿಯಾ ಸುಲಭವಾಗಿ ಮುಟ್ಟಿತು. ಉಸ್ಮಾನ್ ಖ್ವಾಜಾ ಗಾಯಗೊಂಡಿದ್ದರಿಂದ ಆತಿಥೇಯ ಪಾಳೆಯದಲ್ಲಿ ಮೂಡಿದ್ದ ಆತಂಕವನ್ನು ಹೆಡ್ (123; 83ಎಸೆತ, 4X16, 6X4) ದೂರ ಮಾಡಿದರು.

ಹೆಡ್ ಅವರು ಜೇಕ್ ವೆದರಾಲ್ಡ್ (23 ರನ್) ಅವರೊಂದಿಗೆ ಮೊದಲ ವಿಕೆಟ್‌ಗೆ 75 ರನ್ ಸೇರಿಸಿದರು. ಎರಡನೇ ವಿಕೆಟ್ ಜೊತೆಯಾಟದಲ್ಲಿ ಹೆಡ್ ಮತ್ತು ಲಾಬುಷೇನ್ (ಔಟಾಗದೇ 51; 49ಎ, 4X6, 6X1) ಅವರೊಂದಿಗೆ 117 ರನ್ ಸೇರಿಸಿದರು. ಆಸ್ಟ್ರೇಲಿಯಾದ ವಿಜಯಕ್ಕೆ 13 ರನ್‌ಗಳು ಅವಶ್ಯಕವಾಗಿದ್ದ ಸಂದರ್ಭದಲ್ಲಿ ಹೆಡ್ ಅವರು ಬ್ರೈಡನ್ ಕಾರ್ಸ್ ಬೌಲಿಂಗ್‌ನಲ್ಲಿ ಓಲಿ ಪೋಪ್‌ಗೆ ಕ್ಯಾಚ್ ಆದರು. ಲಾಬುಷೇನ್ ಸಿಕ್ಸರ್ ಹೊಡೆಯುವ ಮೂಲಕ ಗೆಲುವಿನತ್ತ ತಂಡವನ್ನು ಮುನ್ನಡೆಸಿದರು. 1921ರ ನಂತರ ಆ್ಯಷಸ್ ಸರಣಿಯ ಟೆಸ್ಟ್ ಪಂದ್ಯವೊಂದು ಎರಡೇ ದಿನಗಳಲ್ಲಿ ಮುಕ್ತಾಯವಾಗಿದ್ದು ಇದೇ ಮೊದಲು ಎಂದು ಆಸ್ಟ್ರೇಲಿಯಾ ಮಾಧ್ಯಮಗಳು ವರದಿ ಮಾಡಿವೆ.

**ಸಂಕ್ಷಿಪ್ತ ಸ್ಕೋರು:** ಮೊದಲ ಇನಿಂಗ್ಸ್: **ಇಂಗ್ಲೆಂಡ್:** 32.5 ಓವರ್‌ಗಳಲ್ಲಿ 172. **ಆಸ್ಟ್ರೇಲಿಯಾ:** 45.2 ಓವರ್‌ಗಳಲ್ಲಿ 132. ಎರಡನೇ ಇನಿಂಗ್ಸ್: **ಇಂಗ್ಲೆಂಡ್:** 34.4 ಓವರ್‌ಗಳಲ್ಲಿ 164 (ಬೆನ್ ಡಕೆಟ್ 28, ಒಲಿ ಪೋಪ್ 33, ಗಸ್ ಅಟ್ಕಿನ್ಸನ್ 37, ಬ್ರೈಡನ್ ಕಾರ್ಸ್ 20, ಮಿಚೆಲ್ ಸ್ಟಾರ್ಕ್ 55ಕ್ಕೆ3, ಸ್ಕಾಟ್ ಬೊಲ್ಯಾಂಡ್ 33ಕ್ಕೆ4, ಬ್ರೆಂಡನ್ ಡಾಜೆಟ್ 51ಕ್ಕೆ3) **ಆಸ್ಟ್ರೇಲಿಯಾ:** 28.2 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 205 (ಟ್ರಾವಿಸ್ ಹೆಡ್ 123, ಜೇಕ್ ವೆದರಾಲ್ಡ್ 23, ಮಾರ್ನಸ್ ಲಾಬುಷೇನ್ ಔಟಾಗದೇ 51, ಸ್ಟೀವನ್ ಸ್ಮಿತ್ ಔಟಾಗದೇ 2, ಬ್ರೈಡನ್ ಕಾರ್ಸ್ 44ಕ್ಕೆ2) **ಫಲಿತಾಂಶ:** ಆಸ್ಟ್ರೇಲಿಯಾ ತಂಡಕ್ಕೆ 8 ವಿಕೆಟ್ ಜಯ ಮತ್ತು ಸರಣಿಯಲ್ಲಿ 1–0 ಮುನ್ನಡೆ. **ಪಂದ್ಯದ ಆಟಗಾರ:** ಮಿಚೆಲ್ ಸ್ಟಾರ್ಕ್

## ಸುಲ್ತಾನ್ ಅಜ್ಲನ್ ಶಾ ಕಪ್ ಹಾಕಿ ಇಂದಿನಿಂದ

# ಭಾರತ ತಂಡಕ್ಕೆ ಕೊರಿಯಾ ಸವಾಲು

**ಇಪೊ, ಮಲೇಷ್ಯಾ (ಪಿಟಿಐ):** ಐದು ಸಲದ ಚಾಂಪಿಯನ್ ಭಾರತ ಹಾಕಿ ತಂಡವು ಭಾನುವಾರ ಆರಂಭವಾಗಲಿರುವ 31ನೇ ಆವೃತ್ತಿಯ ಸುಲ್ತಾನ್ ಅಜ್ಲನ್ ಶಾ ಕಪ್ ಹಾಕಿ ಟೂರ್ನಿಯಲ್ಲಿ ಕೊರಿಯಾ ತಂಡವನ್ನು ಎದುರಿಸಲಿದೆ.

ಟೂರ್ನಿಯ ಇತಿಹಾಸದಲ್ಲಿ ಅತ್ಯಧಿಕ ಪ್ರಶಸ್ತಿ ಗೆದ್ದ ತಂಡಗಳಲ್ಲಿ ಭಾರತ ಎರಡನೇ ಸ್ಥಾನದಲ್ಲಿದೆ. ನವೆಂಬರ್ 23 ರಿಂದ 30ರವರೆಗೆ ಟೂರ್ನಿ ನಡೆಯಲಿದೆ.

2019ರಲ್ಲಿ ಭಾರತ ತಂಡವು ರನ್ನರ್ಸ್ ಅಪ್ ಆಗಿತ್ತು. ಅದರ ನಂತರ ಇದೇ ಮೊದಲ ಬಾರಿಗೆ ತಂಡವು ಟೂರ್ನಿಯಲ್ಲಿ ಕಣಕ್ಕಿಳಿಯುತ್ತಿದೆ. ಈ ಬಾರಿ ಬೆಲ್ಜಿಯಂ, ಕೆನಡಾ, ಕೊರಿಯಾ, ನ್ಯೂಜಿಲೆಂಡ್ ಮತ್ತು ಆತಿಥೇಯ ಮಲೇಷ್ಯಾ ತಂಡಗಳು ಸ್ಪರ್ಧೆಯಲ್ಲಿವೆ. ರೌಂಡ್ ರಾಬಿನ್ ಮಾದರಿಯಲ್ಲಿ ಟೂರ್ನಿ ನಡೆಯಲಿದೆ. ಅಂಕಪಟ್ಟಿಯಲ್ಲಿ ಅಗ್ರ ಎರಡು ಸ್ಥಾನ ಗಳಿಸಿದ ತಂಡಗಳು ಫೈನಲ್‌ನಲ್ಲಿ ಮುಖಾಮುಖಿಯಾಗಲಿವೆ.

ಸಂಜಯ್ ನಾಯಕತ್ವದಲ್ಲಿ ಆಡುತ್ತಿರುವ ಭಾರತ ತಂಡವು ಮೊದಲ ಪಂದ್ಯದಲ್ಲಿ ಕೊರಿಯಾ (ನ.23), ಬೆಲ್ಜಿಯಂ (ನ.24), ಮಲೇಷ್ಯಾ (ನ.26), ನ್ಯೂಜಿಲೆಂಡ್ (ನ.27) ಹಾಗೂ ಕೆನಡಾ (ನ.29) ತಂಡಗಳನ್ನು ಎದುರಿಸಲಿದೆ.

ಮುಂದಿನ ವರ್ಷ ನಡೆಯಲಿರುವ ಎಫ್‌ಐಎಚ್ ಪುರುಷರ ಹಾಕಿ ವಿಶ್ವಕಪ್ ಮತ್ತು ಏಷ್ಯನ್ ಗೇಮ್ಸ್‌ಗಳಲ್ಲಿ ಆಡಲಿರುವ ಭಾರತ ತಂಡಕ್ಕೆ ಅಜ್ಲನ್ ಶಾ ಕಪ್ ಟೂರ್ನಿಯು ಪೂರ್ವಸಿದ್ಧತೆ ವೇದಿಕೆಯೂ ಆಗಿದೆ. ತಂಡದಲ್ಲಿ ಗೋಲ್‌ಕೀಪರ್‌ಗಳಾದ ಪವನ್ ಮತ್ತು ಎಚ್.ಎಸ್. ಮೋಹಿತ್ ಅವರಿದ್ದಾರೆ. ಪೂವಣ್ಣ ಚಂದೂರಾ ಬಾಬಿ, ನೀಲಂ ಸಂಜೀಪ್ ಸೆಸ್, ಯಶದೀಪ್ ಸಿವಾಚ್, ಜುಗರಾಜ್ ಸಿಂಗ್, ಅಮಿತ್ ರೋಹಿದಾಸ್ ಮತ್ತು ನಾಯಕ ಸಂಜಯ್ ಅವರು ರಕ್ಷಣಾ ವಿಭಾಗದಲ್ಲಿದ್ದಾರೆ. ರಾಜಿಂದರ್ ಸಿಂಗ್, ರಾಜಕುಮಾರ್ ಪಾಲ್, ನೀಲಕಂಠ ಶರ್ಮಾ, ರವಿಚಂದ್ರ ಸಿಂಗ್ ಮೋಯಿರಾಂಗ್ತೇಮ್, ವಿವೇಕ್ ಸಾಗರ್ ಪ್ರಸಾದ್ ಹಾಗೂ ಮೊಹಮ್ಮದ್ ರಾಹಿಲ್ ಮೌಸಿನ್ ಅವರು ಮಿಡ್‌ಫೀಲ್ಡ್‌ನಲ್ಲಿ ಆಡಲಿದ್ದಾರೆ. ಸುಖಜೀತ್ ಸಿಂಗ್, ಶಿಲಾನಂದ ಲಾಕ್ರಾ, ಸೆಲ್ವಮ್ ಕಾರ್ತಿ, ಆದಿತ್ಯ ಅರ್ಜುನ್ ಲಾಳಗೆ, ದಿಲ್‌ಪ್ರೀತ್ ಸಿಂಗ್ ಮತ್ತು ಅಭಿಷೇಕ್ ಫಾರ್ವರ್ಡ್‌ನಲ್ಲಿದ್ದಾರೆ.


ಭಾರತ ಹಾಕಿ ತಂಡದ ಆಟಗಾರ ಅಮಿತ್ ರೋಹಿದಾಸ್

ಪೂರ್ಣಾವಧಿ ನಾಯಕ ಹರ್ಮನ್‌ಪ್ರೀತ್ ಸಿಂಗ್, ಮನಪ್ರೀತ್ ಸಿಂಗ್ ಮತ್ತು ಇನ್ನೂ ಕೆಲವು ಪ್ರಮುಖ ಆಟಗಾರರಿಗೆ ವಿಶ್ರಾಂತಿ ನೀಡಲಾಗಿದೆ. ಬೆಂಗಳೂರಿನಲ್ಲಿ ನಡೆದಿದ್ದ ತರಬೇತಿ ಶಿಬಿರದಲ್ಲಿ ಕೋಚ್ ಕ್ರೇಗ್ ಫುಲ್ಟನ್ ಅವರ ಮಾರ್ಗದರ್ಶನದಲ್ಲಿ ತಂಡವು ಅಭ್ಯಾಸ ಮಾಡಿತ್ತು.

## ಚಿನ್ನಕ್ಕೆ ಗುರಿಯಿಟ್ಟ ಮಹಿತ್ ಸಂಧು


ಭಾರತದ ಶೂಟರ್ ಮಹಿತ್ ಸಂಧು

**ನವದೆಹಲಿ (ಪಿಟಿಐ):** ಭಾರತದ ಶೂಟರ್ ಮಹಿತ್ ಸಂಧು ಅವರು ಟೋಕಿಯೊದಲ್ಲಿ ನಡೆಯುತ್ತಿರುವ 25ನೇ ಡೆಫಿಲಿಂಪಿಕ್ಸ್‌ನಲ್ಲಿ (ಶ್ರವಣದೋಷವಿರುವವರಿಗೆ ನಡೆಯುವ ಕ್ರೀಡೆ) ಮಹಿಳೆಯರ 50 ಮೀಟರ್ ರೈಫಲ್ 3 ಪೊಸಿಷನ್ಸ್‌ನಲ್ಲಿ ಚಿನ್ನದ ಪದಕ ಗೆದ್ದರು.

ತನ್ನ ಚೊಚ್ಚಲ ಡೆಫಿಲಿಂಪಿಕ್ಸ್‌ನಲ್ಲಿ ಅದ್ಭುತ ಸಾಧನೆ ಮುಂದುವರಿಸಿರುವ 21 ವರ್ಷದ ಮಹಿತ್ ಅವರಿಗೆ ನಾಲ್ಕನೇ ಪದಕ ಇದಾಗಿದೆ. 45 ಶಾಟ್‌ಗಳಲ್ಲಿ ಒಟ್ಟು 456.0 ಅಂಕಗಳನ್ನು ಗಳಿಸಿದ ಮಹಿತ್ ಕೂಟದಲ್ಲಿ ಎರಡನೇ ಚಿನ್ನ ಗೆದ್ದರು. ದಕ್ಷಿಣ ಕೊರಿಯಾದ ಡೈನ್ ಜಿಯೋಂಗ್ (453.5) ಬೆಳ್ಳಿ ಪದಕ ಗೆದ್ದರೆ, ಹಂಗರಿಯ ಮೀರಾ ಝುಜ್ಸನ್ನಾ (438.6) ಕಂಚಿನ ಪದಕ ಪಡೆದರು.

ಮಹಿತ್ ಅರ್ಹತಾ ಸುತ್ತಿನಲ್ಲಿ ತಮ್ಮದೇ ವಿಶ್ವದಾಖಲೆ ಉತ್ತಮಗೊಳಿಸಿದರು. ಒಟ್ಟು 585 ಅಂಕ ಸಂಪಾದಿಸಿದ ಅವರು ಕಳೆದ ವರ್ಷ ವಿಶ್ವ ಶೂಟಿಂಗ್ (ಶ್ರವಣದೋಷವುಳ್ಳವರ) ಚಾಂಪಿಯನ್‌ಷಿಪ್‌ನಲ್ಲಿ ತಾವೇ ನಿರ್ಮಿಸಿದ್ದ (576) ದಾಖಲೆ ಸುಧಾರಿಸಿದರು.

ಕೂಟದಲ್ಲಿ ಭಾರತದ ಶೂಟರ್‌ಗಳು ಈವರೆಗೆ ಐದು ಚಿನ್ನ, ಆರು ಬೆಳ್ಳಿ ಮತ್ತು ಮೂರು ಕಂಚು ಸೇರಿ ಒಟ್ಟು 14 ಪದಕಗಳನ್ನು ಗೆದ್ದಿದ್ದಾರೆ.

### ಚಿಟಿಕೆ ಸುದ್ದಿ

#### ಅಂಧ ಮಹಿಳಾ ಟಿ20 ವಿಶ್ವಕಪ್: ಫೈನಲ್‌ಗೆ ಭಾರತ ತಂಡ

**ಕೊಲಂಬೊ (ಎಎಫ್‌ಪಿ):** ಭಾರತ ತಂಡ, ಅಂಧ ಮಹಿಳಾ ಚೊಚ್ಚಲ ಟಿ20 ವಿಶ್ವಕಪ್ ಟೂರ್ನಿಯ ಸೆಮಿಫೈನಲ್ ಪಂದ್ಯದಲ್ಲಿ ಶನಿವಾರ 9 ವಿಕೆಟ್‌ಗಳಿಂದ ಆಸ್ಟ್ರೇಲಿಯಾ ತಂಡವನ್ನು ಸೋಲಿಸಿತು.

ಭಾನುವಾರ ಪಿ.ಸರವಣ ಮುತ್ತು ಕ್ರೀಡಾಂಗಣದಲ್ಲಿ ನಡೆಯಲಿರುವ ಫೈನಲ್‌ನಲ್ಲಿ ನೇಪಾಳ ತಂಡವನ್ನು ಎದುರಿಸಲಿದೆ. ನೇಪಾಳ ಇನ್ನೊಂದು ಸೆಮಿಫೈನಲ್‌ನಲ್ಲಿ ಪಾಕಿಸ್ತಾನ ತಂಡವನ್ನು ಏಳು ವಿಕೆಟ್‌ಗಳಿಂದ ಸೋಲಿಸಿತು.

ಆಸ್ಟ್ರೇಲಿಯಾ 20 ಓವರುಗಳಲ್ಲಿ 9 ವಿಕೆಟ್‌ಗೆ 109 ರನ್ ಗಳಿಸಿತು. ಆಸ್ಟ್ರೇಲಿಯಾ ತಂಡದ ಆರು ಮಂದಿ ರನೌಟ್ ಆದರು. ಭಾರತ ತಂಡದ ಪರ ಬಸಂತಿ 45 ರನ್ ಗಳಿಸಿ ಗರಿಷ್ಠ ಸ್ಕೋರರ್ ಎನಿಸಿದರು. ಕೆ.ಕರುಣಾ 16 ರನ್ ಗಳಿಸಿದ್ದು, ಭಾರತ 11.5 ಓವರುಗಳಲ್ಲಿ 1 ವಿಕೆಟ್‌ಗೆ 112 ರನ್ ಬಾರಿಸಿತು.

#### ವಿಶ್ವಕಪ್ ಸ್ನೂಕರ್ ಭಾರತ ಎ ಫೈನಲ್‌ಗೆ

**ಮಸ್ಕತ್ (ಪಿಟಿಐ):** ಅಮೋಘ ಆಟ ಪ್ರದರ್ಶಿಸಿದ ಭಾರತ ಎ ತಂಡವು ಶನಿವಾರ ನಡೆದ ಸ್ನೂಕರ್ ವಿಶ್ವಕಪ್‌ನ ಸೆಮಿಫೈನಲ್‌ನಲ್ಲಿ 3–1ರಿಂದ ಪಾಕಿಸ್ತಾನವನ್ನು ಮಣಿಸಿ ಪ್ರಶಸ್ತಿ ಸುತ್ತಿಗೆ ಲಗ್ಗೆಯಿಟ್ಟಿತು.

ಕ್ವಾರ್ಟರ್ ಫೈನಲ್‌ನಲ್ಲಿ ಭಾರತ ಎ ತಂಡವು 3–0ಯಿಂದ ಫ್ರಾನ್ಸ್ ವಿರುದ್ಧ ಗೆಲುವು ಸಾಧಿಸಿತ್ತು. ಪಾಕ್ ತಂಡವು 3–0ಯಿಂದ ಕತಾರ್ ವಿರುದ್ಧ ಜಯ ಗಳಿಸಿತ್ತು.

#### ಸಂತೋಷ್ ಟ್ರೋಫಿ ಬೆಂಗಳೂರು ಆತಿಥ್ಯ

**ಬೆಂಗಳೂರು:** ಸಂತೋಷ್ ಟ್ರೋಫಿ ಫುಟ್‌ಬಾಲ್ ಟೂರ್ನಿಯ 79ನೇ ಆವೃತ್ತಿಯ ಅರ್ಹತಾ ಸುತ್ತಿನ ಕೆಲವು ಪಂದ್ಯಗಳು ಡಿಸೆಂಬರ್ 20ರಿಂದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆಯಲಿದೆ.

ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆಯ ಆತಿಥ್ಯದಲ್ಲಿ ‘ಎಚ್’ ಗುಂಪಿನ ಪಂದ್ಯಗಳು ನಗರದಲ್ಲಿ ನಡೆಯಲಿವೆ. ಆತಿಥೇಯ ಕರ್ನಾಟಕ, ಸರ್ವಿಸಸ್, ಗೋವಾ ಮತ್ತು ಲಕ್ಷದ್ವೀಪ ತಂಡಗಳು ಈ ಗುಂಪಿನಲ್ಲಿವೆ.

#### ಹಾಕಿ: ಹೊಯ್ಸಳ ತಂಡಕ್ಕೆ ಗೆಲುವು

**ಬೆಂಗಳೂರು:** ರಿತೇಶ್ ಗಳಿಸಿದ ಎರಡು ಗೋಲುಗಳ ನೆರವಿನಿಂದ ಹೊಯ್ಸಳ ಹಾಕಿ ಕ್ಲಬ್ ತಂಡವು ಶನಿವಾರ ಕೆಎಸ್‌ಎಚ್‌ಎ ಸಿ ಡಿವಿಷನ್ ಹಾಕಿ ಲೀಗ್‌ನ ಪಂದ್ಯದಲ್ಲಿ 3–1ರಿಂದ ಫೆಂಡ್ಸ್ ಹಾಕಿ ಕ್ಲಬ್ ಕಲಬುರಗಿ ತಂಡವನ್ನು ಮಣಿಸಿತು.

ದಿನದ ಮತ್ತೊಂದು ಪಂದ್ಯದಲ್ಲಿ ಗೇಮ್ ಆನ್ ಹಾಕಿ ಕ್ಲಬ್ ತಂಡವು 2–0ಯಿಂದ ಡೈನಮೈಟ್ಸ್ ಯುನೈಟೆಡ್ ಹಾಕಿ ಕ್ಲಬ್ ತಂಡವನ್ನು ಮಣಿಸಿತು.

## ಆಸ್ಟ್ರೇಲಿಯನ್ ಓಪನ್: ಲಕ್ಷ್ಯ ಫೈನಲ್‌ಗೆ

**ಸಿಡ್ನಿ (ಪಿಟಿಐ):** ವಿಶ್ವದ ಆರನೇ ಕ್ರಮಾಂಕದ ಆಟಗಾರ ಚೌ ಟಿಯೆನ್ ಚೆನ್ ಅವರನ್ನು ಮೂರು ಗೇಮ್‌ಗಳ ಹೋರಾಟದಲ್ಲಿ ಸೋಲಿಸಿದ ಭಾರತದ ಲಕ್ಷ್ಯ ಸೇನ್ ಅವರು ಶನಿವಾರ ಆಸ್ಟ್ರೇಲಿಯನ್ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಫೈನಲ್‌ಗೆ ಲಗ್ಗೆಯಿಟ್ಟರು.

ಗಟ್ಟಿ ಮನೋಬಲ ಪ್ರದರ್ಶಿಸಿದ ಲಕ್ಷ್ಯ, ಎರಡನೇ ಗೇಮ್‌ನಲ್ಲಿ ಮೂರು ಬಾರಿ ಮ್ಯಾಚ್ ಪಾಯಿಂಟ್ ಉಳಿಸುವಲ್ಲಿ ಯಶಸ್ವಿಯಾದರಲ್ಲದೇ, ತೈವಾನ್‌ನ 35 ವರ್ಷ ಎದುರಾಳಿಯ ವಿರುದ್ಧದ ಸೆಮಿ ಫೈನಲ್ ಪಂದ್ಯವನ್ನು 17–21, 24–22, 21–16 ರಿಂದ ಗೆದ್ದುಕೊಂಡರು.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದ ಲಕ್ಷ್ಯ ಸೇನ್ ಗೆಲ್ಲಲು 86 ನಿಮಿಷ ತೆಗೆದುಕೊಂಡರು.

24 ವರ್ಷದ ಲಕ್ಷ್ಯ ಭಾನುವಾರ ಫೈನಲ್‌ನಲ್ಲಿ ಜಪಾನ್‌ನ ಯುಶಿ ತನಾಕ ಅವರನ್ನು ಎದುರಿಸಲಿದ್ದಾರೆ. ಭಾರತದ ಆಟಗಾರ ಈ ವರ್ಷ ಒಂದೂ ಪ್ರಶಸ್ತಿ ಗೆಲ್ಲುವಲ್ಲಿ ಯಶಸ್ವಿಯಾಗಿಲ್ಲ. ಹಾಂಗ್‌ಕಾಂಗ್ ಓಪನ್‌ನಲ್ಲಿ ಫೈನಲ್ ತಲುಪಿದ್ದೇ ಈ ವರ್ಷದ ಇದುವರೆಗಿನ ಅವರ ಸಾಧನೆಯೆನಿಸಿದೆ.

ತನಾಕ ಇನ್ನೊಂದು ಸೆಮಿಫೈನಲ್‌ನಲ್ಲಿ ತೈವಾನ್‌ನ ಆಟಗಾರ ಲಿನ್ ಚುನ್ ಯಿ ಅವರನ್ನು 21–18, 21–15 ರಿಂದ ಸೋಲಿಸಿದರು.


ಭಾರತದ ಲಕ್ಷ್ಯ ಸೇನ್ ಎಎಫ್‌ಪಿ ಫೈಲ್ ಚಿತ್ರ

## ವಿಶ್ವ ರ‍್ಯಾಪಿಡ್, ಬ್ಲಿಟ್ಝ್ ಚೆಸ್: ವಸ್ತ್ರಸಂಹಿತೆ ಸಡಿಲಿಕೆ

**ನವದೆಹಲಿ (ಪಿಟಿಐ):** ದೋಹಾದಲ್ಲಿ ಡಿಸೆಂಬರ್ 25 ರಿಂದ 30ರವರೆಗೆ ನಡೆಯಲಿರುವ ವಿಶ್ವ ರ‍್ಯಾಪಿಡ್ ಮತ್ತು ಬ್ಲಿಟ್ಝ್ ಚಾಂಪಿಯನ್‌ಷಿಪ್‌ನಲ್ಲಿ ಉಡುಪು ಸಂಹಿತೆಯನ್ನು ಸಡಿಲಿಸಿರುವುದಾಗಿ ಅಂತರರಾಷ್ಟ್ರೀಯ ಚೆಸ್ ಫೆಡರೇಷನ್ (ಫಿಡೆ) ಪ್ರಕಟಿಸಿದೆ.

2024ರಲ್ಲಿ ಇದೇ ಚಾಂಪಿಯನ್‌ಷಿಪ್ ವೇಳೆ ನೀಲಿ ಜೀನ್ಸ್ ಧರಿಸಿ ಆಟವಾಡಲು ಬಂದಿದ್ದಕ್ಕೆ ಮಾಜಿ ವಿಶ್ವ ಚಾಂಪಿಯನ್ ಮ್ಯಾಗ್ನಸ್ ಕಾರ್ಲ್‌ಸನ್ ಅವರನ್ನು ಚೀಫ್ ಆರ್ಬಿಟರ್ (ಮುಖ್ಯ ತೀರ್ಪುಗಾರ) ಅವರು ಹೊರಕಳಿಸಿದ್ದರು. ಪ್ಯಾಂಟ್ ಬದಲಿಸಿಕೊಂಡು ಬರಲು ನೀಡಿದ ಅವಕಾಶ ಒಪ್ಪದ ಕಾರ್ಲ್‌ಸನ್ ಟೂರ್ನಿ ಬಹಿಷ್ಕರಿಸಿದ್ದರು. ಇದು ಚರ್ಚೆಗೊಳಗಾಗಿ ಈ ಪ್ರಕರಣ ‘ಜೀನ್ಸ್ ಗೇಟ್’ ಎಂಬ ಹೆಸರು ಪಡೆಯಿತು.

ಕಡುಬಣ್ಣದ ಪ್ಯಾಂಟ್‌ಗಳನ್ನು ಧರಿಸಲು, ನೀಲಿ, ಕಪ್ಪು, ಬೂದು ಬಣ್ಣದ ಜೀನ್ಸ್ ಪ್ಯಾಂಟ್, ಟೀ ಶರ್ಟ್ ಧರಿಸಲು ಅವಕಾಶ ನೀಡಲಾಗಿದೆ. ಸೂಟು, ಏಕಬಣ್ಣದ ಶರ್ಟು ಧರಿಸಲೂ ಅವಕಾಶವಿದೆ. ಆಟಗಾರ್ತಿಯರಿಗೆ ಜೀನ್ಸ್, ಕಡುಬಣ್ಣದ ಸ್ಕರ್ಟ್, ಪ್ಯಾಂಟ್ ಧರಿಸಿ ಬರಲು ಅವಕಾಶವಿದೆ.

ಆದರೆ ಉಡುಪುಗಳು ಶುಭ್ರವಾಗಿರಬೇಕು. ಪ್ರಚೋದನಕಾರಿ ಬರಹ ಇರಬಾರದು. ಲೋಗೊ ಇರುವಂತಿಲ್ಲ. ಬೇಸ್‌ಬಾಲ್ ಕ್ಯಾಪ್, ಶಾರ್ಟ್‌ಗಳನ್ನು ಧರಿಸುವಂತಿಲ್ಲ. ಬೀಚ್‌ಗೆ ಹೋಗುವಾಗ ತೊಡುವ ದೊಗಲೆ ಉಡುಪು ನಿಷೇಧಿಸಲಾಗಿದೆ.

## ಟಿಟಿ: ಗೌರವ್, ಹಿಯಾ, ರಾಶಿಗೆ ಕಿರೀಟ

ಪ್ರಜಾವಾಣಿ ವಾರ್ತೆ

**ಧಾರವಾಡ:** ಬೆಂಗಳೂರಿನ ಗೌರವ್ ಗೌಡ ಮತ್ತು ಹಿಯಾ ಸಿಂಗ್ ಅವರು ಶನಿವಾರ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ 17 ವರ್ಷದೊಳಗಿನ ಬಾಲಕ ಮತ್ತು ಬಾಲಕಿಯರ ಸಿಂಗಲ್ಸ್ ಪ್ರಶಸ್ತಿ ಗೆದ್ದರು.

ಕಾಸ್ಮೋಸ್ ಕ್ಲಬ್ ಆಯೋಜಿಸಿರುವ ಟೂರ್ನಿಯಲ್ಲಿ ಗೌರವ್ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ 14-12, 11-4, 7-11, 8-11, 11-8ರಿಂದ ಆರ್ಯ ಎ.ಜೈನ್ ಅವರನ್ನು ಸೋಲಿಸಿದರು.

ಸೆಮಿಫೈನಲ್‌ನಲ್ಲಿ ಗೌರವ್ 9-11, 11-8, 11-5, 8-11, 11-8ರಿಂದ ತಮೋಘ್ನ ವಿರುದ್ಧ; ಆರ್ಯ 9-11, 16-14, 11-6, 11-8ರಿಂದ ವೇದಾಂತ್ ವಸಿಷ್ಠ ವಿರುದ್ಧ ಗೆಲುವು ಸಾಧಿಸಿದ್ದರು.

ಬಾಲಕಿಯರ ಫೈನಲ್‌ನಲ್ಲಿ ಹಿಯಾ ಸಿಂಗ್ 11-7, 8-11, 11-4, 11-7ರಿಂದ ಐರಿನ್ ಸುಭಾಷ್ ಅವರನ್ನು ಮಣಿಸಿದರು. ಸೆಮಿಫೈನಲ್‌ನಲ್ಲಿ ಹಿಯಾ 11-3, 11-3, 11-2ರಿಂದ ದೀಕ್ಷಿತಾ ಪಿ.ನಾಯಕ್ ಎದುರು; ಐರಿನ್ 11-9, 11-4, 4-11, 11-8ರಿಂದ ಸುಮೇದಾ ಕೆ.ಎಸ್.ಭಟ್ ಎದುರು ಜಯ ಗಳಿಸಿದ್ದರು.

**ರಾಶಿಗೆ ಪ್ರಶಸ್ತಿ:** ಬೆಂಗಳೂರಿನ ರಾಶಿ ವಿ.ರಾವ್ ಅವರು 19 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್‌ನಲ್ಲಿ ಚಾಂಪಿಯನ್ ಆದರು. ರಾಶಿ ಫೈನಲ್ ನಲ್ಲಿ 11-5, 8-11, 11-9, 16-14, 11-13, 11-8ರಿಂದ ಶಿವಾನಿ ಮಹೇಂದ್ರನ್ ಅವರನ್ನು ಸೋಲಿಸಿದರು.



ಪ್ರಶಸ್ತಿಯೊಂದಿಗೆ ಹಿಯಾ ಸಿಂಗ್, ಗೌರವ್ ಗೌಡ ಮತ್ತು ರಾಶಿ ವಿ.ರಾವ್

## ಚೆಸ್: ಸೆಮಿ ಪಂದ್ಯಗಳು ಟೈಬ್ರೇಕರ್‌ಗೆ

**ಪಣಜಿ (ಪಿಟಿಐ):** ಫಿಡೆ ವಿಶ್ವಕಪ್ ಚೆಸ್ ಟೂರ್ನಿಯಲ್ಲಿ ಶನಿವಾರವು ತುಸು ನೀರಸ ದಿನವಾಗಿ ದಾಖಲಾಯಿತು. ಏಕೆಂದರೆ ಚೀನಾದ ವೀ ಯಿ ಮತ್ತು ಉಜ್ಬೇಕಿಸ್ತಾನದ ಜಾವೊಕೀರ್ ಸಿಂದರೋವ್ ತಮ್ಮ ಎದುರಾಳಿಗಳ ವಿರುದ್ಧ ಹೆಚ್ಚಿನ ‘ಸಾಹಸ’ಕ್ಕೆ ಮನಸ್ಸು ಮಾಡಲಿಲ್ಲ. ಅದರಿಂದಾಗಿ ಸೆಮಿಫೈನಲ್‌ನ ಎರಡನೇ ಗೇಮ್‌ನಲ್ಲಿ ಅವರು ಡ್ರಾ ಮಾಡಿಕೊಂಡರು.

ಬಿಳಿಕಾಯಿಗಳೊಂದಿಗೆ ಆಡಿದ ವೀ ಯೀ ಅವರು ರಷ್ಯಾದ ಆ್ಯಂಡ್ರೆ ಎಸಿಪೆಂಕೊ ಎದುರು ಒಂದಿಷ್ಟು ಹೊತ್ತು ತಮ್ಮ ಸಾಮರ್ಥ್ಯ ಮೆರೆದರು.

ಇನ್ನೊಂದು ಗೇಮ್‌ನಲ್ಲಿ ಉಜ್ಬೇಕಿಸ್ತಾನದ ಸಿಂದರೋವ್ ಮತ್ತು ಅವರದೇ ದೇಶದ ನಾದಿರ್‌ಬೆಕ್ ಯಾಕೂಬ್ಬೋವ್ ಎದುರು ಡ್ರಾ ಮಾಡಿಕೊಂಡರು. ಫಲಿತಾಂಶ ನಿರ್ಣಯಕ್ಕೆ ಭಾನುವಾರ ಕಾಲಮಿತಿಯ ಟೈಬ್ರೇಕರ್ ನಡೆಯಲಿದೆ.

## ಬೆಂಗಳೂರಿಗೆ ಸಮಗ್ರ ಪ್ರಶಸ್ತಿ

**ಶಿರಸಿ:** ಬೆಂಗಳೂರು ತಂಡವು ಇಲ್ಲಿ ನಡೆದ ಶ್ರವಣದೋಷವುಳ್ಳವರ 15ನೇ ರಾಜ್ಯಮಟ್ಟದ ಕ್ರೀಡಾಕೂಟದಲ್ಲಿ ಸಮಗ್ರ ಪ್ರಶಸ್ತಿ ಜಯಿಸಿತು. ತಂಡವು ಒಟ್ಟು 173 ಅಂಕ ಗಳಿಸಿ, ಕಿರೀಟ ಧರಿಸಿತು. ಆತಿಥೇಯ ಉತ್ತರ ಕನ್ನಡ ಜಿಲ್ಲಾ ತಂಡ 96 ಅಂಕಗಳೊಂದಿಗೆ ದ್ವಿತೀಯ ಸ್ಥಾನ ಪಡೆಯಿತು.

18 ವರ್ಷದೊಳಗಿನ ಬಾಲಕರ ವಾಲಿಬಾಲ್‌ನಲ್ಲಿ ದಕ್ಷಿಣ ಕನ್ನಡ ಪ್ರಥಮ, ಮೈಸೂರು ದ್ವಿತೀಯ ಹಾಗೂ ಕೊಡಗು ತೃತೀಯ ಸ್ಥಾನ ಗಳಿಸಿವೆ. ಜೂನಿಯರ್ ವಿಭಾಗದ ವಾಲಿಬಾಲ್‌ನಲ್ಲಿ ಮೈಸೂರು ಪ್ರಥಮ, ಬೆಂಗಳೂರು ದ್ವಿತೀಯ, ಮಂಡ್ಯ ತೃತೀಯ ಸ್ಥಾನ ಪಡೆದಿವೆ.

ಜೂನಿಯರ್ ಮಹಿಳೆಯರ ವಾಲಿಬಾಲ್‌ನಲ್ಲಿ ಬೆಂಗಳೂರು ಚಿನ್ನ, ತುಮಕೂರು ಬೆಳ್ಳಿ, ಮಂಡ್ಯ ಕಂಚು ಗೆದ್ದವು. ಪುರುಷರ ವಿಭಾಗದ ಉತ್ತಮ ಕ್ರೀಡಾಪಟುವಾಗಿ ಉತ್ತರ ಕನ್ನಡದ ಸೂರ್ಯ ಮರಾಠಿ ಹೊರಹೊಮ್ಮಿದ್ದು, 200 ಮೀ., 400 ಮೀ.ಓಟ ಹಾಗೂ ಚಕ್ರ ಎಸೆತ ಸ್ಪರ್ಧೆಯಲ್ಲಿ ಚಿನ್ನ ಗೆದ್ದಿದ್ದಾರೆ. ಮಹಿಳಾ ವಿಭಾಗದ ಪ್ರಶಸ್ತಿಯನ್ನು ದಕ್ಷಿಣ ಕನ್ನಡದ ಹರ್ಷಿತಾ ರವೀಂದ್ರ ಗೆದ್ದಿದ್ದು, ಅವರು ಹೈಜಂಪ್ ಮತ್ತು 100 ಮೀಟರ್ ಓಟದಲ್ಲಿ ಚಿನ್ನ ಹಾಗೂ ಶಾಟ್‌ಪಟ್‌ನಲ್ಲಿ ಬೆಳ್ಳಿ ಪದಕ ಜಯಿಸಿದ್ದಾರೆ.

### ಕೋಲ್ಕತ್ತ ರೇಸ್

#### ಮಿಸ್ಟಿ ಗೆಲ್ಲುವ ನಿರೀಕ್ಷೆ

ರಾಯಲ್ ವೆಸ್ಟ್ರನ್ ಇಂಡಿಯಾ ಟರ್ಫ್ ಕ್ಲಬ್ ಲಿಮಿಟೆಡ್ ಕಪ್ ಭಾನುವಾರದ ಕೋಲ್ಕತ್ತ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಮಿಸ್ಟಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಹರ್ಮೀಸ್ 1, ಮೇಡ್ ಇನ್ ಹೆವೆನ್ 2, ಲೈನ್‌ಅಂಡ್‌ಕಲೆಕ್ಟ್ 6
2ನೇ ರೇಸ್: ಬ್ಲ್ಯಾಕ್ ಡೈಮಂಡ್ 5, ಜೀನ್ ಲಾಫೆಟ್ 6, ಓಷಿಕ 1
3ನೇ ರೇಸ್: ಮೋಸ್ಟ್ ಅಂಡ್ ಮೋರ್ 4, ಇಂಪ್ರೆಸಿವ್ ಆನಿ 1, ಎನ್‌ಆರ್‌ಐ ಫಾಂಟಸಿ 12
4ನೇ ರೇಸ್: ಮಲ್ಟಿ ಸಕ್ಸಸ್ 2, ಸನಾಯ 5, ಲಾಮಿಕ 8
5ನೇ ರೇಸ್: ಚರಿಸ್ಮಾಟಿಕ್ 5, ಸ್ನೋಪಿಯರ್ಸರ್ 3, ಭರತ್ 2
6ನೇ ರೇಸ್: ಮಿಸ್ಟಿ 8, ರಫೆಲೊ 2, ಸುಪ್ರೀಮ್ ಗ್ರ್ಯಾಂಡಿಯೂರ್ 3
7ನೇ ರೇಸ್: ಪಂಟಾಜಿ 1, ಅಭಿಕಂದ್ರ 4, ಡ್ಯಾನ್ಸ್ ಅಲಾಂಗ್ 5

**ಉತ್ತಮ ಬೆಟ್: ಸನಾಯ**

| ಜಾಕ್‌ಪಾಟ್‌ಗೆ | 1ನೇ ಟ್ರಿಬಲ್ | 2ನೇ ಟ್ರಿಬಲ್ |
|---|---|---|
| 3,4,5,6,7 | 2,3,4 | 5,6,7 |

## ಮಲ್ಲಂದೂರಿನಲ್ಲಿ ಮಲೆನಾಡು ಅಲ್ಟ್ರಾ ಟ್ರೇಲ್ ರೇಸ್: ಓಟಗಾರರ ಸಂಭ್ರಮ

# ತಂಪು ಮುಂಜಾವಿನಲ್ಲಿ ಚಿಮ್ಮಿದ ಉತ್ಸಾಹ

• ವಿಕ್ರಂ ಕಾಂತಿಕೆರೆ

**ಚಿಕ್ಕಮಗಳೂರು:** ಶರದ್ಕಾಲದ ಥಂಡಿ ಇಲ್ಲಿ ಇನ್ನೂ ಮೈಕೊರೆಯುವ ಮಟ್ಟಕ್ಕೆ ತಲುಪಿಲ್ಲ. ತಂಗಾಳಿ ತೀಡುತ್ತಿದ್ದ ಹಿತವಾದ ವಾತಾವರಣದಲ್ಲಿ ಚಿಮ್ಮುವ ಉತ್ಸಾಹದೊಂದಿಗೆ 'ಟ್ರ್ಯಾಕ್'ಗೆ ಇಳಿದ ಓಟಗಾರರು ಸವಾಲಿನ ದಾರಿಯಲ್ಲಿ ಎದೆಗುಂದದೆ ಸಾಗಿದರು.

ಚಿಕ್ಕಮಗಳೂರು ಗಾಲ್ಫ್ ಕ್ಲಬ್ ಮತ್ತು ಅಮೆರಿಕದ ಟೆಕಿಯಾನ್ ಸಂಸ್ಥೆಯ ಸಹಯೋಗದಲ್ಲಿ ಬೆಂಗಳೂರಿನ ಜಿರಿಮ್ ಸಂಸ್ಥೆ ಆಯೋಜಿಸಿರುವ ಮಲೆನಾಡು ಅಲ್ಟ್ರಾ ಟ್ರೇಲ್ ರೇಸ್ ಚಂದ್ರದ್ರೋಣ ಪರ್ವತ ಸಾಲುಗಳ ಆಸುಪಾಸಿನಲ್ಲಿ ಶನಿವಾರವಿಡೀ ರೋಮಾಂಚಕ ವಾತಾವರಣ ಸೃಷ್ಟಿಸಿತು.

ಸಹ್ಯಾದ್ರಿ ಸಾನುವಿನ ಮುತ್ತೋಡಿ ರಕ್ಷಿತಾರಣ್ಯಕ್ಕೆ ಹೊಂದಿಕೊಂಡಿರುವ ಪ್ರಕೃತಿ ಸೊಗಯಿಸುವ ಮಲ್ಲಂದೂರು ಗ್ರಾಮದ ನವಗ್ರಾಮ ಕ್ರಿಕೆಟ್ ಮೈದಾನದಲ್ಲಿ ಬೆಳಕು ಹರಿಯುವ ಮೊದಲೇ ಕ್ರೀಡಾಸಕ್ತರ ಕಲರವ. 100 ಕಿಲೊಮೀಟರ್, 50 ಕಿ.ಮೀ ಮತ್ತು 30 ಕಿ.ಮೀ ಓಟ ಆರಂಭಗೊಂಡದ್ದು ಇಲ್ಲಿಂದಲೇ, ಮುಗಿದದ್ದೂ ಇಲ್ಲೇ.

ಮೊದಲು, 6.30ಕ್ಕೆ ಹಸಿರು ನಿಶಾನೆ ಸಿಕ್ಕಿದ್ದು 100 ಕಿ.ಮೀ ಓಟಕ್ಕೆ. ಹಗಲು ಮತ್ತು ರಾತ್ರಿ ಓಡಬೇಕಾಗಿರುವ ಈ ವಿಭಾಗದಲ್ಲಿ 113 ಮಂದಿ ಛಲದಿಂದ ಕಣಕ್ಕೆ ಇಳಿದಿದ್ದರು. 344 ಮಂದಿ ಭಾಗವಹಿಸಿದ್ದ 50 ಕಿ.ಮೀ ಓಟ 7 ಗಂಟೆಗೆ ಆರಂಭವಾಯಿತು. ಇದರ ಬೆನ್ನಲ್ಲೇ ಅತಿ ಹೆಚ್ಚು, 550 ಮಂದಿ ಪಾಲ್ಗೊಂಡ 30 ಕಿ.ಮೀ ಓಟಕ್ಕೆ ಚಾಲನೆ ದೊರಕಿತು. ಬೆಳಗಿನ ಎಲ್ಲ ಓಟಗಳಿಗೂ ಟೆಕಿಯಾನ್ ಚೀಫ್ ಪೀಪಲ್ ಆಫೀಸರ್ ರಾಣಾ ರೊಬಿಲಾರ್ಡ್ ಚಾಲನೆ ನೀಡಿದರು.

50 ಕಿ.ಮೀ ರಾತ್ರಿ ಓಟ ಸಂಜೆ 4.30ಕ್ಕೆ ಆರಂಭಗೊಂಡಿತು. ಇದರಲ್ಲಿ ಪಾಲ್ಗೊಂಡವರು 45 ಮಂದಿ. 30 ಕಿ.ಮೀಗೆ ಮಧ್ಯಾಹ್ನ 2 ಗಂಟೆ, 50 ಕಿ.ಮೀಗೆ ಮಧ್ಯಾಹ್ನ 3 ಗಂಟೆ, 100 ಕಿ.ಮೀ ಹಾಗೂ ರಾತ್ರಿ ಓಟಕ್ಕೆ ಭಾನುವಾರ ಮುಂಜಾನೆ 3 ಗಂಟೆ ಕಟ್ ಆಫ್ ಸಮಯ ನಿಗದಿ. ಈ ಅವಧಿಯಲ್ಲಿ ಓಟ ಮುಗಿಸಿದವರಿಗೆ ಪದಕದ ಗೌರವ.

**ಭಾವುಕ ಕ್ಷಣಗಳು:** ಸಾಹಸಮಯ ರಾತ್ರಿ ಓಟಕ್ಕೆ ಕ್ರೀಡಾಪಟುಗಳು ಸಜ್ಜಾಗುತ್ತಿದ್ದಂತೆ ವಾತಾವರಣವಿಡೀ ಭಾವುಕವಾಯಿತು. ಕೆಲವು ಓಟಗಾರರ ಮನೆಮಂದಿ ಆತಂಕದಿಂದ ಅಪ್ಪಿಕೊಂಡು ಧೈರ್ಯ ತುಂಬಿ ಕಳುಹಿಸಿದರು. ಹಣೆಮೇಲೆ ಹೆಡ್ ಲೈಟ್ ಕಟ್ಟಿಕೊಂಡು ರನ್ನಿಂಗ್ ಸ್ಟಿಕ್ ಹಿಡಿದು ಬೆನ್ನಲ್ಲಿ ಕಿಟ್ ಹೊತ್ತುಕೊಂಡು ನಿಂತವರು ಓಡಲು ಆರಂಭಿಸುತ್ತಿದ್ದಂತೆ ಇಬ್ಬದಿಯಲ್ಲಿ ನಿಂತಿದ್ದವರು ಶುಭ ಕೋರಿದರು.

ಈ ಸಂದರ್ಭದಲ್ಲಿ ಬೆಳಿಗ್ಗೆ ಓಟ ಆರಂಭಿಸಿದವರ ಪೈಕಿ ತಡವಾಗಿ ಬಂದವರು ಗುರಿಯತ್ತ ಧಾವಿಸಿದರು. ಅವರಿಗೆ ಭರ್ಜರಿ ಸ್ವಾಗತ ಸಿಕ್ಕಿತು. ಬೆಂಗಳೂರಿನ ನಿವೃತ್ತ ಬ್ಯಾಂಕ್ ಉದ್ಯೋಗಿ ಸುರೇಶ್ ಬೃಹತ್ ಗಾತ್ರದ ಕನ್ನಡ ಧ್ವಜ ಹಿಡಿದುಕೊಂಡು ಬಂದು ಬೆರಗು ಮೂಡಿಸಿ ಚಪ್ಪಾಳೆ ಗಿಟ್ಟಿಸಿಕೊಂಡರು.

‘ಪರಿಸರದ ಸೌಂದರ್ಯ ಸವಿಯುತ್ತ ಓಡುವುದು ಮೋಹಕ ಮತ್ತು ರೋಚಕ ವಿಷಯ. ಇಲ್ಲಿನ ವಾತಾವರಣವನ್ನು ಕಾಫಿತೋಟಗಳ ಒಳಗೆ ಮತ್ತು ಕಾಡಂಚಿನ ಊರುಗಳ ಮೂಲಕ ಓಡಿ ಹತ್ತಿರದಿಂದ ಅನುಭವಿಸಲು ಸಾಧ್ಯವಾಯಿತು’ ಎಂದು ಓಟಗಾರರು ‘ಪ್ರಜಾವಾಣಿ’ಗೆ ತಿಳಿಸಿದರು.


30 ಕಿಲೊ ಮೀಟರ್ ಓಟದಲ್ಲಿ ನೂರಾರು ಮಂದಿ ಪಾಲ್ಗೊಂಡರು

# ಮೆಟ್ರೊ: ನಾಗವಾರದಲ್ಲಿ ವಾಣಿಜ್ಯ ಸಂಕೀರ್ಣ

## ಬಹು ಮಹಡಿ ಪಾರ್ಕಿಂಗ್, ನಾಲ್ಕು ಅಂತಸ್ತಿನ ವಾಣಿಜ್ಯ ಸಂಕೀರ್ಣ ನಿರ್ಮಿಸುತ್ತಿರುವ ಬಿಎಂಆರ್‌ಸಿಎಲ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ನಮ್ಮ ಮೆಟ್ರೊ' ಗುಲಾಬಿ ಮಾರ್ಗದ ಟರ್ಮಿನಲ್ ಆಗಿರುವ ನಾಗವಾರ ನಿಲ್ದಾಣದಲ್ಲಿ ನಾಲ್ಕು ಅಂತಸ್ತಿನ ವಾಣಿಜ್ಯ ಸಂಕೀರ್ಣ, ಬಹುಮಹಡಿ ಪಾರ್ಕಿಂಗ್ ನಿರ್ಮಾಣಗೊಳ್ಳುತ್ತಿದೆ. ಸ್ಥಳಾವಕಾಶ ಬೇಡಿಕೆ ಬಗ್ಗೆ ಅಭಿಪ್ರಾಯಗಳನ್ನು ಬಿಎಂಆರ್‌ಸಿಎಲ್ ಆಹ್ವಾನಿಸಿದೆ.

ಡೆವಲಪರ್‌ಗಳು, ಕಾರ್ಪೊರೇಟ್ ಸಂಸ್ಥೆಗಳು, ನಿರ್ವಾಹಕರು, ವ್ಯಾಪಾರಿಗಳು ಮತ್ತು ಚಿಲ್ಲರೆ ಅಥವಾ ಮಾಲ್ ನಡೆಸುವವರು ಕಚೇರಿಗೆ ಅಥವಾ ವ್ಯಾಪಾರಕ್ಕೆ ಸ್ಥಳಾವಕಾಶ ಕೋರಿ ಅರ್ಜಿ ಸಲ್ಲಿಸಬಹುದು ಎಂದು ತಿಳಿಸಿದೆ.

ನಾಗವಾರದ ಭೂಗತ ನಿಲ್ದಾಣದ ಪಕ್ಕದಲ್ಲಿ 3,225.73 ಚದರ ಮೀಟರ್ ವಿಸ್ತೀರ್ಣ ಲಭ್ಯವಿದೆ. ಕಟ್ಟಡದ ನಿಯಮಗಳ ಪ್ರಕಾರ ಬಹು ಹಂತದ ಪಾರ್ಕಿಂಗ್ ಸೌಲಭ್ಯಗಳ ಅಭಿವೃದ್ಧಿಗೆ ಬಳಕೆಯಾಗಲಿದೆ ಎಂದು ತಿಳಿಸಿದೆ.



'ನಮ್ಮ ಮೆಟ್ರೊ' ಗುಲಾಬಿ ಮಾರ್ಗದ ನಾಗವಾರ ನಿಲ್ದಾಣದಲ್ಲಿ ನಿರ್ಮಾಣಗೊಳ್ಳಲಿರುವ ವಾಣಿಜ್ಯ ಸಂಕೀರ್ಣದ ಮಾದರಿ

ವಾಣಿಜ್ಯ ಸಂಕೀರ್ಣದಲ್ಲಿ ಮೊದಲ ಎರಡು ಮಹಡಿಗಳನ್ನು ಕಂಬ, ಬೀಮ್ ಮತ್ತು ತೊಲೆಗಳೊಂದಿಗೆ ಪೂರ್ಣಗೊಳಿಸಲಾಗಿದೆ. ಗೋಡೆಗಳ ಕೆಲಸವಷ್ಟೇ ಬಾಕಿ ಇದೆ. ಉಳಿದ ಎರಡು ಮಹಡಿಗಳನ್ನು 10 ತಿಂಗಳಲ್ಲಿ ಪೂರ್ಣಗೊಳಿಸಲಾಗುವುದು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಈ ಸ್ಥಳವು ಗ್ರೇಡ್ 'ಎ' ಕಚೇರಿಗಳು, ಕಾರ್ಯ ಕೇಂದ್ರಗಳು ಅಥವಾ ಪ್ರೀಮಿಯಂ ಶಾಪಿಂಗ್ ಮಾಲ್‌ಗಳಿಗೆ ಸೂಕ್ತವಾಗಿದೆ. ಮೆಟ್ರೊ ನಿಲ್ದಾಣದ ಕಾನ್ಕೋರ್ಸ್ ಮತ್ತು ಪ್ಲಾಟ್‌ಫಾರ್ಮ್‌ಗಳಿಗೆ ಮೀಸಲಾದ ಲಿಫ್ಟ್‌ಗಳು ಮತ್ತು ಎಸ್ಕಲೇಟರ್‌ಗಳನ್ನು ಸಂಯೋಜಿಸಲು ಅವಕಾಶವಿದೆ. ಎಂಬೆಸಿ ಮಾನ್ಯತಾ ಬಿಸಿನೆಸ್ ಪಾರ್ಕ್, ಕಾರ್ಲೆ ಟೌನ್ ಸೆಂಟರ್ ಮತ್ತು ಇತರ ಐಟಿ, ವಾಣಿಜ್ಯ ಕೇಂದ್ರಗಳಿಗೆ ಹತ್ತಿರವಿದೆ. 2026ರಲ್ಲಿ ಗುಲಾಬಿ ಮಾರ್ಗದಲ್ಲಿ ಮೆಟ್ರೊ ಸಂಚಾರ ಆರಂಭವಾಗಲಿದೆ.

ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಸಂಪರ್ಕಿಸುವ ನೀಲಿ ಮಾರ್ಗವು ನಾಗವಾರದಲ್ಲಿ ಎತ್ತರಿಸಿದ ನಿಲ್ದಾಣದ ಮೂಲಕ ಹಾದು ಹೋಗಲಿದ್ದು, 2027ರಲ್ಲಿ ಆರಂಭಗೊಳ್ಳಲಿದೆ.

ಸದ್ಯ ಇಲ್ಲಿ ಉದ್ಯಮಿಗಳ ಆಸಕ್ತಿಯನ್ನು ತಿಳಿಯುವುದಕ್ಕಾಗಿ ಆಹ್ವಾನ ನೀಡಲಾಗಿದೆ. ಡಿಸೆಂಬರ್ 15ರ ಒಳಗೆ ಆಸಕ್ತರು ಪ್ರಸ್ತಾವ ಸಲ್ಲಿಸಬೇಕು. ಇದುವೇ ಅಂತಿಮವಲ್ಲ. ಬಿಎಂಆರ್‌ಸಿಎಲ್ ಎಲ್ಲ ಇಒಐ (ಆಸಕ್ತಿಯ ಅಭಿವ್ಯಕ್ತಿ) ಗಳನ್ನು ಮೌಲ್ಯಮಾಪನ ಮಾಡುತ್ತದೆ. ಸ್ವೀಕರಿಸಿದ ಪರಿಕಲ್ಪನೆ ಮತ್ತು ಪ್ರತಿಕ್ರಿಯೆಗಳ ಆಧಾರದಲ್ಲಿ ಅಭಿವೃದ್ಧಿ ಮಾದರಿಯನ್ನು ಅಂತಿಮಗೊಳಿಸಲಾಗುವುದು. ಬಳಿಕ ಟೆಂಡರ್ ಕರೆಯಲಾಗುವುದು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

| ವಾಣಿಜ್ಯ ಮಳಿಗೆ ವಿಸ್ತೀರ್ಣ (ಚದರ ಮೀಟರ್) | ಮೊದಲ ಮಹಡಿ | ಎರಡನೇ ಮಹಡಿ | ಮೂರನೇ ಮಹಡಿ | ನಾಲ್ಕನೇ ಮಹಡಿ | ಒಟ್ಟು ವಿಸ್ತೀರ್ಣ |
|---|---|---|---|---|---|
| | 6,835.57 | 6,721.03 | 4,677.02 | 5,158.62 | 23,392.24 |

### 3ನೇ ಆಸ್ತಿ ಅಭಿವೃದ್ಧಿ ಯೋಜನೆ

ಈ ವರ್ಷ ಬಿಎಂಆರ್‌ಸಿಎಲ್ ಘೋಷಿಸಿದ ಮೂರನೇ ಆಸ್ತಿ ಅಭಿವೃದ್ಧಿ ಯೋಜನೆ ಇದಾಗಿದೆ.

ಕೆಆರ್ ಪುರ ಮೆಟ್ರೊ ನಿಲ್ದಾಣದ ಬಳಿ 1.66 ಎಕರೆ ವಿಸ್ತೀರ್ಣದಲ್ಲಿ ನೆಲಮಾಳಿಗೆಯ ಪಾರ್ಕಿಂಗ್ ಹೊಂದಿರುವ 11 ಅಂತಸ್ತಿನ ವಾಣಿಜ್ಯ ಕಟ್ಟಡ ನಿರ್ಮಿಸಲು ಈಗಾಗಲೇ ಯೋಜನೆ ರೂಪಿಸಿದೆ.


ಮೆಜೆಸ್ಟಿಕ್‌ನಲ್ಲಿ, ಮೆಟ್ರೊ ನಿಲ್ದಾಣದ ಮೇಲಿರುವ 31,920 ಚದರ ಮೀಟರ್ ಸ್ಥಳದಲ್ಲಿ 10 ಲಕ್ಷ ಚದರ ಮೀಟರ್ ವಾಣಿಜ್ಯ ಸಂಕೀರ್ಣ ಹಾಗೂ ಪಾರ್ಕಿಂಗ್ ಸೌಲಭ್ಯ ಕಲ್ಪಿಸಲು ಯೋಜನೆ ರೂಪಿಸಲಾಗಿದೆ.

### ಪಾರ್ಕಿಂಗ್ ಸೌಲಭ್ಯ

ಥಣಿಸಂದ್ರ ಮುಖ್ಯ ರಸ್ತೆಯಲ್ಲಿರುವ ನಾಗವಾರ ಭೂಗತ ನಿಲ್ದಾಣದ ಪಕ್ಕದಲ್ಲಿ 3,225.73 ಚದರ ಮೀಟರ್ ವಿಸ್ತೀರ್ಣದ ಬಹುಮಹಡಿ ಪಾರ್ಕಿಂಗ್ ಇರಲಿದೆ. 1,927.94 ಚದರ ಮೀಟರ್ ಮತ್ತು 1,297.79 ಚದರ ಮೀಟರ್‌ನ ಎರಡು ವಿಭಾಗಗಳಾಗಿ ವಿಂಗಡಿಸಲಾಗಿದೆ. 615 ಕಾರುಗಳು ಮತ್ತು 161 ದ್ವಿಚಕ್ರ ವಾಹನಗಳನ್ನು ನಿಲ್ಲಿಸುವ ಸಾಮರ್ಥ್ಯ ಇರಲಿದೆ.

# ಎಂಟು ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ



**ಬೆಂಗಳೂರು:** ಕಾಲ್ ಸೆಂಟರ್‌ನ ನಾಲ್ವರು ಉದ್ಯೋಗಿಗಳನ್ನು ಅಪಹರಣ ಮಾಡಿದ್ದ ಪ್ರಕರಣ ಸಂಬಂಧ ಕೋರಮಂಗಲ ಠಾಣೆ ಪೊಲೀಸರು ಕ್ಷಿಪ್ರ ಕಾರ್ಯಾಚರಣೆ ನಡೆಸಿ ಎಂಟು ಆರೋಪಿಗಳನ್ನು ಬಂಧಿಸಿದ್ದಾರೆ.

ಪ್ರಕರಣ ಸಂಬಂಧ ಎಂಟು ಮಂದಿಯನ್ನು ಬಂಧಿಸಿ, ಇನೊವಾ ಹಾಗೂ ವ್ಯಾಗನರ್ ಕಾರುಗಳನ್ನು ಜಪ್ತಿ ಮಾಡಲಾಗಿದೆ.

ಉದ್ಯೋಗಿಯ ಖಾತೆಯಿಂದ ₹18.90 ಲಕ್ಷ ಹಣ ಆರೋಪಿಯೊಬ್ಬರ ಖಾತೆಗೆ ವರ್ಗಾವಣೆ ಆಗಿರುವುದು ತನಿಖೆ ವೇಳೆ ಗೊತ್ತಾಗಿದ್ದು, ಆ ಹಣವನ್ನು ಫ್ರೀಜ್ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

**ಪ್ರಕರಣದ ವಿವರ:** ಕೋರಮಂಗಲದಲ್ಲಿರುವ ಕಾಲ್ ಸೆಂಟರ್‌ನಲ್ಲಿ ನಾಲ್ವರು ಉದ್ಯೋಗಿಗಳು ಕೆಲಸ ಮಾಡುತ್ತಿದ್ದು, ಅವರ ಖಾತೆಯಲ್ಲಿ ಲಕ್ಷಾಂತರ ರೂಪಾಯಿ ಹಣವಿರುವ ಮಾಹಿತಿ ಹೊಂದಿದ್ದ ಆರೋಪಿಗಳು, ನಾಲ್ವರನ್ನು ಶುಕ್ರವಾರ ಮಧ್ಯರಾತ್ರಿ ಅಪಹರಿಸಿದ್ದರು.

ಮಾಲೂರಿನ ಖಾಸಗಿ ಕಾಲೇಜಿನಲ್ಲಿ ಅವರನ್ನು ಕೂಡಿ ಹಾಕಿ, ಬೆದರಿಸಿ ಅವರ ಖಾತೆಯಲ್ಲಿದ್ದ ಹಣವನ್ನು ತಮ್ಮ ಖಾತೆಗೆ ವರ್ಗಾಯಿಸಿಕೊಂಡಿದ್ದರು.

## ಅಮಲು ಬರುವ ಮಾತ್ರೆ ಮಾರಾಟ: ಸೆರೆ

**ಬೆಂಗಳೂರು:** ಅಮಲು ಬರುವ ಮಾತ್ರೆಗಳನ್ನು ತಯಾರಿಸಿ ಮಾರಾಟ ಮಾಡುತಿದ್ದ ಆರೋಪಿಯನ್ನು ಹೈಗ್ರೌಂಡ್ಸ್ ಠಾಣೆ ಪೊಲೀಸ್ ಬಂಧಿಸಿದ್ದಾರೆ. ನಗರದ ಪ್ರೇಮ್ ಅಲಿಯಾಸ್ ವೈಷ್ಣವ್ (27) ಎಂಬುವರನ್ನು ಬಂಧಿಸಿ, ಮಾತ್ರೆಗಳನ್ನು ವಶಕ್ಕೆ ಪಡೆದಿದ್ದಾರೆ.

ನಗರದ ಬಿನ್ನಿಮಿಲ್ ರಸ್ತೆಯಲ್ಲಿರುವ ಮನೆಯೊಂದರಲ್ಲಿ ಆರೋಪಿಯು, ರಾಸಾಯನಿಕ ಮಿಶ್ರಿತ ವಸ್ತುಗಳನ್ನು ಬೆರೆಸಿ ಮಾತ್ರೆಗಳನ್ನು ತಯಾರಿಸಿ ಮಾರಾಟ ಮಾಡುತ್ತಿದ್ದ. ಖಚಿತ ಮಾಹಿತಿ ಮೇಲೆ ದಾಳಿ ನಡೆಸಿದ ಪೊಲೀಸರು, ಆತನನ್ನು ವಶಕ್ಕೆ ಪಡೆದು ₹40 ಲಕ್ಷ ಮೌಲ್ಯದ 6,700 ಮಾತ್ರೆಗಳನ್ನು ಜಪ್ತಿ ಮಾಡಿದ್ದಾರೆ. ಕಾಲೇಜು ವಿದ್ಯಾರ್ಥಿಗಳಿಗೆ ಒಂದು ಮಾತ್ರೆಗೆ ₹200 ರಂತೆ ಮಾರಾಟ ಮಾಡಲಾಗುತ್ತಿತ್ತು. ಕೆಲವೊಮ್ಮೆ ಒಂದು ಮಾತ್ರೆಯನ್ನು ₹ 500ಕ್ಕೆ ಮಾರಾಟ ಮಾಡಲಾಗಿದೆ ಎಂದು ಕೇಂದ್ರ ವಿಭಾಗದ ಡಿಸಿಪಿ ಅಕ್ಷಯ್ ಎಂ. ಹಾಕೆ ತಿಳಿಸಿದ್ದಾರೆ.

## ನಗರದಲ್ಲಿ ಇಂದು

**ಕರ್ನಾಟಕ ಸಂಗೀತ ಕಛೇರಿ:** ಗಾಯನ: ಐಶ್ವರ್ಯ ಮಹೇಶ್, ಸ್ಥಳ: ಬ್ಯಾಂಡ್ ಸ್ಟ್ಯಾಂಡ್, ಕಬ್ಬನ್ ಉದ್ಯಾನ, ಬೆಳಿಗ್ಗೆ 7

**ಕನಕದಾಸರ ಜಯಂತಿ, ಪ್ರತಿಭಾ ವಿದ್ಯಾರ್ಥಿ ವೇತನ ಸಮಾರಂಭ:** ಸಾನ್ನಿಧ್ಯ: ನಿರಂಜನಾನಂದಪುರಿ ಸ್ವಾಮೀಜಿ, ಈಶ್ವರಾನಂದಪುರಿ ಸ್ವಾಮೀಜಿ, ಉದ್ಘಾಟನೆ: ಎಸ್.ಜಿ. ಸಿದ್ಧರಾಮಯ್ಯ, ಅಧ್ಯಕ್ಷತೆ: ಎಸ್. ರಾಜು, ಅತಿಥಿಗಳು: ಜಿ.ಬಿ. ವಿನಯಕುಮಾರ್, ವಿಜಯಲಕ್ಷ್ಮಿ, ಡಿ.ಆರ್. ಪದ್ಮನಾಭ, ಆಯೋಜನೆ: ಕನಕ ಎಜ್ಯುಕೇಷನಲ್ ಟ್ರಸ್ಟ್, ಸ್ಥಳ: ಕಾಸಿಯಾ ಭವನ, ಮೂರನೇ ಮಹಡಿ, ಹೊಸಹಳ್ಳಿ ಮೆಟ್ರೊ ನಿಲ್ದಾಣದ ಪಕ್ಕ, ಬೆಳಿಗ್ಗೆ 9

**ಕನ್ನಡ ಹಬ್ಬ, ರಾಜ್ಯೋತ್ಸವ ರತ್ನ ಪ್ರಶಸ್ತಿ ಪ್ರದಾನ:** ಅತಿಥಿಗಳು: ರೇವತಿ ಕಾಮತ್, ರಾಣಿ ಸತೀಶ್, ಲಹರಿ ವೇಲು, ಡಿ.ಪಿ. ದಾನಪ್ಪ, ಆರ್ಕಾಟ್ ಪೂರ್ಣ ಪ್ರಸಾದ್, ಆಯೋಜನೆ: 9-ಫಿಗರ್ ಮೀಡಿಯಾ, ಸ್ಥಳ: ಖಿಂಚಾ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 9.30

**ಕರ್ನಾಟಕ ರಾಜ್ಯೋತ್ಸವ:** ಅತಿಥಿಗಳು: ಎ.ಆರ್. ಗೋವಿಂದಸ್ವಾಮಿ, ಪದ್ಮ ಪ್ರಸಾದ್ ಎಸ್.ಪಿ., ರವಿ ಎಂ.ಎಸ್., ಕಲಾವತಿ ಎಂ., ಅಧ್ಯಕ್ಷತೆ: ಬಾಲು ನಾಯಕ್, ಆಯೋಜನೆ: ಜ್ಞಾನಜ್ಯೋತಿನಗರ ಎರಡನೇ ಹಂತದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ಸ್ಥಳ: ನವನೀತ್ ದಿನಸಿ ಅಂಗಡಿಯ ಮುಂಭಾಗ, ಬೆಳಿಗ್ಗೆ 9.30ರಿಂದ

**ಕರ್ನಾಟಕ ರಾಜ್ಯೋತ್ಸವ:** ಉದ್ಘಾಟನೆ: ಎಂ. ಶಿವರಾಜು, ಅತಿಥಿ: ಸಿ.ಕೆ. ರಾಮೇಗೌಡ, ಅಧ್ಯಕ್ಷತೆ: ಎಸ್.ಆರ್. ಅನಂತನಾರಾಯಣ, ಆಯೋಜನೆ ಮತ್ತು ಸ್ಥಳ: ಬಸವೇಶ್ವರನಗರ ಹಿರಿಯ ನಾಗರಿಕರ ವೇದಿಕೆಯ ಸಭಾಂಗಣ, ಬಸವೇಶ್ವರನಗರ, ಬೆಳಿಗ್ಗೆ 10.30



**ಅರ್ಥೋತ್ಸವ:** ಅತಿಥಿಗಳು: ವಿನೋದ್ ಕೃಷ್ಣ, ಕೌಶಲ್ ಜೆ., ಕೆ.ಜಿ. ಕೃಪಾಲ್, ಗೌತಮ್ ಮಾರ್ಲೇಚ್, ಅಧ್ಯಕ್ಷತೆ: ರಾಘವೇಂದ್ರ ಟಿ.ಕೆ., ಆಯೋಜನೆ: ಷೇರುಪೇಟೆ ವಿಚಾರ ಮಂಟಪ, ಸ್ಥಳ: ಬಿಜಿಎಸ್‌ಇ ಫೈನಾನ್ಶಿಯಲ್ಸ್ ಲಿಮಿಟೆಡ್, ಸ್ಟಾಕ್ ಎಕ್ಸ್‌ಚೇಂಜ್ ಟವರ್ಸ್, ಜೆ.ಸಿ. ರಸ್ತೆ, ಬೆಳಿಗ್ಗೆ 10

**ಗಾಯನ, ಹಾಸ್ಯ, ರಸಪ್ರಶ್ನೆ, ಕವಿಗೋಷ್ಠಿ:** ಅಧ್ಯಕ್ಷತೆ: ಸದಾನಂದ, ಅತಿಥಿ: ವಿ. ಮಲ್ಲಿಕಾರ್ಜುನಯ್ಯ, ಆಯೋಜನೆ: ಸಹಮತ, ಸ್ಥಳ: 323, ಹೇಮ ಸದನ, ಸಹಕಾರನಗರ, ಬೆಳಿಗ್ಗೆ 10

**ದಿ. ವಿಠ್ಠಲರಾವ ಕುಲಕರ್ಣಿ ಸಂಸ್ಮರಣ 'ವಿಠ್ಠಲ' ಗ್ರಂಥ ಬಿಡುಗಡೆ, 'ವಿಠ್ಠಲ' ಪ್ರಶಸ್ತಿ ಪ್ರದಾನ:** ಸಂಗೀತ-ದಾಸವಾಣಿ: ಗಾಯನ: ಮುದ್ದುಮೋಹನ, ತಬಲಾ: ವಿಶ್ವನಾಥ ನಾಕೋಡ, ಹಾರ್ಮೋನಿಯಂ: ಪಂಚಾಕ್ಷರಿ ಹಿರೇಮಠ, ಆಯೋಜನೆ: ವಿಠ್ಠಲ ಪ್ರತಿಷ್ಠಾನ, ಸ್ಥಳ: ಡಾ.ಸಿ. ಅಶ್ವತ್ ಕಲಾಭವನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.15

**ಟಿ. ವೆಂಕಟೇಶಮೂರ್ತಿ ನೆನಪಿನಲ್ಲಿ 'ಯುವ ಮನಸುಗಳು ಸಮುದಾಯದಲ್ಲಿ ವೈಜ್ಞಾನಿಕ ಮನೋಭಾವ ಹುಟ್ಟಿಸುವ ವಿಧಾನಗಳು' ಉಪನ್ಯಾಸ:** ನರೇಂದ್ರ ನಾಯಕ್, ಅತಿಥಿ: ಲಕ್ಷ್ಮಿ ಚಂದ್ರಶೇಖರ್, ಅಧ್ಯಕ್ಷತೆ: ಬಿ.ಆರ್. ಮಂಜುನಾಥ್, ಆಯೋಜನೆ: ಕಲಿ ಕಲಿಸು, ಸಮುದಾಯ, ಸ್ಥಳ: ಡಾ.ಎಚ್.ಎನ್. ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಜಯನಗರ, ಬೆಳಿಗ್ಗೆ 10.30

**'ನಾರಾಯಣ ಗುರು' ಪ್ರಶಸ್ತಿ ಪ್ರದಾನ:** ಉದ್ಘಾಟನೆ: ಕೆ.ವಿ. ಪ್ರಭಾಕರ್, ಪ್ರಶಸ್ತಿ ಪ್ರದಾನ: ಬೇಲೂರು ಗೋಪಾಲಕೃಷ್ಣ, ಅತಿಥಿಗಳು: ಎಚ್.ಎಂ. ರೇವಣ್ಣ, ಪ್ರಶಸ್ತಿ ಸ್ವೀಕರಿಸುವವರು: ಸರೋಜ ಬನ್ನಪ್ಪ, ಎಚ್.ಆರ್. ಜಯರಾಮ್, ಅಮಿತಾ ಆನಂದ್ ಮಂತ, ನಾಗೇಶ್ ಬಸವರಾಜ್, ಪುಂಡಲೀಕ ಕಲ್ಲಿಗನೂರ, ಅಧ್ಯಕ್ಷತೆ: ಗಂಧರ್ವ ಸೇನಾ, ಆಯೋಜನೆ: ಕರ್ನಾಟಕ ಹಿಂದುಳಿದ ವರ್ಗಗಳ ಮಾನ್ಯತೆ ಪಡೆದ ಸಂಪಾದಕರ ಮತ್ತು ವರದಿಗಾರರ ಸಂಘ, ಸ್ಥಳ: ಗ್ರೀನ್ ಪಾತ್ ಹೋಟೆಲ್, ಶೇಷಾದ್ರಿಪುರ, ಬೆಳಿಗ್ಗೆ 11

**ಸಂಸದ್ ಕ್ರೀಡಾ ಮಹೋತ್ಸವದ ಸಮಾರೋಪ ಸಮಾರಂಭ:** ಅತಿಥಿಗಳು: ಶೋಭಾ ಕರಂದ್ಲಾಜೆ, ಡಿ.ವಿ. ಸದಾನಂದಗೌಡ, ಡಾ.ಸಿ.ಎನ್. ಅಶ್ವತ್ಥನಾರಾಯಣ, ಪಿ.ಸಿ. ಮೋಹನ್, ತೇಜಸ್ವಿ ಸೂರ್ಯ, ಡಾ.ಸಿ.ಎನ್. ಮಂಜುನಾಥ್, ಜಗ್ಗೇಶ್, ಲಹರ್ ಸಿಂಗ್ ಸಿರೋಯ, ಕೆ. ನಾರಾಯಣ್, ಬಿ.ಎ. ಬಸವರಾಜು, ಕೆ.ಗೋಪಾಲಯ್ಯ, ಎಸ್.ಆರ್. ವಿಶ್ವನಾಥ್, ಎಸ್. ಮುನಿರಾಜು, ಎಸ್.ವಿ. ಸುರೇಶ, ಸ್ಥಳ: ಡಾ. ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಮಾವೇಶ ಭವನ, ಜಿಕೆವಿಕೆ ಆವರಣ, ಬೆಳಿಗ್ಗೆ 11

**ಹಳ್ಳಿಕಾರ ಸಮುದಾಯದ ಡಿಪ್ಲೊಮಾ, ಪದವಿ, ಸ್ನಾತಕೋತ್ತರ ಪದವಿ ಹಾಗೂ ಪಿಎಚ್.ಡಿ ವಿದ್ಯಾರ್ಥಿಗಳಿಗೆ ಪ್ರತಿಭಾನ್ವೇಷಣೆ, ಪ್ರತಿಭಾ ಪುರಸ್ಕಾರ ಸಮಾರಂಭ:** ಅತಿಥಿಗಳು: ಕೆ.ಜೆ. ಜಾರ್ಜ್, ರಾಮಲಿಂಗಾರೆಡ್ಡಿ, ಎಚ್.ಎಂ. ರೇವಣ್ಣ, ನಸೀರ್ ಅಹಮದ್, ಆರ್.ವಿ. ದೇವರಾಜ್, ಅಧ್ಯಕ್ಷತೆ: ಕೆ.ಎಂ. ನಾಗರಾಜ್, ಆಯೋಜನೆ: ಆರ್.ಎಂ.ಆರ್. ಹಳ್ಳಿಕಾರ ಫೌಂಡೇಷನ್ ಟ್ರಸ್ಟ್, ಸ್ಥಳ: ಕಮ್ಯುನಿಟಿ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್‌ನ ಸಭಾಂಗಣ, ನಟಭೈರವ ವಿ. ವಜ್ರಮುನಿ ರಸ್ತೆ, ಎರಡನೇ ಬ್ಲಾಕ್, ಜಯನಗರ, ಬೆಳಿಗ್ಗೆ 10

**ಹಿರಿಯ ಪತ್ರಕರ್ತರ ಸಮಾವೇಶದ ಉದ್ಘಾಟನೆ:** ಕೆ.ವಿ. ಪ್ರಭಾಕರ್, ಅಧ್ಯಕ್ಷತೆ: ಆರ್.ಪಿ. ಸಾಂಬಸದಾಶಿವ ರೆಡ್ಡಿ, ಅತಿಥಿಗಳು: ಸಂದೀಪ್ ದೀಕ್ಷಿತ್, ಎನ್.ಪಿ. ಚೆಕ್ಕುಟ್ಟಿ, ಆರ್. ಶ್ರೀಧರ್, ಎಂ.ಎ. ಪೊನ್ನಪ್ಪ, ಎಂ. ಸಿದ್ಧರಾಜು, ಆನಂದಮ್ ಪುಲಿಪಲುಪುಲ, ಕೆ. ಶಾಂತಕುಮಾರಿ, ಟಿ. ಜನಾರ್ದನ್, ಭೂಪತಿ, ಆಯೋಜನೆ: ಭಾರತೀಯ ಹಿರಿಯ ಪತ್ರಕರ್ತರ ಒಕ್ಕೂಟ, ಸ್ಥಳ: ಬೆಂಗಳೂರು ಪ್ರೆಸ್‌ಕ್ಲಬ್, ಕಬ್ಬನ್ ಉದ್ಯಾನ, ಬೆಳಿಗ್ಗೆ 11

**ಪಂಡಿತ್ ಎ. ಸುಬ್ಬಯ್ಯ ಶಾಸ್ತ್ರಿ 'ನೇಮಿಚಂದ್ರನ ಕಾವ್ಯಗಳು-ಒಂದು ಪರಿಚಯ' ಉಪನ್ಯಾಸ:** ಕೆ.ಆರ್. ಗಣೇಶ್, ಆಯೋಜನೆ ಮತ್ತು ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 11

**ಉತ್ಸವ:** ಅತಿಥಿ: ವಿನಾಯಕ್ ಜೋಶಿ, ಆಯೋಜನೆ: ರೋಟರಿ ಕ್ಲಬ್ ಆಫ್ ಬೆಂಗಳೂರು, ಸ್ಥಳ: ರೋಟರಿ ಹೌಸ್ ಆಫ್ ಫ್ರೆಂಡ್‌ಶಿಪ್, ಲ್ಯಾವೆಲ್ಲೆ ರಸ್ತೆ, ಬೆಳಿಗ್ಗೆ 11

**ಕನ್ನಡ ಸೌರಭ, ಎನ್. ಬಾಲಾಜಿ ರಾವ್ ಅವರು ಸಂಪಾದಿಸಿರುವ 'ಡಾ. ದೊಡ್ಡರಂಗೇಗೌಡರ ಸಮಗ್ರ ಸಾಹಿತ್ಯ ವಾಚಿಕೆ-1' ಪುಸ್ತಕ ಬಿಡುಗಡೆ:** ಉದ್ಘಾಟನೆ: ದೊಡ್ಡರಂಗೇಗೌಡ, ಅಧ್ಯಕ್ಷತೆ: ಶೂದ್ರ ಶ್ರೀನಿವಾಸ್, ಪುಸ್ತಕ ಬಿಡುಗಡೆ: ಎಲ್. ಹನುಮಂತಯ್ಯ, ಅತಿಥಿಗಳು: ಗಿರಿಜಾ ಲೋಕೇಶ್, ಚಿನ್ಮಯ್, ಪುಸ್ತಕ ಪರಿಚಯ: ಟಿ. ಯಲ್ಲಪ್ಪ, ಆಯೋಜನೆ: ಸೌರಭ ಫೌಂಡೇಷನ್, ಸ್ಥಳ: ಅಶ್ವತ್ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 4



ಗಿರಿಜಾ ಲೋಕೇಶ್

**'ವಿದ್ಯಾ' ದಕ್ಷಿಣ ವಲಯ'ದ 15ನೇ ವಾರ್ಷಿಕೋತ್ಸವ:** ಅತಿಥಿಗಳು: ಸಂಜೀವ್ ಕುಮಾರ್ ಗುಪ್ತಾ, ರಶ್ಮಿ ಮಿಶ್ರಾ, ರೇಖಾ ಶ್ರೀನಿವಾಸನ್, ಆಯೋಜನೆ: ವಿದ್ಯಾ, ಸ್ಥಳ: ಪುರಭವನ, ಜೆ.ಸಿ. ರಸ್ತೆ, ಸಂಜೆ 4.30

**ಎಂ.ಸಿ. ಕೃಷ್ಣಮೂರ್ತಿ ಅವರ 'ಯಾಜ್ಞವಲ್ಕ್ಯ ಮಹರ್ಷಿ' ಪುಸ್ತಕ ಬಿಡುಗಡೆ:** ಶಂಕರ್ ಭಟ್ ಎನ್. ಜೋಷಿ, ಅಧ್ಯಕ್ಷತೆ: ರಮೇಶ್ ಶಾಸ್ತ್ರಿ, ಅತಿಥಿಗಳು: ಗಿರೀಶ್ ಶರ್ಮಾ, ಸುಬ್ಬರಾಯ ಶಾಸ್ತ್ರಿ, ಕೆ.ಎ. ಸತ್ಯನಾರಾಯಣ, ಆಯೋಜನೆ: ಯಾಜ್ಞವಲ್ಕ್ಯ ಗ್ರಂಥ ಪ್ರತಿಷ್ಠಾನ, ಸ್ಥಳ: ಶ್ರೀಬ್ರಹ್ಮ ಚೈತನ್ಯ ಮಂದಿರ, 16ನೇ ಮುಖ್ಯರಸ್ತೆ, ಬನಶಂಕರಿ, ಒಂದನೇ ಹಂತ, ಸಂಜೆ 4.30

**'ಮತ್ತೆ ಮುಖ್ಯಮಂತ್ರಿ' ನಾಟಕ ಪ್ರದರ್ಶನ, ಪುಸ್ತಕ ಬಿಡುಗಡೆ:** ಎಚ್.ಸಿ. ಮಹದೇವಪ್ಪ, ಪುಸ್ತಕದ ಕುರಿತು: ವೈ.ಎಸ್.ವಿ. ದತ್ತ, ಅತಿಥಿ: ಎಲ್. ಹನುಮಂತಯ್ಯ, ಅಧ್ಯಕ್ಷತೆ: ಜಿ. ರಾಮಕೃಷ್ಣ, ಅಭಿನಯ: 'ಮುಖ್ಯಮಂತ್ರಿ' ಚಂದ್ರು, ಉಪಸ್ಥಿತಿ: ಕೆ.ವೈ. ನಾರಾಯಣಸ್ವಾಮಿ, ಬಿ.ವಿ. ರಾಜಾರಾಂ, ಮಾವಲಿ ಶಿವಕುಮಾರ್, ಆಯೋಜನೆ: ಕಲಾ ಗಂಗೋತ್ರಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5.30

**ಮಲ್ಲೇಶ್ವರಂ ರತ್ನ ಪ್ರಶಸ್ತಿ ಪ್ರದಾನ:** ಅತಿಥಿಗಳು: ಶೋಭಾ ಕರಂದ್ಲಾಜೆ, ಡಾ.ಸಿ.ಎನ್. ಅಶ್ವತ್ಥನಾರಾಯಣ, ಎಸ್.ಎನ್.ಆರ್. ಯು. ನಂಬಿ, ಅರ್ಜುನ್ ಉತ್ತಮ ನಂಬಿ, ಪ್ರಶಸ್ತಿ ಸ್ವೀಕರಿಸುವವರು: ಡಿ. ಸುರೇಶಗೌಡ, ಹೇಮಲತಾ ಸತೀಶ್ ಶೇಟ್, ಕೆ. ಗಣೇಶರಾವ್ ಕೇಸರ್‌ಕರ್, ಶಮಾ ಕೃಷ್ಣ, ಆಯೋಜನೆ: ಮಲ್ಲೇಶ್ವರಂ 5ಕೆ ರನ್ ಫೌಂಡೇಷನ್, ಸ್ಥಳ: ಉಭಯವೇದಂತ ಪ್ರವರ್ತನ ಸಭಾ, 10ನೇ ಅಡ್ಡರಸ್ತೆ, ಮಲ್ಲೇಶ್ವರ, ಸಂಜೆ 7

**ಸಂಗೀತ ಸಮ್ಮೇಳನ:** ಬೆಳಿಗ್ಗೆ 10.30ಕ್ಕೆ ಪ್ರಶಸ್ತಿ ಪ್ರದಾನ: 'ಸಂಗೀತ ಕಲಾರತ್ನ' ಪ್ರಶಸ್ತಿ ಸ್ವೀಕರಿಸುವವರು: ಪದ್ಮಾ ಗುರುದತ್, 'ಕರ್ನಾಟಕ ಕಲಾಚಾರ್ಯ ಪ್ರಶಸ್ತಿ' ಸ್ವೀಕರಿಸುವವರು: ತಿರುಮಲೆ ಶ್ರೀನಿವಾಸ್, 'ಕಲಾಜ್ಯೋತಿ ಪ್ರಶಸ್ತಿ' ಸ್ವೀಕರಿಸುವವರು: ಟಿ.ಎಸ್. ವಸುಂಧರಾ, ಕೆ.ಎಸ್. ನಾಗಭೂಷಣಯ್ಯ, ಈಶ್ವರ ಭಟ್ ಕಾಂಚನ, ಉಪಾಸನಾ ಮೋಹನ್, 'ಸ್ವರಭೂಷಿಣಿ ಪ್ರಶಸ್ತಿ' ಸ್ವೀಕರಿಸುವವರು: ನಳಿನಾ ಮೋಹನ್, 'ಸ್ವರಲಿಪಿ ಪ್ರಶಸ್ತಿ' ಸ್ವೀಕರಿಸುವವರು: ತೇಜಸ್ವಿನಿ ಹೆಗಡೆ, ಅತಿಥಿಗಳು: ಯದುಗಿರಿ ಯತಿರಾಜ ಮಠದ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ, ಶ್ರೀಷಾನಂದ ವಿ., ಸಂಜೆ 6ಕ್ಕೆ ಗಾಯನ: ವಿಘ್ನೇಶ್ ಈಶ್ವರ್, ಪಿಟೀಲು: ಎಚ್.ಎನ್. ಭಾಸ್ಕರ್, ಮೃದಂಗ: ಪ್ರವೀಣ್ ಸ್ಪರ್ಶ್, ಘಟ: ಓಂಕಾರ್ ರಾವ್ ಜಿ., ಆಯೋಜನೆ ಮತ್ತು ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಸಂಜೆ 6

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in



# ಎಚ್.ಆರ್ ವೃತ್ತಿನಿರತರಿಂದ ಕನ್ನಡ ಸಮ್ಮೇಳನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಿರಾತಂಕ ಸ್ವಯಂ ಸೇವಾ ಸಂಸ್ಥೆ ವತಿಯಿಂದ ನಗರದಲ್ಲಿ ಶನಿವಾರ 9ನೇ ರಾಜ್ಯಮಟ್ಟದ ಮಾನವ ಸಂಪನ್ಮೂಲ ವೃತ್ತಿನಿರತರ ಕನ್ನಡ ಸಮ್ಮೇಳನ ನಡೆಯಿತು.

ಸಮ್ಮೇಳನದಲ್ಲಿ ಭಾಗವಹಿಸಿದ್ದ ರಾಜ್ಯದ ವಿವಿಧ ಜಿಲ್ಲೆಗಳ ಮಾನವ ಸಂಪನ್ಮೂಲ ವೃತ್ತಿನಿರತರು, 'ಮಾನವ ಸಂಪನ್ಮೂಲ ಮತ್ತು ಕೈಗಾರಿಕಾ ಸಂಬಂಧಗಳಲ್ಲಿ ಮೌಲ್ಯಗಳು, ನವೀನತೆ ಹಾಗೂ ಕೃತಕ ಬುದ್ಧಿಮತ್ತೆಯ ಸಮ್ಮಿಲನ' ವಿಷಯದ ಬಗ್ಗೆ ಚರ್ಚಿಸಿದರು.

ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಹೈಕೋರ್ಟ್‌ನ ಹಿರಿಯ ವಕೀಲ ಎಸ್.ಎನ್. ಮೂರ್ತಿ, ವಿಜಯ ಟೈಮ್ಸ್‌ನ ಮುಖ್ಯ ಸಂಪಾದಕಿ ವಿಜಯಲಕ್ಷ್ಮಿ ಶಿಬರೂರು, ಟಿವಿಆರ್‌ಎಲ್‌ಎಸ್ ಸಂಸ್ಥೆಯ ಮುಖ್ಯಸ್ಥ ಪ್ರೊ.ಟಿ.ವಿ. ರಾವ್, ಸಮ್ಮೇಳನದ ಸಂಸ್ಥಾಪನಾ ಸಮಿತಿಯ ಸದಸ್ಯರಾದ ರಮೇಶ ಎಂ.ಎಚ್., ಶೇಖರ್ ಜಿ.ಎನ್., ಪ್ರಕಾಶ್ ಆರ್.ಎಂ., ಜಯರಾಮ್ ರಾಮಯ್ಯ ಪಾಲ್ಗೊಂಡಿದ್ದರು.



ಸಮ್ಮೇಳನದಲ್ಲಿ (ಕುಳಿತವರು ಎಡದಿಂದ) ನಾಗರಾಜ ಜಿ., ಸಂಜಯ್ ಮಿತ್ರ, ಮಧುಕರ್ ಭಟ್, ಕಲ್ಪನಾ ಬಿ.ಜಿ., ಬಿ. ಗುರುರಾಜ ರಾವ್, ಶಿನಪ್ಪಗೌಡ ಎಂ., ಸಂತೋಷ್ ಜೆ.ಪಿ., ದೇವರಾಜು ಎಚ್.ಎಸ್. ಹಾಗೂ ಪ್ರಿಯಾಂಕ್ ಎಚ್.ಎಸ್. ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. (ನಿಂತವರು ಎಡದಿಂದ) ಕಿರಣ್ ಕುಮಾರ್, ವಿಶ್ವನಾಥ್, ರಮೇಶ್ ಎಂ.ಎಚ್., ಪ್ರೊ. ರಮೇಶ್ ಬಿ., ಗಿರಿನಾರಾಯಣ, ವಿಠಲ್ ರಾವ್, ಗೋಪಿನಾಥ್, ಡಿ.ಆರ್. ನಾಗರಾಜ್, ನಾಗಭೂಷಣ್, ದಿನೇಶ್ ಎಂ.ಯು., ಪ್ರಕಾಶ್ ಆರ್.ಎಂ ಮತ್ತು ಶೇಖರ್ ಜಿ.ಎಂ. ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

ಮಾನವ ಸಂಪನ್ಮೂಲ ಕ್ಷೇತ್ರದಲ್ಲಿ ಅಗಾಧ ಸಾಧನೆಗೈದ ಆದಿತ್ಯ ಬಿರ್ಲಾ ಲೈಫ್ ಸ್ಟೈಲ್ ಬ್ರಾಂಡ್ಸ್ ಲಿಮಿಟೆಡ್‌ನ ಉಪಾಧ್ಯಕ್ಷೆ ಕಲ್ಪನಾ ಬಿ.ಜಿ., ಸಂಸೆರಾ ಎಂಜಿನಿಯರಿಂಗ್ ಲಿಮಿಟೆಡ್‌ನ ಮುಖ್ಯ ಮಾನವ ಸಂಪನ್ಮೂಲ ಅಧಿಕಾರಿ ಮಧುಕರ್ ಭಟ್, ಐಟಿಸಿ ಲಿಮಿಟೆಡ್‌ನ ಮಾನವ ಸಂಪನ್ಮೂಲ ವಿಭಾಗದ ಹಿರಿಯ ವ್ಯವಸ್ಥಾಪಕ ಸಂಜಯ್ ಮಿತ್ರ, ಪರಿಮಳ ಕನ್ಸಲ್ಟೆಂಟ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಬಿ. ಗುರುರಾಜ ರಾವ್, ಬಾಷ್ ಲಿಮಿಟೆಡ್‌ನ ನಿವೃತ್ತ ಮಾನವ ಸಂಪನ್ಮೂಲ ವ್ಯವಸ್ಥಾಪಕ ಶಿನಪ್ಪಗೌಡ ಎಂ. ಮತ್ತು ಬೆಂಗಳೂರು ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಲಿಮಿಟೆಡ್‌ನ ಮಾನವ ಸಂಪನ್ಮೂಲ ವಿಭಾಗದ ಪ್ರಧಾನ ವ್ಯವಸ್ಥಾಪಕ ನಾಗರಾಜ ಜಿ. ಅವರಿಗೆ 'ಮಾನವ ಸಂಪನ್ಮೂಲ ಕ್ಷೇತ್ರದ ಹಿರಿಯ ಸಾಧಕ ಪ್ರಶಸ್ತಿ' ನೀಡಿ ಸನ್ಮಾನಿಸಲಾಯಿತು.

ಇಂಡೊ-ಎಂಐಎಂ ಲಿಮಿಟೆಡ್‌ನ ಮಾನವ ಸಂಪನ್ಮೂಲ ವಿಭಾಗದ ಗ್ರೂಪ್ ಲೀಡರ್ ಸಂತೋಷ್ ಜೆ.ಪಿ., ಜೆ.ಎಸ್.ಡಬ್ಲ್ಯುನ ಎಚ್.ಆರ್.ಬಿ.ಪಿ. ವ್ಯವಸ್ಥಾಪಕ ದೇವರಾಜು ಎಚ್.ಎಸ್. ಮತ್ತು ಕಾರ್ಲ್ ಝೈಸ್ ಇಂಡಿಯಾ (ಬೆಂಗಳೂರು) ಪ್ರೈವೇಟ್ ಲಿಮಿಟೆಡ್‌ನ ಮಾನವ ಸಂಪನ್ಮೂಲ ವಿಭಾಗದ (ಔದ್ಯೋಗಿಕ ಸಂಬಂಧಗಳು) ಮುಖ್ಯಸ್ಥ ಪ್ರಿಯಾಂಕ್ ಎಚ್.ಎಸ್. ಅವರಿಗೆ 'ಮಾನವ ಸಂಪನ್ಮೂಲ ಕ್ಷೇತ್ರದ ಯುವ ಸಾಧಕ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

ಹಾಸ್ಯ ಕಲಾವಿದರಾದ ಬಸವರಾಜು ಮತ್ತು ಮಲ್ಲಿಕಾ ಕುಲಾಲ್ ಅವರು ಹಾಸ್ಯ ಕಾರ್ಯಕ್ರಮ ನಡೆಸಿಕೊಟ್ಟರು.

### ಏಳು ತಿಂಗಳ ಹಿಂದೆ ಉಗ್ರರ ದಾಳಿಗೆ ಮಡಿದ ಜೀವಗಳಿಗೆ ಕನ್ನಡ ಮನಗಳ ನಮನ

# ಪಹಲ್ಗಾಮ್‌ನಲ್ಲಿ ಕನ್ನಡದ ಕಲರವ

• ಆರ್.ಮಂಜುನಾಥ್

**ಪಹಲ್ಗಾಮ್:** ಪರ್ವತ ಶ್ರೇಣಿಗಳ ಕಣಿವೆ, ಗಿಡ ಮರಗಳ ಹಸಿರಿನ ಸಿಂಗಾರ, ಗಿರಿ ಶಿಖರಗಳ ಮೇಲಿನ ಹಿಮದ ಮೇಲೆ ಚಿನ್ನದ ಪ್ರಕಾಶಮಾನ, ಲಿದ್ದರ್ ನದಿಯ ಜುಳು ಜುಳು ಹರಿವಿನ ನಡುವೆ ಕನ್ನಡದ ಕಲರವ, ಹಳದಿ-ಕೆಂಪು ಬಣ್ಣದ ಆಕರ್ಷಣೆ...

ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಇಂತಹ ಆಹ್ಲಾದಕರ ವಾತಾವರಣದಲ್ಲಿ ರಾಷ್ಟ್ರೀಯ ಕರ್ನಾಟಕ ರಾಜ್ಯೋತ್ಸವ ಸಂಭ್ರಮ ಶನಿವಾರ ಅನಾವರಣಗೊಂಡಿತು.

ಗ್ರೇಟರ್ ಬೆಂಗಳೂರು ಪ್ರಾಧಿಕಾರ-ಪಾಲಿಕೆಗಳ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘವು ಪಹಲ್ಗಾಮ್‌ನ ಪ್ರವಾಸೋದ್ಯಮ ನಿಗಮದ ಸಹಕಾರದೊಂದಿಗೆ ರಾಷ್ಟ್ರೀಯ ಕರ್ನಾಟಕ ರಾಜ್ಯೋತ್ಸವ ಆಯೋಜಿಸಿತ್ತು.

ಈ ವರ್ಷದ ಏಪ್ರಿಲ್ 22ರಂದು ಪಹಲ್ಗಾಮ್ ಕಣಿವೆಯಲ್ಲಿ 26 ಪ್ರವಾಸಿಗರನ್ನು ಉಗ್ರರು ಗುಂಡಿಕ್ಕಿ ಕೊಂದಿದ್ದರು. ಜಿಬಿಎ ಅಧಿಕಾರಿಗಳು, ನೌಕರರು ಮಡಿದ ಜೀವಗಳಿಗೆ ಶ್ರದ್ಧಾಂಜಲಿ ಸಲ್ಲಿಸಿದರು.

ಪಹಲ್ಗಾಮ್ ಇನ್ನೂ ಹಿಂದಿನ ಸ್ಥಿತಿಗೆ ಮರಳಿಲ್ಲ. ಉಗ್ರರ ದಾಳಿ ಘಟನೆಯಿಂದ ಸಂಪೂರ್ಣವಾಗಿ ಹೊರಬಂದಿಲ್ಲ. ಪಹಲ್ಗಾಮ್ ಎಂದರೆ ಎಲ್ಲರಲ್ಲೂ ಆತಂಕ ಇದ್ದೇ ಇದೆ. ಸುಮಾರು 2,900 ಕಿ.ಮೀ ದೂರದಿಂದ ಕನ್ನಡಿಗರು ಬಂದು ರಾಜ್ಯೋತ್ಸವ ಆಚರಣೆ ಮತ್ತು ಶ್ರದ್ಧಾಂಜಲಿ ಸಲ್ಲಿಸಿದ್ದನ್ನು ಸ್ಥಳೀಯ ಪೊಲೀಸ್ ಇಲಾಖೆಯ ಅಧಿಕಾರಿಗಳು ಪ್ರಶಂಸಿಸಿದರು.



ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಶನಿವಾರ ರಾಷ್ಟ್ರೀಯ ಕರ್ನಾಟಕ ರಾಜ್ಯೋತ್ಸವ ಆಚರಿಸಲಾಯಿತು.

ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಆರ್. ಸಂಪತ್ ರಾಜ್, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ, ಮಾಜಿ ಮೇಯರ್ ಎಂ. ಗೌತಮ್ ಕುಮಾರ್, ಬೆಂಗಳೂರು ದೂರದರ್ಶನ ಕೇಂದ್ರದ ಮುಖ್ಯಸ್ಥೆ ಆರತಿ ಎಚ್.ಎನ್, ಸಚಿವಾಲಯ ನೌಕರರ ಸಂಘದ ಅಧ್ಯಕ್ಷ ರಮೇಶ್ ಸಂಗ, ವಕೀಲ ವಿ.ಶ್ರೀನಿವಾಸ್ ಭಾಗವಹಿಸಿದ್ದರು.

ಯಕ್ಷಗಾನ ಮತ್ತು ಡೊಳ್ಳುಕುಣಿತ ಪ್ರದರ್ಶಿಸಲಾಯಿತು.

### ಸ್ಥಳೀಯರ ನೆರವಿನಿಂದ ಯಶಸ್ಸು: ಅಮೃತ್ ರಾಜ್

'ಕರ್ನಾಟಕದಿಂದ ಪಹಲ್ಗಾಮ್‌ಗೆ ಬಂದು ರಾಜ್ಯೋತ್ಸವ ಆಚರಿಸುವುದು ಸುಲಭವಾಗಿರಲಿಲ್ಲ. ಉಗ್ರರ ದಾಳಿಯಲ್ಲಿ ಸತ್ತವರಿಗೆ ಶ್ರದ್ಧಾಂಜಲಿ ಸಲ್ಲಿಸಲು ಅನುಮತಿ ಬೇಕಿತ್ತು. ರಾಷ್ಟ್ರಪತಿ, ಪ್ರಧಾನಿ, ಗೃಹ ಸಚಿವ, ರಕ್ಷಣಾ ಸಚಿವ ಸೇರಿದಂತೆ ಜಮ್ಮು- ಕಾಶ್ಮೀರದ ಅಧಿಕಾರಿಗಳಿಗೂ ಪತ್ರ ಬರೆದು ಅನುಮತಿ ಕೋರಲಾಯಿತು. ಸ್ಥಳೀಯ ಪೊಲೀಸರು, ಯೋಧರ ಸಹಕಾರದಿಂದ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಲು ಸಾಧ್ಯವಾಯಿತು' ಎಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರ- ಪಾಲಿಕೆಗಳ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎ. ಅಮೃತ್ ರಾಜ್ ತಿಳಿಸಿದರು. 'ಉಗ್ರರ ದಾಳಿಯಲ್ಲಿ ಕನ್ನಡಿಗರೂ ಮೃತಪಟ್ಟಿದ್ದರು. ಅವರನ್ನು ಕೊಂದ ಸ್ಥಳದಲ್ಲೇ ಶ್ರದ್ಧಾಂಜಲಿ ಸಲ್ಲಿಸಬೇಕು ಎಂಬ ಕಿಚ್ಚಿತ್ತು. ಉಗ್ರರು ಕೊಂದಿದ್ದ ವ್ಯಕ್ತಿಗಳ ದೇಹಗಳನ್ನು ಪಹಲ್ಗಾಮ್ ಕ್ಲಬ್‌ನಲ್ಲಿ ಇಡಲಾಗಿತ್ತು. ಅದೇ ಕ್ಲಬ್‌ನಲ್ಲಿ ಏಳು ತಿಂಗಳ ನಂತರ ಕಾರ್ಯಕ್ರಮ ಮಾಡಿ, ಬಾವುಟ ಹಾರಿಸಿದ್ದೇವೆ' ಎಂದರು.

# ಕ್ಲಾಸಿಫೈಡ್ಸ್

ಪ್ರಜಾವಾಣಿ

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

---

I SIRI
Sandalwood Farmlands

Sandalwood
# Farmland

90 mins drive from
## BANGALORE
International Airport
BEST WEEKEND GETAWAYS

"One Investment. Lifetime Returns."



Offer Price Rs. 79 Per Sft

Minimum 6534 sq ft

WEEKEND HOLIDAY
IT PROFESSIONAL
RETIREMENT
HOME

MONTHLY EMI Rs.6999/-

READY FOR REGISTRATION
BANK LOANS AVBL

FLEXIBLE PAYMENT
OPTION AVAILABLE

CALL FOR MORE DETAILS : 6366549024

---

RERA No.PRM/KA/RERA/1270/302/PR/290125/007448

RAJESHWARI AASHIRVAD
your dreams! our goal
Develop I Build I Sale

AASHIRVAD APRAMEYA
PREMIUM RESIDENTIAL LAYOUT


RERA Registered
APPROVED BMICAPA APPROVED

## BMRDA & RERA APPROVED
## A-KHATA PLOTS

## ನಿವೇಶನಗಳು
# ಬಿಡದಿ
## ಮೈಸೂರು ರಸ್ತೆ

ಬೆಂಗಳೂರು-ಮೈಸೂರು
ಎಕ್ಸ್‌ಪ್ರೆಸ್ ಹೈವೇಗೆ ಹೊಂದಿಕೊಂಡಿದೆ

ಚಲ್ಲಘಟ್ಟ ಮೆಟ್ರೋ ನಿಲ್ದಾಣದಿಂದ
10 ನಿಮಿಷಗಳ ಪ್ರಯಾಣ




SPOT BOOKING OFFER Rs. 2 Lakh DISCOUNT

OFFER PRICE ₹4699/- PER SQFT

- ನೋಂದಣಿಗೆ ಸಿದ್ಧವಾಗಿದೆ • ಲೇಔಟ್ ಅಭಿವೃದ್ಧಿಯಾಗಿದೆ
- ಎಲ್ಲಾ ಕಾನೂನಾತ್ಮಕ ದಾಖಲೆಗಳನ್ನು ಹೊಂದಿದೆ
- ಮೂಲಭೂತ ಸೌಕರ್ಯಗಳನ್ನು ಒಳಗೊಂಡಿದೆ • ಬ್ಯಾಂಕಿನಿಂದ ಸಾಲ ಸೌಲಭ್ಯವಿದೆ

ಸೈಟ್ ಭೇಟಿಗಾಗಿ ಕರೆ ಮಾಡಿ:
**6399889911**
www.aashirvad.net

SITE DIMENSIONS: 30X40, 30X50, 40X60, ODD DIMENSIONS

SCAN FOR LOCATION

---

**Jayanagar Complex Proximity On Rent**
Ground Floor 2000 Sft And First Floor 2500 Sft. Highly Visible Showroom Space
For Branded Hotels Cafes Beauty Related Services, Banks, Supermarkets Garments Textiles, Jewellery, 2 Wheeler Marketing
Vasthu Complaiant Newly Furnished Offices With 6 Workstations 24 Workstations 60 Workstations with Cabins Conference Room Toilets For Corpontate Offices Software BPO Call Centre Marketing Offices Suitable For Night Shift Also 24x7 Lift Power Back Up Security Water Supply
2800 Sft. Unfurnished First Floor For Garment Textile Wholesalers Coaching Academy Diagnostic Centre And Consultation Chambers For Doctors
Call Owner Prakash: 9886008680

---

**Vacant Commercial Property Measuring 38,000 Square Feet Next to BHEL Factory Facing Mysore Main Road is available for Lease. At present Shell Petrol Bunk is there. Frontage - 135 Feet (Facing Mysore Main Road)**

-: CONTACT :-
V. S. HARI PRASAD
Mob : 9535 335 346
V. S. JAGADISH
Mob : 9243 413 913

---

**SITE FOR SALE**
Individual E-Khata residential sites for sale in Bidadi — just 10 minutes from Challaghatta Metro Station and only 50 meters from the Highway. Ready for registration and construction. PH 9606342643

---

**WANTED COMMERCIAL BUILDING FOR RENT**
1. MINIMUM BUILT UP AREA IS 15K SQFT
2. STANDALONE BUILDING
3. BESCOM & BWSSB IS MUST
4. ONLY ON MAIN ROAD OF BBMP LIMITS ONLY
5. LIFT IS MUST

CONTACT:
+91 8762493355

---

ಎಮ್ & ಎನ್ ಇನ್ಫ್ರಾ | M&N INFRHA | M & N INFRHA

Everything you need is now just a short drive away...

HOME FOR YOU & YOUR FAMILY

Project at: Magadi Road Tavarekere-Big banyan Tree Road (100 feet proposal road)

BMRDA APPROVED

Handpicked Amenities & Facilities to complement the exclusive lifestyle.
Under Ground Cable (Electrical) | Over Head Tank Water Supply | All Round Compound 30 feet Road with Foot Path | Park with Green Environment | LED Street Lights | Water, Sanitary, & Electrical Connections for individual units | Units Ready for Registration | Located on Proposed 100 feet road.

ENQUIRE NOW BOOK YOUR PLOT!

M & N INFRHA #10, Vimala Enclave, Chowlugalli, Cubbonpet, Bangalore – 560002.

DEVELOPED & MARKETED BY M. V. MARKETING, Office #144, Bhavanarushi Mahasamsthan Road, 3rd Block, SMV Layout, Bangalore – 560110.

PROJECT ADDRESS
M & N INFRHA Survey. No. 144/16A, 146/1, Tavarekere Village, Bangalore South Taluk.

SITE LOCATION

CONTACT : +91 97419 29567 | +91 9743012555 | Email - muralidharjs@gmail.com

---

## REAL ESTATE SELLING

### Sites

### Anjanapura

**BDA-SITES FOR** Sale Banashankari 6th Stage 40x60 10500 Per sqft, 30x40 North Facing 12000 Per sqft Call-Rajesh: 9945610779

**ANJANAPURA 10TH** Block BDA Property 40x60, Prime Location, West facing site 11,500/- Call- 9845000299/ 9980808155

**SITE-FOR SALE** 40x60 South Facing Anjanapura 8th Block Owner Meeting 10000 Per sqft Call:7892035229 9845064043

### Airport Road

**"SALE SITE** 40x60 BIAAPA approved before International Airport close to Defence & Aero park Rs.5900/`P.sft. 9845286505"

### Banashankari

**BANASHANKARI 6TH STAGE**- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

**DC CONVERSION** SITES for sale in BSK 6th stage, 11th block, 40'x70' & 70'x120' North facing, 9000/- sqft: Call 9845380312.

**BANASHANKARI 6TH** Stage, 9th Block, 50x80, East opposite to School Rs. 9000/- Sqft. Owner:- 9886052148.

### BTM Layout

**31X51 SOUTH** East Corner Site For Sale At BTM Mico Layout Near Venkateswara Temple- 9845760178

### Basavanagudi

**SALE: PRIME** PROPERTY West facing site 44'x60' on 4th Main, NR Colony, Basavanagudi, Bengaluru. A and E Khata, clear title. GN Properties: 9845044179

### Basaweshwaranagar

**WEST- FACING** 40X60 semi-commercial site for sale in Basaveshwara Nagar. Prime location, clear title.Only genuine buyers. Contact: 9916821582

### Hoskote

**SALE VEMGAL** near Hoskote close to Hoskote Tollgate. 11acres plain Land fenced. One Owner. Clear titles. Arun 9845077299.

### Hebbal

**HEBBAL 30X35** House Sale Ground 1 BHK Two Carparking 1st 2 BHK 2nd 2 BHK 9845623970/ 9739400838

### Jigani

**LAND FOR SALE**
Ideal for Educational Institutions, 2 Acres On Jigani /Anekal— Harohalli Proposed IRR (intermediate Ring Road) & Attatched To STRR (Satellite Town Ring Road)
CONTACT
VICTORY PROPERTIES
(A 35 years Experienced Real Estate Company)
7411692219
8618576685
9482303339
info@victoryproperties.in
www.victoryproperties.in

### HSR Layout

**EAST FACING VACANT SITE 2400SQFT AT HSR LAYOUT SECTOR4 FOR SALE ONLY GENUINE BUYERS CONTACT 9480069704COST RS 10 CRORES(RUPEES TEN CRORES) BROKERS SHALL NOT BE ENTERTAINED**

### J P Nagar

**"J.P.NAGAR, SRINIDHI LAYOUT** 30x51 Residential Site, East Facing, BBMP A Katha, Full White. Direct Owner: 9845249799/ 9845088449"

### Kengeri

***DIRECT OWNER*** 30x40 BDA W/F Site Sale Kengeri Satellite Town,beside corner, near Surana College. 9742681666/ 9886634578

### Koramangala

**KORAMANGALA 8TH** Block Commercial Property for Sale 3200sqft. INR 37,700k/sqft Negotiable Whatsapp Message Only 9663766492 Brokers Excuse

### Kempegowda Layout

**NADAPRABHU KEMPEGOWDA** LAYOUT BDA SITES SELLING/ BUYING 20x30, 30x40, 40x60, 50x80. Genuine Buyers Call: 9632146784, 9731162167.

**COMERCIAL PROPERTY** KEMPEGOWDA LAYOUT BDA Site No.41 50x80 A Sector 6th Block 100 feet Road Genuine Buyers Only Broker Excuse: 8884709409

**KEMPEGOWDA LAYOUT,** Commercial/ Residential BDA Site for Sale 20x30, 30x40, 40x60, 50x80 Contact Kumar 9945119449

**BDA SITE** West facing, measuring 50x80, 1st K Sector, 60ft Double Road Commercial , Kempegowda Layout, Site for Sale. 12000/- per Sqft. Contact: +91 9353534340.

### Nagarabhavi

**SITE FOR** SALE BDA Nagarabhavi 10th block Near Nagarabhavi Club 40x75 West facing 40 feet Road Genuine buyers only Broker excuse Ph: 8884709409/ 7899570235

**NAGARABHAVI BDA** Approved D-Group Layout 30x50 East Facing Site Sale Rate 16000/- Per Sqft: 9845488488

**RHCS LAYOUT** A Block BDA 30x45 NF, Road Hit Site Opposite Park 12500/- Psft: 9845488488

**"NAGARBHAVI/ VISHVESHWARAIAH / KEMPEGOWDA LAYOUT** 30x40,40x60 OR ANY MEASUREMENT SITES REQUIRED`& AVAILABLE PREFERABLY OWNER/`ALLOTTE SITES. 9845268611"

**BDA SITE** FOR SALE in Nagarbhavi, 10th Block 3rd cross South face Site no: 63 For further details contact: Muthu R 9880780002

### Rajarajeshwari Nagar

**IDEAL HOMES** 43x45, 43x47 with old house, 46x60 for sale vasavi Estates 9880127399

### R T Nagar

**R.T.NAGAR HMT** LAYOUT 40X60 Site Close to CBI MAIN ROAD Excellent Location Call: 9341260828

**R.T.NAGAR 40X60** BDA Site Excellent Location With 2 Floor Old Building For Sale Call: 9341260828

### Vijayanagar

**SITE FOR** SALE: 60X90 WEST FACING WOC ROAD RPC LAYOUT ONLY GENUINE BUYERS CONTACT: 6363250343

### Vishweshwariah Layout

**BUYING/ SELLING** 20x30, 30x40, 40x60, 50x80 BDA Sites VISHVESHWARAIAH LAYOUT, KEMPEGOWDA LAYOUT, Contact: 9035470616

**DIRECT OWNER** 30x40, 40x60 Site/ House Near Metro Station, Vishweshwaraiah Layout, Kempegowda Layout: 9620696913/ 9880781399

**"30X40 NORTH FACING** PRIME RESIDENTIAL BDA 1ST`BLOCK VISHVESHWARAIAH LAYOUT, 40x60`RESIDENTIAL- SEMI COMMERCIAL 60`FEET`ROAD KALYANI LAYOUT IMMEDIATE`SALE. 9845143579"

**BDA SITE** SALE VISHWESHWARAIAH LAYOUT 6TH BLOCK 30X40 WEST NEAR OXFORD COLLEGE 40X60 NEAR KLE COLLEGE: 8892901567

# ಮುಖ್ಯವಾಹಿನಿಗೆ ಗಿಗ್ ಕಾರ್ಮಿಕರು

## ಹೊಸದಾಗಿ ಜಾರಿಗೆ ಬಂದಿರುವ ಕಾರ್ಮಿಕ ಸಂಹಿತೆಗಳ ಬಗ್ಗೆ ತಜ್ಞರ ಅನಿಸಿಕೆ



**ನವದೆಹಲಿ (ಪಿಟಿಐ):** ಹೊಸದಾಗಿ ಜಾರಿಗೆ ಬಂದಿರುವ ಕಾರ್ಮಿಕ ಸಂಹಿತೆಗಳು ದೇಶದ ಗಿಗ್ ಕಾರ್ಮಿಕರ ಪಾಲಿಗೆ ಐತಿಹಾಸಿಕ ಸುಧಾರಣೆಯಂತಿವೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಈ ಸಂಹಿತೆಗಳು ಗಿಗ್ ಕಾರ್ಮಿಕರನ್ನು ಕಾನೂನಿನ ಮಾನ್ಯತೆ ಹಾಗೂ ಸಾಮಾಜಿಕ ಭದ್ರತಾ ವ್ಯವಸ್ಥೆಯ ವ್ಯಾಪ್ತಿಗೆ ತರುತ್ತಿವೆ ಎಂದು ಅವರು ಹೇಳಿದ್ದಾರೆ.

ಸಮಾನ ಉದ್ಯೋಗ ಹಕ್ಕುಗಳು, ನೇಮಕಾತಿ ಪತ್ರ ನೀಡುವುದನ್ನು ಕಡ್ಡಾಯಗೊಳಿಸಿರುವುದು, ಪಿ.ಎಫ್, ಇಎಸ್ಐಸಿ ಮತ್ತು ವಿಮಾ ಸೌಲಭ್ಯ ಒದಗಿಸುವುದನ್ನು ಕಡ್ಡಾಯ ಮಾಡಿರುವುದು ಲಕ್ಷಾಂತರ ಮಂದಿ ಗಿಗ್ ಕಾರ್ಮಿಕರ ಪಾಲಿಗೆ ಸ್ಥಿರತೆಯನ್ನು ತರುವಂತಿವೆ ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಆದರೆ ಗಿಗ್ ಕೆಲಸಗಳ ಸ್ವರೂಪವು ಬದಲಾಗುತ್ತ ಇರುವ ಕಾರಣದಿಂದಾಗಿ ಹೊಸ ಸಂಹಿತೆಗಳ ಅನುಷ್ಠಾನವು ಸವಾಲುಗಳನ್ನು ಸೃಷ್ಟಿಸಬಹುದು ಎಂದು ಅವರು ಎಚ್ಚರಿಸಿದ್ದಾರೆ.

‘ಉದ್ಯೋಗದಾತ–ಉದ್ಯೋಗಿ ಎಂಬ ಸಂಬಂಧದ ವ್ಯಾಪ್ತಿಯಿಂದ ಮೊದಲಿನಿಂದಲೂ ಹೊರಗುಳಿದಿದ್ದ ಈ ಕಾರ್ಮಿಕರಿಗೆ ಕಾನೂನಿನ ಅಡಿ ಮಾನ್ಯತೆ ದೊರೆತಿದೆ. ಅವರಿಗೆ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಕಲ್ಪಿಸಲು ಒಂದು ಅಡಿಪಾಯ ಹಾಕಿದಂತಾಗಿದೆ’ ಎಂದು ಜೆಎಸ್ಎ ಅಡ್ವೊಕೇಟ್ಸ್ ಆ್ಯಂಡ್ ಸಾಲಿಸಿಟರ್ಸ್ ಸಂಸ್ಥೆಯ ಪ್ರೀತಾ ಎಸ್. ಹೇಳಿದ್ದಾರೆ.

ಗಿಗ್ ವ್ಯವಸ್ಥೆಯಲ್ಲಿನ ಪ್ರಮುಖ ಕಂಪನಿಗಳು ಹೊಸ ಸಂಹಿತೆಗಳನ್ನು ಸ್ವಾಗತಿಸಿವೆ. ಹೊಸ ನಿಯಮಗಳನ್ನು ಜಾರಿಗೆ ತರಲು ಸಿದ್ಧವಿರುವುದಾಗಿ ಹೇಳಿವೆ. ‘ಕಾರ್ಮಿಕ ಸುಧಾರಣೆಗಳನ್ನು ಜಾರಿಗೊಳಿಸುವ ಸರ್ಕಾರದ ಉದ್ದೇಶವನ್ನು ನಾವು ಸ್ವಾಗತಿಸುತ್ತೇವೆ. ನಾವು ಜಾರಿಗೆ ತರಬೇಕಿರುವ ಬದಲಾವಣೆಗಳನ್ನು ಪರಿಶೀಲಿಸುತ್ತಿದ್ದೇವೆ’ ಎಂದು ಅಮೆಜಾನ್ ಇಂಡಿಯಾ ಹೇಳಿದೆ.

‘ಪ್ರಗತಿಪರವಾದ ಈ ಹೆಜ್ಜೆಯನ್ನು ನಾವು ಸ್ವಾಗತಿಸುತ್ತೇವೆ, ಇದು ದೇಶದ ಉದ್ಯೋಗ ವ್ಯವಸ್ಥೆ ವಿಕಾಸ ಹೊಂದಿರುವುದನ್ನು ಗುರುತಿಸುತ್ತದೆ. ಗಿಗ್ ಕಾರ್ಮಿಕರ ಸಾಮಾಜಿಕ ಭದ್ರತೆಯನ್ನು ಬಲಪಡಿಸುವುದು ಮಹತ್ವದ್ದು’ ಎಂದು ರ್‍ಯಾಪಿಡೊ ಕಂಪನಿ ಹೇಳಿದೆ.

ಹೊಸ ಸಂಹಿತೆಗಳು ಗಿಗ್ ಕಾರ್ಮಿಕರಿಗೆ ಸಾಮಾಜಿಕ ಭದ್ರತಾ ಸೌಲಭ್ಯಗಳು ಸಿಗುವುದಕ್ಕೆ ಹೆಚ್ಚಿನ ಖಾತರಿ ಒದಗಿಸಲಿವೆ ಎಂದು ಎಟರ್ನಲ್ ಕಂಪನಿಯು ಷೇರುಪೇಟೆಗೆ ನೀಡಿರುವ ಮಾಹಿತಿಯಲ್ಲಿ ಹೇಳಿದೆ. ಹೊಸ ಸಂಹಿತೆಗಳಿಂದ ಆಗುವ ಹಣಕಾಸಿನ ಪರಿಣಾಮವು ಕಂಪನಿಗೆ ದೀರ್ಘಾವಧಿಯಲ್ಲಿ ನಷ್ಟವನ್ನೇನೂ ಮಾಡುವುದಿಲ್ಲ ಎಂದು ಹೇಳಿದೆ. ಎಟರ್ನಲ್ ಕಂಪನಿಯು ಜೊಮಾಟೊ ಮತ್ತು ಬ್ಲಿಂಕಿಟ್‌ನ ಮಾಲೀಕತ್ವ ಹೊಂದಿದೆ.

‘ಸಂಹಿತೆಗಳ ಕಾರಣದಿಂದಾಗಿ ನಮ್ಮ ಕಾರ್ಮಿಕರಿಗೆ ಹೆಚ್ಚಿನ ಮಟ್ಟದ ಸಾಮಾಜಿಕ ಭದ್ರತೆ ಸಿಗಲಿದೆ’ ಎಂದು ಜೆಪ್ಟೊ ಹೇಳಿದೆ. ಸಂಹಿತೆಗಳು ಉದ್ಯಮ ನಡೆಸುವುದನ್ನು ಸುಲಭವಾಗಿಸುತ್ತವೆ, ಗಿಗ್ ಕಾರ್ಮಿಕರನ್ನು ರಕ್ಷಿಸುತ್ತವೆ ಎಂದು ಅದು ಅಭಿಪ್ರಾಯಪಟ್ಟಿದೆ.

### 1 ಕೋಟಿ ಗಿಗ್ ಕಾರ್ಮಿಕರು

ನೀತಿ ಆಯೋಗದ ಅಂದಾಜಿನ ಪ್ರಕಾರ 2020–21ರಲ್ಲಿ ದೇಶದಲ್ಲಿ ಒಟ್ಟು 77 ಲಕ್ಷ ಮಂದಿ ಗಿಗ್ ಅರ್ಥ ವ್ಯವಸ್ಥೆಯಲ್ಲಿ ವಿವಿಧ ಕೆಲಸಗಳನ್ನು ನಿಭಾಯಿಸುತ್ತಿದ್ದರು. 2029–30ನೇ ಇಸವಿಯ ಹೊತ್ತಿಗೆ ಗಿಗ್ ಕಾರ್ಮಿಕರ ಸಂಖ್ಯೆಯು 2.35 ಕೋಟಿ ಆಗಲಿದೆ ಎಂದು ಆಯೋಗ ಅಂದಾಜಿಸಿದೆ.

ಟೀಮ್‌ಲೀಸ್ ಸರ್ವಿಸಸ್ ಮಾಡಿರುವ ಅಂದಾಜಿನ ಪ್ರಕಾರ ದೇಶದಲ್ಲಿ ಈಗ 1 ಕೋಟಿ ಗಿಗ್ ಕಾರ್ಮಿಕರು ಇದ್ದಾರೆ.

‘ಗಿಗ್ ಕಾರ್ಮಿಕರು ಹಲವು ವರ್ಷಗಳಿಂದ ವ್ಯವಸ್ಥೆಯ ಅಂಚಿನಲ್ಲೇ ಉಳಿದು ದೇಶದ ಬೆಳವಣಿಗೆಗೆ ನೆರವಾಗಿದ್ದಾರೆ. ಈಗ ಅವರು ವ್ಯವಸ್ಥೆ ಒಳಕ್ಕೆ ಬರುತ್ತಿದ್ದಾರೆ. ಈಗಿನ ಸುಧಾರಣೆಯು ಉದ್ಯಮಿಗಳಿಗೆ ಬದಲಾವಣೆಗಳಿಗೆ ಅವಕಾಶ ಕೊಡುತ್ತದೆ, ಕಾರ್ಮಿಕರಿಗೆ ಸುರಕ್ಷತೆಯನ್ನು ನೀಡುತ್ತದೆ’ ಎಂದು ಟೀಮ್‌ಲೀಸ್ ರೆಗ್‌ಟೆಕ್ ಸಂಸ್ಥೆಯ ಸಿಇಒ ರಿಷಿ ಅಗರ್ವಾಲ್ ಹೇಳಿದ್ದಾರೆ.

## ಸುದ್ದಿ 2 ನಿಮಿಷ

### ಒಆರ್‌ಎಸ್ ಹೆಸರಿನ ಪೇಯ ಹಿಂಪಡೆಯಲು ಸೂಚನೆ

**ನವದೆಹಲಿ (ಪಿಟಿಐ):** ಒಆರ್‌ಎಸ್ ಹೆಸರಿನಲ್ಲಿ ರಿಟೇಲ್ ಮಾರುಕಟ್ಟೆಗಳಲ್ಲಿ ಮಾರಾಟ ಆಗುತ್ತಿರುವ ಹಣ್ಣಿನ ಪೇಯಗಳನ್ನು, ಕುಡಿಯಲು ಸಿದ್ಧವಾಗಿರುವ ಪೇಯಗಳನ್ನು ಹಾಗೂ ಎಲೆಕ್ಟ್ರೊಲೈಟ್ ಪೇಯಗಳನ್ನು ಹಿಂಪಡೆಯಬೇಕು ಎಂದು ಕೇಂದ್ರ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರವು (ಎಫ್‌ಎಸ್‌ಎಸ್‌ಎಐ) ರಾಜ್ಯಗಳಿಗೆ ಸೂಚನೆ ನೀಡಿದೆ ಎಂದು ಮೂಲಗಳು ಹೇಳಿವೆ.

ಆಹಾರ ಉದ್ಯಮದಲ್ಲಿ ತೊಡಗಿರುವವರು ತಮ್ಮ ಉತ್ಪನ್ನಗಳ ಮೇಲೆ ‘ಒಆರ್‌ಎಸ್’ ಎಂದು ನಮೂದಿಸುವುದನ್ನು ನಿಲ್ಲಿಸಬೇಕು ಎಂದು ಎಫ್‌ಎಸ್‌ಎಸ್‌ಎಐ ಈ ಹಿಂದೆ ಸೂಚನೆ ನೀಡಿತ್ತು. ಈ ರೀತಿ ನಮೂದಿಸುವುದು ಗ್ರಾಹಕರನ್ನು ತಪ್ಪುದಾರಿಗೆ ಎಳೆಯುತ್ತದೆ ಎಂದು ಹೇಳಿತ್ತು.

ರಾಜ್ಯಗಳ ಆಹಾರ ಆಯುಕ್ತರಿಗೆ ನವೆಂಬರ್ 19ರಂದು ಪತ್ರವೊಂದನ್ನು ಬರೆದಿರುವ ಎಫ್‌ಎಸ್‌ಎಸ್‌ಎಐ, ಗ್ರಾಹಕರನ್ನು ತಪ್ಪುದಾರಿಗೆ ಎಳೆಯುವಂತೆ ಇರುವ ಹಣ್ಣಿನ ಪಾನೀಯಗಳು, ಕುಡಿಯಲು ಸಿದ್ಧವಾಗಿರುವ ಪೇಯಗಳು ಹಾಗೂ ಎಲೆಕ್ಟ್ರೊಲೈಟ್ ಪೇಯಗಳು ಒಆರ್‌ಎಸ್ ಎಂಬ ಹೆಸರಿನಲ್ಲಿ ಮಾರಾಟವಾಗುತ್ತಿದ್ದರೆ, ಅವುಗಳನ್ನು ರಿಟೇಲ್ ಮಾರುಕಟ್ಟೆಯಿಂದ ಹಿಂಪಡೆಯಬೇಕು ಎಂದು ಹೇಳಿದೆ.

ತಾನು ಅಕ್ಟೋಬರ್‌ನಲ್ಲಿ ಹೊರಡಿಸಿರುವ ಆದೇಶವೊಂದನ್ನು ಉಲ್ಲಂಘಿಸುವ ಬಗೆಯಲ್ಲಿ ಈ ಉತ್ಪನ್ನಗಳು ಈಗಲೂ ಮಾರು-ಕಟ್ಟೆಯಲ್ಲಿ ಸಿಗುತ್ತಿವೆ ಎಂದು ಎಫ್‌ಎಸ್‌ಎಸ್‌ಎಐ ಅಸಮಾಧಾನ ವ್ಯಕ್ತಪಡಿಸಿದೆ.

### ನೈಜೀರಿಯಾ: 303 ಶಾಲಾ ಮಕ್ಕಳ ಅಪಹರಣ

**ಅಬುಜಾ (ನೈಜೀರಿಯಾ) (ಎಪಿ):** ನೈಜೀರಿಯಾದಲ್ಲಿ ಶಾಲೆಯೊಂದರ ಮೇಲೆ ದಾಳಿ ನಡೆಸಿದ ಬಂದೂಕುಧಾರಿಗಳು 303 ಮಕ್ಕಳು ಮತ್ತು 12 ಬೋಧಕರನ್ನು ಅಪಹರಿಸಿದ್ದಾರೆ.

ನೈಜರ್ ರಾಜ್ಯದ ಸೇಂಟ್ ಮೇರಿಸ್ ಶಾಲೆಯ ಮಕ್ಕಳನ್ನು ಅಪಹರಿಸಲಾಗಿದೆ ಎಂದು ಕ್ರಿಶ್ಚಿಯನ್ ಅಸೋಸಿಯೇಷನ್ ಆಫ್ ನೈಜೀರಿಯಾ (ಸಿಎಎನ್) ಶನಿವಾರ ತಿಳಿಸಿದೆ. ಈ ಹಿಂದೆ 215 ಮಕ್ಕಳನ್ನು ಅಪಹರಿಸಲಾಗಿದೆ ಎಂದು ವರದಿಯಾಗಿತ್ತು.

ಯಾವುದೇ ಸಂಘಟನೆಯು ಅಪಹರಣದ ಹೊಣೆ ಹೊತ್ತುಕೊಂಡಿಲ್ಲ. ಮಕ್ಕಳ ರಕ್ಷಣೆಗೆ ಕಾರ್ಯಾಚರಣೆ ಆರಂಭಿಸಲಾಗಿದೆ ಎಂದು ಎಂದು ಸಿಎಎನ್‌ನ ನೈಜರ್ ವಿಭಾಗದ ಮುಖ್ಯಸ್ಥರು ಹೇಳಿದ್ದಾರೆ.

ನಾಲ್ಕು ದಿನಗಳ ಹಿಂದೆಯಷ್ಟೇ ನೈಜರ್ ಸಮೀಪದ ಕೆಬ್ಬಿ ರಾಜ್ಯದ ಮಾಗಾ ಪಟ್ಟಣದ ಶಾಲೆಯ 25 ಮಕ್ಕಳನ್ನು ಬಂದೂಕುಧಾರಿಗಳು ಅಪಹರಿಸಿದ್ದರು.

## ಅಮೆರಿಕದ ವಿರೋಧವಿದ್ದರೂ ಮೊದಲ ದಿನವೇ ಘೋಷಣೆಗಳ ಅಂಗೀಕಾರ

# ಜಿ20 ಸಭೆ: ಮೋದಿ 4 ಉಪಕ್ರಮ

**ಜೊಹಾನಸ್‌ಬರ್ಗ್ (ಪಿಟಿಐ):** ಮಾದಕವಸ್ತು ಕಳ್ಳಸಾಗಾಣಿಕೆ ತಡೆ, ಭಯೋತ್ಪಾದನೆ ನಿಗ್ರಹ, ಜಾಗತಿಕ ಆರೋಗ್ಯ ರಕ್ಷಣೆ ತುರ್ತು ಸ್ಪಂದನಾ ತಂಡ ರಚಿಸುವುದು ಸೇರಿದಂತೆ ಶನಿವಾರ ಇಲ್ಲಿ ಆರಂಭಗೊಂಡ ಜಿ-20 ನಾಯಕರ ಶೃಂಗಸಭೆಯ ಆರಂಭಿಕ ಅಧಿವೇಶನದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ನಾಲ್ಕು ಉಪಕ್ರಮಗಳನ್ನು ಮುಂದಿಟ್ಟಿದ್ದಾರೆ.

ಅಮೆರಿಕದ ವಿರೋಧದ ನಡುವೆಯೇ ಜಿ20 ಶೃಂಗಸಭೆಯ ಆರಂಭಿಕ ಘೋಷಣೆಯನ್ನು ಸರ್ವಾನುಮತದಿಂದ ಅಂಗೀಕರಿಸಲಾಗಿದೆ ಎಂದು ದಕ್ಷಿಣ ಆಫ್ರಿಕಾ ಹೇಳಿದೆ.

ಎಲ್ಲರನ್ನೂ ಒಳಗೊಂಡ, ಎಲ್ಲರಿಗೂ ಉತ್ತಮ ಭವಿಷ್ಯವನ್ನು ಖಚಿತಪಡಿಸುವ ಪರಿಸರ ಸಮತೋಲಿತ, ಸಾಂಸ್ಕೃತಿಕವಾಗಿ ಶ್ರೀಮಂತವಾದ ಮತ್ತು ಸಾಮಾಜಿಕವಾಗಿ ಒಗ್ಗಟ್ಟಿನ ‘ಜಾಗತಿಕ ಸಾಂಪ್ರದಾಯಿಕ ಜ್ಞಾನ ಭಂಡಾರ ರಚನೆ’ಯ ಅಗತ್ಯವನ್ನು ಪ್ರಧಾನಿ ಮೋದಿ ತಮ್ಮ ಭಾಷಣದಲ್ಲಿ ವಿವರಿಸಿದರು.

‘ನಮ್ಮ ಅಭಿವೃದ್ಧಿಯ ಮಾನದಂಡಗಳನ್ನು ಮರು ಪರಿಶೀಲಿಸಿ ಕೊಳ್ಳಲು ಇದು ಸಕಾಲ. ಜಾಗತಿಕ ಜ್ಞಾನ ಭಂಡಾರ ರಚನೆಗೆ ಭಾರತದ ನಾಗರಿಕತೆಯ ಮೌಲ್ಯಗಳು ಮತ್ತು ಮಹಾನ್ ಮಾನವತಾವಾದದ ತತ್ವಗಳು ಮಾರ್ಗ-ದರ್ಶಿಯಾಗಿವೆ. ಸುಸ್ಥಿರ ಆರ್ಥಿಕ ಅಭಿವೃದ್ಧಿ ಎಂದರೆ ಅದು ಎಲ್ಲರನ್ನೂ ಒಳಗೊಂಡಿರಬೇಕು, ಯಾರೂ ಪ್ರಗತಿಯ ಹಾದಿಯಲ್ಲಿ ಹಿಂದುಳಿಯಬಾರದು’ ಎಂದು ಅವರು ಪ್ರತಿಪಾದಿಸಿದರು.

> ಭಾರತದ ಸಾಂಪ್ರದಾಯಿಕ ಜ್ಞಾನವು ಜಾಗತಿಕವಾಗಿ ಎಲ್ಲರಿಗೂ ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮವನ್ನು ಖಚಿತಪಡಿಸುತ್ತದೆ
>
> **ಪ್ರಧಾನಿ ನರೇಂದ್ರ ಮೋದಿ**
> ಎಕ್ಸ್ ಪೋಸ್ಟ್‌ನಲ್ಲಿ

ಜಾಗತಿಕ ಅಭಿವೃದ್ಧಿಗೆ, ಆಫ್ರಿಕಾದ ಪ್ರಗತಿಯೂ ಅತ್ಯಗತ್ಯ. ಇದಕ್ಕಾಗಿ ಆಫ್ರಿಕಾದಲ್ಲಿ ಮುಂದಿನ ಒಂದು ದಶಕದಲ್ಲಿ 10 ಲಕ್ಷ ಕೌಶಲ ತರಬೇತಿದಾರರನ್ನು ಸಿದ್ಧಗೊಳಿಸಲು ಜಿ20 ದೇಶಗಳ ಸಹಯೋಗದಲ್ಲಿ ಉಪಕ್ರಮವೊಂದನ್ನು ರೂಪಿಸಲಾಗಿದೆ ಎಂದರು.

ನೈಸರ್ಗಿಕ ವಿಕೋಪಗಳೂ ಸೇರಿದಂತೆ ಜಾಗತಿಕ ಮಟ್ಟದ ಆರೋಗ್ಯ ತುರ್ತು ಎದುರಾದಾಗ ನಾವು ಒಟ್ಟಿಗೆ, ಕ್ಷಿಪ್ರಗತಿಯಲ್ಲಿ ಕಾರ್ಯನಿರ್ವಹಿಸಬೇಕು. ಇದಕ್ಕಾಗಿ ‘ಜಿ20 ದೇಶಗಳ ಆರೋಗ್ಯ ರಕ್ಷಣೆ ತುರ್ತು ಸ್ಪಂದನಾ ತಂಡವನ್ನು ರಚಿಸಬೇಕು’ ಎಂದೂ ಅವರು ಹೇಳಿದರು.

ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್, ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಅಂಟೋನಿಯೊ ಗುಟೆರಸ್ ಸೇರಿದಂತೆ ಪ್ರಮುಖ ನಾಯಕರೊಂದಿಗೆ ಮೋದಿ ಮಾತುಕತೆ ನಡೆಸಿದರು.

### ‘ಅನಿಷ್ಟ ತೊಡೆದುಹಾಕೋಣ’

‘ಜಾಗತಿಕ ಬೆದರಿಕೆಯಾಗಿರುವ ಭಯೋತ್ಪಾದನೆ, ಅತ್ಯಂತ ಅಪಾಯಕಾರಿಯಾದ ಫೆಂಟನಿಲ್ ಮಾದಕವಸ್ತು ಕಳ್ಳಸಾಗಾಣಿಕೆ ತಡೆಯಲು ಜಿ20 ಶೃಂಗಸಭೆಯು ಪರಿಹಾರ ಕಂಡುಕೊಳ್ಳಬೇಕು. ಆ ಮೂಲಕ ನಾವು ಮಾದಕವಸ್ತು–ಭಯೋತ್ಪಾದನಾ ಆರ್ಥಿಕತೆ ಎಂಬ ಅನಿಷ್ಟವನ್ನು ತೊಡೆದುಹಾಕೋಣ’ ಎಂದು ಪ್ರಧಾನಿ ಮನವಿ ಮಾಡಿದರು.

**ಶಾಶ್ವತ ಶಾಂತಿಗೆ ಆಗ್ರಹ:** ‘ಉಕ್ರೇನ್, ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ಕಾಂಗೊ (ಡಿಆರ್‌ಸಿ), ಸುಡಾನ್ ಮತ್ತು ಆಕ್ರಮಿತ ಪ್ಯಾಲೆಸ್ಟೀನ್ ಪ್ರದೇಶದಲ್ಲಿ ನ್ಯಾಯಯುತ, ಸಮಗ್ರ ಮತ್ತು ಶಾಶ್ವತ ಶಾಂತಿ ನೆಲೆಗೊಳ್ಳಬೇಕು’ ಎಂದು ಜಿ20 ನಾಯಕರು ಆಗ್ರಹಿಸಿದ್ದಾರೆ.

### ಸಭೆ ಬಹಿಷ್ಕರಿಸಿದ್ದ ಅಮೆರಿಕ

ಜಿ20 ಶೃಂಗಸಭೆಯ ಆತಿಥ್ಯ ವಹಿಸುವ ದಕ್ಷಿಣಾ ಆಫ್ರಿಕಾದೊಂದಿಗಿನ ರಾಜತಾಂತ್ರಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಅಮೆರಿಕವು ಶೃಂಗಸಭೆಯನ್ನು ಬಹಿಷ್ಕರಿಸಿತ್ತು. ಅಮೆರಿಕದ ಅನುಪಸ್ಥಿತಿಯಲ್ಲಿ ಜಿ20 ಸಭೆಯ ಘೋಷಣೆಯನ್ನು ಅಂಗೀಕರಿಸದಂತೆಯೂ ಒತ್ತಡ ಹೇರಿತ್ತು.

ಸಾಮಾನ್ಯವಾಗಿ ಜಿ20 ಶೃಂಗಸಭೆಯ ಘೋಷಣೆಯನ್ನು ಕೊನೆಯ ದಿನ ಅಂಗೀಕರಿಸಲಾಗುತ್ತದೆ. ಆದರೆ, ಈ ಬಾರಿ ಈ ಸಂಪ್ರದಾಯವನ್ನು ಮುರಿದು ಮೊದಲ ದಿನವೇ ಜಿ20 ನಾಯಕರು ಒಮ್ಮತದಿಂದ ಪ್ರಸ್ತಾವಗಳನ್ನು ಅಂಗೀಕರಿಸಿದ್ದಾರೆ.‘ಘೋಷಣೆಗಳನ್ನು ಸರ್ವಾನುಮತದಿಂದ ಅಂಗೀಕರಿಸಲಾಗಿದೆ’ ಎಂದು ದಕ್ಷಿಣ ಆಫ್ರಿಕಾದ ಅಧ್ಯಕ್ಷ ಸಿರಿಲ್ ರಾಮಫೋಸಾ ಅವರ ವಕ್ತಾರ ವಿನ್ಸೆಂಟ್ ಮಗ್ವೆನ್ಯಾ ತಿಳಿಸಿದ್ದಾರೆ.

ಹವಾಮಾನ ವೈಪರೀತ್ಯ, ಹಸಿರು ಇಂಧನ, ಜಾಗತಿಕ ಅಸಮಾನತೆ ನಿವಾರಣೆ, ವಿದೇಶಿ ಸಾಲದ ಹೊರೆಯನ್ನು ಕಡಿಮೆ ಮಾಡುವುದೂ ಸೇರಿದಂತೆ ಹಲವು ಅಂಶಗಳ ಕುರಿತು ಜಿ20 ಶೃಂಗಭೆಯಲ್ಲಿ ಚರ್ಚೆ ನಡೆಸಬೇಕು ಎಂದು ದಕ್ಷಿಣ ಆಫ್ರಿಕಾ ಆಗ್ರಹಿಸಿದೆ. ಆದರೆ, ದಕ್ಷಿಣಾ ಆಫ್ರಿಕಾದ ಈ ಪ್ರಸ್ತಾವಗಳನ್ನು ಅಮೆರಿಕ ವಿರೋಧಿಸಿತ್ತು.

### ರೈಲಿನೊಳಗೆ ನೂಡಲ್ಸ್ ಬೇಯಿಸಿದ ಮಹಿಳೆ

**ಮುಂಬೈ (ಪಿಟಿಐ):** ಎಕ್ಸ್‌ಪ್ರೆಸ್ ರೈಲಿನ ಎ.ಸಿ ಬೋಗಿಯೊಳಗೆ ಎಲೆಕ್ಟ್ರಿಕ್ ಕೆಟಲ್‌ನಲ್ಲಿ ನೂಡಲ್ಸ್ ಬೇಯಿಸಿದ ಮಹಿಳಾ ಪ್ರಯಾಣಿಕರೊಬ್ಬರ ವಿರುದ್ಧ ರೈಲ್ವೆ ಇಲಾಖೆ ಕ್ರಮಕ್ಕೆ ಮುಂದಾಗಿದೆ.

ಮಹಿಳೆ ನೂಡಲ್ಸ್ ಬೇಯಿಸಿದ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ಬಳಿಕ ಕೇಂದ್ರ ರೈಲ್ವೆ ಇಲಾಖೆ ಅವರ ಪತ್ತೆಗೆ ಕಾರ್ಯಾಚರಣೆ ಆರಂಭಿಸಿದೆ.

ಮೊಬೈಲ್ ಚಾರ್ಜಿಂಗ್‌ಗೆ ಇರುವ ವ್ಯವಸ್ಥೆಯನ್ನು ಬಳಸಿಕೊಂಡು ಮಹಿಳೆಯು ಕೆಟಲ್‌ನಲ್ಲಿ ನೂಡಲ್ಸ್ ತಯಾರಿಸಿದ್ದಾರೆ. ಇದೇ ರೀತಿ 10–15 ಜನರಿಗೆ ಚಹಾ ಮಾಡಿಕೊಡಬಲ್ಲೆ ಎಂದು ಹೇಳಿದ್ದಾರೆ.

‘ಮಹಿಳೆ ಮತ್ತು ಆ ವಿಡಿಯೊವನ್ನು ಪೋಸ್ಟ್ ಮಾಡಿದ ಚಾನೆಲ್ ವಿರುದ್ಧ ಸೂಕ್ತ ಕ್ರಮಕೈಗೊಳ್ಳುತ್ತೇವೆ’ ಎಂದು ರೈಲ್ವೆ ಇಲಾಖೆ ‘ಎಕ್ಸ್’ನಲ್ಲಿ ತಿಳಿಸಿದೆ.

‘ರೈಲಿನಲ್ಲಿ ಎಲೆಕ್ಟ್ರಿಕ್ ಕೆಟಲ್ ಬಳಕೆ ನಿರ್ಬಂಧಿಸಲಾಗಿದೆ. ಇದರಿಂದಾಗಿ ಬೆಂಕಿ ಅವಘಡ ಸಂಭವಿಸಬಹುದು, ರೈಲಿನ ವಿದ್ಯುತ್ ವ್ಯವಸ್ಥೆಗೆ ಹಾನಿಯಾಗಬಹುದು’ ಎಂದಿದೆ.

### ಶಿಕ್ಷಣ ಸೇರಿ 10 ಮಸೂದೆ ಮಂಡನೆ

**ನವದೆಹಲಿ(ಪಿಟಿಐ):** ಡಿಸೆಂಬರ್1ರಿಂದ ಆರಂಭವಾಗುವ ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಮಂಡಿಸಲು ಸರ್ಕಾರ ಮಾಡಿಕೊಂಡಿರುವ ಕಾರ್ಯಸೂಚಿ ಪಟ್ಟಿಯಲ್ಲಿ ಪ್ರಸ್ತಾವಿತ 10 ಹೊಸ ಮಸೂದೆಗಳಲ್ಲಿ ನಾಗರಿಕ ಪರಮಾಣು ವಲಯವನ್ನು ಖಾಸಗಿ ಪಾಲುದಾರರಿಗೆ ಮುಕ್ತಗೊಳಿಸುವ ಮಸೂದೆಯೂ ಸೇರಿದೆ.

ಭಾರತದಲ್ಲಿ ಪರಮಾಣು ಶಕ್ತಿಯ ಬಳಕೆ ಮತ್ತು ನಿಯಂತ್ರಣದ ನಿರ್ಣಾಯಕ ಪಾತ್ರವಹಿಸಲಿರುವ 'ಪರಮಾಣು ಶಕ್ತಿ ಮಸೂದೆ–2025' ಹಾಗೂ ಭಾರತೀಯ ಉನ್ನತ ಶಿಕ್ಷಣ ಆಯೋಗದ ಮಸೂದೆ ಕೂಡ ಈ ಕಾರ್ಯಸೂಚಿಯಲ್ಲಿದೆ.

**ಉನ್ನತ ಶಿಕ್ಷಣ ನಿಯಂತ್ರಣ ಆಯೋಗ ಮಸೂದೆ:** ವಿಶ್ವವಿದ್ಯಾಲಯ ಅನುದಾನ ಆಯೋಗ ದಂತಹ(ಯುಜಿಸಿ) ಸಂಸ್ಥೆಗಳ ಬದಲು, ಏಕ ರೂಪದಉನ್ನತ ಶಿಕ್ಷಣ ನಿಯಂತ್ರಣ ಆಯೋಗ ಸ್ಥಾಪಿಸುವ ಮಸೂದೆಯನ್ನು ಡಿ. 1ರಿಂದ ಆರಂಭವಾಗಲಿರುವ ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಮಂಡಿಸಲಾಗುತ್ತಿದೆ. ಲೋಕಸಭೆಯ ವೇಳಾಪಟ್ಟಿ ಪ್ರಕಾರ, ಪ್ರಸ್ತಾವಿತ ಈ ಮಸೂದೆಯನ್ನು ‘ಭಾರತ ಉನ್ನತ ಶಿಕ್ಷಣ ಆಯೋಗದ ಮಸೂದೆ’ ಎಂದು ನಾಮಕರಣ ಮಾಡಲಾಗಿದೆ. ಯುಜಿಸಿ, ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಇ) ಮತ್ತು ಶಿಕ್ಷಕರ ಶಿಕ್ಷಣ ರಾಷ್ಟ್ರೀಯ ಮಂಡಳಿಯನ್ನು(ಎನ್‌ಸಿಟಿಇ) ಬದಲಾಯಿಸಿ, ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಪ್ರಸ್ತಾಪಿಸಲಾದ ಭಾರತೀಯ ಉನ್ನತ ಶಿಕ್ಷಣ ಆಯೋಗವನ್ನು ರಚಿಸಲು ಉದ್ದೇಶಿಸಲಾಗಿದೆ.

### ‘ಪ್ರಜಾಪ್ರಭುತ್ವ ಹೀಗೆಯೇ ಕೆಲಸ ಮಾಡಬೇಕು’

**ನವದೆಹಲಿ (ಪಿಟಿಐ):** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಭೇಟಿಯಾದ ನ್ಯೂಯಾರ್ಕ್‌ನ ಚುನಾಯಿತ ಮೇಯರ್ ಮಮ್ದಾನಿ ನಡೆಯನ್ನು ಪ್ರಶಂಸಿರುವ ಕಾಂಗ್ರೆಸ್ ನಾಯಕ, ಸಂಸದ ಶಶಿ ತರೂರ್, ‘ಪ್ರಜಾಪ್ರಭುತ್ವ ಹೀಗೆಯೇ ಕೆಲಸ ಮಾಡಬೇಕು, ಭಾರತದಲ್ಲಿ ಇದನ್ನು ಎದುರು ನೋಡುತ್ತೇನೆ’ ಎಂದರು.

ಇದೇ ಅವಕಾಶವನ್ನು ಬಳಸಿಕೊಂಡಿರುವ ಬಿಜೆಪಿ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೂ ಈ ಸಂದೇಶ ಅರ್ಥವಾಗುತ್ತದೆ ಎಂದು ಪ್ರತಿಕ್ರಿಯಿಸಿದೆ.

ಟ್ರಂಪ್ ಹಾಗೂ ಮಮ್ದಾನಿ ಭೇಟಿಯಾದ ವಿಡಿಯೊವನ್ನು ತಮ್ಮ ‘ಎಕ್ಸ್’ ಖಾತೆಯಲ್ಲಿ ಮರುಪೋಸ್ಟ್ ಮಾಡಿರುವ ತರೂರ್, ‘ಪ್ರಜಾಪ್ರಭುತ್ವವು ಹೀಗೆಯೇ ಕೆಲಸ ಮಾಡುತ್ತದೆ. ಚುನಾವಣಾ ಸಂದರ್ಭದಲ್ಲಿ ನಿಮ್ಮ ದೃಷ್ಟಿಕೋನದಲ್ಲಿ ಉತ್ಸಾಹದಿಂದ ಹೋರಾಟ ನಡೆಸಬೇಕು. ಚುನಾವಣೆ ಮುಗಿದ ನಂತರ, ಜನರ ಸೇವೆ ಹಾಗೂ ದೇಶದ ಹಿತದೃಷ್ಟಿಯಿಂದ ಪರಸ್ಪರ ಸಹಕಾರದಿಂದ ಕೆಲಸ ಮಾಡಬೇಕು’ ಎಂದು ಹೇಳಿದ್ದಾರೆ.

‘ಇಂತಹುದ್ದೇ ಬೆಳವಣಿಗೆಗಳನ್ನು ಭಾರತದಲ್ಲಿಯೂ ನೋಡಲು ಬಯಸುತ್ತೇನೆ, ನನ್ನ ಕೆಲಸವನ್ನು ನಾನು ಮಾಡುತ್ತಿದ್ದೇನೆ’ ಎಂದು ವಿವರಿಸಿದ್ದಾರೆ.

ತರೂರ್ ಅಭಿಪ್ರಾಯಕ್ಕೆ ಪ್ರತಿಕ್ರಿಯಿಸಿರುವ ಬಿಜೆಪಿ ವಕ್ತಾರ ಶೆಹಜಾದ್ ಪೂನ್‌ವಾಲಾ, ತರೂರ್ ಅವರು ಮೆಚ್ಚುಗೆ ವ್ಯಕ್ತಪಡಿಸಿರುವುದು ರಾಹುಲ್ ಗಾಂಧಿ ಅವರಿಗೂ ಸಂದೇಶ ಅರ್ಥವಾಗಲಿದೆ ಎಂದು ಭಾವಿಸುತ್ತೇವೆ. ಮತ್ತೊಮ್ಮೆ ದೇಶವೇ ಮೊದಲು, ಪರಿವಾರ ಅಲ್ಲ ಎಂಬುದನ್ನು ಕಾಂಗ್ರೆಸ್‌ಗೆ ಮನವರಿಕೆ ಮಾಡಿಕೊಟ್ಟಿದ್ದಾರೆ. ಪ್ರಜಾತಾಂತ್ರಿಕವಾಗಿ ವರ್ತಿಸಿ, ಸೋತವರಂತೆ ಅಲ್ಲ. ಇದರಿಂದ ರಾಹುಲ್ ಗಾಂಧಿ ಅವರಿಗೂ ಸಂದೇಶ ತಲುಪಿದೆಯಾ..? ಅಥವಾ ತರೂರ್ ವಿರುದ್ಧ ಮತ್ತೊಂದು ಫತ್ವಾ ಹೊರಡಲಿದೆಯಾ? ಎಂದು ಪ್ರಶ್ನಿಸಿದ್ದಾರೆ.

## ವಿಮಾ ವಲಯದಲ್ಲಿ ಎಫ್‌ಡಿಐ ಚಳಿಗಾಲದ ಅಧಿವೇಶನದಲ್ಲಿ ಮಸೂದೆ




**ನವದೆಹಲಿ (ಪಿಟಿಐ):** ದೇಶದ ವಿಮಾ ವಲಯದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಯ (ಎಫ್‌ಡಿಐ) ಪ್ರಮಾಣವನ್ನು ಶೇಕಡ 100ಕ್ಕೆ ಹೆಚ್ಚಿಸಲು ಅವಕಾಶ ಕಲ್ಪಿಸುವ ಮಸೂದೆಯನ್ನು ಮುಂಬರುವ ಚಳಿಗಾಲದ ಅಧಿವೇಶನದ ಸಂದರ್ಭದಲ್ಲಿ ಸಂಸತ್ತಿನಲ್ಲಿ ಮಂಡಿಸಲು ಕೇಂದ್ರ ಸರ್ಕಾರ ಆಲೋಚನೆ ನಡೆಸಿದೆ.

ಸಂಸತ್ತಿನ ಚಳಿಗಾಲದ ಅಧಿವೇಶನವು ಡಿಸೆಂಬರ್ 1ರಿಂದ ಶುರುವಾಗಲಿದೆ. ಲೋಕಸಭಾ ಸುದ್ದಿಪತ್ರದಲ್ಲಿ ಇರುವ ಮಾಹಿತಿ ಪ್ರಕಾರ, ವಿಮಾ ಕಾನೂನುಗಳ (ತಿದ್ದುಪಡಿ) ಮಸೂದೆಯು ಮಂಡನೆ ಆಗಲಿದೆ.

ಎಫ್‌ಡಿಐ ಮಿತಿಯನ್ನು ಈಗಿನ ಶೇ 74ರ ಬದಲು, ಶೇ 100ಕ್ಕೆ ಹೆಚ್ಚಿಸುವ ಪ್ರಸ್ತಾವವನ್ನು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಈ ವರ್ಷದ ಬಜೆಟ್ ಭಾಷಣದಲ್ಲಿ ಮಾಡಿದ್ದರು. ಹೊಸ ತಲೆಮಾರಿನ ಹಣಕಾಸು ಸುಧಾರಣೆಗಳ ಭಾಗವಾಗಿ ಈ ಕ್ರಮ ಎಂದು ಅವರು ಹೇಳಿದ್ದರು.

ಇದುವರೆಗೆ ದೇಶದ ವಿಮಾ ವಲಯವು ₹82 ಸಾವಿರ ಕೋಟಿ ವಿದೇಶಿ ನೇರ ಬಂಡವಾಳ ಆಕರ್ಷಿಸಿದೆ.

ವಿಮಾ ಕಾಯ್ದೆ –1938, ಜೀವ ವಿಮಾ ನಿಗಮ ಕಾಯ್ದೆ – 1956 ಮತ್ತು ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ – 1999ಕ್ಕೆ ತಿದ್ದುಪಡಿ ತರಲು ಉದ್ದೇಶಿಸಲಾಗಿದೆ.

ಎಲ್‌ಐಸಿ ಕಾಯ್ದೆಗೆ ತರಲು ಉದ್ದೇಶಿಸಿರುವ ಬದಲಾವಣೆಗಳು, ಭಾರತೀಯ ಜೀವ ವಿಮಾ ನಿಗಮದ ಆಡಳಿತ ಮಂಡಳಿಗೆ ಕಾರ್ಯಾಚರಣೆ ತೀರ್ಮಾನಗಳನ್ನು ತೆಗೆದುಕೊಳ್ಳುವ ಅಧಿಕಾರ ನೀಡುವ ಪ್ರಸ್ತಾವನೆ ಹೊಂದಿವೆ. ತಿದ್ದುಪಡಿಯು ಕಾನೂನಾಗಿ ಜಾರಿಗೆ ಬಂದರೆ ಶಾಖೆಗಳ ವಿಸ್ತರಣೆ, ನೇಮಕಾತಿಯಂತಹ ತೀರ್ಮಾನಗಳನ್ನು ಆಡಳಿತ ಮಂಡಳಿಯೇ ತೆಗೆದುಕೊಳ್ಳಲು ಸಾಧ್ಯವಾಗುತ್ತದೆ.

ಪ್ರಸ್ತಾವಿತ ತಿದ್ದುಪಡಿಗಳು ವಿಮಾ ಪಾಲಿಸಿ ಹೊಂದಿರುವವರ ಹಿತಾಸಕ್ತಿ ಕಾಯುವ, ಅವರ ಹಣಕಾಸಿನ ಭದ್ರತೆಯನ್ನು ಹೆಚ್ಚಿಸುವ, ವಿಮಾ ವಲಯಕ್ಕೆ ಇನ್ನಷ್ಟು ಹೆಚ್ಚು ಕಂಪನಿಗಳು ಪ್ರವೇಶಿಸುವುದಕ್ಕೆ ನೆರವು ಒದಗಿಸುವ, ಆ ಮೂಲಕ ಆರ್ಥಿಕ ಬೆಳವಣಿಗೆ ಮತ್ತು ಉದ್ಯೋಗ ಸೃಷ್ಟಿಯನ್ನು ಉತ್ತೇಜಿಸುವ ಉದ್ದೇಶ ಹೊಂದಿವೆ.

## ಬಾಂಗ್ಲಾದಲ್ಲಿ ಭೂಕಂಪ: ಸಾವಿನ ಸಂಖ್ಯೆ 10ಕ್ಕೆ ಏರಿಕೆ



**ಢಾಕಾ (ಪಿಟಿಐ/ಎಎಫ್‌ಪಿ):** ಬಾಂಗ್ಲಾದೇಶದಲ್ಲಿ ಶುಕ್ರವಾರ ಸಂಭವಿಸಿದ ಭೂಕಂಪದಲ್ಲಿ ಮೃತಪಟ್ಟವರ ಸಂಖ್ಯೆ 10ಕ್ಕೆ ಏರಿಕೆಯಾಗಿದ್ದು, 100ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ. ಶನಿವಾರ ಕೂಡಾ ಢಾಕಾದಲ್ಲಿ ಸಣ್ಣ ಪ್ರಮಾಣದ ಕಂಪನ ಉಂಟಾಗಿದೆ.

ಢಾಕಾ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಸ್ಥಳೀಯ ಕಾಲಮಾನ ಶುಕ್ರವಾರ ಬೆಳಿಗ್ಗೆ 10.38ಕ್ಕೆ ಭೂಕಂಪ ಸಂಭವಿಸಿದ್ದು, ರಿಕ್ಟರ್ ಮಾಪಕದಲ್ಲಿ 5.7 ತೀವ್ರತೆ ದಾಖಲಾಗಿದೆ. ಹಲವು ಮನೆಗಳು ಮತ್ತು ಕಟ್ಟಡಗಳಿಗೆ ಹಾನಿಯಾಗಿವೆ.

‘ಢಾಕಾದಲ್ಲಿ ನಾಲ್ವರು, ಭೂಕಂಪದ ಕೇಂದ್ರಬಿಂದುವಾಗಿದ್ದ ನರಸಿಂಗಡಿಯಲ್ಲಿ ಐವರು ಮತ್ತು ನಾರಾಯಣಗಂಜ್‌ನಲ್ಲಿ ಒಬ್ಬರು ಮೃತಪಟ್ಟಿದ್ದಾರೆ’ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ನರಸಿಂಗಡಿಯ 10 ಕಿ.ಮೀ ಆಳದಲ್ಲಿ ಭೂಕಂಪ ಸಂಭವಿಸಿದೆ ಎಂದು ಹವಾಮಾನ ಇಲಾಖೆಯ ಕಚೇರಿ ತಿಳಿಸಿದೆ.

ಢಾಕಾದ ಹೊರವಲಯದ ಗಾಜಿಪುರದ ಕೈಗಾರಿಕಾ ಪ್ರದೇಶವೊಂದರಲ್ಲೇ 100ಕ್ಕೂ ಹೆಚ್ಚು ಕಾರ್ಮಿಕರು ಗಾಯಗೊಂಡಿದ್ದಾರೆ. ಭೂಕಂಪದ ಸಮಯದಲ್ಲಿ ಕಟ್ಟಡಗಳಿಂದ ಹೊರಬರಲು ಪ್ರಯತ್ನಿಸಿದಾಗ ಗಾಯಗೊಂಡರು ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

ಢಾಕಾದ ಉತ್ತರ ಭಾಗದ ಅಶುಲಿಯಾದಲ್ಲಿ ಶನಿವಾರ ಬೆಳಿಗ್ಗೆ ಸಂಭವಿಸಿದ ಕಂಪನದ ತೀವ್ರತೆ 3.3ರಷ್ಟು ದಾಖಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



## ನ್ಯೂಯಾರ್ಕ್ ಮೇಯರ್ ಆಗಿ ಆಯ್ಕೆಯಾದ ಬಳಿಕ ನಡೆದ ಮೊದಲ ಭೇಟಿ

# ಮಮ್ದಾನಿ ಹೊಗಳಿದ ಟ್ರಂಪ್

**ನ್ಯೂಯಾರ್ಕ್/ವಾಷಿಂಗ್ಟನ್ (ಪಿಟಿಐ):** ನ್ಯೂಯಾರ್ಕ್‌ನ ಮೇಯರ್ ಆಗಿ ಆಯ್ಕೆಯಾಗಿರುವ ಜೊಹ್ರಾನ್ ಮಮ್ದಾನಿ ಅವರು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಇದೇ ಮೊದಲ ಬಾರಿಗೆ ಶ್ವೇತ ಭವನದಲ್ಲಿ ಶುಕ್ರವಾರ ಭೇಟಿಯಾಗಿ ಮಾತುಕತೆ ನಡೆಸಿದರು.

‘ಸಭೆ ಅತ್ಯುತ್ತಮವಾಗಿತ್ತು. ಇವರು ಖಂಡಿತವಾಗಿಯೂ ಉತ್ತಮ ಕೆಲಸಗಳನ್ನು ಮಾಡಬಲ್ಲರು’ ಎಂದು ಮಮ್ದಾನಿ ಅವರನ್ನು ಟ್ರಂಪ್ ಮುಕ್ತಕಂಠದಿಂದ ಹೊಗಳಿದರು.

ಕೆಲವೇ ತಿಂಗಳ ಹಿಂದೆ, ಚುನಾವಣಾ ಪ್ರಚಾರದ ವೇಳೆ ಟ್ರಂಪ್ ಅವರು ಮಮ್ದಾನಿ ಅವರನ್ನು ವೈಯಕ್ತಿಕವಾಗಿ ನಿಂದಿಸಿದ್ದರು. ಇದಕ್ಕೆ ಪ್ರತಿಯಾಗಿ ಮಮ್ದಾನಿ ಅವರು ಟ್ರಂಪ್ ವಿರುದ್ಧ ಹಲವು ಆರೋಪಗಳನ್ನೂ ಮಾಡಿದ್ದರು. ಈ ಕಾರಣದಿಂದಲೇ ನ್ಯೂಯಾರ್ಕ್ ಮೇಯರ್ ಚುನಾವಣೆಯು ಜಗತ್ತಿನ ಗಮನ ಸೆಳೆದಿತ್ತು.

**‘ಯುದ್ಧ ನಿಲ್ಲಿಸಿದ್ದು ನಾನೇ’:** ಮಮ್ದಾನಿ ಅವರೊಂದಿಗೆ ನಡೆದ ಸಭೆಯಲ್ಲಿ ಟ್ರಂಪ್ ಅವರು ಭಾರತ–ಪಾಕಿಸ್ತಾನದ ಮಧ್ಯೆ ನಡೆದ ಸಂಘರ್ಷವನ್ನು ಪ್ರಸ್ತಾಪಿಸಿದರು. ‘ಯುದ್ಧ ನಿಲ್ಲಿಸಿದ್ದು ನಾನೇ’ ಎಂದು ಪುನರುಚ್ಚರಿಸಿದರು.



ಡೊನಾಲ್ಡ್ ಟ್ರಂಪ್ ಅವರನ್ನು ಜೊಹ್ರಾನ್ ಮಮ್ದಾನಿ ಅವರು ಶುಕ್ರವಾರ ಶ್ವೇತ ಭವನದಲ್ಲಿ ಭೇಟಿಯಾದರು —ಎಎಫ್‌ಪಿ ಚಿತ್ರ

### ‘ಹೌದು ಎಂದು ಉತ್ತರಿಸಿ’

‘ಟ್ರಂಪ್ ಅವರನ್ನು ಒಬ್ಬ ಫ್ಯಾಸಿಸ್ಟ್, ನಿರಂಕುಶವಾದಿ ಎಂದೆಲ್ಲಾ ಕರೆದಿದ್ದೀರಲ್ಲಾ. ಈ ಹೇಳಿಕೆಗೆ ನೀವು ಈಗಲೂ ಬದ್ಧರಾಗಿದ್ದೀರಾ’ ಎಂದು ಪತ್ರಕರ್ತರು ಮಮ್ದಾನಿ ಅವರನ್ನು ಪ್ರಶ್ನಿಸಿದರು. ಅವರು ಇನ್ನೇನು ಉತ್ತರಿಸಬೇಕು`, ಅಷ್ಟರಲ್ಲಿ ಟ್ರಂಪ್ ಮಧ್ಯೆ ಮಾತನಾಡಿ, ‘ಪರವಾಗಿಲ್ಲ. ಹೌದು ಎಂದೇ ಉತ್ತರಿಸಿ’ ಎಂದರು. ‘ನಾವು ಒಟ್ಟಿಗೆ ಕೆಲಸ ಮಾಡಿದಂತೆ ಅವರ ಅಭಿಪ್ರಾಯವೂ ಬದಲಾಗುತ್ತದೆ. ಆತ ಹಾಗೆ ಕರೆದಿದ್ದರಿಂದ, ನನಗೆ ಅವಮಾನವೇನೂ ಆಗಿಲ್ಲ’ ಎಂದೂ ಟ್ರಂಪ್ ಪ್ರತಿಕ್ರಿಯಿಸಿದರು.

> ಅಪರಾಧ ಇರಬಾರದು, ಮನೆ ನಿರ್ಮಿಸಬೇಕು, ಬಾಡಿಗೆ ತಗ್ಗಬೇಕು– ಮಮ್ದಾನಿ ಅವರ ಈ ಅಭಿಲಾಷೆ ನನ್ನದೂ ಕೂಡ. ನಾನು ಅವರಿಗೆ ನೋವು ಮಾಡುವುದಿಲ್ಲ
>
> **ಡೊನಾಲ್ಡ್ ಟ್ರಂಪ್**
> ಅಮೆರಿಕ ಅಧ್ಯಕ್ಷ

> ಮಾತುಕತೆ ಉತ್ತಮವಾಗಿತ್ತು. ನ್ಯೂಯಾರ್ಕ್ ಜನರ ದೈನಂದಿನ ಬದುಕನ್ನು ಕೈಗೆಟುಕುವ ಹಾಗೆ ಮಾಡಲು ಅಧ್ಯಕ್ಷರೊಂದಿಗೆ ಸೇರಿ ಕೆಲಸ ಮಾಡುತ್ತೇನೆ
>
> **ಜೊಹ್ರಾನ್ ಮಮ್ದಾನಿ,** ನ್ಯೂಯಾರ್ಕ್‌ನ ಚುನಾಯಿತ ಮೇಯರ್

### ಪ್ರಚಾರದ ವೇಳೆ ಟ್ರಂಪ್ ಹೇಳಿದ್ದು...

- ಮಮ್ದಾನಿ ಮೇಯರ್ ಆಗಿ ಆಯ್ಕೆಯಾದರೆ, ನಗರವು ಆರ್ಥಿಕವಾಗಿ, ಸಾಮಾಜಿಕವಾಗಿ ವಿಪತ್ತಿಗೆ ಒಳಗಾಗಲಿದೆ. ನಾನು ನ್ಯೂಯಾರ್ಕ್‌ಗೆ ಯಾವುದೇ ಅನುದಾನ ನೀಡುವುದಿಲ್ಲ
- ವಲಸಿಗರ ರಕ್ಷಣೆಗೆ ಮಮ್ದಾನಿ ಅವರೇನಾದರೂ ಮುಂದಾದರೆ ಅವರನ್ನು ಬಂಧಿಸುತ್ತೇನೆ. ಆತನೊಬ್ಬ ಕಮ್ಯುನಿಸ್ಟ್
- ಮಮ್ದಾನಿ ಆಯ್ಕೆಯಾದರೆ, 9/11 ಮತ್ತೊಮ್ಮೆ ಮರುಕಳಿಸುತ್ತದೆ. ಈತ ಒಬ್ಬ ಜಿಹಾದಿ (ರಿಪಬ್ಲಿಕನ್ ಪಕ್ಷದ ನಾಯಕರೊಬ್ಬರು ಆಡಿದ್ದ ಮಾತಿನ ಬಗ್ಗೆ ಪತ್ರಕರ್ತರ ಪ್ರಶ್ನೆಗೆ ಉತ್ತರಿಸುತ್ತಾ...)

### ಭೇಟಿ ಬಳಿಕ ಹೇಳಿದ್ದು...

- ನ್ಯೂಯಾರ್ಕ್‌ನಲ್ಲಿ ನಾನು ಬಹಳ ಆರಾಮವಾಗಿ ಇರಲಿದ್ದೇನೆ. ನಾನು ಅಂದುಕೊಂಡದ್ದಕ್ಕಿಂತ ಹೆಚ್ಚಿನ ವಿಚಾರಗಳಲ್ಲಿ ನಮ್ಮ ಮಧ್ಯೆ ಒಮ್ಮತ ಮೂಡಿದೆ
- ಯಾವುದೇ ಸಾಮಾನ್ಯ ಹುಡುಗನಿಗಿಂತ ಮಮ್ದಾನಿ ಅವರದ್ದು ವಿಭಿನ್ನ ವ್ಯಕ್ತಿತ್ವ. ಈತ ಮೇಯರ್ ಆಗಿ ಆಯ್ಕೆ ಆಗುತ್ತಾನೆ ಎಂದು ಯಾರೂ ಊಹಿಸಿರಲಿಲ್ಲ. ಮೇಯರ್‌ವರೆಗಿನ ಈತನ ಪ್ರಯಾಣ ಚೆನ್ನಾಗಿದೆ
- ನ್ಯೂಯಾರ್ಕ್ ನಗರವನ್ನು ಮತ್ತೊಮ್ಮೆ ಗ್ರೇಟ್ ಮಾಡಬೇಕು ಎಂದು ಈತ ಬಯಸುತ್ತಿದ್ದಾನೆ. ನಾನು ಇವನಿಗೆ ಉತ್ಸಾಹ ತುಂಬುವ ವ್ಯಕ್ತಿಯಾಗಿ ಸಹಕಾರ ನೀಡುತ್ತೇನೆ

### ಮುಂಬೈ ಧಾರಣೆ (ಶೇಂಗಾ)

22-11-2025

| | |
|---|---|
| ಜಾವಾ 70/80(ಹೊಸ) | 10600-10700 |
| ಜಾವಾ 80/90(ಹೊಸ) | 9900-10000 |
| ದಪ್ಪ ಮಧ್ಯಪ್ರದೇಶ (ಹೊಸ) | 7800-7900 |
| ದಪ್ಪ ಗುಜರಾತ್ (ಹೊಸ) | 8900-9000 |
| **ಶೇಂಗಾ ಎಣ್ಣೆ (10 ಕೆಜಿಗೆ)** | |
| ಕಚ್ಚಾ (ತೆರಿಗೆ ಬಿಟ್ಟು) | 1530(1525) |
| ಒಂದು ವಾರದ ಡೆಲಿವರಿ | 1525(1520) |
| ಪಾಮ್ ವಾರದ ಡೆಲಿವರಿ | 1248 (1253) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1405 (1410) |
| **ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)** | |
| ಅಪರಂಜಿ ಚಿನ್ನ 10 ಗ್ರಾಂ | 1,23,200 (1,23,400) |
| ಬೆಳ್ಳಿ ಕೆ.ಜಿಗೆ | 1,53,800 (1,53,000) |

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

### ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

| | |
|---|---|
| ಆರ್‌ಎಸ್‌ಎಸ್-4 | ₹181.50 |
| ಆರ್‌ಎಸ್‌ಎಸ್-5 | ₹176.50 |
| ಗುಡ್ ಲಾಟ್ | ₹164 |

### ಮುಂಬೈ ಖಾದ್ಯ ತೈಲ

(ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1520 (1515) |
| ಸೋಯಾ (ರಿಫೈನ್ಡ್) | ₹1275 (1280) |
| ಸೂರ್ಯಕಾಂತಿ (ರಿಫೈನ್ಡ್) | ₹1475 (1480) |
| ಪಾಮೋಲಿನ್ | ₹1250 (1255) |

### ಮುದ್ರೆಮನೆ ಕಾಫಿ

(50 ಕೆಜಿಗೆ)

| | |
|---|---|
| ಎಪಿ | ₹28,750 |
| ಎಸಿ | ₹15,540 |
| ಆರ್‌ಪಿ | ₹18,900 |
| ಆರ್‌ಸಿ | ₹10,590 |

### ಮೊಟ್ಟೆ ಧಾರಣೆ

(ಎನ್‌ಇಸಿಸಿ)

ಬೆಂಗಳೂರು: 100 ಕ್ಕೆ ₹675; 12 ಕ್ಕೆ ₹96

ಮೈಸೂರು: 100 ಕ್ಕೆ ₹675

### ತೀರ್ಥಹಳ್ಳಿ

| | |
|---|---|
| ಬೆಟ್ಟೆ | 61899–72199 |
| ಇಡಿ | 40199–59969 |
| ಗೊರಬಲು | 35190–41699 |
| ರಾಶಿ | 40999–60001 |
| ಸರಕು | 92150–92150 |
| ರಾಶಿ | 42018–48399 |

# 100ಕ್ಕೂ ಹೆಚ್ಚು ಕೋರ್ಸ್‌ಗೆ ಒಪ್ಪಿಗೆ

## ಉದ್ಯೋಗಾವಕಾಶ ಇರುವ ಕೋರ್ಸ್‌ಗಳಿಗೆ ಒತ್ತು ನೀಡಿದ ಬೆಂಗಳೂರು ನಗರ ವಿವಿ

• ಎ.ಎಂ.ಸುರೇಶ

**ಮುಖ್ಯಾಂಶಗಳು**

- ಸಾಂಪ್ರದಾಯಿಕ ಕೋರ್ಸ್‌ಗಳಿಗೆ ಕ್ರಮೇಣ ತಿಲಾಂಜಲಿ
- 2026–27ನೇ ಸಾಲಿನಿಂದ ಹೊಸ ಕೋರ್ಸ್‌ಗಳು ಪ್ರಾರಂಭ
- ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆ ಹೆಚ್ಚಿಸಲು ಒತ್ತು

**ಬೆಂಗಳೂರು:** ಬದಲಾಗುತ್ತಿರುವ ಉದ್ಯಮ ಜಗತ್ತಿನಲ್ಲಿ ಸೃಷ್ಟಿಯಾಗುತ್ತಿರುವ ಉದ್ಯೋಗ ಅವಕಾಶಗಳಿಗೆ ಅನುಗುಣವಾಗಿ ಸರ್ಟಿಫಿಕೇಟ್, ಡಿಪ್ಲೊಮಾ, ಪದವಿ ಮತ್ತು ಸ್ನಾತಕೋತ್ತರ ಪದವಿಯಲ್ಲಿ 100ಕ್ಕೂ ಹೆಚ್ಚು ಹೊಸ ಕೋರ್ಸ್‌ಗಳನ್ನು ಆರಂಭಿಸಲು ಬೆಂಗಳೂರು ನಗರ ವಿಶ್ವವಿದ್ಯಾಲಯ ನಿರ್ಧರಿಸಿದೆ.

ಹಲವು ವರ್ಷಗಳಿಂದ ಇರುವ ಸಾಂಪ್ರದಾಯಿಕವಾದ ಡಿಪ್ಲೊಮಾ, ಬಿ.ಎ, ಬಿ.ಎಸ್ಸಿ, ಎಂ.ಎ, ಎಂ.ಎಸ್ಸಿ ಕೋರ್ಸ್‌ಗಳಿಗೆ ಇತ್ತೀಚಿನ ವರ್ಷಗಳಲ್ಲಿ ಬೇಡಿಕೆ ಕಡಿಮೆಯಾಗಿದೆ. ಈ ಕೋರ್ಸ್‌ಗಳನ್ನು ಮಾಡಿದ ಬಳಿಕ ಉದ್ಯೋಗ ಸಿಗುವುದಿಲ್ಲ ಎಂಬ ಕಾರಣಕ್ಕೆ ಹಳೆಯ ಕಾಂಬಿನೇಷನ್ ಇರುವ ಕೋರ್ಸ್‌ಗಳಿಗೆ ಸೇರುವವರ ಸಂಖ್ಯೆ ಕಡಿಮೆಯಾಗಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಹೊಸ ಕೋರ್ಸ್‌ಗಳನ್ನು ಪರಿಚಯಿಸಲಾಗುತ್ತಿದೆ.

ಸೈಬರ್ ಸೆಕ್ಯೂರಿಟಿ, ಕೃತಕ ಬುದ್ಧಿಮತ್ತೆ, ಡೇಟಾ ಸೈನ್ಸ್ ಆ್ಯಂಡ್ ಮಷಿನ್ ಲರ್ನಿಂಗ್, ಡಿಜಿಟಲ್ ಮಾರುಕಟ್ಟೆ, ಸಾಮಾಜಿಕ ಮಾಧ್ಯಮಗಳ ನಿರ್ವಹಣೆ, ಇವೆಂಟ್ ಮ್ಯಾನೇಜ್‌ಮೆಂಟ್, ಕ್ವಾಂಟಮ್ ಕಂಪ್ಯೂಟಿಂಗ್, ಸೆಮಿ ಕಂಡಕ್ಟರ್ ಟೆಕ್ನಾಲಜಿ, ಅನಿಮೇಷನ್, ವೆಬ್ ಡೆವಲಪ್‌ಮೆಂಟ್ ಇತ್ಯಾದಿ ಕ್ಷೇತ್ರಗಳಲ್ಲಿ ಉದ್ಯೋಗ ಅವಕಾಶಗಳಿದ್ದು ಈ ವಿಷಯಗಳಲ್ಲಿ ಕೋರ್ಸ್‌ಗಳು ಶುರುವಾಗಲಿವೆ.

ಮುಂಬರುವ ಶೈಕ್ಷಣಿಕ ಸಾಲಿನಿಂದ (2026–27) ಹೊಸ ಕೋರ್ಸ್‌ಗಳನ್ನು ಆರಂಭಿಸಲು ವಿಶ್ವವಿದ್ಯಾಲಯದ ಅಕಾಡೆಮಿಕ್ ಕೌನ್ಸಿಲ್, ಸಿಂಡಿಕೇಟ್ ಸಭೆ ಒಪ್ಪಿಗೆ ನೀಡಿದ್ದು, ಈ ಸಂಬಂಧ ಆದೇಶ ಹೊರಡಿಸಲಾಗಿದೆ. ಈ ಕೋರ್ಸ್‌ಗಳನ್ನು ಆರಂಭಿಸಲು ಬಯಸುವ ಕಾಲೇಜುಗಳು ಸಂಯೋಜನೆ ಪಡೆಯಲು ಈ ತಿಂಗಳ 30ರ ಒಳಗೆ ವಿಶ್ವವಿದ್ಯಾಲಯಕ್ಕೆ ಅರ್ಜಿ ಸಲ್ಲಿಸಬೇಕು ಎಂದು ವಿ.ವಿ.ಯ ಕುಲಸಚಿವ ನವೀನ್ ಜೋಸೆಫ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಕಲೆ, ವಿಜ್ಞಾನ, ವಾಣಿಜ್ಯ ಮತ್ತು ನಿರ್ವಹಣೆ, ವಿಜ್ಞಾನ ಮತ್ತು ತಂತ್ರಜ್ಞಾನ, ಶಿಕ್ಷಣ ಕ್ಷೇತ್ರದಲ್ಲಿ ಯಾವುದಕ್ಕೆ ಹೆಚ್ಚು ಬೇಡಿಕೆ ಇದೆ ಎಂಬುದನ್ನು ವಿಶ್ಲೇಷಣೆ ಮಾಡಿ ಹೊಸ ಕೋರ್ಸ್‌ಗಳನ್ನು ಆರಂಭಿಸುತ್ತಿದ್ದು, ಇದಕ್ಕೆ ಸಂಬಂಧಿಸಿದ ಪಠ್ಯವನ್ನು ಶೈಕ್ಷಣಿಕ ವರ್ಷ ಆರಂಭವಾಗುವ ಮೊದಲೇ ಸಿದ್ಧಪಡಿಸಲಾಗುತ್ತದೆ' ಎಂದು ಅವರು ವಿವರಿಸಿದರು.

ಹೇರ್ ಸ್ಟೈಲ್, ಬೇಕರಿ, ಕಂಟೆಂಟ್ ರೈಟಿಂಗ್, ಸ್ಪೋಕನ್ ಇಂಗ್ಲಿಷ್, ಕನ್ನಡ ಭಾಷೆ, ಅಕಾಡೆಮಿಕ್ ರೈಟಿಂಗ್ ಆ್ಯಂಡ್ ಪಬ್ಲಿಕೇಷನ್, ಫೋಟೋಗ್ರಫಿ, ಸಮುದಾಯ ಅಭಿವೃದ್ಧಿ ಮತ್ತು ಆಡಳಿತದಲ್ಲಿ ಭಾಗವಹಿಸುವಿಕೆ, ಮಾನವ ಹಕ್ಕುಗಳು ಮತ್ತು ಸಾಮಾಜಿಕ ನ್ಯಾಯ, ಪತ್ರಿಕೋದ್ಯಮ, ಪಾಲಿ ಭಾಷೆ ಮತ್ತು ಸಾಹಿತ್ಯ ಸೇರಿದಂತೆ 38 ವಿಷಯಗಳಲ್ಲಿ ಸರ್ಟಿಫಿಕೇಟ್, ಡಿಪ್ಲೊಮಾ, ಪಿ.ಜಿ ಡಿಪ್ಲೊಮಾ ಆರಂಭಿಸಲಾಗುತ್ತದೆ.

ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗದಲ್ಲಿ ಒಳಾಂಗಣ ವಿನ್ಯಾಸ, ಕಂಪ್ಯೂಟರ್ ಅಪ್ಲಿಕೇಷನ್, ಉದ್ಯಮಶೀಲತೆ, ಕಂಪ್ಯೂಟರ್ ಸಾಕ್ಷರತೆ, ಬ್ಲಾಕ್ ಚೈನ್ ಟೆಕ್ನಾಲಜಿ, ರೊಬೊಟಿಕ್ಸ್, ಪೈಥಾನ್, ಹವಾಮಾನ ಬದಲಾವಣೆ, ನರ್ಸಿಂಗ್, ರೇಡಿಯಾಲಜಿ, ನವೀಕರಿಸಬಹುದಾದ ಇಂಧನ, ವೈದ್ಯಕೀಯ ಪ್ರಯೋಗಾಲಯ ತಂತ್ರಜ್ಞಾನ, ಫ್ಯಾಷನ್, ಬ್ಯೂಟಿ ಆ್ಯಂಡ್ ಸ್ಕಿನ್‌ಕೇರ್ ವಿನ್ಯಾಸ ಸೇರಿದಂತೆ 25 ವಿಷಯಗಳಲ್ಲಿ ಸರ್ಟಿಫಿಕೇಟ್, ಡಿಪ್ಲೊಮಾ, ಪಿ.ಜಿ ಡಿಪ್ಲೊಮಾ ಅಧ್ಯಯನ ಮಾಡಬಹುದು.

ಕಾರ್ಪೊರೇಟ್ ಕಮ್ಯೂನಿಕೇಷನ್, ಹೆಲ್ತ್ ಆ್ಯಂಡ್ ಹಾಸ್ಪಿಟಲ್ ಮ್ಯಾನೇಜ್‌ಮೆಂಟ್, ಮಾನವ ಸಂಪನ್ಮೂಲ ನಿರ್ವಹಣೆ, ಇ–ಕಾಮರ್ಸ್, ಆಡಳಿತ ನಿರ್ವಹಣೆ, ರಿಟೈಲ್ ಮ್ಯಾನೇಜ್‌ಮೆಂಟ್, ಸೋಷಿಯಲ್ ಆ್ಯಂಡ್ ಮೀಡಿಯಾ ಮಾರ್ಕೆಟಿಂಗ್ ಸೇರಿದಂತೆ ಕೈಗಾರಿಕೆ, ಕಾರ್ಪೊರೇಟ್, ಸಿನಿಮಾ, ಮನರಂಜನೆ ಇತ್ಯಾದಿ ಕ್ಷೇತ್ರಗಳಿಗೆ ಸಂಬಂಧಿಸಿದ ಹಲವು ಕೋರ್ಸ್‌ಗಳು ಶುರುವಾಗಲಿದ್ದು, ವಿದ್ಯಾರ್ಥಿಗಳಿಗೆ ಉದ್ಯೋಗ ಪಡೆಯಲು ಸುಲಭವಾಗಲಿದೆ ಎಂದು ನಿರೀಕ್ಷಿಸಲಾಗಿದೆ.

### ಡಿ.29ಕ್ಕೆ ಪ್ರಸಾರಾಂಗ ಆರಂಭ

ರಾಷ್ಟ್ರಕವಿ ಕುವೆಂಪು ಅವರ ಜನ್ಮದಿನವಾದ ಡಿಸೆಂಬರ್ 29ರಂದು ವಿಶ್ವವಿದ್ಯಾಲಯದಲ್ಲಿ ಪ್ರಸಾರಾಂಗ ಶುರುವಾಗಲಿದೆ. 'ನಮ್ಮ ಕುವೆಂಪು' ಕಾರ್ಯಕ್ರಮದಡಿ, 'ಕುವೆಂಪು ಅವರ ಆಶಯಗಳನ್ನು ಪಠ್ಯ ಮತ್ತು ಉಪನ್ಯಾಸಗಳ ಮೂಲಕ ವಿದ್ಯಾರ್ಥಿಗಳಿಗೆ ತಿಳಿಸುವ ಕೆಲಸವನ್ನು ವರ್ಷಪೂರ್ತಿ ಮಾಡುತ್ತೇವೆ' ಎಂದು ರಮೇಶ್ ಅವರು ತಿಳಿಸಿದರು.

### ಶೀಘ್ರದಲ್ಲೇ ಶುಲ್ಕ ನಿಗದಿ

ಹೊಸ ಕೋರ್ಸ್‌ಗಳು ಶುಲ್ಕ ಪಾವತಿ ಆಧರಿತ (ಸ್ವಯಂ ಹಣಕಾಸು) ಆಗಿದ್ದು, ಯಾವ ಕೋರ್ಸ್‌ಗೆ ಎಷ್ಟು ಶುಲ್ಕ ಎಂಬುದನ್ನು ಶುಲ್ಕ ನಿಗದಿ ಸಮಿತಿ ನಿರ್ಧರಿಸಲಿದೆ. ಸಮಿತಿ ನಿಗದಿಪಡಿಸುವ ಶುಲ್ಕ ವಿಶ್ವವಿದ್ಯಾಲಯದಲ್ಲಿ ಆರಂಭಿಸುವ ಕೋರ್ಸ್‌ಗಳಿಗೆ ಅನ್ವಯವಾಗಲಿದೆ. ಖಾಸಗಿ ಕಾಲೇಜುಗಳಲ್ಲಿ ಆರಂಭವಾಗುವ ಕೋರ್ಸ್‌ಗಳಿಗೆ, ಕಾಲೇಜುಗಳೇ ಶುಲ್ಕ ನಿಗದಿ ಮಾಡಲಿವೆ ಎಂದು ಕುಲಪತಿ ಪ್ರೊ.ಬಿ.ರಮೇಶ್ ತಿಳಿಸಿದರು. 'ಎಲ್ಲಿ ಬೇಡಿಕೆ ಇದೆಯೊ, ಅಂತ ಕಡೆ ಕಾಲೇಜುಗಳು ಹೊಸ ಕೋರ್ಸ್‌ಗಳನ್ನು ಆರಂಭಿಸಬಹುದು. ಕೆಲವು ಕೋರ್ಸ್‌ಗಳನ್ನು ವಿಶ್ವವಿದ್ಯಾಲಯದಲ್ಲೇ ಆರಂಭಿಸುತ್ತೇವೆ. ಒಟ್ಟಾರೆ ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆ ಹೆಚ್ಚಾಗಬೇಕು. ಉದ್ಯೋಗ ಅವಕಾಶ ಸಿಗಬೇಕು ಎಂಬುದು ನಮ್ಮ ಆಶಯ' ಎಂದರು.

# 'ಗುರು–ಗಾಂಧಿ' ಸಂವಾದ ಡಿ.3ಕ್ಕೆ

ಪ್ರಜಾವಾಣಿ ವಾರ್ತೆ

**ಮಂಗಳೂರು:** ಬ್ರಹ್ಮಶ್ರೀ ನಾರಾಯಣ ಗುರು ಮತ್ತು ಮಹಾತ್ಮಗಾಂಧಿ ನಡುವಿನ ಐತಿಹಾಸಿಕ ಸಂವಾದಕ್ಕೆ 100 ವರ್ಷವಾದ ನಿಮಿತ್ತ 'ಗುರು–ಗಾಂಧಿ ಸಂವಾದ ಶತಮಾನೋತ್ಸವ'ವನ್ನು ಕೊಣಾಜೆಯ ಮಂಗಳೂರು ವಿಶ್ವವಿದ್ಯಾಲಯದ ಪ್ರಾಂಗಣದಲ್ಲಿ ಡಿ.3ರಂದು ಆಯೋಜಿಸಲಾಗಿದೆ ಎಂದು ಕೇಂದ್ರ ಸಂಘಟನಾ ಸಮಿತಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಅವರು, 'ಕೇರಳದ ವರ್ಕಲ ಶಿವಗಿರಿ ಮಠ, ವಿಶ್ವವಿದ್ಯಾನಿಲಯದ ನಾರಾಯಣ ಗುರು ಅಧ್ಯಯನ ಪೀಠದ ಆಶ್ರಯದಲ್ಲಿ ಕಾರ್ಯಕ್ರಮ ನಡೆಯಲಿದೆ' ಎಂದರು.

'ಗುರು–ಗಾಂಧಿ ಸಂವಾದ ಶತಮಾನೋತ್ಸವ'ಕ್ಕೆ ರಾಜ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಂದು ಚಾಲನೆ ನೀಡಲಿದ್ದಾರೆ. ಸಂಸತ್ತಿನ ಸಾರ್ವಜನಿಕ ಲೆಕ್ಕಪತ್ರ ಸಮಿತಿ ಅಧ್ಯಕ್ಷ ಕೆ.ಸಿ.ವೇಣುಗೋಪಾಲ್ ಹಾಗೂ ಶಿವಗಿರಿ ಮಠದ ಸಚ್ಚಿದಾನಂದ ತೀರ್ಥ ಸ್ವಾಮೀಜಿ ಭಾಗವಹಿಸಲಿದ್ದಾರೆ' ಎಂದರು.

ಮುಖ್ಯಮಂತ್ರಿ ಅವರು, ನಾರಾಯಣ ಗುರು ಅಧ್ಯಯನ ಪೀಠದ ಕಟ್ಟಡವನ್ನು ಉದ್ಘಾಟಿಸಿ, ಕಟ್ಟಡದ ವಿಸ್ತರಣೆ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸುವರು. ಅಂದು ವಿವಿಧ ಗೋಷ್ಠಿಗಳು, ಪೂಜಾ ಕಾರ್ಯಕ್ರಮಗಳು ನಡೆಯಲಿವೆ. 15 ಸಾವಿರ ಮಂದಿ ಭಾಗವಹಿಸುವ ನಿರೀಕ್ಷೆ ಇದೆ ಎಂದು ತಿಳಿಸಿದರು. ಕುದ್ರೋಳಿ ಗೋಕರ್ಣನಾಥ ಕ್ಷೇತ್ರದಲ್ಲಿ ನಾರಾಯಣ ಗುರುಗಳು ಶಿವಲಿಂಗವನ್ನು ಪ್ರತಿಷ್ಠಾಪಿಸಿದ ಕುರಿತು 2026ರ ಫೆ.21ರಂದು ಕಾರ್ಯಕ್ರಮ ಏರ್ಪಡಿಸಲಾಗಿದೆ' ಎಂದರು.

ಸುದ್ದಿಗೋಷ್ಠಿಯಲ್ಲಿ ಕೇಂದ್ರ ಸಂಘಟನಾ ಸಮಿತಿ ರಕ್ಷಾಧಿಕಾರಿ ಶಿವಗಿರಿ ಮಠದ ಜ್ಞಾನತೀರ್ಥ ಸ್ವಾಮೀಜಿ, ಪ್ರಧಾನ ಸಂಚಾಲಕ ಪಿ.ವಿ.ಮೋಹನ್, ಗೌರವ ಉಪಾಧ್ಯಕ್ಷರಾದ ಜಯರಾಜ್ ಸೋಮಸುಂದರಂ ಭಾಗವಹಿಸಿದ್ದರು.



**ಕಂಬಳ**

ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್.

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಸಿದ್ಧಕಟ್ಟೆ ಕೊಡಂಗೆಯಲ್ಲಿ ಶನಿವಾರ ಆರಂಭಗೊಂಡ ವೀರ-ವಿಕ್ರಮ ಜೋಡುಕರೆ ಕಂಬಳದ ಕನೆ ಹಲಗೆ ವಿಭಾಗದಲ್ಲಿ ರಾಮ ಸುವರ್ಣ ಅವರ 'ಪುಟ್ಟ' ಮತ್ತು 'ಶಂಕರ' ಕೋಣಗಳನ್ನು ಭಟ್ಕಳ ಪಾಂಡು ಅವರು ಓಡಿಸಿದರು

# ಜ್ಞಾನಭಾರತಿ: 400 ಮರಗಳಿಗೆ ಕಂಟಕ ಮರ ಕಡಿಯುವ ಪ್ರಸ್ತಾವ: ನೋಟಿಸ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಜ್ಞಾನಭಾರತಿ ಕ್ಯಾಂಪಸ್‌ನಲ್ಲಿ ಜಾರಿಗೊಳಿಸಲು ಉದ್ದೇಶಿಸಿರುವ ಹಲವು ನಿರ್ಮಾಣ ಯೋಜನೆಗಳಿಂದ ಅಲ್ಲಿರುವ ಅಗಾಧ ಪ್ರಮಾಣದ ಅರಣ್ಯ ಪ್ರದೇಶ ನಶಿಸುವುದಿಲ್ಲವೇ' ಎಂದು ಪ್ರಶ್ನಿಸಿರುವ ಹೈಕೋರ್ಟ್, 'ಈ ಕುರಿತಾದ ಆಕ್ಷೇಪಣೆಗೆ ಸೂಕ್ತ ವಿವರಣೆ ಸಲ್ಲಿಸಿ' ಎಂದು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

'ಪಿಎಂ-ಉಷಾ ಯೋಜನೆ (ಪ್ರಧಾನ ಮಂತ್ರಿ ಉಚ್ಚತರ ಶಿಕ್ಷಾ ಅಭಿಯಾನ), ಅಂಬೇಡ್ಕರ್ ಥೀಮ್ ಪಾರ್ಕ್, ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜಿನ (ಯುವಿಸಿಇ) ಹೊಸ ಕ್ಯಾಂಪಸ್ ಸೇರಿದಂತೆ ಹಲವು ನಿರ್ಮಾಣ ಯೋಜನೆಗಳ ಜಾರಿಗಾಗಿ ಜ್ಞಾನಭಾರತಿ ಕ್ಯಾಂಪಸ್‌ನ ನೂರಾರು ಮರಗಳನ್ನು ಕಡಿಯುವ ಪ್ರಸ್ತಾವ ಆತಂಕಕಾರಿಯಾಗಿದೆ' ಎಂದು ದೂರಿ 'ಸ್ವಯಂ ಜಾಗೃತಿ ಸೇವಾ ಟ್ರಸ್ಟ್' ಅಧ್ಯಕ್ಷ ಸಿ.ಅಜಯ್ ಕುಮಾರ್ ಹಾಗೂ ಕೋರಮಂಗಲದ ಪಾರ್ವತಿ ಶ್ರೀರಾಮ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ವಾದ ಆಲಿಸಿದ ನ್ಯಾಯಪೀಠ, 'ಯೋಜನೆಗಳ ಜಾರಿಗಾಗಿ ಕ್ಯಾಂಪಸ್ ಪ್ರದೇಶದಲ್ಲಿರುವ 400ಕ್ಕೂ ಹೆಚ್ಚು ಮರಗಳನ್ನು ಕಡಿಯಬೇಕಾಗಿದೆಯೇ? ಬಯೋ ಪಾರ್ಕ್, ಮೀಸಲು ಅರಣ್ಯ ಪ್ರದೇಶಕ್ಕೆ ಇದರಿಂದ ಹಾನಿ ಆಗುವುದಿಲ್ಲವೇ? ಈ ಬಗ್ಗೆ ನಿರ್ಣಯ ಕೈಗೊಂಡಿರುವ ಪ್ರಕ್ರಿಯೆಯ ಬಗ್ಗೆ ವಿವರಣೆ ನೀಡಿ' ಎಂದು ರಾಜ್ಯ ಸರ್ಕಾರದ ಪರ ವಕೀಲರಿಗೆ ತಾಕೀತು ಮಾಡಿತು.

ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ ಆಯುಕ್ತ, ಬೆಂಗಳೂರು ವಿ.ವಿ ಕುಲಪತಿ ಸೇರಿದಂತೆ ಒಟ್ಟು 39 ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ಡಿಸೆಂಬರ್ 9ಕ್ಕೆ ಮುಂದೂಡಿತು.

**ಅರ್ಜಿಯಲ್ಲಿ ಏನಿದೆ?:** 'ಜ್ಞಾನಭಾರತಿ ಕ್ಯಾಂಪಸ್ ಒಟ್ಟು 1,112 ಎಕರೆ ಪ್ರದೇಶದಲ್ಲಿ ವಿಸ್ತರಿಸಿಕೊಂಡಿದೆ. ಇದನ್ನು ನೈಸರ್ಗಿಕ ಭೂಪ್ರದೇಶ ಮತ್ತು ಜೀವವೈವಿಧ್ಯತೆ ಸಂರಕ್ಷಣೆಯ ಶೈಕ್ಷಣಿಕ ಹಾಗೂ ಪರಿಸರ ಕ್ಯಾಂಪಸ್ ಎಂದು ಗುರುತಿಸಲಾಗಿದೆ. ಬಯೋ ಪಾರ್ಕ್‌ನಲ್ಲಿ ಔಷಧೀಯ, ಬಿದಿರು, ಚಿಟ್ಟೆ, ಹಣ್ಣು ಸೇರಿದಂತೆ ವಿವಿಧ 16 ಬಗೆಯ ವಲಯಗಳಿವೆ. ಇದು ನಗರದಲ್ಲಿ ಉಳಿದಿರುವ ಕೊನೆಯ ಹಸಿರು ಪ್ರದೇಶ ಎನಿಸಿದೆ. ಇದು ಅಮೂಲ್ಯ ಸಸ್ಯವರ್ಗ, ಪ್ರಾಣಿ ಸಂಕುಲ ಮತ್ತು ನೈಸರ್ಗಿಕ ಜಲಮೂಲಗಳನ್ನು ಹೊಂದಿದೆ' ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

## ಔಷಧ ಉತ್ಪಾದಕರ ಕಾರ್ಯಾಗಾರದಲ್ಲಿ ದಿನೇಶ್ ಗುಂಡೂರಾವ್ ಮಾಹಿತಿ

# 'ಕಳಪೆ ಔಷಧ ಪೂರೈಕೆ ತಡೆಗೆ ಕ್ರಮ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಪ್ರಮಾಣಿತ ಗುಣಮಟ್ಟ ಹೊಂದಿರದ ಔಷಧಗಳು ಮಾರುಕಟ್ಟೆ ಪ್ರವೇಶಿಸದಂತೆ ತಡೆಯಲು ಸರ್ಕಾರಿ ಪ್ರಯೋಗಾಲಯಗಳ ಪರೀಕ್ಷಾ ಸಾಮರ್ಥ್ಯ ಹೆಚ್ಚಳ, ಮಾರುಕಟ್ಟೆ ಕಣ್ಗಾವಲಿನಂತಹ ಕ್ರಮಗಳನ್ನು ಕೈಗೊಳ್ಳಲಾಗಿದೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಇಂಡಿಯನ್ ಫಾರ್ಮಾಸ್ಯುಟಿಕಲ್ ಅಸೋಸಿಯೇಷನ್‌ನ ಕರ್ನಾಟಕ ಶಾಖೆ, ಕರ್ನಾಟಕ ಡ್ರಗ್ಸ್ ಆ್ಯಂಡ್ ಫಾರ್ಮಾಸ್ಯುಟಿಕಲ್ ಮ್ಯಾನುಫ್ಯಾಕ್ಚರ್ಸ್ ಅಸೋಸಿಯೇಷನ್ ಜಂಟಿಯಾಗಿ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕಾರ್ಯಾಗಾರ ಉದ್ಘಾಟಿಸಿ, ಮಾತನಾಡಿದರು.

### 'ಗುಣಮಟ್ಟ ಖಚಿತಪಡಿಸಿಕೊಳ್ಳಬೇಕು'



'ಕಳಪೆ ಗುಣಮಟ್ಟದ ಔಷಧ ಪೂರೈಕೆ ಮಾಡುವ ಸಂಸ್ಥೆಯ ಪರವಾನಗಿ ರದ್ದುಪಡಿಸುವಿಕೆಯಂತಹ ಕ್ರಮವನ್ನೂ ಕೈಗೊಳ್ಳಲಾಗುವುದು. ಗುಣಮಟ್ಟದ ಔಷಧ ಜನರಿಗೆ ಸಿಗಬೇಕು ಎನ್ನುವುದು ನಮ್ಮ ಆಶಯವಾಗಿದೆ. ಆದ್ದರಿಂದ ಔಷಧ ತಯಾರಕರು ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಬೇಕು' ಎಂದು ಸಚಿವ ದಿನೇಶ್ ಗುಂಡೂರಾವ್ ಕಿವಿಮಾತು ಹೇಳಿದರು.

'ಯಾವುದೇ ಔಷಧದ ಕಾರಣದಿಂದ ಮರಣ ಸಂಭವಿಸಿದರೆ, ಆ ಪ್ರಕರಣವನ್ನು ದತ್ತಾಂಶಕ್ಕೆ ಹೋಲಿಸಿ ವಿನಾಯಿತಿ ನೀಡಲು ಸಾಧ್ಯವಿಲ್ಲ. ಆದ್ದರಿಂದ ಉತ್ಪಾದಕರು ಸರ್ಕಾರದ ಮಾನದಂಡವನ್ನು ಸರಿಯಾಗಿ ಅಳವಡಿಸಿಕೊಳ್ಳಬೇಕು. ರಾಜ್ಯದ ಜನರಿಗೆ ಅತ್ಯುತ್ತಮ ಗುಣಮಟ್ಟದ ಔಷಧ ಸಿಗುವಂತಾಗಬೇಕು' ಎಂದು ಅಭಿಪ್ರಾಯಪಟ್ಟರು.

'ಪ್ರಮಾಣಿತ ಗುಣಮಟ್ಟ ಕಾಯ್ದುಕೊಳ್ಳದ ಔಷಧಗಳ ತಯಾರಿಕಾ ಕಂಪನಿಗಳನ್ನು ಪೂರೈಕೆ ಸರಪಳಿಯಿಂದ ತೆಗೆದು ಹಾಕಲಾಗುವುದು. ಯಾವುದೇ ಒಂದು ಬ್ಯಾಚ್ ಔಷಧ ಪ್ರಮಾಣಿತ ಗುಣಮಟ್ಟ ಕಾಯ್ದುಕೊಳ್ಳದಿದ್ದರೂ ಆ ಔಷಧ ಜನರ ವಿಶ್ವಾಸವನ್ನು ಕಳೆದುಕೊಳ್ಳಲಿದೆ. ಅಷ್ಟೇ ಅಲ್ಲ, ರೋಗಿಗೆ ಹೆಚ್ಚಿನ ಹಾನಿ ಮಾಡುವ ಸಾಧ್ಯತೆಯೂ ಇರುತ್ತದೆ. ಅಸಮರ್ಪಕ ಪರೀಕ್ಷೆ, ದಾಖಲಾತಿಯಲ್ಲಿನ ಲೋಪ ಸೇರಿ ವಿವಿಧ ಕಾರಣಗಳಿಂದ ಪ್ರಮಾಣಿತ ಗುಣಮಟ್ಟ ಹೊಂದಿರದ ಔಷಧಗಳು ಮಾರುಕಟ್ಟೆಗೆ ಪ್ರವೇಶಿಸುವ ಸಾಧ್ಯತೆ ಇರುತ್ತದೆ. ಆದ್ದರಿಂದ ಔಷಧಗಳ ಗುಣಮಟ್ಟ ಪರಿಶೀಲನೆಗೆ ಆದ್ಯತೆ ನೀಡಲಾಗಿದೆ' ಎಂದರು.

ಇಂಡಿಯನ್ ಫಾರ್ಮಾಸ್ಯುಟಿಕಲ್ ಅಸೋಸಿಯೇಷನ್‌ನ ಕರ್ನಾಟಕ ಶಾಖೆ ಅಧ್ಯಕ್ಷ ಡಾ.ಎಂ. ಖಾಲಿದ್ ಅಹ್ಮದ್ ಖಾನ್, ಕಾರ್ಯದರ್ಶಿ ಡಾ.ಬಿ. ರಮೇಶ್, ಕರ್ನಾಟಕ ಡ್ರಗ್ಸ್ ಆ್ಯಂಡ್ ಫಾರ್ಮಾಸ್ಯುಟಿಕಲ್ ಮ್ಯಾನುಫ್ಯಾಕ್ಚರ್ಸ್ ಅಸೋಸಿಯೇಷನ್ ಅಧ್ಯಕ್ಷ ಜತೀಶ್ ಶೇಠ್ ಉಪಸ್ಥಿತರಿದ್ದರು.

## ರೈಲು ಹಳಿ ಮೇಲೆ ಕಬ್ಬಿಣದ ತುಣುಕು: ಎರಡು ತಾಸು ವಿಳಂಬ

**ಚನ್ನಪಟ್ಟಣ (ರಾಮನಗರ):** ತಾಲ್ಲೂಕಿನ ವಂದಾರಗುಪ್ಪೆ ಬಳಿಯ ರೈಲು ಹಳಿ ಮೇಲೆ ಕಿಡಿಗೇಡಿಗಳು ಶನಿವಾರ ರಾತ್ರಿ ಕಬ್ಬಿಣದ ತುಣುಕು ಇಟ್ಟಿದ್ದರಿಂದ, ಆ ಮಾರ್ಗದಲ್ಲಿ ಬಂದ ಹಂಪಿ ಎಕ್ಸ್‌ಪ್ರೆಸ್ ರೈಲಿನ ಎಂಜಿನ್‌ಗೆ ಅದು ಬಡಿದಿದೆ. ಇದರ ಪರಿಣಾಮ ಎಂಜಿನ್ನಿನ ಆಯಿಲ್ ಟ್ಯಾಂಕ್‌ಗೆ ಹಾನಿಯಾಗಿ ಆಯಿಲ್ ಸೋರಿಕೆಯಾಗಿದೆ.

ಘಟನೆಯಿಂದಾಗಿ ಮೈಸೂರು-ಹುಬ್ಬಳ್ಳಿ ನಡುವೆ ಸಂಚರಿಸುವ ಹಂಪಿ ಎಕ್ಸ್‌ಪ್ರೆಸ್ ಸಂಚಾರ ರಾತ್ರಿ 8.20ರಿಂದ ರಾತ್ರಿ 10.30ರವರೆಗೆ ಎರಡು ತಾಸು ವಿಳಂಬವಾಗಿದೆ.

ರೈಲು ವಂದಾರಗುಪ್ಪೆ ಬಳಿ ಬಂದಾಗ ಜೋರಾದ ಶಬ್ದ ಕೇಳಿದ ಲೋಕೋಪೈಲಟ್ ತಕ್ಷಣ ರೈಲು ನಿಲ್ಲಿಸಿ, ಸಮಯಪ್ರಜ್ಞೆ ಮೆರೆದಿದ್ದರಿಂದ ದೊಡ್ಡ ಅವಘಡವೊಂದು ತಪ್ಪಿಸಿದ್ದಾರೆ ಎಂದು ರೈಲ್ವೆ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

## ಹಿರಿಯರ ಹಬ್ಬ ಇಂದು

**ಬೆಂಗಳೂರು:** ವಯೋ ವಿಕಾಸ್ ಸ್ವಯಂ ಸೇವಾ ಸಂಸ್ಥೆಯು ಭಾನುವಾರ ಬೆಳಿಗ್ಗೆ 10ರಿಂದ ಸಂಜೆ 5 ಗಂಟೆವರೆಗೆ ಎಂ.ಜಿ ರಸ್ತೆಯಲ್ಲಿರುವ ಸೇಂಟ್ ಜೋಸೆಫ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಆವರಣದಲ್ಲಿ ಹಿರಿಯರ ಹಬ್ಬ ಹಮ್ಮಿಕೊಂಡಿದೆ.

ಸಾಂಸ್ಕೃತಿಕ ಕಾರ್ಯಕ್ರಮ, ಸಾಂಪ್ರದಾಯಿಕ ಆಟ, ಕಲಾ ಪ್ರದರ್ಶನ, ಚರ್ಚೆ ಮತ್ತು ಸಮುದಾಯ ಸಂವಾದ ಕಾರ್ಯಕ್ರಮಗಳು ನಡೆಯಲಿವೆ. ಹಿರಿಯ ನಾಗರಿಕರೇ ಪ್ರದರ್ಶಕರಾಗಿ, ಮಳಿಗೆಗಳ ಮಾಲೀಕರಾಗಿ, ಸ್ವಯಂಸೇವಕರಾಗಿ ಮತ್ತು ಆಯೋಜಕರಾಗಿ ಕಾರ್ಯಕ್ರಮದ ನೇತೃತ್ವ ವಹಿಸುತ್ತಾರೆ ಎಂದು ಪ್ರಕಟಣೆ ತಿಳಿಸಿದೆ.

# ನೀರಾವರಿ, ಬಿಡಿಎ ಬಾಕಿ ಪ್ರಕರಣ: ತನಿಖೆಗೆ ಎಸ್‌ಐಟಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವಿವಿಧ ನೀರಾವರಿ ನಿಗಮಗಳಲ್ಲಿ 61,843 ಪ್ರಕರಣಗಳು ಕೋರ್ಟ್‌ನಲ್ಲಿ ಇತ್ಯರ್ಥವಾಗದೇ ಬಾಕಿ ಉಳಿದಿದ್ದು, ಅದಕ್ಕೆ ಕಾರಣವಾದ ಅಂಶಗಳು, ಅಧಿಕಾರಿಗಳು ಹಾಗೂ ವಕೀಲರ ಕರ್ತವ್ಯ ಲೋಪ ಪತ್ತೆ ಮಾಡಲು ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ವಿಧಾನಸೌಧದಲ್ಲಿ ಶನಿವಾರ ನಡೆದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಹಾಗೂ ಜಲ ಸಂಪನ್ಮೂಲ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

'ವಿವಿಧ ನಿರಾವರಿ ನಿಗಮ ಹಾಗೂ ಬಿಡಿಎ ಭೂಸ್ವಾಧೀನ ಪ್ರಕರಣಗಳನ್ನು ಹಿಂದಿನಿಂದಲೂ ಸರಿಯಾಗಿ ನಿರ್ವಹಣೆ ಮಾಡಿಲ್ಲ. ಇದರಿಂದ ಕೋರ್ಟ್‌ನಲ್ಲಿರುವ ಬಾಕಿ ಪ್ರಕರಣಗಳು ಹೆಚ್ಚುತ್ತಲೇ ಹೋಗಿವೆ. ಈ ಕುರಿತು ಸಮಗ್ರ ತನಿಖೆಗಾಗಿ ನ್ಯಾಯಮೂರ್ತಿಯವರ ನೇತೃತ್ವದಲ್ಲಿ ಕಾನೂನು ತಜ್ಞರು, ಪರಿಣತ ಅಧಿಕಾರಿಗಳನ್ನು ಒಳಗೊಂಡ ಎಸ್‌ಐಟಿ ರಚಿಸಲಾಗುತ್ತಿದೆ' ಎಂದು ಹೇಳಿದರು.

ಬಾಕಿ ಪ್ರಕರಣಗಳ ಹೆಚ್ಚಳದಿಂದ ಸರ್ಕಾರದ ಮೇಲೆ ಆರ್ಥಿಕ ಹೊರೆ ಹೆಚ್ಚುತ್ತಾ ಹೋಗಿದೆ. ಭೂಸ್ವಾಧೀನ ಅಧಿಕಾರಿಗಳು, ನಿಗಮ, ಪ್ರಾಧಿಕಾರದ ಅಧಿಕಾರಿಗಳು ಲೋಪ ಎಸಗಿದ್ದಾರೆ. ಪ್ರಕರಣಗಳನ್ನು ನಿಭಾಯಿಸಲು ನೇಮಕ ಮಾಡಿದ ವಕೀಲರೂ ತಮ್ಮ ಕರ್ತವ್ಯವನ್ನು ಸರಿಯಾಗಿ ನಿಭಾಯಿಸಿಲ್ಲ. ಸಮಯಕ್ಕೆ ಸರಿಯಾಗಿ ಕೋರ್ಟ್‌ಗಳಿಗೆ ಆಕ್ಷೇಪಣೆ ಸಲ್ಲಿಸಿಲ್ಲ. ವಿಚಾರಣೆಗೆ ಹಾಜರಾಗಿಲ್ಲ. ಅಧಿಕಾರಿಗಳು, ವಕೀಲರು ತಂಡ ಮಾಡಿಕೊಂಡು ವಂಚಿಸಿದ್ದಾರೆ. ಅವಕಾಶವನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ. ಈ ಎಲ್ಲ ಲೋಪಗಳ ಕುರಿತು ಎಸ್‌ಐಟಿ ತನಿಖೆ ನಡೆಸಲಿದೆ. ವರದಿಯ ನಂತರ ತಪ್ಪಿತಸ್ಥ ಅಧಿಕಾರಿಗಳನ್ನು ಅಮಾನತು ಮಾಡಲಾಗುವುದು. ಒಟ್ಟು 219 ವಕೀಲರು ವಿವಿಧ ಪ್ರಕರಣಗಳನ್ನು ನೋಡಿಕೊಳ್ಳುತ್ತಿದ್ದಾರೆ. ಈ ಪೈಕಿ, ಲೋಪ ಎಸಗಿದ ವಕೀಲರನ್ನು ವಜಾ ಮಾಡಲಾಗುವುದು ಎಂದು ಹೇಳಿದರು.

### ₹9 ಲಕ್ಷಕ್ಕೆ ₹9 ಕೋಟಿ ಆದೇಶ

'ಬಿಡಿಎ ಅಭಿವೃದ್ಧಿಪಡಿಸುತ್ತಿರುವ ಬಡಾವಣೆಗಳಲ್ಲಿ ಒಂದು ಎಕರೆಗೆ ₹9 ಲಕ್ಷ ನಿಗದಿಯಾಗಿದ್ದ ಪ್ರಕರಣಗಳಲ್ಲಿ ಕೋರ್ಟ್‌ನಿಂದ ₹9 ಕೋಟಿ ನೀಡಲು ಆದೇಶವಾದ ಘಟನೆಗಳು ಇವೆ. ಇದೊಂದು ಉದಾಹರಣೆ ಅಷ್ಟೆ.' ಎಂದು ಶಿವಕುಮಾರ್ ಹೇಳಿದರು.

'ಇಂತಹ ಪ್ರಕರಣಗಳಲ್ಲಿ ಕಾನೂನು ತಂಡ ಸಮರ್ಥವಾಗಿ ಕೆಲಸ ಮಾಡಬೇಕು. ಯಾವುದೇ ಪ್ರಕರಣ ಕೋರ್ಟ್‌ಗೆಹೋದರೆ ಎರಡು, ಮೂರು ಪಟ್ಟು ಪರಿಹಾರ ನೀಡುವಂತೆ ಆದೇಶ ವಾಗುತ್ತದೆ. ಆದರೆ, ಕೆಲ ಪ್ರಕರಣಗಳಲ್ಲಿ ಸಾವಿರ ಪಟ್ಟು ಮೊತ್ತ ಹೆಚ್ಚಳದ ಆದೇಶವಾಗಿದೆ. ಇದು ಹೇಗೆ ಸಾಧ್ಯ? ಅದಕ್ಕಾಗಿ ಬಿಡಿಎಗೂ ಪ್ರತ್ಯೇಕ ಕಾನೂನು ಕೋಶ ರಚಿಸಲಾಗುವುದು' ಎಂದರು.

### ತ್ವರಿತ ಭೂಸ್ವಾಧೀನಕ್ಕೆ ಕಾಯ್ದೆ ತಿದ್ದುಪಡಿ

'ಭೂಸ್ವಾಧೀನ ಪ್ರಕರಣಗಳಲ್ಲಿನ ವಿಳಂಬ ತಪ್ಪಿಲು, ತ್ವರಿತ ಕ್ರಮಗಳನ್ನು ಕೈಗೊಳ್ಳಲು ಭೂಸ್ವಾಧೀನ ಕಾಯ್ದೆಗೆ ತಿದ್ದುಪಡಿ ತರಲಾಗುವುದು' ಎಂದು ಶಿವಕುಮಾರ್ ಹೇಳಿದರು.

'ಭೂಸ್ವಾಧೀನ ವಿಳಂಬ ಪ್ರಕರಣಗಳಿಂದಾಗಿ ಸರ್ಕಾರಕ್ಕೆ ಆರ್ಥಿಕ ಹೊರೆಯಾಗುತ್ತಿದೆ. ಯೋಜನಾ ವೆಚ್ಚಗಳಲ್ಲಿ ಗಣನೀಯವಾಗಿ ಹೆಚ್ಚಳವಾಗುತ್ತಿದೆ. ಇದನ್ನು ತಪ್ಪಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಕೋರ್ಟ್ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥ ಮಾಡಲು, ಸಲಹೆ–ಸಹಕಾರ ನೀಡಲು, ನಿಗಾವಹಿಸಲು ಬೆಂಗಳೂರು ಮತ್ತು ದೆಹಲಿಯಲ್ಲಿ ಪ್ರತ್ಯೇಕ ಕಾನೂನು ಕೋಶ ಆರಂಭಿಸಲಾಗುವುದು' ಎಂದು ಹೇಳಿದರು.

> **ಕೆಲ ಪ್ರಕರಣಗಳಲ್ಲಿ ಸುಪ್ರೀಂಕೋರ್ಟ್‌ಗೆ ಅಪೀಲು ಸಲ್ಲಿಸಲು ಸೂಚಿಸಿದ್ದೇನೆ. ಸರಿಯಾಗಿ ಕೆಲಸ ಮಾಡದವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲು ಸೂಚಿಸಿದ್ದೇನೆ**
> **ಡಿ.ಕೆ.ಶಿವಕುಮಾರ್,** ಉಪ ಮುಖ್ಯಮಂತ್ರಿ

# ಸರ್ಕಾರಿ ಶಾಲೆ ಮುಚ್ಚಿ ಇತರ ಕಾರ್ಯಕ್ಕೆ ಬಳಕೆಗೆ ವಿರೋಧ

**ಬೆಂಗಳೂರು:** ಕರ್ನಾಟಕ ಪಬ್ಲಿಕ್ ಶಾಲೆಗಳೊಂದಿಗೆ ಇತರ ಸರ್ಕಾರಿ ಶಾಲೆಗಳನ್ನು ವಿಲೀನಗೊಳಿಸಿ, ಆ ಕಟ್ಟಡಗಳನ್ನು ಇತರೆ ಕಾರ್ಯಕ್ಕೆ ಬಳಸುವ ಸರ್ಕಾರದ ಪ್ರಸ್ತಾವಕ್ಕೆ ಎಐಡಿಎಸ್‌ಒ ವಿರೋಧ ವ್ಯಕ್ತಪಡಿಸಿದೆ.

ಸರ್ಕಾರಿ ಶಾಲಾ ಕಟ್ಟಡಗಳನ್ನು ಸ್ವಸಹಾಯ ಗುಂಪುಗಳಿಗೆ ನೀಡಲಾಗುವುದೆಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದ್ದಾರೆ. ಇದು ಸರ್ಕಾರದ ಏಕಪಕ್ಷೀಯ ಹಾಗೂ ಪ್ರಜಾತಾಂತ್ರಿಕ ವಿರೋಧಿ ನಡೆ ಎಂದು ಎಐಡಿಎಸ್‌ಒ ರಾಜ್ಯ ಸಮಿತಿ ಕಾರ್ಯದರ್ಶಿ ಅಜಯ್ ಕಾಮತ್ ಟೀಕಿಸಿದ್ದಾರೆ.

ಕೆಪಿಎಸ್ ಮ್ಯಾಗ್ನೆಟ್ ಯೋಜನೆಯನ್ನು ಕೈಬಿಡಬೇಕು, ಸರ್ಕಾರಿ ಶಾಲೆಯ ಆಸ್ತಿಯನ್ನು ಬೇರೆ ಉದ್ದೇಶಕ್ಕೆ ಬಳಸದೆ ಅಲ್ಲಿನ ಶಾಲೆಗಳನ್ನು ಅಭಿವೃದ್ಧಿಪಡಿಸಬೇಕು. ಜಾಹೀರಾತು ಸೇರಿದಂತೆ ಯಾವುದೇ ವ್ಯಾಪಾರದ ಉದ್ದೇಶಕ್ಕೆ ಸರ್ಕಾರಿ ಶಾಲೆಗಳನ್ನು ಬಳಸಬಾರದು ಎಂದು ಆಗ್ರಹಿಸಿದ್ದಾರೆ.

### ಸರ್ಕಾರಿ ಶಾಲೆಗಳ ಹರಾಜು

ಕೆಪಿಎಸ್ ಮ್ಯಾಗ್ನೆಟ್ ಯೋಜನೆಯ ನೆಪದಲ್ಲಿ ಸರ್ಕಾರಿ ಶಾಲೆಗಳನ್ನು ಹರಾಜು ಮಾಡಲು ರಾಜ್ಯ ಸರ್ಕಾರ ಹೊರಟಿದೆ ಎಂದು ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ ಟೀಕಿಸಿದೆ.

'ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ ₹ 2,000 ಕೋಟಿ ಸಾಲ ಪಡೆದು 700 ಕೆಪಿಎಸ್ ಸ್ಥಾಪಿಸುವ ಉದ್ದೇಶವೇ 7000 ಸರ್ಕಾರಿ ಶಾಲೆಗಳನ್ನು ಮುಚ್ಚುವುದು ಎಂದು ನಾವು ಶಂಕಿಸಿದ್ದೆವು. ಶಿಕ್ಷಣ ಸಚಿವರ ಹೇಳಿಕೆಯಿಂದ ಇದು ಸ್ಪಷ್ಟವಾಗಿದೆ. ಈ ಶಾಲೆಗಳ ಕಟ್ಟಡ ಗಳನ್ನು ಪಾಳುಬೀಳಲು ಬಿಡುವುದಿಲ್ಲ, ಬದಲಿಗೆ ಖಾಸಗಿ ನೋಂದಾಯಿತ ಸಂಸ್ಥೆಗಳಿಗೆ ನೀಡಲಾಗುವುದು ಎಂದು ಸಚಿವರು ಶಾಲೆಗಳನ್ನು ಮುಚ್ಚುವ ಮುನ್ನವೇ ಹೇಳಿಕೆ ನೀಡಿರುವುದು ಖಾಸಗಿಯವರಿಗೆ ಹರಾಜು ಮಾಡುವ ಉದ್ದೇಶ ಬಯಲಾಗಿದೆ' ಎಂದು ಸಮಿತಿ ಅಧ್ಯಕ್ಷ ಅಲ್ಲಮಪ್ರಭು ಬೆಟ್ಟದೂರು ತಿಳಿಸಿದ್ದಾರೆ.



**ವಾರ್ಸಾ ಎಂಬ ಫೀನಿಕ್ಸ್ ನಗರ**
ಸಾಹಿತ್ಯ, ಸಂಗೀತ, ಕಲೆ, ವಿಜ್ಞಾನ ಹಾಗೂ ಬೌದ್ಧಿಕ ಮತ್ತು ರಾಜಕೀಯ ಕೇಂದ್ರವಾದ ಪೋಲೆಂಡ್ ದೇಶದ ರಾಜಧಾನಿ ವಾರ್ಸಾ ಕುರಿತ ಲೇಖನ. 13





# ಅಭಯವೇ ಇಲ್ಲದ ಅಭಯಾರಣ್ಯಗಳು

ಮಾನವ ಮತ್ತು ವನ್ಯಜೀವಿಗಳ ನಡುವಿನ ಸಂಘರ್ಷಗಳು ಕಡಿಮೆ ಆಗುವ ಲಕ್ಷಣಗಳು ಕಾಣಿಸುತ್ತಿಲ್ಲ. ಇತ್ತ ಮನುಷ್ಯರಿಗೂ ಅತ್ತ ವನ್ಯಜೀವಿಗಳಿಗೂ ಅಭಯವೇ ಇಲ್ಲದ ಅಭಯಾರಣ್ಯಗಳು ಇವೆ. ಅಲ್ಲಿನ ಈಗಿನ ಸ್ಥಿತಿಗೆ ಕನ್ನಡಿ ಹಿಡಿಯುವ ಪ್ರಯತ್ನವನ್ನು ಲೇಖಕರು ಮಾಡಿದ್ದಾರೆ.

• ಅಖಿಲೇಶ್ ಚಿಪ್ಪಳಿ

ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಬರಿಗೆಯ ನಾರಾಯಣಪ್ಪನಿಗೆ ಇಸ್ಪೀಟ್ ಹುಚ್ಚು ತುಂಬಾ ಇತ್ತು. ದೊಡ್ಡಾಟ ಆಡಿ ಒಂದೇ ಬಾರಿ ಶ್ರೀಮಂತನಾಗಬೇಕು ಎಂಬ ಆತನ ಕನಸು ನನಸಾಗಲೇ ಇಲ್ಲ. ಬರಿಗೆಯಿಂದ ಸಾಗರ ತಾಲ್ಲೂಕಿನ ಆವಿನಹಳ್ಳಿಗೆ ಕಾಲ್ನಡಿಗೆಯಲ್ಲಿ ಹೋಗುತ್ತಿದ್ದ. ರಾತ್ರಿ ಹೊತ್ತು ಸಂಚರಿಸಲು ಅನುಕೂಲವಾಗಲಿ ಎಂದು ಲಾಟೀನ್ ಇಟ್ಟುಕೊಳ್ಳುತ್ತಿದ್ದ. ಒಳದಾರಿಯಲ್ಲಿ ಸಾಗಿದರೂ ಬರಿಗೆಯಿಂದ ಆವಿನಹಳ್ಳಿಗೆ 21 ಕಿ.ಮೀ ಕ್ರಮಿಸಬೇಕಿತ್ತು. ಈ ಭಾಗದಲ್ಲಿ ಆಗ ಹುಲಿಗಳ ಸಂಖ್ಯೆ ದಂಡಿಯಾಗಿಯೇ ಇತ್ತು. ಹುಲಿ ಗರ್ಜನೆ ಸಾಮಾನ್ಯವಾಗಿತ್ತು. ಯಾವ ದಿಕ್ಕಿನಲ್ಲಿ ಹುಲಿ ಕೂಗುತ್ತಿದೆ ಎಂದು ಅಂದಾಜು ಮಾಡಿಕೊಂಡು ಮಾರ್ಗ ಬದಲಿಸಿ ಆವಿನಹಳ್ಳಿ ತಲುಪುತ್ತಿದ್ದ. ಹುಲಿಗಳು ತನ್ನ ಮೇಲೆ ದಾಳಿ ಮಾಡಬಹುದು ಎಂಬ ಕಲ್ಪನೆಯೇ ಆತನಿಗಿರಲಿಲ್ಲ. ಆದರೂ ವಯಸ್ಸಾದ ಕೆಲ ಹುಲಿಗಳು ಹಳ್ಳಿಗರನ್ನು ಕೊಂದು ಎತ್ತಿಕೊಂಡು ಹೋಗುವ ಘಟನೆಗಳು ನಡೆಯುತ್ತಿದ್ದವು. ನರಭಕ್ಷಕಗಳನ್ನು ನುರಿತ ಬೇಟೆಗಾರರು ಕೊಂದು ಸಂಭ್ರಮಿಸುತ್ತಿದ್ದರು. ಕೊಂದ ಹುಲಿಯನ್ನು ಅಳತೆ ಮಾಡಿ ಇಂತಿಷ್ಟು ಮೆಟ್ಟು (ಪಾದ) ಉದ್ದವಿತ್ತು ಎಂದು ದಾಖಲಿಸುತ್ತಿದ್ದರು. ಇಂದಿಗೆ ಸುಮಾರು ನೂರು ವರ್ಷಗಳ ಹಿಂದಿನ ಘಟನೆ ಇದು. ಇಸ್ಪೀಟ್ ಆಟದಲ್ಲಿ ಸೋತು ನಾರಾಯಣಪ್ಪ ತನ್ನೆಲ್ಲಾ ಆಸ್ತಿ ಕಳೆದುಕೊಂಡನೇ ಹೊರತು ಹುಲಿಗೆ ಬಲಿಯಾಗಲಿಲ್ಲ.

1900ರಲ್ಲಿ ಭಾರತದ ಜನಸಂಖ್ಯೆ 20 ಕೋಟಿ ಇತ್ತು. ಅಂದಾಜು ಹುಲಿಗಳ ಸಂಖ್ಯೆ ಒಂದು ಲಕ್ಷಗಳಷ್ಟಿತ್ತು. ಅರಣ್ಯ ವಿಸ್ತಾರವಾಗಿತ್ತು. ಮಾನವನ ಜೊತೆ ವನ್ಯಜೀವಿಗಳ ಸಂಘರ್ಷ ಮಿತಿಯಲ್ಲಿತ್ತು. ಮೊದಲನೇ ಮಹಾಯುದ್ಧದ ನಂತರ, ಭಾರತದ ಜನಸಂಖ್ಯೆ ನಿರಂತರವಾಗಿ ಏರಿಕೆಯಾಗುತ್ತಲೇ ಹೋಯಿತು. ವನ್ಯಜೀವಿಗಳ ಜೊತೆ ಮನುಷ್ಯನ ಮುಖಾಮುಖಿ ಹೆಚ್ಚಾಯಿತು. ನರಹಂತಕ ಹುಲಿಗಳ ಸಂಖ್ಯೆಯೂ ಹೆಚ್ಚಿತು. ನರಭಕ್ಷಕ ಹುಲಿಗಳನ್ನು ಬೇಟೆಯಾಡುತ್ತಿದ್ದ, ಕೆನೆತ್ ಆಂಡರ್ಸನ್ ಮತ್ತು ಜಿಮ್ ಕಾರ್ಬೆಟ್ ಅವರ ಅನುಭವ ಕಥನಗಳನ್ನು ಭಾವಾನುವಾದ ಮಾಡಿದ ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರ ಪುಸ್ತಕದಲ್ಲಿ 1900-1960 ದಶಕಗಳನ್ನು ನಭೂತೋ ನಭವಿಷ್ಯತಿ ಎಂದು ಕರೆದಿದ್ದನ್ನು ಇಲ್ಲಿ ಸ್ಮರಿಸಬೇಕು.



ಇಬ್ಬರು ರೈತರನ್ನು ಕೊಂದ ಕಾಡಾನೆ ಸೆರೆಯಾದ ಕ್ಷಣ

ವನ್ಯಜೀವಿಗಳನ್ನು ಹರಣ ಮಾಡುವುದು ಅಪರಾಧವಾಗಿರಲಿಲ್ಲ. ನರಭಕ್ಷಕ ಹುಲಿಗಳಿಗಿಂತ ಹೆಚ್ಚು ಅಮಾಯಕ ಹುಲಿಗಳು ಬೇಟೆಗೆ ಬಲಿಯಾದವು. ಒಂದು ಹಂತದಲ್ಲಿ ಸರ್ಕಾರಗಳು ಹುಲಿ ಶಿಕಾರಿಗೆ ಪ್ರೋತ್ಸಾಹ ಧನ ಘೋಷಣೆ ಮಾಡಿದ್ದವು. ಒಂದು ಲಕ್ಷ ಇದ್ದ ಹುಲಿಗಳ ಸಂಖ್ಯೆ 1970ರ ಹೊತ್ತಿಗೆ ಶೇಕಡ 97ರಷ್ಟು ನಾಶವಾಯಿತು. ಆಗಿನ ಸರ್ಕಾರ 70ರ ದಶಕದಲ್ಲಿ ವನ್ಯಜೀವಿಗಳನ್ನು ಉಳಿಸುವ ಸಲುವಾಗಿ ವನ್ಯಜೀವಿ ಸಂರಕ್ಷಣಾ ಕಾಯ್ದೆ ಹಾಗೂ ಹುಲಿ ಯೋಜನೆಯನ್ನು ಜಾರಿಗೆ ತಂದಿತು.

2022ರ ಗಣತಿಯ ಪ್ರಕಾರ ಹುಲಿಗಳ ಸಂಖ್ಯೆ 3167 ಇದೆ. ಆದಾಗ್ಯೂ 55 ವರ್ಷಗಳಲ್ಲಿ ಹುಲಿಗಳ ಅವನತಿಯನ್ನು ತಗ್ಗಿಸಲಾಗಿದೆಯೇ ಹೊರತು ಅವುಗಳ ಸಂಖ್ಯೆ ಗಣನೀಯವಾಗಿ ಏರಿಕೆಯಾಗಲಿಲ್ಲ. ಬದಲಾದ ಕಾಲದಲ್ಲಿ ಜನಸಂಖ್ಯೆಯಲ್ಲಿ ವಿಶ್ವದಲ್ಲಿ ಮೊದಲನೇ ಸ್ಥಾನಕ್ಕೆ ಭಾರತ ತಲುಪಿದೆ. ಅರಣ್ಯ ವ್ಯಾಪ್ತಿ ತೀರಾ ಕಡಿಮೆಯಾಗಿದೆ. ಅದರಲ್ಲೂ ವನ್ಯಜೀವಿಗಳಿಗೆಂದೇ ಮೀಸಲಾದ ಅಭಯಾರಣ್ಯಗಳ ಪ್ರಮಾಣ ಶೇಕಡ 4ರಷ್ಟು ಮಾತ್ರ. ಇದರಲ್ಲೂ ಅಭಿವೃದ್ಧಿ ಯೋಜನೆಗಳು ಧಾಂಗುಡಿಯಿಡುತ್ತಿವೆ. ಜನವಸತಿಯೂ ಇದೆ. ಇದೇ ಕಾರಣಗಳಿಗೆ ಮಾನವ-ವನ್ಯಜೀವಿಗಳ ಸಂಘರ್ಷ ದಿನೇ ದಿನೇ ಹೆಚ್ಚುತ್ತಿದೆ.

ಪ್ರಪಂಚದ ಒಟ್ಟು ವಿಸ್ತಾರದಲ್ಲಿ ಭಾರತದ ಭೌಗೋಳಿಕ ವಿಸ್ತೀರ್ಣ ಶೇಕಡ 2.4 ರಷ್ಟು ಮಾತ್ರ. ಗಮನಿಸಬೇಕಾದ ಅಂಶವೆಂದರೆ, ಜಾಗತಿಕ ಜನಸಂಖ್ಯೆಯ ಶೇಕಡ 20 ರಷ್ಟು ಭಾರತದಲ್ಲಿದೆ. ವನ್ಯಜೀವಿ ನೆಲೆಗಳ ಮೇಲೆ ಇಷ್ಟು ಪ್ರಮಾಣದ ಒತ್ತಡವಿದ್ದರೂ, ಜಾಗತಿಕ ಜೀವಿವೈವಿಧ್ಯ ಪ್ರಮಾಣದಲ್ಲಿ ಭಾರತದ ಕೊಡುಗೆ ಶೇಕಡ 8ರಷ್ಟಿದೆ ಎನ್ನುವುದು ಶ್ರೀಮಂತಿಕೆಯನ್ನು ಎತ್ತಿ ತೋರಿಸುತ್ತದೆ.

12ನೇ ಪುಟಕ್ಕೆ..



ಅಭಯಾರಣ್ಯದ ಕೇಂದ್ರ ಭಾಗದಲ್ಲಿ ಕೃಷಿ ಜಮೀನು

# ಎಲ್ಹೇರಿ ಯುವಕನ ವೀಳ್ಯದೆಲೆ ಕೃಷಿ

• ಮಲ್ಲಿಕಾರ್ಜುನ ನಾಲವಾರ



ವಿಶ್ವಶಂಕರ ಶಿವರಾಯ

**ಶಾಲೆಯಲ್ಲಿ** ಮಕ್ಕಳ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಷಣ ಮಾಡಿ ಬಂದ ಯುವ ಕೃಷಿಕ ವಿಶ್ವಶಂಕರ ಶಿವರಾಯ ಬಟ್ಟೆ ಬದಲಿಸಿದರು. ಬಳಿಕ ಚೀಲದಲ್ಲಿ ತಿಪ್ಪೆಗೊಬ್ಬರ ತುಂಬಿಕೊಂಡು ಸೀತಾಫಲ ಗಿಡದ ಬುಡದಲ್ಲಿ ನೆಲ ಅಗೆದು ಗೊಬ್ಬರ ಸುರಿದರು. ಲಗುಬಗನೆ ವೀಳ್ಯದೆಲೆಯ ಪಾಲಿಹೌಸ್‌ನತ್ತ ಹೆಜ್ಜೆ ಹಾಕಿದರು. ಅಲ್ಲಿ ಆಗತಾನೆ ಕೂಲಿ ಕಾರ್ಮಿಕರು ಚಿವುಟಿ ಒಪ್ಪವಾಗಿ ಜೋಡಿಸಿ ಇರಿಸಿದ್ದ ವೀಳ್ಯದೆಲೆ ಕಟ್ಟುಗಳನ್ನು ಗಾಡಿಗೆ ಹಾಕಿ ಮಾರುಕಟ್ಟೆಗೆ ಕಳುಹಿಸಿದರು. ಬೆಲ್ಲ, ಕಡಲೆಹಿಟ್ಟು, ಹುತ್ತದ ಮಣ್ಣು, ಸಗಣಿಯನ್ನು ಡ್ರಮ್‌ನಲ್ಲಿದ್ದ ನೀರಿಗೆ ಬೆರಸಿ ಜೀವಾಮೃತ ಸಿದ್ಧಪಡಿಸಿದರು. ನಂತರ ಕುಡುಗೋಲು ಹಿಡಿದು ತೊಗರಿ, ಅವರೆ ಬೆಳೆಗಳ ನಡುವೆ ಬೆಳೆದಿದ್ದ ಕಳೆ ಕೀಳುತ್ತಲೇ ಮಾತಿಗಿಳಿದ ಅವರು, 'ಬೇಸಾಯ ನಂಬಿ ಲಕ್ಷಾಂತರ ರೂಪಾಯಿ ಬಂಡವಾಳ ಹಾಕಿದ್ದೇನೆ. ನಾನೇ ದುಡಿಯದೆ ಫಸಲು ಹೇಗೆ ಸಿಗುತ್ತದೆ' ಎಂದು ಪ್ರಶ್ನಿಸಿದರು. ಹಾಗೆಯೇ ಹತ್ತು ಎಕರೆಯಲ್ಲಿರುವ ಬಹು ಬೆಳೆಯ ಯಶೋಗಾಥೆಯನ್ನು ಹೇಳುತ್ತಾ ಹೋದರು.

ಎಂ.ಕಾಂ ಪದವೀಧರ ವಿಶ್ವಶಂಕರ, ಯಾದಗಿರಿ ಜಿಲ್ಲೆಯ ಗುರುಮಠಕಲ್ ತಾಲ್ಲೂಕಿನ ಎಲ್ಹೇರಿಯಲ್ಲಿ 'ನವನಂದಿ ನೈಸರ್ಗಿಕ ಕೃಷಿ ಕೇಂದ್ರ'ವನ್ನು ಅಭಿವೃದ್ಧಿಪಡಿಸಿದ್ದಾರೆ. ಅಲ್ಲಿ ಹತ್ತಾರು ಬಗೆಯ ಹಣ್ಣಿನ ಗಿಡಗಳಿವೆ. ಅವುಗಳ ನಡುವೆ ಶೇಂಗಾ ಬೆಳೆಯೂ ಹಬ್ಬಿದೆ. ಜವಾರಿ ಕೋಳಿ, ಪಶು ಸಂಪತ್ತಿದೆ. ಪ್ರತಿ ತಿಂಗಳು ಆದಾಯ ತಂದುಕೊಡುವ ವೀಳ್ಯದೆಲೆ ಇದೆ. ಮಹಾಗನಿ ಗಿಡಗಳ ಸಾಲುಗಳ ನಡುವೆ ತೊಗರಿ, ಅವರೆ, ಅಲಸಂದೆ ಹುಲುಸಾಗಿ ಬೆಳೆದಿವೆ. ಜಮೀನಿನ ಸುತ್ತಲೂ ಶ್ರೀಗಂಧ, ಪಾಲಿಹೌಸ್‌ಗೆ ಗಾಳಿಯಿಂದ ರಕ್ಷಿಸುವ ಸರ್ವೆ ಮರಗಳು ಆವರಿಸಿಕೊಂಡಿವೆ.

**ಎಲ್ಹೇರಿ ಜೋಳಕ್ಕೆ ಎಲ್ಲೆಲ್ಲೂ ಬೇಡಿಕೆ**

**ಮಂಜಿನಲ್ಲಿ ಸಮೃದ್ಧವಾಗಿ ಬೆಳೆದು ಗೊಬ್ಬರ, ರಾಸಾಯನಿಕ ಸಿಂಪರಣೆ ಬೇಡದ ಜೋಳಕ್ಕೆ ಧರ್ಮದ ಬೆಳೆ ಎಂಬ ಹೆಗ್ಗಳಿಕೆ ಇದೆ. ದಪ್ಪ, ಬಿಳಿಯಾಗಿರುವ ಎಲ್ಹೇರಿ ಜೋಳಕ್ಕೆ ಬಹು ಬೇಡಿಕೆ. ಕರ್ನಾಟಕ ಸೇರಿದಂತೆ ಮಹಾರಾಷ್ಟ್ರ, ಆಂಧ್ರಪ್ರದೇಶ, ತೆಲಂಗಾಣ ಹಾಗೂ ತಮಿಳುನಾಡಿನಲ್ಲಿ ಮಾರುಕಟ್ಟೆ ಸೃಷ್ಟಿಯಾಗಿದೆ. ಕಳೆದ ವರ್ಷ ಪ್ರತಿ ಕ್ವಿಂಟಲ್‌ಗೆ ₹ 6,000 ದಂತೆ 80 ಕ್ವಿಂಟಲ್ ಮಾರಾಟ ಮಾಡಿದ್ದಾಗಿ ವಿಶ್ವಶಂಕರ ಹೇಳುತ್ತಾರೆ.**

'ಬೇರೆಯವರ ಕೈಕೆಳಗೆ ದುಡಿಯುವುದಕ್ಕಿಂತ ನಾವೇ ಇನ್ನೊಬ್ಬರಿಗೆ ಕೆಲಸ ಕೊಡಬೇಕು' ಎಂಬ ತಂದೆಯ ಮಾತು ವಿಶ್ವ ಅವರನ್ನು ಪ್ರಭಾವಿಸಿತು. ವಾಣಿಜ್ಯ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದರಿಂದ ಕೃಷಿಯನ್ನು ಉದ್ಯಮದ ದೃಷ್ಟಿಕೋನದಲ್ಲಿ ನೋಡಿದರು. ಬೆಳೆಗಳ ಮೇಲೆ ಕಡಿಮೆ ಬಂಡವಾಳ ಹೂಡಿ, ಬಂದ ಲಾಭದಿಂದ ಹೂಡಿಕೆಯನ್ನು ದ್ವಿಗುಣ ಮಾಡಿ ಮಾಸಿಕ, ಅರ್ಧ ವಾರ್ಷಿಕ, ವಾರ್ಷಿಕ ಆದಾಯ ತಂದುಕೊಡುವ ಬೆಳೆಗಳನ್ನು ಬೆಳೆಯುವ ಜಾಣ್ಮೆ ತೋರಿದ್ದಾರೆ.

ಅರ್ಧ ಎಕರೆಯಲ್ಲಿ ವೀಳ್ಯದೆಲೆ ಬೆಳೆಯಲು ಪಾಲಿಹೌಸ್ ನಿರ್ಮಾಣ ಮಾಡಿದ್ದಾರೆ. ಸಸಿಗಳ ನಾಟಿ ಹಾಗೂ ಬೊಂಬುಗಳನ್ನು ನೆಡಲು ಸೇರಿ ₹ 11 ಲಕ್ಷ ಬಂಡವಾಳ ಹೂಡಿದ್ದಾರೆ. ಎಲೆಗಳ ಬಾಳಿಕೆ ಹಾಗೂ ಉತ್ತಮ ಇಳುವರಿಗಾಗಿ ಮಣ್ಣಿನ ಫಲವತ್ತತೆ ವೃದ್ಧಿಸಲು ಜೀವಾಮೃತವನ್ನು ಕೊಡುತ್ತಿದ್ದಾರೆ.

ಮೂರು ವರ್ಷಗಳ ಹಿಂದೆ ನಾಟಿ ಮಾಡಿದ್ದ ವೀಳ್ಯದೆಲೆ ಎರಡು ವರ್ಷಗಳಿಂದ ಫಲ ಕೊಡುತ್ತಿದೆ. ತಿಂಗಳಲ್ಲಿ ಇಪ್ಪತ್ತು ದಿನ ಇಬ್ಬರು ಕೂಲಿಗಳು ಎಲೆ ಚಿವುಟುತ್ತಾರೆ. ಕಳೆದ ವರ್ಷ ಮಾಸಿಕ ₹ 35 ಸಾವಿರ ನಿವ್ವಳ ಲಾಭ ಬಂದಿತ್ತು. ಈ ವರ್ಷದಿಂದ ಅದು ₹ 42,500ಕ್ಕೆ ಏರಿಕೆಯಾಗಿದೆ. ವರ್ಷದ 365 ದಿನವೂ ಆದಾಯ ಕೊಡುವ ವೀಳ್ಯದೆಲೆ ಕೌಶಲಯುಕ್ತ ಕೂಲಿಕಾರರು ಹಾಗೂ ಮಗುವಿನಂತೆ ಆರೈಕೆ ಬೇಡುತ್ತದೆ ಎನ್ನುತ್ತಾರೆ ವಿಶ್ವ.

ಜವಾರಿ ಕೋಳಿ ಸಾಕಾಣಿಕೆಯು ಅಲ್ಪ ಅವಧಿಯ ಆದಾಯ ತಂದುಕೊಡುತ್ತಿದೆ. ಜಮೀನಿನಲ್ಲಿ ಮುಕ್ತವಾಗಿ ಓಡಾಡುತ್ತಾ ಮೇಯುವ ನೂರಾರು ಕೋಳಿಗಳಿವೆ. ಪ್ರತಿ ಕೆ.ಜಿ. ಕೋಳಿಗೆ ₹ 500, ಬೇಡಿಕೆ ಇದ್ದಾಗ ಆ ಮೊತ್ತ ₹ 600ಕ್ಕೆ ಏರಿಕೆ ಆಗುತ್ತದೆ. ಹಾಲು ಕೊಡುವ ಹಸುಗಳಿದ್ದು, ಅವುಗಳ ಸಗಣಿ ಸಾವಯವ ಗೊಬ್ಬರ, ಜೀವಾಮೃತಕ್ಕೆ ಬಳಕೆ ಆಗುತ್ತಿದೆ.

ದಕ್ಷಿಣ ಕರ್ನಾಟಕದಲ್ಲಿ ಸಾಮಾನ್ಯವಾಗಿ ಕಂಡುಬರುವ ಹಲಸು, ಅಂಜೂರ, ಸ್ಟಾರ್‌ಫ್ರೂಟ್, ರಾಮಫಲ, ಲಕ್ಷ್ಮಣಫಲ, ಗೇರು ಸಸಿಗಳನ್ನು ಪ್ರಾಯೋಗಿಕವಾಗಿ ನೆಡಲಾಗಿತ್ತು. ಈಗ ಸ್ಥಳೀಯ ವಾತಾವರಣಕ್ಕೆ ಹೊಂದಿಕೊಂಡು ಸಮೃದ್ಧವಾಗಿ ಬೆಳೆದು ಕೆಲವು ಫಲ ಸಹ ಬಿಟ್ಟಿವೆ. ಮುಂದಿನ ದಿನಗಳಲ್ಲಿ ಅವುಗಳ ಸಂಖ್ಯೆ ಹೆಚ್ಚಾಗಲಿದೆ.

ಸೀತಾಫಲ, ಸಪೋಟ, ಸೀಬೆ, ಮಾವು, ನೆಲ್ಲಿಕಾಯಿ, ಮೊಸಂಬಿ, ದಾಳಿಂಬೆ, ನೇರಳೆ, ಬಾರೆಹಣ್ಣಿನ ಮರಗಳು ಫಲ ಕೊಟ್ಟು ಆದಾಯವೂ ತಂದು ಕೊಡುತ್ತಿವೆ. ಹಣ್ಣುಗಳಿಗೆ ನೇರವಾಗಿ ಗ್ರಾಹಕರ ಮಾರುಕಟ್ಟೆ ಸೃಜಿಸಿಕೊಂಡು, ಹಂತ–ಹಂತವಾಗಿ ಮರಗಳ ಸಂಖ್ಯೆಯನ್ನು ಹೆಚ್ಚಿಸಿಕೊಂಡು ಹೋಗುವ ಚಿಂತನೆ ಯುವ ಕೃಷಿಕನದು.

11ನೇ ಪುಟಕ್ಕೆ...



ಚಿತ್ರಗಳು: ತಾಜುದ್ದೀನ್ ಆಜಾದ್

# ಊರು ಉದ್ಧಾರಕ್ಕಾಗಿ ರೀಲ್ಸ್




ಗ್ರಾಮದ ಸಮಸ್ಯೆಗೆ ರೀಲ್ಸ್ ಮೂಲಕ ಪರಿಹಾರ ಯತ್ನಿಸುತ್ತಿರುವ ಅಶೋಕ್ ರೆಡ್ಡಿ

• ಚಾಂದ್ ಬಾಷ

'ಇನ್ನು ಮುಂದೆ ಕರೂರಲ್ಲಿ ಲಂಚ ಹೊಡಿಯಂಗಿಲ್ಲ, ಭ್ರಷ್ಟಾಚಾರ ನಡೆಯಂಗಿಲ್ಲ, ಸರ್ಕಾರಿ ಸಂಸ್ಥೆಗಳು ಸರಿಯಾಗಿ ಕೆಲಸ ಮಾಡ್ಬೇಕು, ಎಲ್ಲ ಗ್ರಾಮ ಪಂಚಾಯ್ತಿ ಮೆಂಬರ್‌ಗಳೂ ಸರಿಯಾಗಿ ಕೆಲಸ ಮಾಡ್ಬೇಕು, ಗ್ರಾಂಟ್ ಇಲ್ಲ ಅಂದ್ರ, ಸ್ಕ್ಯಾಮ್ ಆಯ್ತಂದ್ರ ಕರೂರಿನ ಜನಗಳಿಗೆ ನಾವು ತಿಳಿಸ್ತೀವಿ'

ಇದು ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲ್ಲೂಕಿನ ಕರೂರು ಗ್ರಾಮದಲ್ಲಿ ಹುಟ್ಟಿಕೊಂಡಿರುವ 'ಕರೂರು ಸೂಪರ್ ವಿಲೇಜ್' ತಂಡದ ರೀಲ್ಸ್‌ನ ಒಂದು ತುಣುಕು.

ಮಳೆಯಿಂದ ಹದಗೆಟ್ಟು ಹೋದ ಓಣಿಗಳು, ಗುಂಡಿ ಬಿದ್ದ ರಸ್ತೆಗಳು, ಕಸದ ರಾಶಿ, ಪಾಳುಬಿದ್ದ ಶಾಲೆ, ಅವ್ಯವಸ್ಥೆಯ ಆಗರವಾಗಿರುವ ಆಸ್ಪತ್ರೆ... ಹೀಗೆ ಎಲ್ಲಿ ಅದ್ವಾನಗಳಿವೆಯೋ ಅದರ ಮುಂದೆ ನಿಂತು ರೀಲ್ ಮಾಡುವ 'ಕರೂರು ಸೂಪರ್ ವಿಲೇಜ್' ತಂಡದ ಸದಸ್ಯರು, ಅದನ್ನು ಗ್ರಾಮಾಡಳಿತಕ್ಕೆ, ಅಧಿಕಾರಿಗಳಿಗೆ, ಜಿಲ್ಲಾಡಳಿತಕ್ಕೆ ತಲುಪಿಸುತ್ತಾರೆ. ಸಮಸ್ಯೆಗಳ ಪರಿಹಾರಕ್ಕೆ ಪ್ರಯತ್ನ ಮಾಡುತ್ತಾರೆ.

ಇಷ್ಟೇ ಅಲ್ಲ, ತಮ್ಮ ಗ್ರಾಮದ ಅವ್ಯವಸ್ಥೆಯ ಬಗ್ಗೆ ಜನರಲ್ಲಿ ಪ್ರಶ್ನಿಸುವ, ಚಿಂತಿಸುವ ಮನೋಭಾವ ಮೊಳೆಯುವಂತೆ 'ಕರೂರು ಸೂಪರ್ ವಿಲೇಜ್' ತಂಡ ಪ್ರೇರೇಪಿಸುತ್ತಿದೆ. 'ಲಂಚ ಕೊಡಂಗಿಲ್ಲ, ಮುಟ್ಟಂಗಿಲ್ಲ, ಭ್ರಷ್ಟಾಚಾರ ನಡೆಯುವಂಗಿಲ್ಲ' ಎಂದು ಗ್ರಾಮದಲ್ಲಿ ಜಾಗೃತಿ ಮೂಡಿಸುವ ಪ್ರಯತ್ನವನ್ನು ರೀಲ್ಸ್‌ಗಳ ಮೂಲಕ ಮಾಡುತ್ತಿದೆ.

'ಗ್ರಾಮಕ್ಕೆ ನಾಯಕರು ಇರಬಾರದು. ಅವರ ಹಿಂದೆ ಹೋದರೆ ನಾವು ಹಿಂಬಾಲಕರಾಗುತ್ತೇವೆ. ಯಾರೋ ರಾಜಕೀಯ ನಾಯಕರು ಹೇಳಿದವರು ಇಲ್ಲಿ ಬಂದು ನಿಂತು ಗೆಲ್ಲೋದಲ್ಲ. ನಾವೇ ನಾಯಕರಾಗಬೇಕು. ನಮ್ಮ ಓಣಿಗೆ ನಮ್ಮವರೇ ಮೆಂಬರ್‌ಗಳಾಗಬೇಕು. ನಮ್ಮ ಸಮಸ್ಯೆಗಳಿಗೆ ನಾವೇ ಪರಿಹಾರ ಕಂಡುಕೊಳ್ಳಬೇಕು. ದುಡ್ಡು ಪಡಿಲಾರ್ದಂಗೆ ವೋಟು ಹಾಕಬೇಕು' ಎಂದು ಈ ತಂಡ ಒಂದೂವರೆ ವರ್ಷದಿಂದ ಎಚ್ಚರಿಸುತ್ತಿದೆ.

ಗ್ರಾಮದ ಸಮಸ್ಯೆಗಳು, ನಾಗರಿಕರ ಹಕ್ಕುಗಳಿಗೆ ಸಂಬಂಧಿಸಿದಂತೆ ಈಗಾಗಲೇ ನೂರಾರು ರೀಲ್ಸ್‌ಗಳನ್ನು ಮಾಡಿರುವ ಈ ತಂಡ, ಕರೂರು ಗ್ರಾಮವನ್ನೂ ಮೀರಿ, ಸಾಮಾಜಿಕ ಮಾಧ್ಯಮದಲ್ಲಿ ರಾಜ್ಯದಾದ್ಯಂತ ಸದ್ದು ಮಾಡುತ್ತಿದೆ. ಇದರ ಪ್ರೇರಣೆ ಪಡೆದು ಹಲವು ಕಡೆಗಳಲ್ಲಿ 'ಸೂಪರ್ ವಿಲೇಜ್' ತಂಡಗಳು ಸೃಷ್ಟಿಯಾಗುತ್ತಿವೆ.



'ಕರೂರು ಸೂಪರ್ ವಿಲೇಜ್'ನ ರೀಲ್ಸ್ ತಂಡ

'ಕರೂರು ಸೂಪರ್ ವಿಲೇಜ್'ನ ಈ ಅಭಿಯಾನದಿಂದ ಆದ ಅನುಕೂಲಗಳ ಬಗ್ಗೆ ಗ್ರಾಮಸ್ಥರೂ ಮಾತನಾಡಿದ್ದಾರೆ. 'ನಾವು ಧೈರ್ಯವಾಗಿ ಮಾತಾಡಾಕ ಹತ್ತಿದ್ಮೇಲೆ, ನಮ್ಮೊಣ್ಯಾಗಾ ಕಸದ ಗಾಡಿ ಬರಾಕ ಹತ್ತೈತಿ. ಆಸ್ಪತ್ರ್ಯಾಗ ಔಷಧಿ ಸಿಗತೈತಿ' ಎನ್ನುತ್ತಾರೆ ಗ್ರಾಮದ ಆರನೇ ವಾರ್ಡ್‌ನ ಲಕ್ಷ್ಮವ್ವ.

'ಗ್ರಾಮ ಪಂಚಾಯಿತಿ ನಡೆಸುವ ಗ್ರಾಮಸಭೆಗಳ ಬಗ್ಗೆ ನಮಗೆ ಮಾಹಿತಿಯೇ ಇರುತ್ತಿರಲಿಲ್ಲ. ಕರೂರು ಸೂಪರ್ ವಿಲೇಜ್‌ನ ಹುಡುಗರು ಬಂದ ಮೇಲೆ ಮೊದಲ ಬಾರಿ ನಾವೆಲ್ಲರೂ ಗ್ರಾಮಸಭೆ ನೋಡುವಂತಾಯಿತು' ಎಂದು ನಾಗರಾಜ ರೆಡ್ಡಿ ಹೇಳುತ್ತಾರೆ.

## ಶುರುವಾಗಿದ್ದು ಹೀಗೆ...

ವೃತ್ತಿಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿರುವ, ಎಂಟೆಕ್ ಮಾಡಿರುವ ಅಶೋಕ್ ರೆಡ್ಡಿ 'ಕರೂರು ಸೂಪರ್ ವಿಲೇಜ್' ಎಂಬ ಇನ್‌ಸ್ಟಾಗ್ರಾಂ ಖಾತೆ ಮೂಲಕ ಮೊದಲಿಗೆ ಗ್ರಾಮ ಜಾಗೃತಿ ರೀಲ್ಸ್ ಮಾಡಲಾರಂಭಿಸಿದರು. ಬಹರೇನ್, ಓಮನ್, ಅಲ್ಜೀರಿಯಾಗಳಲ್ಲಿ ಕೆಲಸ ಮಾಡಿರುವ ಅಶೋಕ್ ರೆಡ್ಡಿ, ಸದ್ಯ ಸಂಸ್ಥೆಯೊಂದರಲ್ಲಿ ಉದ್ಯೋಗಿ. ಮನೆಯಿಂದಲೇ ಕೆಲಸ ಮಾಡುತ್ತಿದ್ದಾರೆ. ಹುಟ್ಟೂರು ಕರೂರಿನಲ್ಲೇ ಉಳಿದುಕೊಂಡಿರುವ ಅವರು, ಗ್ರಾಮದ ಸಮಸ್ಯೆಗಳ ಬಗ್ಗೆ ರೀಲ್ಸ್ ಮಾಡಲು ಶುರು ಮಾಡಿದರು. ನಂತರ ಇದಕ್ಕೆ ಸ್ಪಂದಿಸಿದ ಗ್ರಾಮದ ಯುವಕರು ಒಬ್ಬೊಬ್ಬರಾಗಿ ಅಶೋಕ್ ರೆಡ್ಡಿಯನ್ನು ಸೇರಿಕೊಂಡರು. ಈಗ ಈ ಬಳಗದಲ್ಲಿ ಹದಿನಾರು ಮಂದಿ ಇದ್ದಾರೆ.

ಆರಂಭದಲ್ಲಿ 'ರೀಲ್ಸ್ ಹುಡುಗರು' ಎಂದು ಗುರುತಿಸಿಕೊಂಡಿದ್ದವರು ಈಗ ಗ್ರಾಮದ ಬದಲಾವಣೆಯ ಹರಿಕಾರರು ಎಂದು ಕರೆಸಿಕೊಳ್ಳುತ್ತಿದ್ದಾರೆ. ಅಧಿಕಾರಿಗಳು ಲಂಚ ಕೇಳಲು ಹಿಂಜರಿಯುತಿದ್ದಾರೆ. 'ಕರೂರು ಸೂಪರ್ ವಿಲೇಜ್' ಇನ್‌ಸ್ಟಾಗ್ರಾಂ ಖಾತೆಯಲ್ಲಿ ವಿಡಿಯೊವೊಂದು ಬಂತೆಂದರೆ, ಅಧಿಕಾರಿಗಳು ತಕ್ಷಣ ಸ್ಪಂದಿಸುತ್ತಾರೆ. ವಾಟ್ಸ್‌ಆ್ಯಪ್ ಗ್ರೂಪ್ ರಚಿಸಲಾಗಿದ್ದು, ಅದರಲ್ಲಿ ಜಿಲ್ಲಾಮಟ್ಟದವರೆಗಿನ ಅಧಿಕಾರಿಗಳು ಸೇರಿದಂತೆ ಗ್ರಾಮದ 800ಕ್ಕೂ ಹೆಚ್ಚು ಜನ ಇದ್ದಾರೆ. 'ಅಶೋಕ್ ರೆಡ್ಡಿ ಆರಂಭಿಸಿದ ಈ ಅಭಿಯಾನದಲ್ಲಿ ಹಲವರು ಸೇರಿಕೊಂಡಿದ್ದಾರೆ. ಅಕೌಂಟೆಂಟ್‌ಗಳು, ಸಾಫ್ಟ್‌ವೇರ್ ಎಂಜಿನಿಯಗಳು, ಆಟೋಮೇಷನ್ ಎಂಜಿನಿಯರ್‌ಗಳು, ಖಾಸಗಿ ಶಾಲಾ ಶಿಕ್ಷಕರು, ರೈತರು ಜೊತೆಗೂಡಿದ್ದಾರೆ' ಎಂದು ಕರೂರು ಸೂಪರ್ ವಿಲೇಜ್ ತಂಡದ ಸದಸ್ಯ ಸಂಜಯ್ ಹೇಳುತ್ತಾರೆ.

'ನಮ್ಮ ಉದ್ದೇಶ ಒಂದೇ. ನಮ್ಮ ಕರೂರು ಗ್ರಾಮ ಸೂಪರ್ ವಿಲೇಜ್ ಆಗಬೇಕು. ಮೂಲ ಸೌಕರ್ಯಗಳಾದ ನೀರು, ಚರಂಡಿ, ನೈರ್ಮಲ್ಯ, ಒಳ್ಳೆಯ ಆಸ್ಪತ್ರೆ ಮತ್ತು ಲಂಚ ಮುಕ್ತ ಗ್ರಾಮವಾಗಬೇಕು' ಎನ್ನುತ್ತಾರೆ ಅಶೋಕ್ ರೆಡ್ಡಿ.

'ಕರೂರು ಇತಿಹಾಸದಲ್ಲಿ ಮೊದಲ ಬಾರಿಗೆ ಊರಿನ ಯುವಕರು ಈ ಮಟ್ಟದಲ್ಲಿ ಧೈರ್ಯ ಮಾಡಿದ್ದಾರೆ. ಅದಕ್ಕಾಗಿ ಸಾಮಾಜಿಕ ಮಾಧ್ಯಮವನ್ನು ಸಮರ್ಥವಾಗಿ ಬಳಸಿಕೊಳ್ಳುತ್ತಿದ್ದಾರೆ. ವಿದ್ಯಾವಂತ ಹುಡುಗರ ಈ ಪ್ರಯತ್ನಕ್ಕೆ ನಮ್ಮ ಬೆಂಬಲವಿದೆ' ಎಂದು ಜಗನ್ನಾಥ ರೆಡ್ಡಿ ಹೇಳುತ್ತಾರೆ.

## ಸೂಪರ್ ವಿಲೇಜ್‌ಗಳಿಗೆ ಪ್ರೇರಣೆ

ಕರೂರು ಸೂಪರ್ ವಿಲೇಜ್ ತಂಡದ ಪ್ರೇರಣೆ ಪಡೆದು ರಾಜ್ಯವಲ್ಲದೇ, ಹೊರ ರಾಜ್ಯಗಳಲ್ಲೂ ಸೂಪರ್ ವಿಲೇಜ್ ತಂಡಗಳು ರಚನೆಯಾಗುತ್ತಿವೆ.

ಸಿರುಗುಪ್ಪ ತಾಲ್ಲೂಕಿನ ದೇಶನೂರು, ಹೊಸಪೇಟೆ ತಾಲ್ಲೂಕಿನ ಜಿ. ನಾಗಲಾಪುರ, ಕೂಡ್ಲಿಗಿ ತಾಲ್ಲೂಕಿನ ಹುರಳಿಹಾಳು, ಗೋಕಾಕ್ ತಾಲ್ಲೂಕಿನ ಮೆಳವಣಿಕೆ, ಜೇವರ್ಗಿ ತಾಲ್ಲೂಕಿನ ಇಜೇರಿ, ಅಲ್ಲದೆ ಸೀಮಾಂಧ್ರದ ಪೆದ್ದ ಹರಿವಾಣಂ ಸೇರಿದಂತೆ ಹತ್ತಾರು ಗ್ರಾಮ ಪಂಚಾಯಿತಿಗಳಲ್ಲಿ ಸೂಪರ್ ವಿಲೇಜ್ ತಂಡಗಳು ಹುಟ್ಟಿಕೊಂಡಿವೆ. ಗ್ರಾಮ ಪಂಚಾಯಿತಿಗಳ ಆಡಳಿತ ಸುಧಾರಣೆಗಳ ಹಕ್ಕೊತ್ತಾಯಕ್ಕೆ ಪ್ರೇರಣೆಯಾಗಿವೆ. ರೀಲ್ಸ್ ಬರೀ ಮನರಂಜನೆಗಾಗಿ ಅಲ್ಲ, ಅದು ಜನ ಜಾಗೃತಿಗಾಗಿಯೂ, ಗ್ರಾಮದ ಅಭ್ಯುದಯಕ್ಕಾಗಿಯೂ ಬಳಕೆ ಆಗುತ್ತದೆ. ಸಮಾಜದಲ್ಲಿನ ಬದಲಾವಣೆಗೂ ಕಾರಣವಾಗುತ್ತದೆ. ಸಾಮಾಜಿಕ ಮಾಧ್ಯಮಗಳನ್ನು ಹೇಗೆ ಬಳಸಿಕೊಳ್ಳುತ್ತೇವೆ ಎನ್ನುವುದು ಮುಖ್ಯ. ❖


**ರೀಲ್ಸ್ ಹೂರಣ...**

ಕರೂರು ಗ್ರಾಮ ಪಂಚಾಯಿತಿಯನ್ನು ಸೂಪರ್ ವಿಲೇಜ್ ಮಾಡುವ ಕನಸು ಹೊತ್ತ ರೀಲ್ಸ್‌ನಲ್ಲಿ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳಿಗೆ ನ್ಯಾಯಕ್ಕಾಗಿ ಮೊರೆ ಇಡುವುದು. ಭ್ರಷ್ಟಾಚಾರ ಮುಕ್ತ ಗ್ರಾಮ ಪಂಚಾಯಿತಿಗಾಗಿ 'ದುಡ್ಡಿಗೆ ಮತ ಮಾರಿಕೊಳ್ಳಬೇಡಿ' ಎಂಬ ಕಳಕಳಿ ಮನವಿ ಮಾಡುವುದು. ಜನರೇ ಸೂಚಿಸುವ ವ್ಯಕ್ತಿ ವಾರ್ಡಿನ ಸದಸ್ಯನಾಗಬೇಕು, ರಾಜಕೀಯ ಪಕ್ಷ ಸೂಚಿಸುವವನಲ್ಲ ಎಂಬ ಅಭಿಯಾನ. ಗ್ರಾಮ ಪಂಚಾಯಿತಿಗೆ ವಾರ್ಷಿಕ ಒಂದು ಕೋಟಿ ಅನುದಾನ ಬರುತ್ತದೆ ಎಂಬುದನ್ನು ಜನರಿಗೆ ತಿಳಿಸುವುದು, ಅನುದಾನ ಬಳಕೆ ಕುರಿತು ಸಾರ್ವಜನಿಕರು ಪ್ರಶ್ನಿಸಬೇಕು ಎಂಬುದನ್ನು ರೀಲ್ಸ್ ಒಳಗೊಂಡಿವೆ.

# ಬಂಜಾರರಲ್ಲಿ ಕವಡೆಗಿದೆ ಕಿಮ್ಮತ್ತು



ಕವಡೆಗಳ ಗೊಂಚಲು



• ಡಿ.ರಾಮಾನಾಯಕ್

ಕವಡೆಗಳಿಗೆ ಪ್ರೀತಿಯ ಬಂಧವನ್ನು ಬೆಸೆದವರು ಬಂಜಾರರು. ಧಾನ್ಯ, ಉಪ್ಪು, ಲೋಹ ಇತ್ಯಾದಿ ವಸ್ತುಗಳನ್ನು ಎತ್ತುಗಳ ಮೂಲಕ ಸಾಗಿಸುತ್ತಿದ್ದರು. ಅವರ ದೀರ್ಘ ಪ್ರಯಾಣಗಳಲ್ಲಿ ಕವಡೆಗಳು ಕೇವಲ ಹಣವಲ್ಲ, ವ್ಯಾಪಾರದ ಭಾಷೆಯೂ ಆಗಿದ್ದವು.

ಲಿಪಿಯಿಲ್ಲದ ಭಾಷೆ ಮಾತನಾಡುವ ಬಂಜಾರರು ತಮ್ಮ ವ್ಯಾಪಾರದ ಸಂಕೀರ್ಣ ವ್ಯವಹಾರಗಳನ್ನು ಹೇಗೆ ನಿರ್ವಹಿಸುತ್ತಿದ್ದರು ಎಂಬುದರ ಬಗ್ಗೆ ಕುತೂಹಲ ಇರುವುದು ಸಹಜ. ಅವರ ಜಗತ್ತಿನಲ್ಲಿ ಕವಡೆಗಳು ಕೇವಲ ಕರೆನ್ಸಿಯಾಗಿರದೆ ಲೆಕ್ಕಾಚಾರದ ಸಾಧನವೂ ಆಗಿದ್ದವು. ಅವರು ಅವುಗಳನ್ನು ತಮ್ಮ ವ್ಯವಹಾರ ದಾಖಲೆಗಳಿಗೆ ಎಣಿಕೆಯ ಸಾಧನವಾಗಿ ಬಳಸಿದರು. ಮಾರಾಟ, ಖರೀದಿ ಮತ್ತು ಪಾವತಿಗಳನ್ನು ಗುರುತಿಸಲು ಕವಡೆಗಳನ್ನು ಸರಗಳಾಗಿ ಇಲ್ಲವೇ ಗೊಂಚಲುಗಳಾಗಿ ಕೆಲವನ್ನು ಸೇರಿಸುವುದು ಮತ್ತು ತೆಗೆದುಹಾಕುವ ಪದ್ಧತಿ ಅಳವಡಿಸಿಕೊಂಡಿದ್ದರು.

ಬಂಜಾರ ಮಹಿಳೆಯರು ಈ ವ್ಯಾಪಾರ ವಿಧಾನಗಳಲ್ಲಿ ನಿಪುಣರಾಗಿದ್ದರು. ಯುವತಿಯರು ವ್ಯಾಪಾರದ ದಾಖಲೆಗಳನ್ನು ನಿರ್ವಹಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದರು. ಅವರು ಕವಡೆಗಳನ್ನು ಬಟ್ಟೆಯ ಮೇಲೆ ಹೊಲೆದು ಅಥವಾ ಸಣ್ಣ ಚೀಲಗಳಲ್ಲಿ ಕೂಡಿಟ್ಟು ಠೇವಣಿಗಳು ಮತ್ತು ಖರ್ಚುಗಳ ಲೆಕ್ಕವನ್ನು ನೋಡಿಕೊಳ್ಳುತ್ತಿದ್ದರು. ಈ ರೀತಿಯ ವ್ಯಾಪಾರ ಮತ್ತು ನೆನಪಿನ ಆಂತರಿಕ ಸಂಬಂಧವೇ, ಬಂಜಾರ ಮಹಿಳೆಯರ ಉಡುಪುಗಳು ಹಾಗೂ ಆಭರಣಗಳಲ್ಲಿ ಕವಡೆಗಳನ್ನು ಅಲಂಕಾರವಾಗಿ ಬಳಸುವ ಪರಂಪರೆಯ ಮೂಲವಾಗಿರಬಹುದು. ಅಂದರೆ, ಕವಡೆಗಳು ಕೇವಲ ಅಲಂಕಾರ ಮಾತ್ರವಲ್ಲದೆ ಬಂಜಾರರ ಆರ್ಥಿಕ ಮತ್ತು ಸಾಂಸ್ಕೃತಿಕ ಬದುಕಿನ ಭಾಗವೂ ಆಗಿದ್ದವು.

ಕಾಲಾನಂತರದಲ್ಲಿ ವ್ಯಾಪಾರದಿಂದ ಬಂದ ಹೆಚ್ಚುವರಿ ಸಂಪತ್ತು ಬೆಳ್ಳಿ ಮತ್ತು ಚಿನ್ನದ ಆಭರಣಗಳಾಗಿ ಪರಿವರ್ತನೆಯಾಯಿತು. ದೇಹದ ಮೇಲೆ ಧರಿಸುವ ಮೂಲಕ ಅವುಗಳನ್ನು ಸುರಕ್ಷಿತವಾಗಿ ಸಂರಕ್ಷಿಸುವ ಪದ್ಧತಿ ರೂಢಿಗೆ ಬಂತು. ಆರ್ಥಿಕ ಕುಸಿತ ಮತ್ತು ರಾಜಕೀಯ ಬದಲಾವಣೆಯ ಹಿನ್ನೆಲೆಯಲ್ಲಿ ಬಂಜಾರರು ವ್ಯಾಪಾರವನ್ನು ತ್ಯಜಿಸುವುದು ಅನಿವಾರ್ಯವಾದಾಗ ದುಬಾರಿ ಲೋಹಗಳ ಸ್ಥಾನವನ್ನು ಸೀಸದಂತಹ ಅಗ್ಗದ ವಸ್ತುಗಳು ಪಲ್ಲಟಗೊಳಿಸಿದವು. ಆದರೆ ಕವಡೆಯ ಸಾಂಕೇತಿಕ ಶಕ್ತಿಯು ಹಾಗೆಯೇ ಉಳಿದುಕೊಂಡಿತು.

ವ್ಯಾಪಾರ ಕ್ಷೀಣಿಸುತ್ತಿದ್ದಂತೆ ಕವಡೆ ಹಣವು ಕೇವಲ ನೆನಪಾಗಿ ಉಳಿಯಿತು. ಮಾನವಶಾಸ್ತ್ರಜ್ಞ ಎಡ್ಗರ್ ಥರ್ಸ್ಟನ್ ತಮ್ಮ ಕೃತಿಯಲ್ಲಿ ಬಂಜಾರ ಸಮುದಾಯವು ಕವಡೆಯನ್ನು ಅಲಂಕಾರ ಮತ್ತು ಆಚರಣೆಗಳಲ್ಲಿ ಆಳವಾಗಿ ಬೆಸೆದುಕೊಂಡಿದೆ ಎಂದು ದಾಖಲಿಸಿದ್ದಾರೆ. ಅವರ ಉಡುಪು, ಆಭರಣ ಮತ್ತು ಹಬ್ಬದ ವಸ್ತ್ರಗಳು ಕವಡೆಗಳಿಂದ ಮಿನುಗುತ್ತಿದ್ದವು. ಇವುಗಳು ಅವರ ಪೂರ್ವಜರ ನಿರಂತರ ಸಂಚಾರಿ ಜೀವನದ ನೆನಪನ್ನು ಹೊತ್ತಿದ್ದವು. ಜನಪದ ಹಾಡುಗಳು ಮತ್ತು ಮಾತುಕತೆಗಳಲ್ಲಿ ಸಹ ಕವಡೆಯನ್ನು ಐಶ್ವರ್ಯ, ಭಾಗ್ಯ ಮತ್ತು ಸಮೃದ್ಧಿಯ ರೂಪಕವಾಗಿ ಬಳಸಲಾಗುತ್ತಿತ್ತು. ಹೀಗೆ, ಕವಡೆ ಬಂಜಾರರ ಜೀವನದಲ್ಲಿ ಅಲಂಕಾರವಷ್ಟೇ ಅಲ್ಲ, ನೆನಪಿನ ಜೀವಂತ ಕೊಂಡಿಯಾಗಿಯೂ ಉಳಿಯಿತು.

ಕವಡೆ ಕಥೆಯು ಆಫ್ರಿಕಾದಿಂದ ಪೂರ್ವ ಯುರೋಪಿನ ಕಡೆ ವಿಸ್ತರಿಸಿಕೊಂಡು ಹೋಗುವುದನ್ನು ಕಾಣಬಹುದು. ಯುರೋಪಿನ ರೋಮಾ ಸಮುದಾಯವು ಭಾರತದಲ್ಲಿ ಪ್ರಾಚೀನ ಬೇರುಗಳನ್ನು ಹೊಂದಿರುವುದು ಧೃಡಪಟ್ಟಿದೆ. ಈ ಸಮುದಾಯದಲ್ಲೂ ಕೂಡ ಆಭರಣಗಳು, ವೇಷಭೂಷಣಗಳು ಮತ್ತು ಭವಿಷ್ಯ ಹೇಳುವ ಆಚರಣೆಗಳಲ್ಲಿ ಕವಡೆಗಳು ಕಾಣಿಸಿಕೊಳ್ಳುತ್ತಲೇ ಇರುತ್ತವೆ.

ವಾಸ್ತವವಾಗಿ, ಕವಡೆಯ ಪ್ರಯಾಣವು ಮಾನವೀಯತೆಯ ಯಾನವನ್ನು ವಿಸ್ತರಿಸಿಕೊಂಡು ಹೋಗುತ್ತದೆ. ಪ್ರಪಂಚದ ಎಲ್ಲಾ ಸಾಗರಗಳು ಪರಸ್ಪರ ಸಂಬಂಧ ಹೊಂದಿವೆ. ಅವು ಈ ಭೂಗ್ರಹವನ್ನು ಒಟ್ಟಿಗೆ ಬಂಧಿಸುವ ಒಂದು ದೊಡ್ಡ ಜೀವಂತ ಜಾಲವನ್ನು ರೂಪಿಸುತ್ತವೆ. ಈ ಜಲ ಜಾಲದ ಆಳದಲ್ಲಿ ಜನಿಸಿದ ಕವಡೆ, ಆ ಒಂದು ಏಕತೆಯ ಪ್ರತಿಬಿಂಬವನ್ನು ಹೊಂದಿದೆ. ಕವಡೆಯು ದೂರದ ಜನರನ್ನು ಅಂದರೆ ಆಫ್ರಿಕಾದಿಂದ ಭಾರತಕ್ಕೆ, ದ್ವೀಪದಿಂದ ಒಳನಾಡಿಗೆ ಸಂಪರ್ಕಿಸಿದೆ. ಇದು ಸಂಪರ್ಕದ ಸಂಕೇತವಾಗಿ ನಿಂತಿದೆ. ಪ್ರಕೃತಿ ಮತ್ತು ಸಂಸ್ಕೃತಿಯ ನಡುವೆ, ವ್ಯಾಪಾರ ಮತ್ತು ನಂಬಿಕೆಯ ನಡುವೆ, ಕಾಣುವ ಮತ್ತು ಕಾಣದ ನಡುವೆ ಈ ಕೊಂಡಿ ಬಿಗಿ ಹಿಡಿತ ಹೊಂದಿದೆ. ಕವಡೆಯನ್ನು ಹಿಡಿದಿಟ್ಟುಕೊಳ್ಳುವುದು ಅಥವಾ ಧರಿಸುವುದು ಎಂದರೆ ಸಾಗರದ ಆತ್ಮದ ಒಂದು ತುಣುಕನ್ನು ತನ್ನೊಳಗೆ ಧರಿಸಿದಂತಾಗಿದೆ. ಎಲ್ಲಾ ಜೀವನ, ಎಲ್ಲಾ ವಿನಿಮಯ ಮತ್ತು ಎಲ್ಲಾ ಸಂಪ್ರದಾಯವು ಅಂತಿಮವಾಗಿ ಒಂದೇ ಮೂಲದಿಂದ ಹರಿಯುತ್ತದೆ ಎಂಬುದನ್ನು ಅದು ನೆನಪಿಸುತ್ತದೆ.

## ಪ್ಲಾಸ್ಟಿಕ್ ಕವಡೆಗಳು

ಆಧುನಿಕ ಜಗತ್ತಿನಲ್ಲಿ ನಿಜವಾದ ಕವಡೆಗಳು ದೈನಂದಿನ ಬಳಕೆಯಿಂದ ಕಣ್ಮರೆಯಾಗಿವೆ. ಒಂದು ಕಾಲದಲ್ಲಿ ಸುಲಭವಾಗಿ ಲಭ್ಯವಿದ್ದ ಕವಡೆಗಳು ಈಗ ಸ್ಥಳೀಯ ಮಾರುಕಟ್ಟೆಗಳಲ್ಲಿ ಸಿಗುವುದು ಕಷ್ಟ. ಅದೇ ಆಕಾರ ಮತ್ತು ಹೊಳಪನ್ನು ಹೊಂದಿರುವ ಪ್ಲಾಸ್ಟಿಕ್ ಕವಡೆಗಳು ಅನೇಕ ಬಂಜಾರ ಉಡುಪು ಮತ್ತು ಆಭರಣಗಳನ್ನು ಆಕ್ರಮಿಸಿಕೊಂಡಿವೆ. ಪ್ಲಾಸ್ಟಿಕ್ ಕವಡೆಗಳು ಹಗುರವಾಗಿಯೂ, ಅಗ್ಗವಾಗಿಯೂ ಮತ್ತು ಹೆಚ್ಚು ಬಾಳಿಕೆ ಬರುತ್ತವೆಯಾದರೂ ಅತ್ಯಗತ್ಯವಾದದ್ದೇನೋ ಕಾಣೆಯಾಗಿದೆ. ಅದೇನೆಂದರೆ ಮೂಲ ಕವಡೆಗಳುಳ್ಳ ಉಡುಪುಗಳು ಸಮುದ್ರದ ಸ್ಪರ್ಶ, ಅದರ ನೈಸರ್ಗಿಕ ಮೂಲದ ನೆನಪು ಹಾಗೂ ಪ್ರಾಚೀನ ನಂಬಿಕೆಯ ಜೀವಂತ ಸಂಪರ್ಕ ಕಳೆದು ಹೋದರೂ ಇನ್ನೂ, ಸಂಪ್ರದಾಯಗಳು ವಿಕಸನಗೊಳ್ಳುತ್ತವೆ ಮತ್ತು ಹೊಂದಿಕೊಳ್ಳುತ್ತವೆ. ಬಂಜಾರರು ಕವಡೆ ಸಂಕೇತವನ್ನು ಜೀವಂತವಾಗಿಟ್ಟಿದ್ದಾರೆ. ವಸ್ತುವು ಬದಲಾಗಿದ್ದರೂ ಸಹ. ನೈಜವಾಗಿರಲಿ ಅಥವಾ ಅನುಕರಣೆಯಾಗಲಿ, ಪರಂಪರೆ, ಸ್ಥಿತಿಸ್ಥಾಪಕತ್ವ ಮತ್ತು ನಿರಂತರತೆಯ ಸಂಕೇತವಾಗಿ ಕವಡೆ ಉಡುಪುಗಳನ್ನು ಹೆಮ್ಮೆಯಿಂದ ಧರಿಸುವುದನ್ನು ಮುಂದುವರಿಸಲಾಗುತ್ತಿದೆ. ಬಂಜಾರರ ನೃತ್ಯಗಳು ಮತ್ತು ಹಬ್ಬಗಳಲ್ಲಿ, ಹೊಳೆಯುವ ಕವಡೆಗಳು ಇನ್ನೂ ವಾದ್ಯಗಳ ಬಡಿತಕ್ಕೆ ಲಯಬದ್ಧವಾಗಿ ಚಲಿಸುತ್ತವೆ.





ಬಂಜಾರರ ಉಡುಪಿನಲ್ಲಿ ಕವಡೆಗಳು

ಕವಡೆ ಕಥೆಯು ಹಲವು ವಿಧಗಳಲ್ಲಿ ಬಂಜಾರರ ಕಥೆಯಾಗಿದೆ. ಇಬ್ಬರೂ ಬಹುದೂರ ಪ್ರಯಾಣಿಸಿ ಹೊಸ ಲೋಕಗಳಿಗೆ ಹೊಂದಿಕೊಂಡಿದ್ದಾರೆ. ಮತ್ತು ಇನ್ನೂ ತಮ್ಮ ಅಗತ್ಯ ಗುರುತನ್ನು ಉಳಿಸಿಕೊಂಡಿದ್ದಾರೆ. ಕರೆನ್ಸಿಯಾಗಿ ಪ್ರಾರಂಭವಾದದ್ದು ಆಭರಣವಾಗಿದೆ. ವ್ಯಾಪಾರವಾಗಿ ಪ್ರಾರಂಭವಾದದ್ದು ಸಂಪ್ರದಾಯವಾಗಿದೆ. ಬಂಜಾರರ ಕವಡೆ ಮೇಲಿನ ಪ್ರೀತಿ ಮಾನವ ಸಂಸ್ಕೃತಿಯ ಬಗ್ಗೆ ಆಳವಾದ ಸತ್ಯವನ್ನು ಸೆರೆ ಹಿಡಿಯುತ್ತದೆ.

ಕವಡೆಯ ಈ ದೀರ್ಘಯಾನವು ಆಳವಾದ ಸತ್ಯವನ್ನು ಹೇಳುತ್ತದೆ. ನಾವು ಒಮ್ಮೆ ಬದುಕಿಗಾಗಿ ಉಪಯೋಗಿಸಿದ್ದ ವಸ್ತುಗಳು, ಕಾಲದ ಓಟದಲ್ಲಿ, ನಮ್ಮ ಸಂಸ್ಕೃತಿಯ ಗುರುತುಗಳಾಗುತ್ತವೆ. ಕವಡೆಗಳು ಇನ್ನು ಹಣವಾಗಿ ಕೈಯಿಂದ ಕೈಗೆ ಹೋಗದಿರಬಹುದು. ಆದರೆ ಅವು ಕಲ್ಪನೆಯಲ್ಲಿ ಜೀವ, ಸೌಂದರ್ಯ ಮತ್ತು ರಕ್ಷಣೆಯ ಸಂಕೇತವಾಗಿ ಹರಡುತ್ತಲೇ ಇರುತ್ತವೆ. ಇಂದು ಬಂಜಾರರ ಉಡುಪುಗಳಲ್ಲಿ ಹೊಳೆಯುವ ಕವಡೆಗಳನ್ನು ನೋಡುವುದು ಎಂದರೆ ಶತಮಾನಗಳ ಯಾನ, ನೆನಪು ಮತ್ತು ಸಾಗರದ ಶಕ್ತಿಯನ್ನು ನೋಡುವಂತಾಗಿದೆ. ಚಿಕ್ಕದಾಗಿದ್ದರೂ, ಅದು ಸಾಗರಗಳನ್ನೂ, ಜನಾಂಗಗಳನ್ನೂ, ಸಂಸ್ಕೃತಿಗಳನ್ನೂ ಸಂಪರ್ಕಿಸಿದ ಅದ್ಭುತ ಕಥೆಯನ್ನು ತನ್ನೊಳಗೆ ಹೊತ್ತಿದೆ. ನಾವು ಒಮ್ಮೆ ಬದುಕುಳಿಯಲು ಬಳಸಿದ ವಸ್ತುಗಳು ಕಾಲಾನಂತರದಲ್ಲಿ, ನಾವು ಯಾರೆಂಬುದರ ಸಂಕೇತಗಳಾಗುತ್ತವೆ ಎಂಬುದಕ್ಕೆ ಕವಡೆಗಳು ಉದಾಹರಣೆಯಾಗಿವೆ.

ಸಮುದ್ರಗಳು ಯಾವಾಗಲೂ ವಿಭಜನೆಗಿಂತ ಹೆಚ್ಚಾಗಿ ಒಗ್ಗೂಡಿಸುತ್ತವೆ. ಪ್ರತಿಯೊಂದು ಕವಡೆಯಲ್ಲಿಯೂ ಮಾನವ ಜೀವನದ ಜಾಣ್ಮೆ, ಸೌಂದರ್ಯ ಮತ್ತು ಒಂದಾಗುವಿಕೆಯ ಕಥೆ ಅಡಗಿದೆ.

# ...ವೀಳ್ಯದೆಲೆ ಕೃಷಿ


10ನೇ ಪುಟದಿಂದ..

## ಮಾರ್ಕೆಟ್ ಇಲ್ಲದೆ ಬೇಸಾಯವಿಲ್ಲ

ಪದವೀಧರರು ಬೇಸಾಯದಲ್ಲಿ ತೊಡಗುವ ಮುನ್ನ ಬರೀ ತೊಗರಿ, ಜೋಳ ಬೆಳೆದ ಯಾವೊಬ್ಬ ರೈತನೂ ಶ್ರೀಮಂತನಾಗಿಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಮಾರುಕಟ್ಟೆಯನ್ನು ಅರ್ಥ ಮಾಡಿಕೊಳ್ಳಬೇಕು. ಲಭ್ಯವಿರುವ ಭೂಮಿಯಲ್ಲಿ ಹತ್ತಾರು ಬೆಳೆಗಳನ್ನು ವೈಜ್ಞಾನಿಕವಾಗಿ ಬೆಳೆದು, ಅವುಗಳಿಗೆ ಮೌಲ್ಯವರ್ಧನೆ ಮಾಡಬೇಕು. ಈಗಿರುವ ಮಾರುಕಟ್ಟೆಯಲ್ಲಿ ಬೇರೆ ಉತ್ಪನ್ನಕ್ಕಿಂತ ತಮ್ಮ ಉತ್ಪನ್ನ ಹೇಗೆ ಭಿನ್ನ ಮತ್ತು ನೈಸರ್ಗಿಕವಾಗಿದೆ ಎಂಬುದನ್ನು ಗ್ರಾಹಕರಿಗೆ ಅರ್ಥ ಮಾಡಿಸಬೇಕು. ಮುಖ್ಯವಾಗಿ, ಮಧ್ಯವರ್ತಿಗಳು ಇಲ್ಲದೆ ಮಾರಾಟ ಮಾಡಿದರೆ ರೈತರು ಹೇಳಿದ್ದೇ ಬೆಲೆ ಎನ್ನುತ್ತಾರೆ ವಿಶ್ವಶಂಕರ.

ನೈಸರ್ಗಿಕ ಹಾಗೂ ಸಾವಯವ ಪದ್ಧತಿಯಲ್ಲಿ ಬೆಳೆದ ಬೆಳೆಗಳಿಗೆ ದೊಡ್ಡಮಟ್ಟದ ಬೇಡಿಕೆ ಇದೆ. ನೈಸರ್ಗಿಕ ಕೃಷಿಯಲ್ಲಿ ಕಡಿಮೆ ಬಂಡವಾಳ ಹೂಡಿಕೆ ಮಾಡಬೇಕು. ಬಂದ ಆದಾಯವನ್ನು ಹಂತ–ಹಂತವಾಗಿ ಹೆಚ್ಚಿಸುತ್ತಾ ಹೋಗಬೇಕು. ಸರ್ಕಾರದ ಯೋಜನೆಗಳ ನೆರವು ಇದೆ. ಅದನ್ನು ಚೆನ್ನಾಗಿ ಬಳಸಿಕೊಳ್ಳಬೇಕು ಎನ್ನುವ ಕಿವಿಮಾತನ್ನು ಈ ಯುವ ರೈತ ಹೇಳುತ್ತಾರೆ.

ಕೃಷಿಯಲ್ಲಿ ಪ್ರಯೋಗಗಳನ್ನು ಮಾಡಬೇಕು. ಮಾರುಕಟ್ಟೆಯನ್ನು ಅರ್ಥ ಮಾಡಿಕೊಂಡು ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡಬೇಕು. ಸರ್ಕಾರದ ಸವಲತ್ತುಗಳನ್ನು ಪಡೆದುಕೊಳ್ಳಬೇಕು. ಇಷ್ಟೇ ಅಲ್ಲದೇ ಕೃಷಿ ಕಾರ್ಮಿಕರ ಜೊತೆ ತಾವೂ ಒಬ್ಬರಾಗಿ ದುಡಿಯಬೇಕು. ಆಗ ಮಾತ್ರ ಕೃಷಿಯೂ ಕೈತುಂಬ ಹಣವನ್ನು ತಂದುಕೊಡುತ್ತದೆ ಎನ್ನುವುದಕ್ಕೆ ವಿಶ್ವಶಂಕರ ಶಿವರಾಯ ನಿದರ್ಶನವಾಗಿದ್ದಾರೆ.



ಪಾಲಿಹೌಸ್‌ನಲ್ಲಿನ ವೀಳ್ಯದೆಲೆಗಳ ಕಟಾವಿನಲ್ಲಿ ತೊಡಗಿರುವ ಕೂಲಿ ಕಾರ್ಮಿಕರು

# ಶ್ರೀ ರಾಮಕೃಷ್ಣ ಆಶ್ರಮಕ್ಕೆ ಶತಮಾನದ ಸಂಭ್ರಮ

• ಕೆ.ನರಸಿಂಹಮೂರ್ತಿ

**‘ಯಾದವಗಿರಿ** ಎಂದರೆ ರಾಮಕೃಷ್ಣ ಆಶ್ರಮ’ ಎಂಬುದು ಮೈಸೂರಿನಲ್ಲಿ ನಾಣ್ಣುಡಿಯಂತೆ ಪ್ರಸಿದ್ಧ. 1925ರಲ್ಲಿ ಸ್ಥಾಪನೆಯಾದ, ಕರ್ನಾಟಕದ ಮೂರನೇ ಅತಿ ಹಳೆಯ ಈ ಆಶ್ರಮಕ್ಕೆ ಈಗ ಶತಮಾನೋತ್ಸವದ ಸಂಭ್ರಮ.

ಯಾದವಗಿರಿಯ ಪ್ರಶಾಂತ ವಾತಾವರಣದಲ್ಲಿ, ಶ್ರೀ ರಾಮಕೃಷ್ಣ ಪರಮಹಂಸರು, ಸ್ವಾಮಿ ವಿವೇಕಾನಂದರು ಹಾಗೂ ಶಾರದಾ ಮಾತೆಯ ಅಧ್ಯಾತ್ಮ ಶಕ್ತಿಯ ಸಾರವೆಲ್ಲವನ್ನೂ ಹೀರಿಕೊಂಡು ಧ್ಯಾನಸ್ಥವಾಗಿ ನಿಂತಂತೆ ಕಾಣುವ ಆಶ್ರಮದ ಒಳ ಹೊಕ್ಕರೆ ಪ್ರವೇಶ ದ್ವಾರದಲ್ಲೇ ಹೂದೋಟ, ಪುಸ್ತಕ ಮಳಿಗೆ ಸ್ವಾಗತಿಸುತ್ತದೆ.

ಅಲ್ಲಿಂದ ಎಡಭಾಗಕ್ಕೆ ನಡೆದರೆ ಇಕ್ಕೆಲಗಳಲ್ಲಿ ಸದ್ದಿಲ್ಲದೆ ನಗುವ ಹೂ ಗಿಡಗಳು ಪ್ರಾರ್ಥನಾ ಮಂದಿರಕ್ಕೆ ಕರೆದೊಯ್ಯುತ್ತವೆ. ಧ್ಯಾನಕ್ಕೆ ಕುಳಿತರೆ ಸಮಯವೇ ಮರೆತುಹೋಗುವಂಥ ಮೌನ ಹೊದ್ದ ತಾಣ. ಧ್ಯಾನ ಮುಗಿಸಿದವರು, ಓದುವ ಆಸಕ್ತಿ ಇದ್ದರೆ ಗ್ರಂಥಾಲಯಕ್ಕೆ ಹೋಗಬಹುದು. ಸ್ವಯಂಸೇವಕ ಸನ್ಯಾಸಿಗಳನ್ನು ಭೇಟಿ ಮಾಡಬಹುದು. ಆಶ್ರಮದ ಆ ವಾತಾವರಣದಲ್ಲಿ ಸಾಂತ್ವನದ ಗಾಳಿ ತಣ್ಣಗೆ ಬೀಸುತ್ತದೆ.


ಆಶ್ರಮ ಎಂದರೆ ಇದಿಷ್ಟೇ ಎಂದುಕೊಂಡರೆ ತಪ್ಪಾಗುತ್ತದೆ. ಇದು ಕಣ್ಣಿಗೆ ಕಾಣುವ ಆಶ್ರಮ. ಶಿಕ್ಷಣ, ಅಧ್ಯಾತ್ಮ, ಗ್ರಾಮೀಣ ಕ್ಷೇತ್ರದ ಅಭಿವೃದ್ಧಿಯಲ್ಲಿ ಆಶ್ರಮದ ಪರಿಶ್ರಮ, ಕಾರ್ಯಕ್ಷೇತ್ರ ಕಣ್ನೋಟವನ್ನೂ ಮೀರಿದ್ದು.

ಆಶ್ರಮದ ನೂರು ವರ್ಷದ ಚರಿತ್ರೆಯು ಮೈಸೂರು ನಗರದ ಸಮಗ್ರ ಅಭಿವೃದ್ಧಿಯ ಚರಿತ್ರೆಯನ್ನೂ ಹೇಳುತ್ತದೆ. ರಾಜಪ್ರಭುತ್ವದಿಂದ ಪ್ರಜಾಪ್ರಭುತ್ವದವರೆಗೂ ಆಶ್ರಮವು ಆಡಳಿತಗಾರರಿಂದ ನೆರವು ಪಡೆದು ಸಮುದಾಯ ಸೇವೆಯ ದಾರಿಯಲ್ಲಿ ಮುನ್ನಡೆದಿರುವುದನ್ನೂ ಸೂಚಿಸುತ್ತದೆ.

ಮೈಸೂರು ರಾಜವಂಶಸ್ಥರಿಗೂ ಆಶ್ರಮಕ್ಕೂ ಅವಿನಾಭಾವ ನಂಟು. 1892ರಲ್ಲಿ ಸ್ವಾಮಿ ವಿವೇಕಾನಂದರು ಶಿಕಾಗೋ ವಿಶ್ವಧರ್ಮ ಸಮ್ಮೇಳನಕ್ಕೆ ತೆರಳುವ ಮುನ್ನ ಮೈಸೂರಿಗೆ ಭೇಟಿ ನೀಡಿದ್ದು, ಆಶ್ರಮ ಸ್ಥಾಪನೆಗೆ ಮೂಲ ಪ್ರೇರಣೆ. ಅವರು ಚಾಮರಾಜ ಒಡೆಯರ್ ಅವರ ಆತಿಥ್ಯ ಸ್ವೀಕರಿಸಿದ್ದರು. ಆ ಸಂದರ್ಭದಲ್ಲಿ ಉಪನ್ಯಾಸಗಳನ್ನು ನೀಡಿದ್ದ, ವಿದ್ವಾಂಸರೊಂದಿಗೆ ಚರ್ಚಿಸಿದ್ದ ಭವ್ಯ ನೆನಪುಗಳೂ ಇವೆ.



ಶ್ರೀ ರಾಮಕೃಷ್ಣ ಆಶ್ರಮದ ಪ್ರಾರ್ಥನಾ ಮಂದಿರ.



ಹಚ್ಚ ಹಸಿರಿನೊಂದಿಗೆ ರಾಮಕೃಷ್ಣ ವಿದ್ಯಾಶಾಲೆಯ ರಸ್ತೆ ಚಿತ್ರಗಳು: ಅನೂಪ್ ರಾಘ. ಟಿ.

ಮೊದಲಿಗೆ, ನಾಲ್ವಡಿ ಕೃಷ್ಣರಾಜ ಒಡೆಯರ್ ಆಶ್ರಮಕ್ಕೆಂದು ಎರಡು ಎಕರೆ ಜಾಗ ಕೊಟ್ಟಿದ್ದು ಯಾದವಗಿರಿಯಲ್ಲಿಯೇ. ಅದುವರೆಗೂ ಸ್ವಾಮಿ ಸಿದ್ದೇಶ್ವರಾನಂದರ ಸತತ ಪ್ರಯತ್ನದಿಂದ ಆಶ್ರಮದ ಚಟುವಟಿಕೆಗಳು ದಿವಾನ್ಸ್ ರಸ್ತೆಯ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದ್ದವು. ರಾಮಕೃಷ್ಣ ಮಹಾಸಂಘದ ಸನ್ಯಾಸಿಗಳಿಗೆ ಪ್ರತಿ ವರ್ಷ ವೇದಾಂತ ಗ್ರಂಥಗಳ ಬಗ್ಗೆ ತರಬೇತಿ ನೀಡಲು ಆಶ್ರಮದ ಆವರಣದಲ್ಲಿ ‘ಸ್ಟಡಿ ಸರ್ಕಲ್ ಹೋಂ’ ಸ್ಥಾಪನೆಗೂ ಮಹಾರಾಜರು 30ರ ದಶಕದಲ್ಲಿ ಧನ ಸಹಾಯ ನೀಡಿದ್ದರು. ಜಯಚಾಮರಾಜ ಒಡೆಯರ್ ಕೂಡ ಈ ನೆರವನ್ನು ಮುಂದುವರಿಸಿದ್ದರು. ಈ ಅಧ್ಯಯನ ಪರಂಪರೆ ಈಗಲೂ ಮುಂದುವರಿದಿದೆ.

**ವಿದ್ಯಾರ್ಥಿ ನಿಲಯದಿಂದ ಶಾಲೆಯವರೆಗೆ...**

ಅಧ್ಯಾತ್ಮ ಸಾಧನೆಯ ಗುರಿಯಿಂದ ಶುರುವಾದ ಆಶ್ರಮವು ಸಮುದಾಯ ಶಿಕ್ಷಣದ ಕ್ಷೇತ್ರದಲ್ಲಿ ನಿರಂತರ ತೊಡಗಿಸಿಕೊಂಡಿರುವುದು ವಿಶೇಷ. ಆಶ್ರಮದ ಆರಂಭದ ದಿನಗಳಲ್ಲೇ, ಇಂಟರ್ ಮೀಡಿಯಟ್‌ನಲ್ಲಿ ಅನುತ್ತೀರ್ಣರಾದವರಿಗೆ ಶಿಕ್ಷಣ, ಗ್ರಾಮ ಸ್ವಚ್ಛತೆ, ವಯಸ್ಕರ ಶಿಕ್ಷಣ, ಕೈದಿಗಳಿಗೆ ಮೌಲ್ಯ ಶಿಕ್ಷಣದಂತ ಕಾರ್ಯಕ್ರಮಗಳೂ ನಡೆದಿದ್ದವು.

ದೇಶಕ್ಕೆ ಸ್ವಾತಂತ್ರ್ಯ ದೊರಕಿ ಎರಡು ವರ್ಷದ ಬಳಿಕ ಆಶ್ರಮವು ‘ಶ್ರೀ ರಾಮಕೃಷ್ಣ ಸ್ಟುಡೆಂಟ್ಸ್ ಹೋಂ’ ಅನ್ನು ಸ್ಥಾಪಿಸಿತ್ತು. ಅದೇ ನಂತರ ಶ್ರೀರಾಮಕೃಷ್ಣ ಬಾಲಕರ ವಸತಿ ವಿದ್ಯಾಶಾಲೆಯಾಗಿ ಮಾರ್ಪಾಡಾಯಿತು. ಶಾಲೆಯ ಶಂಕುಸ್ಥಾಪನೆ ಸಂದರ್ಭದಲ್ಲಿ ಅಂದಿನ ಮಹಾರಾಜ ಜಯಚಾಮರಾಜ ಒಡೆಯರ್ ‘ಹಾಸ್ಟೆಲ್‌ಗಳೂ ಹೆಚ್ಚಿವೆ. ಕಾಲೇಜುಗಳೂ ಹೆಚ್ಚಿವೆ. ಆದರೆ ಆಶ್ರಮವು ಬಾಲಕರಿಗೆ ಉನ್ನತ ಮೌಲ್ಯದ ಶಿಕ್ಷಣವನ್ನು ನೀಡುತ್ತಿದೆ’ ಎಂದು ಶ್ಲಾಘಿಸಿದ್ದರು.

‘ಎ ಸ್ಕೂಲ್ ವಿಥ್ ಎ ಪೂಲ್’. ಇದು ಆ ಕಾಲಕ್ಕೇ ಈಜುಕೊಳವುಳ್ಳ ಶಾಲೆಯನ್ನು ಸ್ಥಾಪಿಸಿದ್ದು, ಕ್ರೀಡೆಗೆ ಕೊಟ್ಟ ಆದ್ಯತೆಗೆ ಸಾಕ್ಷಿ. ಸ್ವಾಮಿ ಶಾಂಭವಾನಂದರ ಕಾಳಜಿಯಿಂದ ಇದು ಸಾಧ್ಯವಾಯಿತು’ ಎನ್ನುತ್ತಾರೆ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದ.

ಶಾಲೆಯೊಳಕ್ಕೆ ಹೋದರೆ ಮಾನವ ನಿರ್ಮಿತವಾದ ದಟ್ಟ ಕಾಡು ಸ್ವಾಗತಿಸುತ್ತದೆ. ಅಲ್ಲಿ ಕೃಷಿ ಚಟುವಟಿಕೆಗಳೂ ನಡೆಯುವುದು ವಿಶೇಷ. ವಿದ್ಯಾರ್ಥಿಗಳಲ್ಲಿ ಸೇವಾ ಅರಿವು ಮೂಡಿಸಲು ‘ಫ್ರೆಂಡ್ಸ್ ಆಫ್ ದಿ ಪೂರ್’ ಯೋಜನೆ ಎರಡು ದಶಕದಿಂದ ನಡೆದಿದೆ.

ಶಿಕ್ಷಣ ಕ್ಷೇತ್ರದಲ್ಲಿ ಮೌಲ್ಯಾಧಾರಿತ ಶಿಕ್ಷಣದ ಕೊರತೆಯನ್ನು ನೀಗಿಸುವ ಉದ್ದೇಶದಿಂದಲೇ ಐವತ್ತು ವರ್ಷದ ಹಿಂದೆ ಆಶ್ರಮವು ರಾಮಕೃಷ್ಣ ನೈತಿಕ ಮತ್ತು ಅಧ್ಯಾತ್ಮಿಕ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ, ಶಿಕ್ಷಕರಿಗೆ ಕಾರ್ಯಾಗಾರಗಳನ್ನು ಏರ್ಪಡಿಸಲಾರಂಭಿಸಿತ್ತು. ಈಗ ವಿವಿಧ ಕ್ಷೇತ್ರಗಳಲ್ಲಿ ತೊಡಗಿಕೊಂಡವರಿಗೂ ಇಲ್ಲಿ ಕಾರ್ಯಾಗಾರಗಳು ನಡೆಯುತ್ತವೆ.

## ಕುವೆಂಪು ನಂಟು..

ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್ ಅವಳಿ ಸಂಸ್ಥೆಗಳ ಪ್ರಧಾನ ಕೇಂದ್ರವಾದ, ಕೋಲ್ಕತ್ತಾ ಸಮೀಪದ ಬೇಲೂರು ಮಠದ ಶಾಖೆಗಳಲ್ಲಿ ಒಂದಾದ ಈ ಆಶ್ರಮದ ಸಂಸ್ಥಾಪಕರಾದ ಸ್ವಾಮಿ ಸಿದ್ದೇಶ್ವರಾನಂದರಿಗೆ ಕುವೆಂಪು ನಿಕಟವರ್ತಿಯಾಗಿದ್ದರು.

ಸುಮಾರು 14 ವರ್ಷ ಕುವೆಂಪು ತಮ್ಮ ವಿದ್ಯಾರ್ಥಿ ದೆಸೆಯಲ್ಲಿ ಆಶ್ರಮದಲ್ಲಿಯೇ ನೆಲೆಸಿದ್ದರು. ಅವರ ವ್ಯಕ್ತಿತ್ವ ವಿಕಾಸದಲ್ಲಿ ಆಶ್ರಮ ಪ್ರಮುಖ ಪಾತ್ರವಹಿಸಿತ್ತು ಎಂಬುದು, ಅವರ ಆತ್ಮಕಥೆ ‘ನೆನಪಿನ ದೋಣಿಯಲ್ಲಿ’ ಕೃತಿಯಲ್ಲಿ ದಾಖಲಾಗಿದೆ.

ಜಿ.ಎಸ್.ಶಿವರುದ್ರಪ್ಪ, ಪ್ರಭುಶಂಕರ, ಸಿಪಿಕೆ, ಎಸ್.ಎಲ್.ಭೈರಪ್ಪ, ಪ್ರಭುಪ್ರಸಾದ್, ದೇಜಗೌ..ಹೀಗೆ ಆಶ್ರಮದೊಂದಿಗೆ ನಿಕಟ ನಂಟು ಹೊಂದಿದ್ದ ಲೇಖಕರ ಪಟ್ಟಿಯೂ ದೊಡ್ಡದು.

ಆಶ್ರಮದ ಪ್ರಕಾಶನ ವಿಭಾಗವು ಐದು ನೂರಕ್ಕೂ ಹೆಚ್ಚು ಕನ್ನಡ ಪುಸ್ತಕಗಳನ್ನು ಪ್ರಕಟಿಸಿದೆ.

ಆಶ್ರಮದ ಆಸುಪಾಸಿನ ಸರ್ಕಾರಿ ಶಾಲೆ ಮಕ್ಕಳಿಗೆ, ‘ಗದಾಧರ ಅಭ್ಯುದಯ ಪ್ರಕಲ್ಪ’ ಕಾರ್ಯಕ್ರಮದ ಅಡಿ, ಶಾಲೆಯ ನಂತರದ ವೇಳೆಯಲ್ಲಿ ಪೂರಕ ಶಿಕ್ಷಣ, ಲೇಖನ ಸಾಮಗ್ರಿ ಪೌಷ್ಟಿಕ ಆಹಾರ ವಿತರಣೆಯೂ ನಡೆದಿದೆ. ‘ವಿವೇಕ ಶಿಕ್ಷಣ’ ಕಾರ್ಯಕ್ರಮದ ಮೂಲಕ ಹಿಂದುಳಿದ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡಲಾಗುತ್ತಿದೆ. ಚಾಮರಾಜನಗರ ಜಿಲ್ಲೆಯ ಕುಗ್ರಾಮ ತೆಂಕಲಮೋಳೆಯಲ್ಲಿ ಸರ್ಕಾರಿ ಶಾಲೆಯ ಮಕ್ಕಳು ಹಾಗೂ ಹಳ್ಳಿಗರ ಅಭ್ಯುದಯಕ್ಕಾಗಿ ‘ಶ್ರೀ ರಾಮಕೃಷ್ಣ ಸೇವಾ ಮಂದಿರ‘ ಶ್ರಮಿಸುತ್ತಿದೆ.

‘ಅಧ್ಯಾತ್ಮ, ಶಿಕ್ಷಣ, ನೈತಿಕತೆ ಮತ್ತು ಸಂಸ್ಕೃತಿ– ಈ ಮೂರು ಆಯಾಮಗಳಲ್ಲಿ ಆಶ್ರಮದ ಸೇವೆ ವಿಸ್ತರಿಸಿದೆ. ರಾಮಕೃಷ್ಣ ಆಶ್ರಮ, ಶ್ರೀ ರಾಮಕೃಷ್ಣ ವಿದ್ಯಾಶಾಲಾ, ರಾಮಕೃಷ್ಣ ನೈತಿಕ ಮತ್ತು ಅಧ್ಯಾತ್ಮಿಕ ಶಿಕ್ಷಣ ಸಂಸ್ಥೆಗಳು ಅದಕ್ಕಾಗಿ ದುಡಿಯುತ್ತಿವೆ’ ಎನ್ನುತ್ತಾರೆ ಸ್ವಾಮಿ ಮುಕ್ತಿದಾನಂದ.

ಆಶ್ರಮದ ಶತಮಾನೋತ್ಸವವೊಂದಿಗೆ ಈಗ, ಆಶ್ರಮದ ‘ರಾಮಕೃಷ್ಣ ನೈತಿಕ ಮತ್ತು ಅಧ್ಯಾತ್ಮಿಕ ಶಿಕ್ಷಣ ಸಂಸ್ಥೆ’ಯ ಸ್ವರ್ಣ ಮಹೋತ್ಸವ, ‘ವಿವೇಕ ಪ್ರಭ’ ಮಾಸ ಪತ್ರಿಕೆ ಹಾಗೂ ‘ವಿವೇಕ ಶಿಕ್ಷಣ’ ರಜತ ಮಹೋತ್ಸವವೂ ಜೊತೆಯಾಗಿದೆ.

## ಮುನ್ನೋಟ 23-11-2025 ರಿಂದ 29-11-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

### ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

**ಮೇಷ** — **ಅಶ್ವಿನಿ, ಭರಣಿ, ಕೃತ್ತಿಕಾ 1**
ಆರಂಭದಲ್ಲಿ ಸ್ವಲ್ಪ ಆಲಸಿತನವಿದ್ದರೂ, ನಂತರ ಚುರುಕಾಗುವಿರಿ. ಆದಾಯವು ಕಡಿಮೆ ಇರುತ್ತದೆ. ಸಂಗಾತಿಯ ಸಹಾಯದಿಂದ ಆದಾಯವನ್ನು ಹೆಚ್ಚು ಮಾಡಿಕೊಳ್ಳಬಹುದು. ಬಂಧುಗಳು ಆಸ್ತಿ ವ್ಯವಹಾರಗಳಲ್ಲಿ ಕಿರಿಕಿರಿ ಮಾಡಬಹುದು. ಹಿರಿಯರ ಆಸ್ತಿ ಲಭಿಸುವ ಸಾಧ್ಯತೆಗಳಿವೆ. ಪಾದಗಳಲ್ಲಿ ನೋವು ಕಾಣಿಸಬಹುದು.

**ವೃಷಭ** — **ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2**
ಬಹಳ ಬುದ್ಧಿವಂತಿಕೆ ನಿಮ್ಮಲ್ಲಿ ಇರುತ್ತದೆ. ಆದಾಯವು ಮಧ್ಯಮಗತಿಯಲ್ಲಿ ಇರುತ್ತದೆ. ಹಿರಿಯರನ್ನು ಓಲೈಸಿ ಬೆಂಬಲ ಗಳಿಸುವಿರಿ. ತೆರಿಗೆ ತಜ್ಞರಿಗೆ ಸೂಕ್ತ ಪದೋನ್ನತಿ ದೊರೆಯುತ್ತದೆ. ನೂತನ ವಾಹನದ ಖರೀದಿ ಬಗ್ಗೆ ಸಾಕಷ್ಟು ಚಿಂತನೆ ಮಾಡುವಿರಿ. ವ್ಯಾಪಾರದಲ್ಲಿನ ನಿಮ್ಮ ಮುಂದಾಲೋಚನೆ ಒಳಿತನ್ನು ಮಾಡುತ್ತದೆ. ಮಕ್ಕಳ ನಡುವೆ ಹೊಂದಾಣಿಕೆ ಕಡಿಮೆಯಾಗಿ ನಿಮಗೆ ಬೇಸರವಾಗಬಹುದು. ಕೆಲವು ನಾಟಿ ವೈದ್ಯರಿಗೆ ಬೇಡಿಕೆ ಹೆಚ್ಚುತ್ತದೆ.

**ಮಿಥುನ** — **ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3**
ಹಣದ ಒಳಹರಿವು ನಿಮ್ಮ ಅಗತ್ಯಕ್ಕೆ ಮೀರಿ ಇರುತ್ತದೆ. ಆಸ್ತಿ ವಿವಾದಗಳಲ್ಲಿ ರಾಜಿ ಸಂಧಾನಗಳು ನಡೆದು ಸುಖಾಂತ್ಯವಾಗುತ್ತವೆ. ವ್ಯವಹಾರದಲ್ಲಿ ಹೊಸ ವ್ಯಕ್ತಿಗಳಿಂದ ಸಹಕಾರ ದೊರೆಯುತ್ತದೆ. ಸಂಗೀತ ವಿದ್ವಾಂಸರುಗಳಿಗೆ ಪುರಸ್ಕಾರ ದೊರೆಯುವ ಸಾಧ್ಯತೆಯಿದೆ. ಮಿಶ್ರಲೋಹಗಳ ವ್ಯಾಪಾರ ಮಾಡುವವರಿಗೆ ವ್ಯವಹಾರ ವೃದ್ಧಿಸಿ, ಆದಾಯ ಹೆಚ್ಚುತ್ತದೆ. ಹಣಕಾಸು ಸಂಸ್ಥೆಗಳಲ್ಲಿ ಪಾಲುದಾರರ ವ್ಯತಿರಿಕ್ತ ತೀರ್ಮಾನಗಳಿಂದ ಸ್ವಲ್ಪ ನಷ್ಟವಾಗಬಹುದು.

**ಕಟಕ** — **ಪುನರ್ವಸು 4 ಪುಷ್ಯ, ಆಶ್ಲೇಷ**
ಗಂಭೀರ ಮತ್ತು ಗೌರವಯುತ ನಡವಳಿಕೆ ನಿಮ್ಮಲ್ಲಿ ಇರುತ್ತದೆ. ಆದಾಯವು ನಿರೀಕ್ಷೆಗಿಂತ ಕಡಿಮೆ ಇರುತ್ತದೆ. ವಿದೇಶದಲ್ಲಿ ವ್ಯವಹಾರ ಮಾಡುವವರಿಗೆ ಸ್ವಲ್ಪ ಆದಾಯ ಹೆಚ್ಚಾಗಬಹುದು. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ಸಿಗುವುದಿಲ್ಲ. ನೌಕರಿಯಲ್ಲಿರುವವರಿಗೆ ಸಹೋದ್ಯೋಗಿಗಳಿಂದ ಕಿರಿಕಿರಿ ಉಂಟಾಗುವ ಸಾಧ್ಯತೆಯಿದೆ. ಸಂಗಾತಿಯ ಆದಾಯ ಕಡಿಮೆಯಾಗಬಹುದು.

**ಸಿಂಹ** — **ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1**
ಯಾವುದೇ ವಿಚಾರಗಳಲ್ಲೂ ಹೆಚ್ಚು ಆಸಕ್ತಿ ಇರುವುದಿಲ್ಲ. ಆದಾಯವು ಸಾಮಾನ್ಯವಾಗಿರುತ್ತದೆ. ಆಸ್ತಿ ವಿಚಾರಗಳಲ್ಲಿ ಗೊಂದಲಗಳಾಗಬಹುದು. ಹಿರಿಯರು ಮಕ್ಕಳೊಂದಿಗೆ ವಾದವಿವಾದಗಳನ್ನು ಮಾಡದಿರುವುದು ಉತ್ತಮ. ಮೂಳೆ ಸಂಬಂಧಿತ ದೋಷಗಳು ಕಾಣಿಸಬಹುದು. ವಿದೇಶದಲ್ಲಿ ಕೆಲಸದಲ್ಲಿ ಇರುವವರಿಗೆ ಸಾಕಷ್ಟು ಸವಲತ್ತುಗಳು ದೊರೆಯುತ್ತವೆ.

**ಕನ್ಯಾ** — **ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2**
ಆದಾಯವು ಸ್ವಲ್ಪ ಏರಿಕೆ ಹಾದಿಯಲ್ಲಿ ಇರುತ್ತದೆ. ಹಿರಿಯರ ಜೊತೆ ವಾಗ್ವಾದಗಳು ನಿಮಗೆ ನಷ್ಟ ಉಂಟುಮಾಡುತ್ತವೆ. ಉನ್ನತ ಶಿಕ್ಷಣದ ಆಸೆಗೆ ಸ್ವಲ್ಪ ಹಿನ್ನಡೆಯಾಗಬಹುದು. ಯಂತ್ರೋಪಕರಣಗಳ ವ್ಯಾಪಾರ ಮಾಡುವವರಿಗೆ ವ್ಯಾಪಾರ ವೃದ್ಧಿಸುತ್ತದೆ. ಆಧ್ಯಾತ್ಮಿಕ ಚಿಂತನೆಗಳಿಂದ ಮನಸ್ಸಿನ ದುಗುಡವನ್ನು ದೂರಮಾಡಿಕೊಳ್ಳುವಿರಿ.

**ತುಲಾ** — **ಚಿತ್ತಾ 3,4 ಸ್ವಾತಿ, ವಿಶಾಖಾ 1,2,3**
ಶ್ರೀಮಂತರಂತೆ ತೋರಿಸಿಕೊಳ್ಳಲು ಸಾಕಷ್ಟು ಪ್ರಯತ್ನ ಪಡುವಿರಿ. ಸಹೋದರಿಯರಿಂದ ನಿಮಗೆ ಸಹಕಾರ ಸಿಗುತ್ತದೆ. ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ಆಸ್ತಿ ಖರೀದಿ ವಿಚಾರದಲ್ಲಿ ಎಚ್ಚರವಾಗಿರಿ. ಕುಟುಂಬದಲ್ಲಿನ ವಾದ ವಿವಾದಗಳಿಂದ ಸಾಕಷ್ಟು ಬೇಸರ ಮೂಡಬಹುದು. ನಿಮ್ಮ ಸಂಗಾತಿಯ ವ್ಯತಿರಿಕ್ತ ನಡವಳಿಕೆಗಳಿಂದ ಮುಜುಗರವಾಗಬಹುದು. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಸ್ವಲ್ಪ ಯಶಸ್ಸು ಇರುತ್ತದೆ.

**ವೃಶ್ಚಿಕ** — **ವಿಶಾಖಾ 4 ಅನೂರಾಧ, ಜ್ಯೇಷ್ಠ**
ಜನರಿಂದ ಗೌರವವನ್ನು ನಿರೀಕ್ಷೆ ಮಾಡುವಿರಿ. ಮಹಿಳೆಯರಿಗೆ ಉದ್ಯೋಗದಲ್ಲಿ ಉತ್ತಮ ಅವಕಾಶ ತೆರೆದುಕೊಳ್ಳುವ ಸಾಧ್ಯತೆಯಿದೆ. ಕೃಷಿ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಬೇಕಾದ ಸಲಕರಣೆಗಳು ಒದಗಿಬರುತ್ತವೆ. ಸಂಗಾತಿಗೆ ನೆರೆಹೊರೆಯವರಿಂದ ವಿರೋಧ ಎದುರಾಗಬಹುದು. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಯಶಸ್ಸು ಇರುವುದಿಲ್ಲ. ಹಣಕಾಸು ವ್ಯವಹಾರವನ್ನು ಮಾಡುವವರು ಎಚ್ಚರವಾಗಿರಿ.

**ಧನುಸ್ಸು** — **ಮೂಲಾ, ಪೂರ್ವಾಷಾಢ, ಉತ್ತರಾಷಾಢ 1**
ವಾರದ ಆರಂಭದಲ್ಲಿ ಬಹಳ ಆನಂದವಿರುತ್ತದೆ. ಆದಾಯವು ಕಡಿಮೆ ಇದ್ದರೂ ಕೂಡ ತೊಂದರೆ ಇರುವುದಿಲ್ಲ. ಬಂಧುಗಳ ಸಹಾಯದಿಂದ ವಿದೇಶ ಪ್ರಯಾಣ ಮಾಡಬಹುದು. ವ್ಯವಸಾಯದಲ್ಲಿ ತೊಡಗಿಸಿಕೊಂಡಿರುವವರಿಗೆ ಸಹಾಯಧನ ನಿಧಾನವಾಗಿ ಬರುತ್ತದೆ. ಬಂಧುಗಳ ಸಹಕಾರದಿಂದ ಪ್ರೇಮ ಪ್ರಕರಣಗಳು ಯಶಸ್ವಿಯಾಗುತ್ತವೆ. ಮನೆಯನ್ನು ಆಧುನಿಕ ರೀತಿಯಲ್ಲಿ ನವೀಕರಣ ಮಾಡಲು ಪ್ರಯತ್ನ ಪಡುವಿರಿ.

**ಮಕರ** — **ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2**
ವ್ಯವಹಾರಗಳಿಂದ ನಿಮ್ಮ ಸಂಪರ್ಕವನ್ನು ವೃದ್ಧಿ ಮಾಡಿಕೊಳ್ಳುವಿರಿ. ಲೆಕ್ಕಪರಿಶೋಧಕರಿಗೆ ಬಿಡುವಿಲ್ಲದ ಕೆಲಸವಿರುತ್ತದೆ. ಆದಾಯವು ಕಡಿಮೆ ಇರುತ್ತದೆ. ಶತ್ರುಗಳನ್ನು ನಿಗ್ರಹ ಮಾಡುವಲ್ಲಿ ಯಶಸ್ಸನ್ನು ಪಡೆಯುವಿರಿ. ವೈಯಕ್ತಿಕ ವಿವರಗಳನ್ನು ಹೆಚ್ಚು ಬಹಿರಂಗಪಡಿಸುವುದು ಬೇಡವೇ ಬೇಡ. ಅವಿವಾಹಿತರಿಗೆ ವಿವಾಹ ಸಂಬಂಧಗಳು ಬರುತ್ತವೆ. ಹೊಸ ಆಸ್ತಿ ಕೊಳ್ಳುವ ಬಗ್ಗೆ ಚಿಂತನೆಯನ್ನು ಮಾಡಬಹುದು.

**ಕುಂಭ** — **ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3**
ವಿದೇಶಕ್ಕೆ ಹೋಗಬೇಕೆಂಬ ಆಸೆ ಈಡೇರುತ್ತದೆ. ಆದಾಯವು ಕಡಿಮೆ ಇರುತ್ತದೆ. ಆತ್ಮೀಯರ ಸಲಹೆಯಿಂದ ವೃತ್ತಿಯಲ್ಲಿ ಎದುರಾದ ಆಪತ್ತಿನಿಂದ ಪಾರಾಗುವಿರಿ. ಯುವಕರು ಉಡಾಫೆ ಮಾತುಗಳಿಂದ ಅಧಿಕಾರಿಗಳ ಕೆಂಗಣ್ಣಿಗೆ ಗುರಿಯಾಗಬಹುದು. ಕೆಲವು ವ್ಯವಹಾರಗಳಿಗೆ ಹೂಡಿಕೆ ಮಾಡುವಂತೆ ಬಂಧುಗಳು ಒತ್ತಾಯ ಮಾಡುವರು. ಸ್ವಯಂ ಉದ್ಯೋಗಿಗಳು ಆದಾಯದಲ್ಲಿ ಹೆಚ್ಚಳವನ್ನು ಕಾಣಬಹುದು.

**ಮೀನ** — **ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ**
ಅತಿಯಾದ ಉದಾಸೀನ ನಿಮಗೆ ಪೆಟ್ಟುಕೊಡಬಹುದು. ಆದಾಯವು ಸಾಮಾನ್ಯವಾಗಿರುತ್ತದೆ. ಮಹಿಳೆಯರಿಂದ ನಿಮ್ಮ ಕೆಲಸ ಕಾರ್ಯಗಳಿಗೆ ಅಡ್ಡಿಯಾಗಬಹುದು. ದಿನಸಿ ವ್ಯಾಪಾರ ಮಾಡುವವರಿಗೆ ಈಗ ಅಭಿವೃದ್ಧಿ ಇದೆ. ವಿದ್ಯಾರ್ಥಿಗಳಿಗೆ ಉತ್ತಮ ಯಶಸ್ಸು ದೊರೆಯುತ್ತದೆ. ನಿಮ್ಮ ಹಣಕಾಸಿನ ವಿಷಯದಲ್ಲಿ ಜಾಗರೂಕತೆ ಮುಖ್ಯ.


## ಪದಬಂಧ 2919

**ಮೇಲಿನಿಂದ ಕೆಳಕ್ಕೆ**

| | |
|---|---|
| 1. ಶುಕನಲ್ಲಿ ನಕಾರ ಸೇರಿದರೆ ಆಗುವ ನಾಯಿ | 3 |
| 2. ಇಹದ ಕಷ್ಟ ನಿವಾರಿಸುವ ಶಿವಾಜಿ ಮಹಾರಾಜನ ಆರಾಧ್ಯ ದೈವ | 3 |
| 3. ಆಸಕ್ತಿ ಆತಂಕಗಳೆರಡೂ ಬೆಸೆದ ಮನಸ್ಸಿನ ಸ್ಥಿತಿ | 3 |
| 4. ಕೂಸು ಹುಟ್ಟುವ ಮುಂಚೆ ಹೊಲಿಯುವ ಟೋಪಿ | 3 |
| 6. ಮಧುರ ಮತ್ತೇರಿಸಿದ ದೇವ ಲೋಕದ ಹೆಂಡದ ಕುಡಿತ | 4 |
| 8. ಶೂನ್ಯ ಆವರಿಸಿರುವ ಧ್ವಂಸ, ಅಂತ್ಯ | 3 |
| 10. ಬೆಡಗು ಸಿಂಗಾರಗಳನ್ನು ತುಂಬಿಕೊಂಡವಳು | 5 |
| 11. ಅಲ್ಪಪ್ರಾಣದ ಶ್ವೇತ ಪರ್ವತ | 5 |
| 12. ಒಂದೇ ಬಗೆಯ ಅರ್ಥ ಕೊಡುವ ನುಡಿ ಶಬ್ಧ | 5 |
| 13. ಪಕ್ಷಿಯನ್ನೇರಿ ಹೊರಡುವ ವಿಷ್ಣುವಿಗೆ ಈ ಬಣ್ಣನೆ | 5 |
| 14. ನಾಶಪಡಿಸುವ ಶಕ್ತಿಯುಳ್ಳದ್ದು | 3 |
| 15. ವಿಸ್ಮಯದ ಮ್ಯಾಜಿಕ್ | 3 |
| 19. ಹಗಲಲ್ಲೇ ಬೆದರಿಸಿ ದೋಚಲು ಬರುವವ | 4 |
| 21. ಜೋಗುಳಕ್ಕೆ ತೂಗುವ ಉಯ್ಯಾಲೆ | 3 |
| 23. ಹೊದಿಕೆಯಂತೆ ಆವರಿಸುವ ಹೆಣ್ಣಿನ ರೂಪ | 3 |
| 24. ಆಂಗ್ಲ ಕಾದಂಬರಿಗೆ ಕನ್ನಡಾವಸ್ಥೆ | 3 |
| 25. ಒಳ್ಳೆಯ ಮನುಷ್ಯ | 3 |
| 26. ದೇಹದಿಂದ ಹುಟ್ಟಿದವಳು | 3 |

**ಎಡದಿಂದ ಬಲಕ್ಕೆ**

| | |
|---|---|
| 1. ಮಂಗಳದಾಯಕವಾದ ಶುರು | 4 |
| 3. ಮೇಲ್ನೋಟದ ಹೊಳಪು | 3 |
| 5. ಕಿಷ್ಕಿಂಧೆಯಲ್ಲಿ ತಾರಾಗಾಗಿ ಕಾದಾಡಿದ ಸೋದರರು | 5 |
| 7. ಕಾವ್ಯ ರಚನಕಾರನ ಒಳ ಕೂಗು | 4 |
| 9. ಚಿತ್ರನಟ, ಚಿತ್ರ ಬಿಡಿಸುವವ ಇಬ್ಬರಿಗೂ ಹೊಂದುವ ಹೆಸರು | 4 |
| 12. ಶಬ್ಧ ಮೊಳಗಿಸುವ ಸಾಗರೋತ್ಪನ್ನ ಸಹಿತ | 3 |
| 14. ಮರ್ಯಾದೆಯಿಂದ ಅಳೆವ ಪಾತ್ರೆ | 3 |
| 16. ಸಾಹಿತ್ಯದಲ್ಲಿ ಹರಿಯುವ ಚರಂಡಿ | 3 |
| 17. ಮಹಾಪ್ರಾಣ ಪಡೆದ ‘ಮಾದ’ ರಾಧಿಕೆಯ ಪ್ರಿಯಕರನಾಗಿ ಹೀಗೆ | 3 |
| 18. ಕನ್ನಡದ ಒಡಲಿನಲ್ಲಿನ ಸಮುದ್ರ | 3 |
| 20. ಬಂಗಾರವನ್ನಿಟ್ಟು ಭದ್ರಪಡಿಸಬಹುದಾದ ಹಿಂದಿ ಕಪಾಟು | 3 |
| 22. ಹತ್ತು ಕಡೆ ಮುಖಮಾಡುವ ಶಕ್ತಿಯಿದ್ದ ರಾವಣ | 4 |
| 25. ಸುಲಭವಾಗಿ ಸಿಗುವ ಸಹಸ್ರನಾಮದ ದೇವಿಯ ಹೆಸರು | 4 |
| 27. ಹೆಂಗಳ ಕುಣಿಸುವ ಋತುವಿನ ಹಾಡು | 5 |
| 28. ಸ್ವಚ್ಛವಾಗಿರುವ ಹೆಣ್ಣು | 3 |
| 29. ಬೆಳದಿಂಗಳು ಮೂಡಿಸುವ ಚಂದಿರ | 4 |



**ಪದಬಂಧ ಉತ್ತರ -2918**

**ಮೇಲಿಂದ ಕೆಳಕ್ಕೆ**

1.ರಾಜಾರೋಷ 2. ಮೆದುತಾಣ 3. ಅಷ್ಟಪದ 4.ಕಪಿಮುಷ್ಠಿ 6.ವೇತನ 7.ಷಕಲು 9.ಗೋಧೂಳಿ 10.ಸೀಮಂತ 12.ದೀಪಕ 13.ಪ್ರಮಾದ 14.ಕಲಮ 15.ಗಯಗಮ್ಮತ್ತು 16.ಆಟಗಾರ 17.ಮರಕೋತಿ 18.ಕಾಳಿದಾಸ

**ಎಡದಿಂದ ಬಲಕ್ಕೆ**

1.ರಾಜೀನಾಮೆ 3.ಆಮಜನಕ 5.ತಾರಾಟ 6.ವೇಷಭೂಷಣ 8.ಪತ್ರಿಕಾಗೋಷ್ಠಿ 10.ಸೀದ 11.ನದೀಪಾಲು 13.ಪ್ರವಳಿಕ 15.ಗತ 16.ಆಕರ್ಷಣೀಯ 17.ಮದನಕಾಮ 19.ಗಗ್ಗರ 20.ರತ್ನಸಂಪತ್ತು 21.ತಿಳಿಹಾಸ

# ಬಹುಮುಖಿ ಒಳಸುಳಿಗಳ ಪ್ರತಿ ಗಂಧರ್ವ



'ಪ್ರತಿಗಂಧರ್ವ' ನಾಟಕದ ದೃಶ್ಯ ಚಿತ್ರ: ಸತೀಶ್ ಬಡಿಗೇರ

• ದಾದಾಪೀರ್ ನವಿಲೇಹಾಳ್

ಬಾಲಗಂಧರ್ವರ ರಂಗ ಸಾಧನೆಯನ್ನು ಗೌರವಿಸಲು ಪುಣೆಯ ನಾಗರಿಕ ಸನ್ಮಾನ ಸಮಿತಿ ತೀರ್ಮಾನಿಸಿ ಅವರನ್ನು ಆಹ್ವಾನಿಸಲು ಬಂದಿದೆ. ಸನ್ಮಾನಕ್ಕೆ ನಾನೊಬ್ಬನೇ ಬರುವುದಿಲ್ಲ, ಪತ್ನಿ ಗೋಹರ್ ಬಾಯಿಯೊಂದಿಗೆ ಬರುತ್ತೇನೆ ಎಂದು ಹೇಳುತ್ತಾರೆ. ಪುಣೆಗೆ ಇಬ್ಬರೂ ಬರುತ್ತಾರೆ. ಬಾಲಗಂಧರ್ವರಿಗೆ ಸನ್ಮಾನ ನಡೆಯುತ್ತದೆ. ನಂತರ ಬಾಲಗಂಧರ್ವರು ಅಭಂಗವೊಂದನ್ನು ಹಾಡುವಂತೆ ಆಗ್ರಹ ಬರುತ್ತದೆ. ವಯಸ್ಸು ಮತ್ತು ಅನಾರೋಗ್ಯದ ಕಾರಣದಿಂದ ತಾನು ಹಾಡಲಾಗುವುದಿಲ್ಲ, ಪತ್ನಿ ಗೋಹರ್ ಬಾಯಿ ಹಾಡುತ್ತಾಳೆ ಎನ್ನುತ್ತಾರೆ. ಅವರು ಮುಸ್ಲಿಮರು, ಕನ್ನಡದವರು ಎಂದು ಅವರಿಂದ ಹಾಡಿಸಲು ನಾಗರಿಕ ಸಮಿತಿ ಒಪ್ಪುವುದಿಲ್ಲ. ಬಾಲಗಂಧರ್ವರು 'ಹಾಗಾದರೆ ಸನ್ಮಾನದ ಈ ಹಾರ ತುರಾಯಿ, ಗೌರವಧನವನ್ನು ನೀವೇ ಇಟ್ಟುಕೊಳ್ಳಿ' ಎನ್ನುತ್ತಾ ಹೊರಡುತ್ತಾರೆ. ಸಮಿತಿಯವರೆಲ್ಲರೂ ಹೋಗದಂತೆ ಮನವಿ ಮಾಡುತ್ತಾರೆ. ಯಾವುದಾದರೂ ದೇವಸ್ಥಾನಕ್ಕೋ, ದರ್ಗಾಕ್ಕೋ ಕೊಟ್ಟುಬಿಡಿ ಎಂದು ಎಲ್ಲವನ್ನೂ ಧಿಕ್ಕರಿಸಿ ಗೋಹರ್ ಬಾಯಿಯೊಂದಿಗೆ ಬಾಲಗಂಧರ್ವರು ಹೊರಟು ಹೋಗುತ್ತಾರೆ. ರಂಗದ ಮೇಲೆ ವಿಷಾದದ ಕತ್ತಲು ಆವರಿಸಿದರೆ, ಅಲ್ಲಿ ನೆರೆದಿದ್ದ ಭಾರಿ ಸಂಖ್ಯೆಯ ಪ್ರೇಕ್ಷಕರು ಚಪ್ಪಾಳೆ ತಟ್ಟುತ್ತಾರೆ.

ದಾವಣಗೆರೆಯ ವೃತ್ತಿ ರಂಗಭೂಮಿ ರಂಗಾಯಣವು ದಾವಣಗೆರೆ ವಿಶ್ವವಿದ್ಯಾಲಯದ ದೃಶ್ಯಕಲಾ ಮಹಾವಿದ್ಯಾಲಯದ ಬಯಲು ರಂಗಮಂದಿರದಲ್ಲಿ ಆಯೋಜಿಸಿದ 'ಪ್ರತಿ ಗಂಧರ್ವ' ನಾಟಕದ ಹೃದಯ ಭಾಗದಂತಿರುವ ಈ ದೃಶ್ಯ ಇಡೀ ನಾಟಕದ ತಾತ್ವಿಕತೆಯನ್ನು ಹೇಳುತ್ತದೆ.

ಮರಾಠಿ ಮೂಲದ ಸಾಂಗಲಿ ಜಿಲ್ಲೆಯ ನಾಗಠಾಣದ ನಾರಾಯಣರಾವ್ ರಾಜಹಂಸ (18880-1967) ಅವರು ರಂಗಭೂಮಿ ಮತ್ತು ಸಂಗೀತ ಲೋಕದ ಅನನ್ಯ ತಾರೆ. ವೃತ್ತಿ ನಾಟಕ ಕಂಪನಿಗಳನ್ನು ನಿಭಾಯಿಸುವಲ್ಲಿ ಎದುರಾಗುವ ಬಗೆಬಗೆಯ ಕಷ್ಟ ನಿಷ್ಠುರಗಳ ನಡುವೆಯೂ ಕಲಾಸಕ್ತಿಯ ಅದಮ್ಯ ಪ್ರೇಮವನ್ನು ಪ್ರಕಟಿಸಿದ ಅವರು, ಬಾಲಗಂಗಾಧರ ತಿಲಕರಿಂದ ಬಾಲಗಂಧರ್ವರೆಂದು ಹರಸಿಕೊಂಡವರು. ಇತ್ತ ಬೀಳಗಿ ಸಹೋದರಿಯರು ಎಂದೇ ಖ್ಯಾತಿ ಪಡೆದ ಗೋಹರ್ ಬಾಯಿ ಮತ್ತು ಅಮೀರ್ ಬಾಯಿ ಅವರ ಗಾಯನ ಮತ್ತು ನೃತ್ಯ ಪಯಣ ಮುಂಬಯಿ ಶಹರವನ್ನು ತಲುಪುತ್ತದೆ.

ಭಜನ್ ಅಭಂಗ್ ಗಜಲ್‌ಗಳ ಮೂಲಕ ರಂಗಗೀತೆಗಳನ್ನು ಲೋಕಗೀತೆಗಳನ್ನಾಗಿ ರೂಪಿಸಿದ ಬಾಲಗಂಧರ್ವರು ಮತ್ತು ಗೋಹರ್ ಒಂದಾದ ಸೀಮೋಲ್ಲಂಘನದ ಕತೆಯಿದು. ಧರ್ಮ ಜಾತಿ ಭಾಷೆ ಭೌಗೋಳಿಕತೆ ಮತ್ತು ವಯಸ್ಸಿನ ಸೀಮೆಯನ್ನು ಒಟ್ಟಾಗಿ ದಾಟಿದ ಇವರು ಸಾಮಾಜಿಕ ಸಾಮರಸ್ಯದ ಮರುನಿರೂಪಣೆಯ ಸೃಜನಶೀಲ ಮಾದರಿಯನ್ನು ರಚಿಸಿದವರು. ರಂಗನಿಷ್ಠೆಯ ಕಾರಣಗಳಿಗಾಗಿ ಕೋರ್ಟ್ ಕೇಸಿನ ಸೋಲು ಗೆಲುವುಗಳನ್ನು ಮೀರಿ ಜೊತೆಯಾದ ಈ ಜೋಡಿಯ ಸಾಂಗತ್ಯ ಹುಸಿ ಧಾರ್ಮಿಕ ನಿರೂಪಣೆಗಳನ್ನು ಬಲವಾಗಿ ನಿರಾಕರಿಸುತ್ತದೆ. ಮನುಷ್ಯ ಸಮಾಜ ನಿರ್ಮಿಸಿಕೊಂಡ ಮುಳ್ಳು ಬೇಲಿಯನ್ನು ಪ್ರೇಮದ ಅನನ್ಯ ಆದರ್ಶದ ಮೂಲಕವೇ ಕಿತ್ತೆಸೆಯುವ ಇವರ ಬದುಕು ಧಾರ್ಮಿಕ ಅಸಹನೆಯ ಕುಲುಮೆಯಲ್ಲಿ ಕುದಿಯುವ ವರ್ತಮಾನಕ್ಕೆ ನಿಡುಗಾಲದ ಸೌಹಾರ್ದ ಪರಂಪರೆಯನ್ನು ನೆನಪಿಸುತ್ತದೆ.

ಹಿಂದೂ, ಮುಸ್ಲಿಮರ ಧಾರ್ಮಿಕ ನೆಲೆಗಳು ಭೌತಿಕ ವ್ಯವಹಾರದಲ್ಲೂ ಆಧ್ಯಾತ್ಮಿಕ ಚಿಂತನೆಗಳ ವಿಚಾರದಲ್ಲೂ ಏಕಮುಖವಾಗಿ ಚಲಿಸುತ್ತಿರುವ ಹೊತ್ತಿನಲ್ಲಿ ಪ್ರತಿ ಗಂಧರ್ವ ನಾಟಕದ ಪ್ರಸ್ತುತಿಯು ಬಹುಮುಖೀ ಸಮಾಜದ ಒಳಸುಳಿಗಳನ್ನು ತೆರೆದಿಡುತ್ತದೆ. ನಾಟಕ ಕಂಪನಿಗಳ ಬೆಳವಣಿಗೆ, ಆರ್ಥಿಕ ಸಂಕಷ್ಟಗಳು, ಅಭಿಜಾತ ಕಲಾವಿದರು ಅನುಭವಿಸುವ ತುಮುಲ ತಲ್ಲಣಗಳು, ವಿಶೇಷವಾಗಿ ವೃತ್ತಿ ರಂಗಭೂಮಿಯ ನಟಿಯರು ಎದುರಿಸುವ ಅಪಮಾನಗಳು ವರ್ತಮಾನಕ್ಕೆ ಅಪರಿಚಿತವೆಂಬಂತೆ ಇದ್ದ ವೃತ್ತಿ ರಂಗಭೂಮಿಯ ವೈರುಧ್ಯಗಳನ್ನು ಪರಿಚಯಿಸುತ್ತದೆ.

ರಹಮತ್ ತರೀಕೆರೆ ಅವರ ಅಮೀರ್ ಬಾಯಿ ಕರ್ನಾಟಕಿ ಕೃತಿಯೇ ಪ್ರತಿ ಗಂಧರ್ವ ನಾಟಕಕ್ಕೆ ಪ್ರೇರಣೆ. ರಾಜಪ್ಪ ದಳವಾಯಿ ಇದನ್ನು ರಂಗರೂಪಕ್ಕೆ ಅಳವಡಿಸಿದ್ದಾರೆ. ಇವರಿಬ್ಬರ ಸಾಮಾಜಿಕ ಕಳಕಳಿಯಿಂದ ಕೂಡಿದ ಹಲವು ವರ್ಷಗಳ ಸಂಶೋಧನಾಸಕ್ತಿಯ ಪರಿಣಾಮ ಕೃತಿ ರಚನೆ ಮತ್ತು ನಾಟಕ ನಿರೂಪಣೆಯಲ್ಲಿ ಅಭಿವ್ಯಕ್ತವಾಗಿದೆ.

ದಾವಣಗೆರೆಯ ವೃತ್ತಿ ರಂಗಭೂಮಿ ರಂಗಾಯಣದ ನಿರ್ದೇಶಕ ಮಲ್ಲಿಕಾರ್ಜುನ ಕಡಕೋಳ, ಮತ್ತವರ ತಂಡದ ಪ್ರಥಮ ಪ್ರಯತ್ನದ ಭಾಗವಾಗಿ ಪ್ರದರ್ಶಿತವಾದ ಈ ನಾಟಕವು ರಾಜ್ಯದ ಬೇರೆ ಬೇರೆ ಭಾಗದ ಕಲಾವಿದರನ್ನು ಕಲೆ ಹಾಕಿ ಸದಾ ಲಾಭ ನಷ್ಟಗಳನ್ನು ಉಸಿರಾಡುವ ಮಂಡಿಪೇಟೆಯ ಮಂದಿಗೆ ರಂಗ ಚಟುವಟಿಕೆಯ ಮಿರ್ಚಿಮಂಡಕ್ಕಿ ಸವಿಯನ್ನು ಧಾರಾಳ ಉಣಬಡಿಸಿತು.

ಕಲಾವಿದರ ಭಾವಪೂರ್ಣ ಅಭಿನಯ, ವಿಶೇಷವಾಗಿ ಪ್ರಧಾನ ಪಾತ್ರಗಳಲ್ಲಿ ಅಭಿನಯಿಸಿದ ಸುರೇಂದ್ರ ಗೌಡ ಗೋಕರ್ಣ ಮತ್ತು ಶೃತಿರಾಜ್ ಭಾವ ತಲ್ಲೀನತೆ ಕಟ್ಟಿಹಾಕುವಂತಿತ್ತು. ನಿರ್ದೇಶಕ ಮಾಲತೇಶ್ ಬಡಿಗೇರ ಚಿಕ್ಕ ಪುಟ್ಟ ಪಾತ್ರಗಳಿಗೂ ಪ್ರಾಮುಖ್ಯತೆ ನೀಡಿದ್ದಾರೆ. ರವಿ ಮುರೂರು ಸಂಗೀತ ಆಪ್ತವಾಗಿದೆ. ವೃತ್ತಿ ರಂಗಭೂಮಿಯ ಪ್ರಚಾರ ಕೌಶಲಗಳನ್ನು ಬಳಸಿಕೊಂಡ ರೀತಿ, ಸೀಮಿತ ಪರದೆಗಳು ಮತ್ತು ರಂಗಪರಿಕರಗಳ ನಡುವೆಯೂ ನಿರ್ವಹಿಸಿದ ಅಚ್ಚುಕಟ್ಟುತನ, ತಣ್ಣನೆಯ ಸಂಭಾಷಣೆ ನಾಟಕದ ಹೈಲೈಟ್ಸ್.

ಧಾರ್ಮಿಕ ಅಸಹನೆಯ ಮೂಲಕ ಸಮಷ್ಟಿಯನ್ನು ವಿಭಜಿಸುವ ರಾಜಕೀಯ ಹುನ್ನಾರಗಳಿಗೆ ಸಹಜ ಸೀಮೋಲ್ಲಂಘನೆಯ ಮೂಲಕವೇ ಪ್ರತಿರೋಧ ತೋರುವ ಪ್ರತಿ ಗಂಧರ್ವದಂತಹ ನಾಟಕಗಳು ಎಲ್ಲ ಕಾಲದ ಎಚ್ಚರಗಳಿಗೆ ಕಣ್ಣಾಗಬಲ್ಲವು. ದಾವಣಗೆರೆ ವೃತ್ತಿ ರಂಗಭೂಮಿ ರಂಗಾಯಣದ ಕ್ರಿಯಾಶೀಲ ಪ್ರಯೋಗಗಳು ಈ ದಿಶೆಯಲ್ಲಿ ಭರವಸೆ ಹುಟ್ಟಿಸುವಂತಿವೆ.

# ಅಭಯವೇ ಇಲ್ಲದ...

10ನೇಪುಟದಿಂದ...

## ಹತ್ತು ವರ್ಷಗಳಲ್ಲಿ 35,580 ಪ್ರಕರಣಗಳು

ಸಂಘರ್ಷವನ್ನು ನಿಭಾಯಿಸಬೇಕಾದ ಅರಣ್ಯ ಇಲಾಖೆ ಕೈಚೆಲ್ಲಿ ಕುಳಿತಿದೆ. ಹಾಗಾದರೆ, ಮಾನವ-ವನ್ಯಜೀವಿ ಸಂಘರ್ಷ ಎಂದರೇನು? ಕರ್ನಾಟಕ ಅರಣ್ಯ ಇಲಾಖೆಯ ಸಂಘರ್ಷ ತಂತ್ರಾಂಶ ಮತ್ತು ಪಶ್ಚಿಮಘಟ್ಟ ಸಂರಕ್ಷಣಾ ಪಡೆ ತಂತ್ರಾಂಶದ ಅಂಕಿಅಂಶಗಳ ಪ್ರಕಾರ ಹತ್ತು ವರ್ಷಗಳಲ್ಲಿ 35,580 ಸಂಘರ್ಷ ಪ್ರಕರಣಗಳು ದಾಖಲಾಗಿವೆ. ಇದರಲ್ಲಿ ಎಲ್ಲಾ ರೀತಿಯ ಸಂಘರ್ಷಗಳನ್ನ ದಾಖಲಿಸಲಾಗಿದೆ. ಬೆಳೆ ನಾಶ ಮತ್ತು ಸಂಘರ್ಷದಲ್ಲಿ ಗಾಯಗೊಂಡವರು, ತೀರಿಕೊಂಡವರ ಸಂಖ್ಯೆಯೂ ಸೇರಿದೆ.

ಜನಸಂಖ್ಯೆಯ ಬೆಳವಣಿಗೆ, ಕಾಡುಗಳ ನಾಶ ಮತ್ತು ಛಿದ್ರೀಕರಣ, ಕೃಷಿ ವಿಸ್ತರಣೆ-ನಗರೀಕರಣದಿಂದಾಗಿ ವನ್ಯ ನೆಲೆ ವ್ಯಾಪಕವಾಗಿ ನಾಶವಾಗಿದೆ. ಹತ್ತು ವರ್ಷಗಳಲ್ಲಿ ಸಂಘರ್ಷದಿಂದ ನೂರಾರು ಜನರು ಮತ್ತು ಹೆಚ್ಚು ಸಂಖ್ಯೆಯಲ್ಲಿ ಪ್ರಾಣಿಗಳು ಮರಣಹೊಂದಿವೆ.. ಯಾವಾಗ ಭಾರತದ ಜನಸಂಖ್ಯೆ 140 ಕೋಟಿಗೆ ತಲುಪಿತೋ ಅದೇ ಹೊತ್ತಿಗೆ ಕಾಡುಗಳ ಪ್ರಮಾಣ ಶೇಕಡ 20 ರಷ್ಟು ಇಳಿಕೆಯಾಯಿತು. ಇದು ಸಂಘರ್ಷಕ್ಕೆ ಮೂಲ ಕಾರಣ.

ಹತ್ತು ವರ್ಷಗಳಲ್ಲಿ ಪಶ್ಚಿಮಘಟ್ಟಗಳಲ್ಲಿ ಆನೆ ಪಥ ಶೇಕಡ 40ರಷ್ಟು ಕಡಿಮೆಯಾಗಿದೆ. ಇಷ್ಟೇ ಸಮಯದಲ್ಲಿ ಭದ್ರಾ ಹುಲಿ ಯೋಜನೆಯ ಸುತ್ತಮುತ್ತಲ ವ್ಯಾಪ್ತಿಯಲ್ಲಿ 18 ಆನೆಗಳನ್ನು ವಿದ್ಯುತ್ ಹರಿಸಿ ಕೊಲ್ಲಲಾಗಿದೆ.

ಹವಾಗುಣ ಬದಲಾವಣೆಯಿಂದಾಗಿ ತಾಪಮಾನ 1 ಡಿಗ್ರಿ ಸೆಂಟಿಗ್ರೇಡ್‌ನಷ್ಟು ಏರಿಕೆಯಾಗಿದೆ. ಇದು ವನ್ಯಜೀವಿಗಳ ಚಲನೆಯನ್ನು ಬದಲಾಯಿಸಿದೆ. ಎಲ್‌ನಿನೊ ವಿದ್ಯಮಾನದಿಂದ ಮಳೆ ಕಡಿಮೆಯಾದ ಕಾರಣ ಆಹಾರ ಕೊರತೆಯಿಂದಾಗಿಯೂ ವನ್ಯಪ್ರಾಣಿಗಳು ಮನುಷ್ಯ ವಾಸಿಸುವ ಪ್ರದೇಶಕ್ಕೆ ಬರುತ್ತಿವೆ.

## ಗಂಟೆಯಲ್ಲೇ ಅವಳಿ ದುರ್ಘಟನೆ

ಅದೊಂದು ಸಾಧಾರಣ ಆದಾಯವಿರುವ ರೈತ ಕುಟುಂಬ. ದಿನವಿಡೀ ದುಡಿದರೆ ಮಾತ್ರ ಉದರಂಭರಣಕ್ಕೆ ಸರಿಯಾಗುತ್ತದೆ. ಕೊಂಚ ಜಮೀನು ಇದೆ. ಜಮೀನಿಗೆ ಗೊಬ್ಬರ ಬೇಕು ಎಂದು ಒಂದೆರಡು ಹಸು ಕಟ್ಟಿಕೊಂಡಿದ್ದಾರೆ. ಹಸುವಿಗೆ ಹುಲ್ಲು ಬೇಕು. ಕುದುರೆಮುಖ ರಾಷ್ಟ್ರೀಯ ವನ್ಯಧಾಮದ ಅಂಚಿನಲ್ಲೇ ಆ ರೈತನ ಕುಟುಂಬ ವಾಸವಿತ್ತು. ಹುಲ್ಲು ಬೆಳೆದ ಸ್ಥಳವನ್ನು ಹುಡುಕಿಕೊಂಡು ವನ್ಯಧಾಮದ ಅಂಚಿನಲ್ಲೇ ಸಾಗಿದ. ಸಾಕುನಾಯಿಗಳು ಜೊತೆಗಿದ್ದವು. ಸೊಂಪಾದ ಹುಲ್ಲು ನೋಡಿ ಕುಡುಗೋಲಿಂದ ಸವರಲು ಮುಂದಾದ. ನಾಯಿಗಳು ಜೋರಾಗಿ ಬೊಗಳಲು ಪ್ರಾರಂಭಿಸಿದವು. ರಾಷ್ಟ್ರೀಯ ಅಭಯಾರಣ್ಯ ತಾನೇ. ಹಂದಿ-ಮಿಕ ಏನಾದರೂ ನೋಡಿರಬಹುದು, ಅದಕ್ಕೆ ಕೂಗುತ್ತಿವೆ ಎಂದು ಹುಲ್ಲು ಸವರುತ್ತಲೇ ಇದ್ದ. ಅಲ್ಲೇ ಇದ್ದ ವಲಸೆ ಆನೆಗೆ ನಾಯಿಗಳ ಕೂಗು ತುಂಬಾ ರೇಜಿಗೆ ತಂದಿರಬೇಕು. ನಾಯಿಗಳನ್ನು ಓಡಿಸಲು ಬಂದ ಆನೆಗೆ ಹುಲ್ಲು ಕೊಯ್ಯುತ್ತಿದ್ದ ರೈತ ಸಿಕ್ಕಿದ. ಸೊಂಡಿಲಿನಲ್ಲಿ ಎತ್ತಿ ಬಡಿಯಿತು. ರೈತ ಪ್ರಾಣ ಬಿಟ್ಟ. ಪಕ್ಕದ ಮನೆಯಾತ ಹುಡುಕಿಕೊಂಡು ಹೊರಟ. ಅನತಿ ದೂರದಲ್ಲಿ ನಾಯಿಗಳು ಬೊಗಳುತ್ತಲೇ ಇದ್ದವು. ನಾಗರಹಾವನ್ನೋ ಅಥವಾ ಕಾಳಿಂಗನನ್ನೋ ನೋಡಿ ನಾಯಿಗಳು ಬೊಗಳುತ್ತಿವೆ ಎಂದುಕೊಂಡ ಆತ ಕಾಲಬುಡವನ್ನೇ ನೋಡಿಕೊಳ್ಳುತ್ತಾ ಮುಂದೆ ಹೋದ. ಸಿಟ್ಟಿನಲ್ಲಿದ್ದ ಅದು ಅವನನ್ನೂ ಎತ್ತಿ ನೆಲಕ್ಕೆ ಬಡಿಯಿತು. ಹೀಗೆ ಗಂಟೆಯ ಅವಧಿಯಲ್ಲಿ ಅವಳಿ ದುರ್ಘಟನೆಗಳು ನಡೆದು ಹೋದವು.

ಸುದ್ದಿ ತಿಳಿದ ರಾಜಕಾರಣಿಗಳು, ರೈತರು, ಹೆಂಗಸರು, ಮಕ್ಕಳು ಸಾವಿರ ಸಂಖ್ಯೆಯಲ್ಲಿ ಸೇರಿದರು. ನರಹಂತಕ ಆನೆಯನ್ನು ಸೆರೆ ಹಿಡಿಯಬೇಕು ಎಂಬ ಕೂಗು ಜೋರಾಯಿತು. ಅರಣ್ಯ ಇಲಾಖೆಯ ಸಿಬ್ಬಂದಿಗಳು ಇಬ್ಬಂದಿಗೊಳಗಾದರು. ವಿಷಯ ಬೆಂಗಳೂರಿಗೂ ಹೋಯಿತು. ಅರಣ್ಯ ಸಚಿವರು ಸಮಾಲೋಚನೆ ಮಾಡಿದರು. ಇಬ್ಬರನ್ನು ಕೊಂದ ಆನೆಯನ್ನು ಹಿಡಿಯಲು ಅನುಮತಿ ಸಿಕ್ಕಿತು. ಸಾಕಾನೆಗಳ ಸಹಾಯದಿಂದ ಕಾಡಿನ ದೈತ್ಯನನ್ನು ಸೆರೆ ಹಿಡಿಯಲಾಯಿತು ಎಂಬ ಸುದ್ದಿ ಎಲ್ಲೆಡೆ ಹರಡಿತು.



## ಪುನರ್ವಸತಿಯೇ ಮದ್ದು

ಮೇಲಿನ ಘಟನೆಯನ್ನು ವಿವರವಾಗಿ ನೋಡಬೇಕು. ತನ್ನ ಕುಟುಂಬವನ್ನು ಸಾಕಿ ಸಲಹುವ ಜವಾಬ್ದಾರಿ ಆ ರೈತನ ಮೇಲಿತ್ತು. ಇರುವ ಕೊಂಚ ಜಮೀನಿನಲ್ಲಿ ಬೆಳೆ ಬೆಳೆಯಲು ಗೊಬ್ಬರ ಬೇಕು; ಅದಕ್ಕೆ ಹಸು ಸಾಕಿಕೊಳ್ಳಬೇಕು. ಹಸುವಿಗೆ ಹುಲ್ಲುಬೇಕು. ಹುಲ್ಲಿರುವುದು ಅಭಯಾರಣ್ಯದ ಅಂಚಿನಲ್ಲಿ. ಇದು ಕಾಡಂಚಿನ ರೈತರ ಅನಿವಾರ್ಯ. ಕೆರೆಕಟ್ಟೆ ಗ್ರಾಮದ ಜನರಿಗೆ ವನ್ಯಜೀವಿಗಳಿಂದ ತೊಂದರೆಯಾಗುತ್ತದೆ. ಅದಕ್ಕೆ ಅವರು ಕಂಡುಕೊಂಡ ಮಾರ್ಗ ಸ್ವಯಂಪ್ರೇರಿತವಾಗಿ ಆ ಸ್ಥಳದಿಂದ ಬೇರೆಡೆಗೆ ಹೋಗುವುದು. ಇಂತಹವರನ್ನು ಸರ್ಕಾರ ತನ್ನ ಖರ್ಚಿನಲ್ಲಿ ಅವರಿಗೆ ಸೂಕ್ತ ಪರಿಹಾರ ಮತ್ತು ನೆಲೆಯನ್ನು ಕಲ್ಪಿಸಬೇಕು.

ಕುದುರೆಮುಖ ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯಲ್ಲಿ ಮಾನವ ವನ್ಯಜೀವಿ ಸಂಘರ್ಷವನ್ನು ಶಾಶ್ವತವಾಗಿ ತಡೆಗಟ್ಟಲು, ಪುನರ್ವಸತಿ ಪ್ಯಾಕೇಜ್ ಯೋಜನೆಗೆ ನೂರಾರು ಜನರು ಕಳೆದ ಇಪ್ಪತ್ತು ವರ್ಷಗಳಿಂದ ಅರ್ಜಿ ಸಲ್ಲಿಸಿ ಸೂಕ್ತ ಕ್ರಮಕ್ಕಾಗಿ ಕಾಯುತ್ತಿದ್ದಾರೆ. ನಿತ್ಯ ವನ್ಯಜೀವಿಗಳ ಜೊತೆ ಸಂಘರ್ಷದ ಬದುಕು ಸಾಗಿಸುತ್ತಾ, ಅರಣ್ಯದಲ್ಲಿ ಯಾವುದೇ ಸೌಲಭ್ಯ ಇಲ್ಲದೆ ಇಲ್ಲಿನ ನೂರಾರು ಕುಟುಂಬಗಳು ಆತಂಕದಲ್ಲಿವೆ. ಕುದುರೆಮುಖ ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯಲ್ಲಿ 1,382 ಕುಟುಂಬಗಳು ಒಳಭಾಗದ ಕಾಡಿನಲ್ಲಿವೆ. ಅದರಲ್ಲಿ 550 ಕುಟುಂಬಗಳು ಈಗಾಗಲೇ ಪುನರ್ವಸತಿ ಪ್ಯಾಕೇಜ್ ಪಡೆಯಲು ಅರ್ಜಿ ಸಲ್ಲಿಸಿವೆ. ಅದರಲ್ಲಿ 253 ಕುಟುಂಬಗಳು ಒಳ್ಳೆಯ ಪುನರ್ವಸತಿ ಪ್ಯಾಕೇಜ್ ಪಡೆದು ಉದ್ಯಾನವನದ ಹೊರಗೆ ಜಾಗ ಖರೀದಿಸಿ ಉತ್ತಮ ಜೀವನ ನಡೆಸುತ್ತಿವೆ. ಇನ್ನೂ 297 ಕುಟುಂಬದವರು ಉದ್ಯಾನವನದಿಂದ ಸ್ವಯಂಪ್ರೇರಿತರಾಗಿ ಹೊರ ಹೋಗಲು ಪುನರ್ವಸತಿ ಪ್ಯಾಕೇಜ್ ಪರಿಹಾರ ನಿರೀಕ್ಷೆಯಲ್ಲಿ ಇದ್ದಾರೆ.

ಆದರೆ ಕಳೆದ ಐದು ವರ್ಷದಲ್ಲಿ ಪುನರ್ವಸತಿ ಯೋಜನೆಯೇ ಕುಂಠಿತವಾಗಿದೆ. ಒಂದೊಮ್ಮೆ ಸರ್ಕಾರ ಈ 297 ಕುಟುಂಬಗಳಿಗೆ ಸ್ವಯಂಪ್ರೇರಿತ ಪುನರ್ವಸತಿ ಪ್ಯಾಕೇಜ್ ಸೌಲಭ್ಯ ನೀಡಿದ್ದರೆ, ಅಮಾಯಕ ಇಬ್ಬರು ರೈತರ ಹತ್ಯೆಯಾಗುತ್ತಿರಲಿಲ್ಲ. ವನ್ಯಜೀವಿ ಸಂರಕ್ಷಣಾ ಕಾಯ್ದೆಯ ಪ್ರಕಾರ ರಾಷ್ಟ್ರೀಯ ಉದ್ಯಾನವನಗಳಲ್ಲಿ ಅರಣ್ಯೇತರ ಚಟುವಟಿಕೆಗಳಿಗೆ ಅವಕಾಶವಿಲ್ಲ. ಆದರೂ, ಈ ಸಂರಕ್ಷಿತ ಪ್ರದೇಶದಲ್ಲಿ ಬೃಹತ್ ಯೋಜನೆಗಳನ್ನು ಎಗ್ಗಿಲ್ಲದೆ ಜಾರಿ ಮಾಡಲು ಹೊರಟಿರುವುದು ಕಾಯ್ದೆಯ ಮೂಲ ಆಶಯವನ್ನೇ ಧಿಕ್ಕರಿಸುತ್ತದೆ. ಇದು ಸ್ಪಷ್ಟವಾಗಿ ಅರಣ್ಯ ಇಲಾಖೆ ಮತ್ತು ಸರ್ಕಾರದ ನಿರ್ಲಕ್ಷ್ಯದ ಧೋರಣೆಯಾಗಿದೆ.

ರಾಜ್ಯದ ಒಟ್ಟು ವಿಸ್ತೀರ್ಣದ ಶೇಕಡ 4.5ರಷ್ಟು ಪ್ರದೇಶದಲ್ಲಿ ಐದು ರಾಷ್ಟ್ರೀಯ ಉದ್ಯಾನವನಗಳು, 36 ಅಭಯಾರಣ್ಯಗಳಿವೆ. ಇಷ್ಟು ಕಡಿಮೆ ಪ್ರದೇಶವೂ ಕೂಡ ಮಾನವ ವಸತಿಯಿಂದ ಹೊರತಾಗಿಲ್ಲ. ಈ ಪ್ರದೇಶಗಳಲ್ಲೇ ಮಾನವ-ವನ್ಯಜೀವಿ ಸಂಘರ್ಷ ತೀರಾ ಹೆಚ್ಚಿದೆ. ಈ ಪ್ರದೇಶಗಳಲ್ಲೇ ನದಿಗಳು ಹುಟ್ಟುತ್ತವೆ. ವಾತಾವರಣದಲ್ಲಿರುವ ಇಂಗಾಲಾಮ್ಲವನ್ನು ಹೀರಿಕೊಳ್ಳುತ್ತವೆ. ಮಳೆ ಪ್ರಮಾಣವನ್ನು ನಿರ್ಧರಿಸುವ ಜೊತೆಗೆ ಅನೇಕ ರೀತಿಯ ನೈಸರ್ಗಿಕ ಸೇವೆಯನ್ನು ಈ ಪ್ರದೇಶಗಳು ಉಳಿದ ಶೇಕಡ 95.5ರಷ್ಟು ಪ್ರದೇಶವನ್ನು ಆಕ್ರಮಿಸಿಕೊಂಡಿರುವ ಮಾನವ ಕುಲಕ್ಕೆ ನೀಡುತ್ತವೆ.

ಸುಮಾರು 4 ಲಕ್ಷ ಕೋಟಿ ಬಜೆಟ್ ಮಂಡಿಸುವ ಸರ್ಕಾರಕ್ಕೆ ರಾಷ್ಟ್ರೀಯ ಉದ್ಯಾನವನ, ಅಭಯಾರಣ್ಯಗಳಲ್ಲಿ ವನ್ಯಜೀವಿಗಳ ಜೊತೆ ಸಂಘರ್ಷ ನಡೆಸುತ್ತಾ, ಮೂಲ ಸೌಕರ್ಯಗಳಿಂದ ವಂಚಿತರಾಗಿ ದಯನೀಯ ಬಾಳು ಬಾಳುತ್ತಿರುವ ಜನರಿಗೆ ಅವರ ಬದುಕಿಗೆ ಸಾಕಾಗುವಷ್ಟು ಪರಿಹಾರ ನೀಡಿದರೆ, ಸಮಾಜದ ಮುಖ್ಯವಾಹಿನಿಗೆ ಸೇರುತ್ತಾರೆ. ಹೀಗೆ ಸೇರಲು ಬಯಸುವವರ ಸಂಖ್ಯೆ ದೊಡ್ಡದಿದೆ. ಶರಾವತಿ ಸಿಂಗಳೀಕ ಅಭಯಾರಣ್ಯದ ಕೇಂದ್ರ ಭಾಗದಲ್ಲಿ ಚಿಕ್ಕ ಗ್ರಾಮಗಳಿವೆ. ಮಕ್ಕಳು ಶಾಲೆಗೆ ಹೋಗಬೇಕು ಎಂದರೆ 8 ಕಿ.ಮೀ ಕಾಲ್ನಡಿಗೆಯಲ್ಲಿ ಬರಬೇಕು. ಯಾವ ಹೊತ್ತಿನಲ್ಲಿ ಯಾವ ಪ್ರಾಣಿ ದಾಳಿ ಮಾಡುತ್ತದೋ ಅಂದಾಜಿಸಲಾಗುವುದಿಲ್ಲ. ಇಂತಹ ದಾರುಣ ಸ್ಥಿತಿಯಲ್ಲಿರುವ ಆ ಕುಟುಂಬಗಳು ಸೂಕ್ತ ಪರಿಹಾರ ಕೊಟ್ಟು ಪುನರ್ವಸತಿಗೊಳಿಸಿ ಎಂದು ಅಂಗಲಾಚುತ್ತಿವೆ. ಶೆಟ್ಟಿಹಳ್ಳಿ ಅಭಯಾರಣ್ಯ, ಭೀಮಗಢ ಮುಂತಾದ ಅಭಯಾರಣ್ಯಗಳ ಸ್ಥಿತಿಯೂ ಹೀಗೆಯೇ ಇದೆ. ಈ ಕೂಗು ಸರ್ಕಾರಕ್ಕೆ ಕೇಳುತ್ತಿಲ್ಲ. ಆದರೆ, ಹತ್ತಿಪ್ಪತ್ತು ಸಾವಿರ ಕೋಟಿ ಹಾಳು ಮಾಡಿ ನಾಗರಿಕ ಸಮಾಜಕ್ಕೆ ಪ್ರಯೋಜನವಿಲ್ಲದ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯನ್ನು ಅಭಯಾರಣ್ಯದ ಕೇಂದ್ರ ಭಾಗದಲ್ಲಿ ಜಾರಿ ಮಾಡಲು ತುದಿಗಾಲಲ್ಲಿ ನಿಂತಿದೆ. ನಮ್ಮ ಭವಿಷ್ಯಕ್ಕಾಗಿ ಶೇಕಡ 5ರಷ್ಟು ಭೂಭಾಗವನ್ನೂ ಸಹ ಕಾಪಾಡಲಿಕ್ಕಾಗದ ವ್ಯವಸ್ಥೆಯಿದು, ಇದೆಂಥ ಪ್ರಜಾಪ್ರಭುತ್ವ?

## ಕುವೆಂಪುಲೋಕದಲ್ಲಿ ಆಪ್ತ ಪಯಣ


ಮೊದಲ ಓದು

**ಮಾತು–ಬರವಣಿಗೆಯ** ಮೂಲಕ ಕುವೆಂಪು ಅವರ ಕೃತಿಗಳ ಬಗ್ಗೆ ಕನ್ನಡದ ಓದುಗರನ್ನು ಮತ್ತೆ ಮತ್ತೆ ಸೆಳೆಯುತ್ತಿರುವ ಕೆ.ವಿ. ನಾರಾಯಣ ಅವರ ಹೊಸ ಕೃತಿ 'ಹೊಸ ಓದುಗರಿಗೆ ಕುವೆಂಪು'. 'ಕುವೆಂಪು ಬರಹಗಳು ಮತ್ತು ಭಾಷಣಗಳ ಬಗ್ಗೆ' ಎನ್ನುವ ಅಡಿಟಿಪ್ಪಣಿಯೇ ಇಲ್ಲಿನ ಬರವಣಿಗೆ ಸ್ವರೂಪವನ್ನು ಹೇಳುವಂತಿದೆ.

ಮಹತ್ವದ ಬರಹಗಾರನ ಸಾಹಿತ್ಯ ಪ್ರತಿ ಓದಿನಲ್ಲಿಯೂ ಹೊಸ ಹೊಳಹುಗಳನ್ನು ಬಿಟ್ಟುಕೊಡುತ್ತಿರುತ್ತದೆ. ಹಾಗೆಯೇ, ತನ್ನ ಕಾಲದ ವಿದ್ಯಮಾನಗಳನ್ನು ಅರ್ಥ ಮಾಡಿಕೊಳ್ಳಲಿಕ್ಕೆ ಅಗತ್ಯವಾದ ನೋಟಗಳನ್ನೂ ಕರುಣಿಸುತ್ತಿರುತ್ತದೆ. ಈ ಹಿನ್ನೆಲೆಯಲ್ಲಿ ಕನ್ನಡದ ಎಲ್ಲ ತಲೆಮಾರುಗಳಿಗೆ ಕುವೆಂಪು ಸಾಹಿತ್ಯ ಪ್ರಸ್ತುತವೇ. ಹೊಸ ಓದುಗರನ್ನು ಗಮನದಲ್ಲಿಟ್ಟುಕೊಂಡು ಬರವಣಿಗೆ ರೂಪುಗೊಂಡಿದ್ದರೂ, ಕುವೆಂಪು ಬಗ್ಗೆ ಕುತೂಹಲವುಳ್ಳ ಎಲ್ಲ ಓದುಗರಿಗೂ ಉಪಯುಕ್ತವಾದ ಕೃತಿ ಇದಾಗಿದೆ.

ಈ ಸಂಕಲನದ ಹನ್ನೆರಡು ಬರಹಗಳು ಕುವೆಂಪು ಕೃತಿಗಳು ಹಾಗೂ ವಿಚಾರಗಳನ್ನು ಅರ್ಥ ಮಾಡಿಕೊಳ್ಳುವ ದಾರಿಗಳನ್ನು ನಿಚ್ಚಳಗೊಳಿಸುವ ಪ್ರಯತ್ನಗಳಾಗಿವೆ. ಹೀಗೆ ಕುವೆಂಪು ಮಾರ್ಗದಲ್ಲಿ ಓದುಗರನ್ನು ಕರೆದೊಯ್ಯುವ ಲೇಖಕರು, ತಮ್ಮ ಅಭಿಪ್ರಾಯಗಳನ್ನು ಅಂತಿಮ ಎಂದು ಹೇಳದೆ, ಹಲವು ಸಾಧ್ಯತೆಗಳಿಗೆ ಓದುಗರು ತೆರೆದುಕೊಳ್ಳಲು ಅನುಕೂಲವಾಗುವಂತೆ ಬರವಣಿಗೆ ರೂಪಿಸಿದ್ದಾರೆ. ಈ ಬರವಣಿಗೆ, ಕುವೆಂಪು ಸಾಹಿತ್ಯದ ಅನನ್ಯತೆಯನ್ನು ಹೇಳುವಂತೆಯೇ ಕೆವಿಎನ್ ಅವರ ಒಳನೋಟಗಳ ಅಸಲಿಯತ್ತನ್ನೂ ಕಾಣಿಸುತ್ತದೆ.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯನ್ನು ಕುರಿತಂತೆಯೇ ಮೂರು ಬರಹಗಳು ಇಲ್ಲಿವೆ ಹಾಗೂ ಈ ಬರಹಗಳು ಮದುಮಗಳನ್ನು ಮತ್ತೆ ಮತ್ತೆ ಎದುರುಗೊಳ್ಳಲು ಪ್ರೇರೇಪಿಸುವಂತಿವೆ. 'ವಿಚಾರಕ್ರಾಂತಿಗೆ ಆಹ್ವಾನ: ಅಗ–ಈಗ', 'ಕುವೆಂಪು ಚಿಂತನೆಗಳು: ಅಂದು–ಇಂದು', 'ಕುವೆಂಪು ಅವರಲ್ಲಿ ರಾಷ್ಟ್ರೀಯತೆಯ ಪರಿಕಲ್ಪನೆ', 'ಕುವೆಂಪು ಕೃತಿಗಳ ವಿಮರ್ಶೆಯ ನೆಲೆಗಳು', 'ಕುವೆಂಪು ಅವರ ಭಾಷಾ ಬಳಕೆ: ಸೃಜನಶೀಲ ನೆಲೆಗಳು' ಮುಂತಾದ ಬರಹಗಳು, ದಾರ್ಶನಿಕ ಬರಹಗಾರನ ಶಕ್ತಿಯ ನೆಲೆಗಳನ್ನು ಅರ್ಥ ಮಾಡಿಕೊಳ್ಳಲು ನೆರವಾಗುವಂತಿವೆ.




ಹೊಸ ಓದುಗರಿಗೆ ಕುವೆಂಪು
ಲೇ: ಕೆ.ವಿ. ನಾರಾಯಣ
ಪ್ರ: ಆಕೃತಿ ಪುಸ್ತಕ, ಬೆಂಗಳೂರು.
ಸಂ: 9611541806
ಪುಟ: 160 ₹190

---

ಕಥೆ




ಭಾರತೀಯ ಜೀವವಿಮಾ ನಿಗಮದಲ್ಲಿ ಆಡಳಿತಾಧಿಕಾರಿಯಾಗಿ 2023ರಲ್ಲಿ ನಿವೃತ್ತಿ. ತಿಪಟೂರಿನ ಕಲ್ಪತರು ಕಾಲೇಜಿನಲ್ಲಿ ವ್ಯಾಸಂಗ. ಸಣ್ಣಕಥೆಗಳು, ಕವನಗಳು, ಹಲವಾರು ಕನ್ನಡ ನಿಯತಕಾಲಿಕಗಳಲ್ಲಿ ಪ್ರಕಟಗೊಂಡಿವೆ. ಸುಧಾ ಮತ್ತು ಮಯೂರ ಮಾಸ ಪತ್ರಿಕೆಗಳಲ್ಲಿ 80ರ ದಶಕದಲ್ಲಿ ನಿಯಮಿತ ಬರಹಗಾರ. ತಲೆಮಾರುಗಳ ಅಂತರಗಳು ಇವರಿಗೆ ಯಾವಾಗಲೂ ಕಲಕುವ ವಸ್ತು.

ಜಿ.ಸಿ.ರವಿ ಅವರ
ಕೈ ಹಿಡಿದು ನಡೆಸೆನ್ನ ತಂದೆ

prajavani.net/short-story

ಪ್ರಜಾವಾಣಿ
ದೀಪಾವಳಿ ವಿಶೇಷಾಂಕ 2025
ಕಥಾ–ಕವನ ಸ್ಪರ್ಧೆ
ತೀರ್ಪುಗಾರರ ಮೆಚ್ಚುಗೆ ಪಡೆದ
ಕಥೆ ಹಾಗೂ ಕವನ



ಮಿಂಚುಳ್ಳಿ ಸಾಹಿತ್ಯ ಮಾಸಿಕದ ಮುಖ್ಯ ಸಂಪಾದಕ. ಶಿವಮೊಗ್ಗದವರು. ಖಾಸಗಿ ಕಂಪೆನಿಯೊಂದರಲ್ಲಿ ಸೀನಿಯರ್ ಸಾಫ್ಟ್‌ವೇರ್ ಎಂಜಿನಿಯರ್. ಇವರ ಕವಿತೆಗೆ ಕಡೆಂಗೋಡ್ಲು ಕಾವ್ಯ ಪುರಸ್ಕಾರ, ಕಥೆಗೆ ಗುಲ್ಬರ್ಗ ವಿಶ್ವವಿದ್ಯಾಲಯದ ದಿ. ಜಯತೀರ್ಥ ರಾಜಪುರೋಹಿತ ಸ್ಮಾರಕ ದತ್ತಿ ಕಂಚಿನ ಪದಕ ದೊರಕಿದೆ. ಇದುವರೆಗೂ ಒಟ್ಟು ಐದು ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

ಕವನ

ಶಂಕರ್ ಸಿಹಿಮೊಗೆ ಅವರ
ಅರ್ಥ

www.prajavani.net/poetry

ಸಾದರ ಸ್ವೀಕಾರ

ಹೊಸ ಪುಸ್ತಕಗಳ ಮಾಹಿತಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರತಿಕ್ರಿಯೆಗಳನ್ನು ಕಳಿಸಲು
bhanuvara@prajavani.co.in

---

# ಮಜ ಮಜ ಮಜಕೂರ

ಎಂ.ಎಸ್.ಪೂಜಾರ

majakoora@prajavani.co.in


### ಗಣಿತದಲ್ಲಿ ಗರ್ದಿಗಮ್ಮತ್ತು

| ಒಂದೇ ರೂಪ(ಉತ್ತರ) ಎರಡು ಗುಣ(ಕ) |
|---|
| 174 * 23 = 58 * 69 |
| 174 * 32 = 58 * 96 |
| 134 * 29 = 58 * 67 |
| 138 * 27 = 54 * 69 |
| 146 * 29 = 58 * 73 |
| 158 * 23 = 46 * 79 |
| 174 * 32 = 58 * 96 |
| 186 * 27 = 54 * 93 |
| 259 * 18 = 63 * 74 |
| 532 * 14 = 76 * 98 |
| 584 * 12 = 73 * 96 |

### ಡಗ್ಗ ಚಕ್ಕು ಕ್ಷೀರ್ಶ್ರಷ್ಟ ಕಥೆಯ

ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ದೀಪಾವಳಿಗೆ ತಂದಿದ್ದ ರಾಕೆಟ್ ಪಟಾಕಿಯನ್ನು ಗುಂಡ ಬಹಳ ಹುಮ್ಮಸ್ಸಿನಿಂದ ಹಚ್ಚಲು ಹೊರಟ. ತಕ್ಷಣ ಹೊತ್ತಿಕೊಂಡ ರಾಕೆಟ್ ಢಂ ಎಂದು ತನ್ನ ಜತೆಗೆ ಗುಂಡನನ್ನೂ ಮೇಲಕ್ಕೆ ಹಾರಿಸಿಕೊಂಡು ಹೋಯಿತು.




### ಪದಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

| | | | | | | | |
|---|---|---|---|---|---|---|---|
| 1 | ಆಳ | + | ಕರ್ಮ | + | ಚ | = | |
| 2 | ತನ್ನ | + | ಉರಿ | + | ಗು | = | |
| 3 | ಜಮಾ | + | ಸಖಿ | + | ಮು | = | |
| 4 | ಮಾಯ | + | ಗಾನ | + | ಡು | = | |
| 5 | ಕಾರ | + | ಹಣ | + | ಲ | = | |

### ಜಾಣಪದ ಆಟ

ಇಲ್ಲಿ ಕೊಟ್ಟಿರುವ ಎರಡಕ್ಷರ ಪದಕ್ಕೆ ಅಕ್ಷರ ಪಟ್ಟಿಯಿಂದ ಇನ್ನೆರಡಕ್ಷರ ಸೇರಿಸಿ ನಾಲ್ಕಕ್ಷರದ ಅರ್ಥಬದ್ಧ ಪದ ರಚಿಸಿ.

| | | | | |
|---|---|---|---|---|
| 1 | _ | _ | ಚಾ | ರಿ |
| 2 | _ | _ | ಚಾ | ರಿ |
| 3 | _ | _ | ಚಾ | ರಿ |
| 4 | _ | _ | ಚಾ | ರಿ |
| 5 | _ | _ | ಚಾ | ರಿ |
| 6 | _ | _ | ಚಾ | ರಿ |
| 7 | _ | _ | ದಾ | ರ |
| 8 | _ | _ | ದಾ | ರ |
| 9 | _ | _ | ದಾ | ರ |
| 10 | _ | _ | ದಾ | ರ |
| 11 | _ | _ | ದಾ | ರ |
| 12 | _ | _ | ದಾ | ರ |

### ಅಕ್ಷರ ಪಟ್ಟಿ

| | | | |
|---|---|---|---|
| ಮಾ | ಗೂ | ಸ | ಡ |
| ಜ | ಢ | ರ | ಉ |
| ಅ | ನಾ | ಬ್ರ | ರು |
| ಣಾ | ಗ | ದೂ | ವ |
| ದ | ಕ | ಹ್ಮ | ನಾ |
| ಪಾ | ಅ | ಶಿ | ರ್ಮ |

### ಶಬ್ದಾಟ

ಇಲ್ಲಿರುವ ಪದ ಅಕ್ಷರ ಸೇರಿಸಿ ಒಂದೇ ಪದ ಮಾಡಿ

ಬೇಗ ತೊಳೆ + ರಿ

### ಮೋಜಿನ ಇಂಗ್ಲೀಷ್

ಇವುಗಳನ್ನು ಓದಿದರೆ ಕನ್ನಡದಲ್ಲಿ ಓದಿದಂತೆ ಆಗುತ್ತದೆ. ಓದಿ ಖುಷಿಪಡಿ.

1.E GO DAY YAK CUT BAKERY
2.NO DAY WHO BODY THEY
3.E BUT YAKNECK BAKERY
4.MUNCH THE MAY LAY YAKJUDGE BAKERY
5.GOOD THE MAY LAY BUS YAK NILL BAKERY

### ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ: 1.ದರ ನಿಗದಿ 2.ಖ್ಯಾತ ನಾಮರು 3.ಭೂಗಳ್ಳತನ 4.ರಾಜಕುಮಾರಿ 5.ಜನುಮದಿನ

ಹುಡುಕಾಟ: ಮುದುಡಿದ ತಾವರೆ ಅರಳಿತು

ಅದಲು; ಬದಲು: 1.More 2.Dictionary 3.Melon 4.Dealer 5.Admirer

ಜಾಣಪದ ಆಟ: 1.ಸಮಿತಿ 2.ಸದ್ಗತಿ 3.ಸವತಿ 4.ಸಜಾತಿ 5.ಸಮ್ಮತಿ 6.ಸರತಿ 7.ಸವಾರ 8.ಸತ್ಕಾರ 9.ಸರ್ಕಾರ 10.ಸರ್ದಾರ 11.ಸಮರ 12.ಸಸಾರ

### ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಮೇಲಿರುವ ಇಮೇಲ್‌ಗೆ ಕಳುಹಿಸಿ...

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ


### ಸರಿ ಉತ್ತರ ನೀಡಿದ ಆಯ್ದ 5 ಪುಟಾಣಿಗಳು



ಸೌಜನ್ಯ ಚೈತನ್ಯಕುಮಾರ್ ಮೋಹಿತೆ
ಹಾವೇರಿ




ಅಭಿಷೇಕ್ ಎಂ.
ಪುತ್ತೂರು



ಶರಣ್ಯ ಎಸ್.ಎಂ
ಶಿವಮೊಗ್ಗ



ವೇದಾ ರೇವಣ್ಣವರ
ವಿಜಯಪುರ



ರಜತ್ ಪಿ
ಮಂಡ್ಯ


ವಾರ್ಸಾ ನಗರದ ಓಲ್ಡ್ ಟೌನ್‌ನ ಕೋಟೆ


ಪೋಲಿಷ್ ರಾಜರ ನಿವಾಸವಾಗಿದ್ದ ರಾಯಲ್ ಕ್ಯಾಸಲ್



ಪೋಲೆಂಡ್ 2019ರಲ್ಲಿ ಗಾಂಧಿ ಸ್ಮರಣಾರ್ಥ ಅಂಚೆಚೀಟಿಯನ್ನು ಬಿಡುಗಡೆ ಮಾಡಿತು

# ವಾರ್ಸಾ ಎಂಬ ಫೀನಿಕ್ಸ್ ನಗರ


ಪೋಲೆಂಡ್‌ನ ಜ್ಯೂಗಳ ನರಮೇಧವನ್ನು ಹೊರಜಗತ್ತಿಗೆ ತಿಳಿಸಿದ ಯಾನ್ ಕಾರ್ಸ್ಕಿ

• ಚಿತ್ರ-ಬರಹ: ಡಿ.ಜಿ.ಮಲ್ಲಿಕಾರ್ಜುನ

ಪೋಲೆಂಡ್ ದೇಶದ ರಾಜಧಾನಿ ವಾರ್ಸಾ ಸಾಹಿತ್ಯ ಸಂಗೀತ ಕಲೆ ವಿಜ್ಞಾನ ಹಾಗೂ ಬೌದ್ಧಿಕ ಮತ್ತು ರಾಜಕೀಯ ಕೇಂದ್ರ. ಹಿಂದೆ ಇದನ್ನು ಪ್ಯಾರಿಸ್‌ಗೆ ಹೋಲಿಸುತ್ತಿದ್ದರು. ಇತಿಹಾಸದಲ್ಲಿ ಹಲವಾರು ಬಾರಿ ವಿನಾಶದ ಅಂಚನ್ನು ತಲುಪಿದರೂ ಪ್ರತಿಸಲವೂ ಪುನರುತ್ಥಾನಗೊಂಡಿರುವ ವಾರ್ಸಾ ನಗರ 'ಫೀನಿಕ್ಸ್ ನಗರ' ಎಂದೇ ಪ್ರಸಿದ್ಧವಾಗಿದೆ.

ಎರಡನೆಯ ಮಹಾಯುದ್ಧದ ಕಾಲದಲ್ಲಿ ಮುಕ್ಕಾಲು ಭಾಗ ನಗರ ನಾಶವಾಯಿತು. ಬರ್ನಾಂಡೊ ಬೆಲ್ಲೊಟ್ಟೊ ರಚಿಸಿದ್ದ ಪುರಾತನ ನಗರದ ಚಿತ್ರಗಳನ್ನು ಮುಂದಿರಿಸಿಕೊಂಡು, ಜನ ಹಳೆಯ ನಗರವನ್ನು ಪುನಃ ಕಟ್ಟಿದರು. ಈಗ ಇದು ಸುಂದರ ನಗರವಷ್ಟೇ ಅಲ್ಲ, ನೆಲಸಮಗೊಳಿಸಿದರೂ, ಪುನಃ ಮೇಲೆದ್ದ ಧೈರ್ಯವಂತ ಮತ್ತು ಕಾಯಕಜೀವಿಗಳ ನಗರ.

ವಿಸ್ತುಲಾ ನದಿಯ ದಂಡೆಯಲ್ಲಿ ನಿಂತಿದ್ದ ಬೆಸ್ತ ಯುವಕ ವಾರ್ಸ್‌ನಿಗೆ ಷಾವ ಎಂಬ ಮತ್ಸ್ಯಕನ್ಯೆಯೊಂದಿಗೆ ಪ್ರೇಮ ಮೊಳೆತು, ಇಬ್ಬರೂ ಕೂಡಿ ಕಟ್ಟಿದ ಊರು, ಅವರ ಹೆಸರಿನಿಂದಲೇ ವಾರ್ಸ್‌ಷಾವ ಎಂದು ಕರೆಯಲಾಯಿತು. ಪೋಲಿಷರು ವಾರ್ಸಾವ ಎಂದೇ ಈಗಲೂ ಕರೆಯುತ್ತಾರೆ. ಆಂಗ್ಲರು ಅದನ್ನು ವಾರ್ಸಾ ಎಂದು ಕರೆದರು. ಒಂದು ಕೈಯಲ್ಲಿ ಖಡ್ಗ, ಮತ್ತೊಂದು ಕೈಯಲ್ಲಿ ಗುರಾಣಿ ಹಿಡಿದ ಸ್ಫುರದ್ರೂಪಿಣಿ ಮತ್ಸ್ಯಕನ್ಯೆ, ವಾರ್ಸಾ ನಗರದ ಲಾಂಛನ. ಅವರ ಬಾವುಟ ನಮ್ಮ ಕನ್ನಡ ಧ್ವಜದ ತದ್ರೂಪು–ಹಳದಿ ಮತ್ತು ಕೆಂಪು.

'ಪೋಲ್' ಎಂದರೆ ಮೈದಾನ. ದೇಶದ ಬಹುಭಾಗ ಬಯಲುಸೀಮೆ. ಅದಕ್ಕಾಗಿ ಈ ದೇಶಕ್ಕೆ ಪೋಲೆಂಡ್ ಎಂಬ ಹೆಸರು. ಹಿಟ್ಲರನ ಸೇನೆ 1939 ರ ಸೆಪ್ಟೆಂಬರ್ ಮೊದಲ ದಿನ ಪೋಲೆಂಡಿನೊಳಕ್ಕೆ ನುಗ್ಗಿದ್ದು ಎರಡನೆಯ ಮಹಾಯುದ್ಧದ ಪ್ರಾರಂಭಕ್ಕೆ ಕಾರಣವಾಯಿತು. ಪೋಲೆಂಡಿನಲ್ಲಿ ಹಿಟ್ಲರನ ಸೇನೆ ನಡೆಸಿದ ದೌರ್ಜನ್ಯ ಮತ್ತು ಹತ್ಯಾಕಾಂಡ ಭೀಕರ. ಎರಡನೇ ಮಹಾಯುದ್ಧದಲ್ಲಿ ವಧೆಯಾದ ಪೋಲಿಷರು 60 ಲಕ್ಷ, ಅಂದರೆ ಪೋಲೆಂಡಿನ ಇಡೀ ಜನಸಂಖ್ಯೆಯ ಶೇಕಡ 22 ರಷ್ಟು!

ಒಂದು ದಿಕ್ಕಿನಿಂದ ಜರ್ಮನಿ ಪೋಲೆಂಡನ್ನು ಆಕ್ರಮಣ ಮಾಡುವ ಹೊತ್ತಿಗೆ ಮತ್ತೊಂದು ದಿಕ್ಕಿನಿಂದ ರಷ್ಯಾ ಆಕ್ರಮಣ ಮಾಡಿ ಅರ್ಧ ಪೋಲೆಂಡನ್ನು ನುಂಗಿಬಿಟ್ಟಿತ್ತು. ಅತ್ತ ಜರ್ಮನಿ, ಇತ್ತ ರಷ್ಯಾ–ಎರಡೂ ದೇಶಗಳ ಆಕ್ರಮಣದಿಂದ ನಲುಗಿಹೋಯಿತು ಪೋಲೆಂಡ್. ಎರಡನೇ ಮಹಾಯುದ್ಧ ಮುಗಿದ ಮೇಲೆ ಪೋಲಿಷರು ಬೆಂಕಿಯಿಂದ ಬಾಣಲೆಗೆ ಬಿದ್ದರು. ಆ ನಂತರ 45 ವರ್ಷಗಳನ್ನು ಅವರು 'ಡೀಪ್ ಫ್ರೀಜ್' (ನಿಷ್ಕ್ರಿಯತೆ) ಎನ್ನುವರು. ಸೋವಿಯತ್ ಒಕ್ಕೂಟದ ವಿಘಟನೆಯ ನಂತರ ಪೋಲೆಂಡ್ ಸ್ವತಂತ್ರವಾಯಿತು.

ಈಗ ಯುರೋಪಿಯನ್ ಒಕ್ಕೂಟಕ್ಕೆ ಸೇರಿರುವ ಪೋಲೆಂಡ್ ದೇಶವನ್ನು ಸುತ್ತುವಾಗ, ಘನತೆಯಿಂದ ಹಾರಾಡುವ ಅದರ ಬಿಳಿ ಕೆಂಪು ಬಣ್ಣದ ಧ್ವಜ, ಸಾಲಿಡಾರಿಟಿ (ಐಕ್ಯಮತ್ಯ- ಕಮ್ಯುನಿಸ್ಟ್ ರಾಷ್ಟ್ರಗಳಲ್ಲಿ ಪ್ರಾರಂಭವಾದ ಮೊದಲ ಕಾರ್ಮಿಕ ಸಂಘ) ಎಂದು ಕೆಂಪಕ್ಷರದಲ್ಲಿ ಬರೆದಿರುವ ಭಿತ್ತಿಗಳು, ವಿಶ್ವಶಾಂತಿಗಾಗಿ ಕೊಡುಗೆ ಕೊಟ್ಟ ಪೋಲೆಂಡ್ ಮೂಲದ ಪೋಪ್ ಜಾನ್ ಪಾಲ್, ಖ್ಯಾತ ಖಗೋಳಶಾಸ್ತ್ರಜ್ಞ ನಿಕೋಲಸ್ ಕೋಪರ್ನಿಕಸ್, ಮೇರಿ ಕ್ಯೂರಿ ಸೇರಿದಂತೆ ನೊಬೆಲ್ ಪುರಸ್ಕಾರ ಸಂದಿರುವ 18 ಮಂದಿ ಪೋಲಿಷರು, ಕ್ಲಿಷ್ಟಕರ ಭಾಷೆ, ವಿಶಿಷ್ಟ ಆಹಾರ, ರುಚಿಕರ ಸೇಬು, ಸ್ಟಾರ್ಟ್ ಹಕ್ಕಿಗಳ ಗೂಡುಗಳು... ಕಂಡಾಗ ಇವರ ಬಗ್ಗೆ ಗೌರವ ಭಾವ ಮೂಡುತ್ತದೆ.

**ಪೋಲೆಂಡ್‌ನ ರಾಜಧಾನಿ ವಾರ್ಸಾ ನಗರ ಪ್ರಮುಖ ಪ್ರೇಕ್ಷಣೀಯ ಸ್ಥಳ. ಜತೆಗೆ ಇತಿಹಾಸ, ಸಾಹಿತ್ಯ, ಸಂಗೀತ, ಕಲೆಗಳ ಸಂಗಮ ಕೂಡ...**

ವಾರ್ಸಾ ನಗರದಲ್ಲಿ ಭಾರತದ ನಂಟು, ತಂತು ಹಲವು ಇವೆ. ಪೋಲೆಂಡಿನ ವಾರ್ಸಾ ಯೂನಿವರ್ಸಿಟಿಯ ಗ್ರಂಥಾಲಯದ ಗೋಡೆಯ ಮೇಲೆ ಸಂಸ್ಕೃತದ ಶ್ಲೋಕಗಳನ್ನು ಕಂಡಾಗ ಖುಷಿಯಾಗುತ್ತದೆ. ಒಂದು ಇಡೀ ಗೋಡೆಯ ಮೇಲೆ ಗಾಯತ್ರಿ ಮಂತ್ರ, ಮುಂಡಕೋಪನಿಷತ್ತಿನ ಮತ್ತು ಗೀತೆಯ ಸಾಲುಗಳನ್ನು ಕೆತ್ತಲಾಗಿದೆ.

## ಮಹಾರಾಜ ಸ್ಕ್ವೇರ್

ಜಾಮ್ ಸಾಹೇಬ್ ಎಂದೇ ಕರೆಸಿಕೊಳ್ಳುತ್ತಿದ್ದ ಗುಜರಾತಿನ ನವನಗರದ ಮಹಾರಾಜ, ದಿಗ್ವಿಜಯ್ ಸಿಂಗ್ ಜಿ ರಣಜಿತ್ ಸಿಂಗ್ ಜಿ ಜಡೇಜ (1895-1966) ಅವರನ್ನು ಪೋಲೆಂಡಿನಲ್ಲಿ ಡೋಬ್ರಿ (ಒಳ್ಳೆಯ) ಮಹಾರಾಜ ಎಂದು ಕರೆಯುತ್ತಾರೆ. ಅವರ ಹೆಸರಿನ ಶಾಲೆ, ಅವರ ನೆನಪಿಗಾಗಿ ನಿರ್ಮಿಸಿದ ಸ್ಮಾರಕ ಮತ್ತು ಅವರ ಹೆಸರಿನ ಒಂದು ಚೌಕ ಕೂಡ ವಾರ್ಸಾದಲ್ಲಿದೆ. ಹಾಗೆಯೇ ಕೊಲ್ಹಾಪುರದ ಛತ್ರಪತಿ ಶಾಹು ಮಹಾರಾಜ್ ಅವರ ಗೌರವಾರ್ಥ ಕೊಲ್ಹಾಪುರ್ ಸ್ಮಾರಕವೂ ಇದೆ. 1942ರಲ್ಲಿ ದೇಶಭ್ರಷ್ಟವಾಗಿದ್ದ ಪೋಲಿಷ್ ಮಕ್ಕಳಿಗೆ, 'ನಾವು ಆಶ್ರಯ ಕೊಡುತ್ತೇವೆ' ಎಂದು ನವನಗರದ ಮಹಾರಾಜ ದಿಗ್ವಿಜಯ ಸಿಂಹಜಿ (ಜಾಮ್ ಸಾಹೇಬ್) ಘೋಷಿಸಿದರು. ಈ ತೀರ್ಮಾನ ಆಗಿನ ಬ್ರಿಟಿಷ್ ಸರ್ಕಾರಕ್ಕೆ ಸಮ್ಮತವಿರಲಿಲ್ಲ. ರಾಜ್ಯದ ಬೊಕ್ಕಸದಿಂದ ಇದಕ್ಕಾಗಿ ಹಣ ಖರ್ಚು ಮಾಡುವಂತಿಲ್ಲ ಎಂದು ಷರತ್ತು ಒಡ್ಡಿದ್ದರು. ಅವರು ನಮ್ಮ ಅತಿಥಿಗಳು ಎಂದು ಹೇಳಿ ಸ್ವಂತ ಹಣದಿಂದ ಜಾಮ್ ಸಾಹೇಬ್, ನಿರಾಶ್ರಿತರಿಗೆ ನೆರವಾಗಿದ್ದು ಇತಿಹಾಸ. ಆ ಸಮಯದಲ್ಲಿ ಭಾರತಕ್ಕೇ ಇನ್ನೂ ಸ್ವಾತಂತ್ರ್ಯ ಬಂದಿರಲಿಲ್ಲ. ಸಾಕಷ್ಟು ಸಮಸ್ಯೆಗಳು, ಬಡತನ ಇಲ್ಲಿ ತಾಂಡವವಾಡುತ್ತಿತ್ತು. ಆದರೂ ಪೋಲಿಷ್ ನಿರಾಶ್ರಿತರನ್ನು ಸ್ವೀಕರಿಸಿದ ಮೊದಲ ದೇಶ ಭಾರತವಾಗಿತ್ತು.


ಒಂದು ಕೈಯಲ್ಲಿ ಖಡ್ಗ, ಮತ್ತೊಂದು ಕೈಯಲ್ಲಿ ಗುರಾಣಿ ಹಿಡಿದ ಸ್ಫುರದ್ರೂಪಿಣಿ ಮತ್ಸ್ಯಕನ್ಯೆ, ವಾರ್ಸಾ ನಗರದ ಲಾಂಛನ

## ಮಹಾತ್ಮ ಗಾಂಧಿ

ವಾರ್ಸಾ ಯೂನಿವರ್ಸಿಟಿ ಲೈಬ್ರರಿಯಲ್ಲಿ ಮಹಾತ್ಮ ಗಾಂಧಿ ಪ್ರತಿಮೆ ಇದೆ. ಮಹಾತ್ಮ ಗಾಂಧಿ 150ನೇ ಜಯಂತಿಯ ಸವಿನೆನಪಿನಲ್ಲಿ ಪೋಲೆಂಡ್ 2019ರಲ್ಲಿ ಗಾಂಧಿ ಸ್ಮರಣಾರ್ಥ ಅಂಚೆಚೀಟಿಯನ್ನು ಬಿಡುಗಡೆ ಮಾಡಿತು.

ವಾರ್ಸಾದ ಒಂದು ಬೀದಿಗೆ 'ಮಹಾತ್ಮ ಗಾಂಧಿಯಗೋ' (Mahatmy Gandhiego) ಎಂದು ಹೆಸರಿಸಲಾಗಿದೆ. ಅಷ್ಟೇ ಅಲ್ಲ, ಜವಾಹರಲಾಲ್ ನೆಹರು, ಇಂದಿರಾ ಗಾಂಧಿ ಮತ್ತು ರವೀಂದ್ರನಾಥ್ ಟ್ಯಾಗೋರ್ ಅವರ ಹೆಸರಿನ ಬೀದಿಗಳೂ ಇಲ್ಲಿವೆ.

ಭೌತ ಮತ್ತು ರಸಾಯನ ಶಾಸ್ತ್ರ ಎರಡರಲ್ಲೂ ನೊಬೆಲ್ ಪಾರಿತೋಷಕ ಗಳಿಸಿದ ಮೊದಲ ಮಹಿಳೆ ಮೇರಿ ಕ್ಯೂರಿ. 1867 ರಲ್ಲಿ ವಾರ್ಸಾದಲ್ಲಿ ಹುಟ್ಟಿದ ಈಕೆ ತನ್ನ 24 ನೇ ವಯಸ್ಸಿನಲ್ಲಿ ಪ್ಯಾರಿಸ್‌ಗೆ ವಲಸೆ ಹೋದರು. 1903 ರಲ್ಲಿ ಭೌತಶಾಸ್ತ್ರದಲ್ಲಿ, 1911 ರಲ್ಲಿ ರಸಾಯನಶಾಸ್ತ್ರದಲ್ಲಿ ನೊಬೆಲ್ ಪ್ರಶಸ್ತಿ ಗಳಿಸಿದರು. ತನ್ನ ಮಾತೃಭೂಮಿಯ ಸವಿನೆನಪಿಗಾಗಿ ತಾನು ಕಂಡು ಹಿಡಿದ ಮೂಲಧಾತುವಿನ ಹೆಸರನ್ನು ಪೊಲೋನಿಯಮ್ ಎಂದು ಕರೆದರು. ವಾರ್ಸಾದ ನಂಬರ್ 16 ಫ್ರೆಟ್ಟಾ ಬೀದಿಯಲ್ಲಿರುವ ಮೇರಿ ಕ್ಯೂರಿ ಹುಟ್ಟಿದ ಮನೆಯನ್ನು ಈಗ ಮ್ಯೂಸಿಯಂ ಮಾಡಿದ್ದಾರೆ. ವಿಸ್ತುಲಾ ನದಿಯ ದಡದಲ್ಲಿ ಮೇರಿ ಕ್ಯೂರಿಯ ಸುಂದರವಾದ ಕಂಚಿನ ಪ್ರತಿಮೆಯಿದೆ.

ಪ್ರವಾಸ

## ಪ್ರವಾಸಿ ಆಕರ್ಷಣೆಗಳು

ವಾರ್ಸಾ ನಗರದ ಮಧ್ಯದಲ್ಲಿ ಹರಿಯುವ ವಿಸ್ತುಲಾ ನದಿ ನಗರದ ಸೌಂದರ್ಯವನ್ನು ಹೆಚ್ಚಿಸಿದೆ. ನದಿಯ ದಂಡೆಯಲ್ಲಿ ವಾಯುವಿಹಾರಕ್ಕೆ ಮತ್ತು ಸೈಕ್ಲಿಂಗ್‌ಗೆ ರಸ್ತೆಗಳನ್ನು ಮಾಡಲಾಗಿದೆ. ಇಲ್ಲಿ ಅನೇಕ ಸಂಗ್ರಹಾಲಯಗಳು, ಚಾರಿತ್ರಿಕ ಅರಮನೆಗಳು, ಉದ್ಯಾನಗಳು ಮತ್ತು ಸಾಂಸ್ಕೃತಿಕ ಸ್ಥಳಗಳಿವೆ. ವಾರ್ಸಾ ಪ್ರಖ್ಯಾತ ಸಂಗೀತಗಾರ ಫ್ರೆಡರಿಕ್ ಚೋಪಿನ್ ನ ಹುಟ್ಟೂರಾಗಿದೆ.

ವಾರ್ಸಾದ ಅತಿ ಎತ್ತರದ ಮತ್ತು ಭವ್ಯವಾದ ಕಟ್ಟಡಗಳಲ್ಲಿ ಒಂದಾದ ಪ್ಯಾಲೇಸ್ ಆಫ್ ಕಲ್ಚರ್ ಆ್ಯಂಡ್ ಸೈನ್ಸ್ ನಗರದ ಲಾಂಛನದಂತಿದ್ದು, ಇದರ ಗೋಪುರ ನಗರದ ಬಹುತೇಕ ಎಲ್ಲ ಸ್ಥಳಗಳಿಂದಲೂ ಕಾಣಿಸುತ್ತದೆ. ರಷ್ಯಾಗೆ ಪೋಲೆಂಡ್ ರಾಜಕೀಯ ಮತ್ತು ಭೌಗೋಳಿಕವಾಗಿ ಬಹಳ ಮುಖ್ಯ ಎಂದು ವಿಶ್ವಕ್ಕೆ ಪ್ರದರ್ಶಿಸಲು 1952 ರಲ್ಲಿ ಸ್ಟಾಲಿನ್ ಕೊಟ್ಟ ಕೊಡುಗೆ ಇದು.

ಯುನೆಸ್ಕೋ ವಿಶ್ವ ಪರಂಪರೆಯ ತಾಣವಿದು. ಇಲ್ಲಿ ಸುಂದರವಾದ ಮಾರುಕಟ್ಟೆ ಸ್ಥಳ, ಪ್ರಾಚೀನ ಕಟ್ಟಡಗಳು, ಬಣ್ಣಬಣ್ಣದ ಮನೆಗಳು, ಮತ್ತು ರಾಜಮನೆತನದ ಅರಮನೆಗಳಿವೆ. ವಾರ್ಸಾದ ಹೃದಯಭಾಗದಲ್ಲಿರುವ ಈ 'ಓಲ್ಡ್ ಟೌನ್' ನ ಚೌಕವು ಬಣ್ಣ-ಬಣ್ಣದ ಮನೆಗಳು, ಕೆಫೆಗಳು, ಮತ್ತು ರೆಸ್ಟೋರೆಂಟ್‌ಗಳಿಂದ ಸುತ್ತುವರಿದಿದೆ.

16ನೇ ಶತಮಾನದಿಂದ 18ನೇ ಶತಮಾನದವರೆಗೆ ಪೋಲಿಷ್ ರಾಜರ ನಿವಾಸವಾಗಿದ್ದ ರಾಯಲ್ ಕ್ಯಾಸಲ್ ಈಗ ಮ್ಯೂಸಿಯಂ ಆಗಿದೆ. ಪೋಲೆಂಡಿನ ಬಾರೋಕ್ ಶೈಲಿಯ ಪ್ರಸಿದ್ಧ ರಾಜಮಹಲ್ ವಿಲನೌ ಅರಮನೆ, ತನ್ನ ಐತಿಹಾಸಿಕ, ಕಲಾತ್ಮಕ ಹಾಗೂ ಸಾಂಸ್ಕೃತಿಕ ಮಹತ್ವದಿಂದ ಆಕರ್ಷಣೆಯ ಕೇಂದ್ರವಾಗಿದೆ.

---

ADVERTORIAL

# ಪುಸ್ತಕಗಳೇ ನನ್ನ ಮೊದಲ ಪಾಸ್‌ಪೋರ್ಟ್ ಆದಾಗ


ಸುನೀಲ ಪಾಟೀಲ್
Founder, CPO & CNO
Veena World
sunila@veenaworld.com

ನಾನು ಯುನೈಟೆಡ್ ಕಿಂಗ್‌ಡಮ್‌ಗೆ (ಯುಕೆ) 1999ರಲ್ಲಿ ಮೊದಲ ಬಾರಿಗೆ ಭೇಟಿ ನೀಡಿದಾಗ ಅದು ನನಗೆ ಏನೋ ಒಂದು ತರಹ ಪರಿಚಿತ ದೇಶವೇನೋ ಎನ್ನಿಸಿತು– ನಾನು ಈ ಹಿಂದೆಯೇ ಭೇಟಿ ನೀಡಿರುವ ಸ್ಥಳವೇನೋ ಎಂಬಂತೆ. ಅಲ್ಲಿನ ಕಟ್ಟಡಗಳ ವಾಸ್ತುಶಿಲ್ಪ ಅಥವಾ ಅಲ್ಲಿ ನೆಲಸಿರುವ ದಕ್ಷಿಣ ಏಷ್ಯಾ ಸಮುದಾಯವಷ್ಟೇ ಅದಕ್ಕೆ ಕಾರಣವಾಗಿರಲಿಲ್ಲ. ಅದಕ್ಕಿಂತ ಹೆಚ್ಚು ಆಳವಾದ ಭಾವನೆ ಅದಾಗಿತ್ತು– ತಕ್ಷಣ ನನಗೆ ಹೊಳೆಯಿತು: ನಾನು ಅಲ್ಲಿಗೆ ವಾಸ್ತವದಲ್ಲಿ ಭೇಟಿ ನೀಡುವ ಮುನ್ನ ಪುಸ್ತಕಗಳ ಮೂಲಕ ಅದಾಗಲೇ ಪಯಣಿಸಿಬಿಟ್ಟಿದ್ದೆ.

ನಾನು ಹದಿಹರೆಯದಲ್ಲಿದ್ದಾಗ ಮುಂಬೈನ ಬ್ರಿಟಿಷ್ ಲೈಬ್ರರಿಯಲ್ಲಿ ಹೆಸರಾಂತ ಬ್ರಿಟಿಷ್ ಲೇಖಕ ಪಿ.ಜಿ.ವುಡ್‌ಹೌಸ್ ಅವರ ಕೃತಿಗಳನ್ನು ಓದುತ್ತಾ ಅದೆಷ್ಟೋ ಶನಿವಾರಗಳನ್ನು ಕಳೆದಿದ್ದೆ. ನನ್ನ ಗೆಳೆಯರು ಹಾಗೂ ನಾನು ಅಲ್ಲಿ ಅವರ ಜೀವ್ಸ್ ಅಂಡ್ ಬ್ಲ್ಯಾಂಡಿಗ್ಸ್ ಕ್ಯಾಸಲ್ ಬುಕ್ಸ್ ಹುಡುಕಿ ಓದುತ್ತಾ ನಮ್ಮನ್ನು ನಾವೇ ಮರೆತುಬಿಡುತ್ತಿದ್ದೆವು. ನಂತರ, ನಾನು ಅಲ್ಲಿಗೆ ಭೇಟಿ ಕೊಟ್ಟು ವಾಸ್ತವವಾಗಿ ಅಲ್ಲಿನ ಕಲ್ಲುಹಾಸಿನ ರಸ್ತೆಗಳಲ್ಲಿ ನಡೆಯುತ್ತಾ ಸುತ್ತಲ ಅಂಗಡಿಮುಂಗಟ್ಟುಗಳು ಹಾಗೂ ಸ್ಟೇಷನ್‌ಗಳನ್ನು ನೋಡುತ್ತಿರುವಾಗ ಅವೆಲ್ಲಾ ನಾನು ಮುಂಚೆ ಅದೆಷ್ಟೋ ಸಲ ಕಲ್ಪಿಸಿಕೊಂಡಿದ್ದ ಸ್ಥಳಗಳೇನೋ ಎಂಬ ಭಾವನೆ ನನ್ನಲ್ಲಿ ಉಂಟಾಯಿತು.

ಹೋದ ವರ್ಷ ನನ್ನ ಶಾಲಾ ಗೆಳತಿ ಮಹಾಲಕ್ಷ್ಮಿ ಹಾಗೂ ನಾನು ವುಡ್‌ಹೌಸ್ ಅವರ ಲಂಡನ್ ನಿವಾಸವಾಗಿದ್ದ 17 ಡನ್‌ರೇವನ್ ಸ್ಟ್ರೀಟ್ ಮುಂದೆ ಶಾಲಾಮಕ್ಕಳಂತೆ ನಗೆತುಳುಕಿಸುತ್ತಾ ನಿಂತಾಗ ಈ ಕನಸು ಮತ್ತೊಂದು ಎತ್ತರಕ್ಕೆ ಏರಿತು. ಮೇಫೇರ್, ಹೈಡ್ ಪಾರ್ಕ್ ಹಾಗೂ ಬೆಲ್ಗ್ರೇವಿಯಾದ ಪ್ರಶಾಂತವಾದ ಬೀದಿಗಳಲ್ಲಿ ನಡೆದಾಡುತ್ತಿರುವಾಗ ವುಡ್‌ಹೌಸ್ ಅವನ್ನು ತಮ್ಮ ಕೃತಿಗಳಲ್ಲಿ ನಮಗಾಗಿಯೇ ವರ್ಣಿಸಿದ್ದಾರೇನೋ ಎನ್ನಿಸಿಬಿಟ್ಟಿತು.

ಇಂದಿನ ದಿನಗಳಲ್ಲಿ ಬಹಳಷ್ಟು ಜನರು ಪುಸ್ತಕಗಳಿಗಿಂತ ಹೆಚ್ಚಾಗಿ ಮೊಬೈಲ್, ಕಂಪ್ಯೂಟರ್, ಲ್ಯಾಪ್‌ಟಾಪ್, ಟಿ.ವಿ. ಹೀಗೆ ಪರದೆ ನೋಡುತ್ತಲೇ ಸಮಯ ಕಳೆಯುತ್ತಾರೆ. ಆದರೆ, ನೀವು ಭೇಟಿ ನೀಡಿರದ ಸ್ಥಳದ ಬಗ್ಗೆ ಪುಸ್ತಕ ಓದುವುದು ಈಗಲೂ ಮಾಯೆಯಂತಹ ಅನುಭವ ನೀಡುತ್ತದೆ: ಪುಸ್ತಕ ಓದುವಾಗ ಮೊದಲಿಗೆ ನಿಮ್ಮ ಕಲ್ಪನೆಯು ಸ್ಥಳವನ್ನು ಸೃಷ್ಟಿಸುತ್ತದೆ; ಈ ಮೂಲಕ, ನೀವು ವಾಸ್ತವ ಬದುಕಿನಲ್ಲಿ ಆ ಸ್ಥಳವನ್ನು ನೋಡುವ ಅದೆಷ್ಟೋ ಮುಂಚೆಯೇ ನಿಮ್ಮ ಮನಸ್ಸಿನಲ್ಲಿ ನೋಡಿಬಿಟ್ಟಿರುತ್ತೀರಿ.

ಇಲ್ಲಿ ಈ ವಾರ ನಮ್ಮನ್ನು ಪರ್ಯಟನೆ ಮಾಡಲು ಉತ್ತೇಜಿಸುವ ಪುಸ್ತಕಗಳ ಬಗ್ಗೆ, ಹಾಗೆಯೇ, ನಮ್ಮ ಪುಸ್ತಕ ಓದುವ ಅಭಿರುಚಿಯನ್ನು ಮತ್ತಷ್ಟು ಹೆಚ್ಚಿಸುವ ಪ್ರಯಾಣಗಳ ಬಗ್ಗೆ ಗಮನಹರಿಸೋಣ.

**ಸ್ಕಾಟ್ಲೆಂಡಿನಲ್ಲಿ ನನ್ನ ಮಗಳೊಂದಿಗೆ**


ನನ್ನ ಹದಿವಯಸ್ಸಿನಲ್ಲಿ ಕನಸುಗಳ ಬಣ್ಣ ತುಂಬಿದ್ದು ವುಡ್‌ಹೌಸ್ ಆದರೆ, ನನ್ನ ಮಗಳು ಸಾರಾಳ ಬಾಲ್ಯದ ಕಲ್ಪನೆಗೆ ರೆಕ್ಕೆ ಕಟ್ಟಿದ್ದು ಹ್ಯಾರಿಪಾಟರ್. ಅವಳು ಆ ದೊಡ್ಡ ಪುಸ್ತಕಗಳನ್ನು ಬಿಗಿದಪ್ಪಿಕೊಂಡು 'ಹಾಗ್ವಾರ್ಟ್' ಪ್ರಪಂಚದಲ್ಲೇ ಮುಳುಗಿಬಿಡುತ್ತಿದ್ದುದು ನನಗೆ ಈಗಲೂ ಚೆನ್ನಾಗಿ ನೆನಪಿದೆ. ಹೀಗಾಗಿ, ನಾವಿಬ್ಬರೂ ಜೊತೆಯಾಗಿ ಸ್ಕಾಟ್ಲೆಂಡ್‌ಗೆ ತೆರಳಿದಾಗ ಅದು ಪ್ರವಾಸವಷ್ಟೇ ಆಗಿರಲಿಲ್ಲ. ಇಬ್ಬರಿಗೂ ಆ ಬಾಲ್ಯದ ನೆನಪುಗಳನ್ನು ಮೆಲುಕು ಹಾಕುವ ಅಮೂಲ್ಯ ಅವಕಾಶ ಕಲ್ಪಿಸಿದ ಸಂದರ್ಭವಾಗಿತ್ತು.

ಲೇಖಕ ಜೆ.ಕೆ.ರೋಲಿಂಗ್, ಹ್ಯಾರಿಪಾಟರ್ ಕೃತಿಯ ಮೊದಲ ಅಧ್ಯಾಯಗಳನ್ನು ಕುಳಿತು ಬರೆದ ಎಡಿನ್‌ಬ್ರಾದಲ್ಲಿನ ಕೆಫೆಗಳಲ್ಲಿ ಕುಳಿತೆವು. ಹ್ಯಾರಿಪ್ಯಾಟರ್‌ನಲ್ಲಿ ಚಿತ್ರಿತವಾಗಿರುವ ಮಾಯೆಯಂತಹ ಶಾಪಿಂಗ್ ರಸ್ತೆಯಾದ 'ಡಯಾಗನ್ ಅಲ್ಲಿ'ಗೆ ಮೂಲಪ್ರೇರಣೆಯಾದ ವಿಕ್ಟೋರಿಯಾ ಸ್ಟ್ರೀಟ್‌ನಲ್ಲಿ ಅಡ್ಡಾಡಿದೆವು. ನಂತರ, ಗ್ಲೆನ್‌ಫಿನ್ನನ್ ವಯಾಡಕ್ಟ್‌ನಲ್ಲಿ ನಿಂತು ಉಗಿಬಂಡಿಯೊಂದು ಹಾಗ್ವಾರ್ಟ್ ಎಕ್ಸ್‌ಪ್ರೆಸ್‌ನಂತೆ ತಿರುವಿನಲ್ಲಿ ಸಾಗುವಾಗ ನಾವಿಬ್ಬರೂ ಒಟ್ಟಾಗಿ ಸಮ್ಮೋಹಕ ಕ್ಷಣಗಳನ್ನು ಅನುಭವಿಸಿದೆವು.

**ಹೈಲ್ಯಾಂಡ್ಸ್‌ನ ಕಾಲಾತೀತ ಸೊಬಗು**

ಈ ಪ್ರವಾಸದ ವೇಳೆ, ನಾನು ಲೇಖಕಿ ಡಯಾನಾ ಗ್ಯಾಬಾಲ್ಡನ್‌ಳ, ಈಗ ಟಿ.ವಿ. ಸರಣಿಯಾಗಿ ಜನಪ್ರಿಯವಾಗಿರುವ ಔಟ್‌ಲ್ಯಾಂಡರ್ ಕಾದಂಬರಿಗಳನ್ನು ಓದಲು ಶುರುಮಾಡಿದೆ. ಎರಡನೇ ವಿಶ್ವಯುದ್ಧ ಹಾಗೂ 18ನೇ ಶತಮಾನದ ಸ್ಕಾಟ್ಲೆಂಡಿನ ವಂಶಾವಳಿಗಳು, ಇತಿಹಾಸ ಹಾಗೂ ಪ್ರಣಯಗಳಿಂದ ಕೂಡಿದ ಕಥೆ ಇದಾಗಿದೆ. ನಳನಳಿಸುವ ಸೊಬಗಿನಿಂದ ಮಂತ್ರಮುಗ್ಧಗೊಳಿಸುವ ಸ್ಕಾಟಿಷ್ ಹೈಲ್ಯಾಂಡ್ಸ್ ಯಥಾವತ್ ಪುಸ್ತಕದಲ್ಲಿ ವರ್ಣಿಸಿದ ರೀತಿಯಲ್ಲೇ ಇದೆ ಎನ್ನಿಸಿತು.

ಜೇಕಬೈಟ್ ದಂಗೆಯು ಪರಿಸಮಾಪ್ತಿಗೊಂಡ ಕಲ್ಲೊಡನ್ ಬ್ಯಾಟಲ್ ಫೀಲ್ಡ್‌ಗೆ ಭೇಟಿ ನೀಡುವುದು ಯಾರಿಗಾದರೂ ಭಾವನಾತ್ಮಕ ಗಳಿಗೆಯಾಗಿರುತ್ತದೆ. ಪ್ರಶಾಂತವಾದ ಬೀಳು ಬಯಲುಗಳು, ಅಬ್ಬರಿಸುವ ಕಡಲದಂಡೆಗಳು, ಚೆಲುವಿನ ಕಾಲ್ನಡಿಗೆ ಜಾಡುಗಳು,





ಪೂರ್ವಜರ ಇತಿಹಾಸದ ಅನ್ವೇಷಣೆಗೆ ಅನುವು ಮಾಡಿಕೊಡುವ ಮಾರ್ಗಗಳು ಹಾಗೂ ಸುಮಧುರ ಧಾವಂತವನ್ನು ಮರೆಸುವ ಭೂಪ್ರದೇಶಗಳೊಂದಿಗೆ ಕೂಡಿದ ಸ್ಕಾಟ್ಲೆಂಡ್ ನನ್ನಮಟ್ಟಿಗೆ ಎಂದಿಗೂ ಅಲೌಕಿಕ ನೆಲವಾಗಿದೆ.

**ಪ್ರವಾಸ ಸಲಹೆಗಳು**

ಮೇಫೇರ್ ಮತ್ತು ಬೆಲ್ಗ್ರೇವಿಯಾದಲ್ಲಿ ಗೈಡ್‌ನ ನೆರವಿನೊಂದಿಗೆ ವುಡ್‌ಹೌಸ್‌ನನ್ನು ದರ್ಶಿಸಿ.

ಎಡಿನ್‌ಬ್ರಾದಲ್ಲಿ ಹ್ಯಾರಿಪಾಟರ್ ಟೂರ್ ಕೈಗೊಳ್ಳಿ ಮತ್ತು ಜೆಕೊಬೈಟ್ ಸ್ಟೀಮ್ ರೈಲಿನ ಸವಾರಿ ಮಾಡಿ.

ಔಟ್‌ಲ್ಯಾಂಡರ್ ಅಭಿಮಾನಿಗಳು ಇಷ್ಟಪಡುವಂಥ ಇನ್ವರ್ನೆಸ್‌ನಲ್ಲಿ ವಾಸ್ತವ್ಯವನ್ನು ಹೂಡಿ ಡೂನ್ ಕ್ಯಾಸಲ್ ಮತ್ತು ಗ್ಲೆನ್ ಕೋಗೆ ಭೇಟಿ ನೀಡಿ.

**ಮೊದಲು ಪರ್ಯಟನೆ, ನಂತರ ಪುಸ್ತಕ**

ಕೆಲವೊಮ್ಮೆ ಪುಸ್ತಕಗಳಲ್ಲಿ ಓದುವುದಕ್ಕಿಂತ ಮುಂಚೆಯೇ ಆ ಸ್ಥಳಗಳಿಗೆ ಪ್ರಯಾಣಿಸಿರುತ್ತೇವೆ. ನಂತರ, ಆ ಸ್ಥಳಗಳ ಕುರಿತಾದ ವಿವರಗಳಿರುವ ಪುಸ್ತಕಗಳು ನಮಗೆ ಕಾಣಸಿಗುತ್ತವೆ.

ಉದಾಹರಣೆಗೆ, ನ್ಯೂಝಿಲೆಂಡ್ ನೋಡೋಣ. ಅಲ್ಲಿನ ಸದರ್ನ್ ಆಲ್ಪ್ಸ್, ಹಿಮನದಿಗಳು, ಆಳವಾದ ಸಮುದ್ರ ಕೊಲ್ಲಿಗಳು, ಟೆಕಪೊ ಸರೋವರ ಇವುಗಳಿಂದ ಅಲ್ಲಿ ಪರವಶವಾಗದವರೇ ಇಲ್ಲ. ಲೇಖಕ ಟೋಲ್ಕಿಯನ್ ತನ್ನ ಮನಸ್ಸಿನಲ್ಲಿ ನ್ಯೂಝಿಲೆಂಡ್‌ಅನ್ನು ಇರಿಸಿಕೊಂಡು ಕೃತಿ ರಚಿಸದಿದ್ದರೂ ಪೀಟರ್ ಜಾಕ್ಸನ್ 'ದಿ ಲಾರ್ಡ್ ಆಫ್ ದಿ ರಿಂಗ್ಸ್' ಅನ್ನು ಯಾವ ಕಾರಣಕ್ಕೆ ಅಲ್ಲಿ ಚಿತ್ರೀಕರಿಸಿದ ಎಂಬುದು ನಿಜವಾಗಿ ನೋಡಿದಾಗ ಥಟ್ಟನೆ ಅರ್ಥವಾಗುತ್ತದೆ. ಇದೇ ಕಾರಣಕ್ಕೆ ಇಲ್ಲಿನ ನೈಸರ್ಗಿಕ ಪರಿಸರವು ಭೂಪ್ರದೇಶಗಳು ಪ್ರಯಾಣದಲ್ಲಿ ಅಸಾಧಾರಣ ಜನರ ಪಾಲಿಗೆ ಕಥೆಯ 'ಮಿಡ್ಲ್-ಅರ್ಥ್' ಪ್ರವಾಸ ಆಗಿದೆ.

ಮಟಮಾಟದಲ್ಲಿ ಹಾಬಿಟನ್‌ಗೆ ಭೇಟಿ ನೀಡಿ ಮತ್ತು ಸಾಹಸಕ್ಕಾಗಿ ಟೊಂಗರಿರೊ ಆಲ್ಪೈನ್ ಕ್ರಾಸಿಂಗ್‌ನಲ್ಲಿ ಟ್ರೆಕ್ಕಿಂಗ್ ಮಾಡಿ.

**ಈಟ್, ಪ್ರೇ, ಲವ್–ಪುಸ್ತಕವು ಪರ್ಯಟನೆಯನ್ನು ಧ್ವನಿಸಿದಾಗ**

ಲೇಖಕಿ ಎಲಿಜಬೆತ್ ಗಿಲ್ಬರ್ಟ್‌ರ 'ಈಟ್, ಪ್ರೇ, ಲವ್' ಪುಸ್ತಕವನ್ನು ಓದುವ ಬಹಳಷ್ಟು ಮುಂಚೆಯೇ ನಾನು ಪಾಸ್ತಾ ಹಾಗೂ ಜೆಲಾಟೊ ಸವಿಯುತ್ತಾ ರೋಮ್‌ನಲ್ಲಿ ಅಡ್ಡಾಡಿದ್ದೆ, ಉಬುಡ್‌ನಲ್ಲಿ ದೇವಾಲಯಗಳಿಗೆ ಎಡತಾಕಿದ್ದೆ ಹಾಗೂ ಬಾಲಿಯಲ್ಲಿ ಪ್ರಶಾಂತ ಪರಿಸರಕ್ಕೆ ಸಾಕ್ಷಿಯಾಗಿದ್ದೆ. ಕೊನೆಗೆ ಅದನ್ನು ನಾನು ಓದಿದಾಗ ರೋಮ್‌ನ ಆಹ್ಲಾದಗಳು ಹಾಗೂ ಬಾಲಿಯ ಪ್ರಶಾಂತತೆ ಆವರಿಸಿದ ಅಧ್ಯಾತ್ಮವು ನನಗೆ ಅದಾಗಲೇ ಪರಿಚಿತವೇನೋ ಎನ್ನಿಸಿತು– ಅಂದರೆ, ನನ್ನದೇ ಪ್ರವಾಸಗಳ ಡೈರಿಯನ್ನು ಓದುತ್ತಿರುವಂತೆ ಭಾಸವಾಯಿತು.

ಉಬುಡ್‌ನಲ್ಲಿ ಮೆಟ್ಟಿಲುಗಳಂತೆ ಇರುವ ಭತ್ತದ ಗದ್ದೆಯ ಪಾತಿಗಳು, ದೈನಂದಿನ ಪೂಜಾ ಸಮರ್ಪಣೆ ಮತ್ತು ಹಿಂದೂ ಹಾಗೂ ಬಾಲಿ ಪರಂಪರೆಗಳ ಸಂಯೋಜನೆಯು ಗಿಲ್ಬರ್ಟ್ ಪುಸ್ತಕದ ಆತ್ಮಾವಲೋಕನದ ಹಾಗೂ ಚಿಕಿತ್ಸಕ ಧ್ವನಿಯಲ್ಲಿ ಅದೆಷ್ಟು ನಿಖರವಾಗಿ ಬಿಂಬಿತವಾಗಿದೆ ಎಂಬುದು ಅಚ್ಚರಿ ಮೂಡಿಸುತ್ತದೆ.

ಟ್ರಾಸೇವೆರೇಯಲ್ಲಿ ಪಾಸ್ತಾ ಕಲಿಕಾ ತರಗತಿಗೆ ಸೇರಿ.

ರೋಮ್‌ನಾದ್ಯಂತ ಜೆಲಾಟೊ ಶಾಪ್‌ಗಳಲ್ಲಿ ಸವಿದುನೋಡಿ.

ಬಾಲಿಯಲ್ಲಿ ಮೆಟ್ಟಿಲುಗಳಂತಿರುವ ಭತ್ತದ ಗದ್ದೆಗಳ ಜಾಡಿನಲ್ಲಿ ನಡೆದಾಡಿ ಹಾಗೂ ಸಾಂಪ್ರದಾಯಿಕ ಶುದ್ಧೀಕರಣ ಧಾರ್ಮಿಕ ವಿಧಿಗಳನ್ನು ನೋಡಿ.

ಭಾರತದಲ್ಲಿ ನಿಮಗೆ ಎಷ್ಟು ಸಾಧ್ಯವೋ ಅಷ್ಟು ಪವಿತ್ರ ಕ್ಷೇತ್ರಗಳನ್ನು ಅನ್ವೇಷಿಸಿ. ಇಲ್ಲಿ ಇಡೀ ಜೀವಿತಾವಧಿ ನೋಡಿದರೂ ಮುಗಿಯದಷ್ಟು ಧಾರ್ಮಿಕ ಸ್ಥಳಗಳಿವೆ ಎಂಬುದು ನಿಮಗೆ ಗೊತ್ತಿರಬಹುದಲ್ಲವೆ?

**ಮೊರೊಕ್ಕೊ ಮತ್ತು ದಿ ಆಲ್ ಕೆಮಿಸ್ಟ್**

ಮೊರೊಕ್ಕೊ ನನ್ನನ್ನು ಬೆರಗುಗೊಳಿಸಿತು. ಅದು ಸೊಬಗಿನ ದೇಶ ಎಂದು ನಾನು ಎಣಿಸಿದ್ದೆ ಆದರೆ, ಆ ನಾಡು ಅದಕ್ಕೂ ಮಿಗಿಲಾದುದು. ಅಲ್ಲಿನ ನೀಲಿ ಬಣ್ಣದ ಕಣಿವೆಯ ಪಟ್ಟಣಗಳು, ಬಂಗಾರದ ಹೊಳಪಿನ ಮರಳುಗಾಡುಗಳು, ಚಲನಶೀಲ ಮಾರುಕಟ್ಟೆಗಳು ಹಾಗೂ ಹೃದಯವನ್ನು ತುಂಬುವ ಆಪ್ತತೆ ಅಚ್ಚಳಿಯದೆ ಮನಸ್ಸಿನಲ್ಲಿ ಉಳಿಯುತ್ತವೆ. ನಾನು ವಾಪಸ್ಸು ಬಂದು 'ದಿ ಆಲ್ ಕೆಮಿಸ್ಟ್' ಅನ್ನು ಪುನಃ ಓದಿದಾಗ ಕಥಾನಾಯಕ ಸ್ಯಾಂಟಿಯಾಗೊ ಪಯಣವು ಇನ್ನಷ್ಟು ವಾಸ್ತವ ಎನ್ನಿಸಿತು. ಮರಳ ದಿಣ್ಣೆಗಳು, ಮಾರುಕಟ್ಟೆಯ ಸದ್ದುಗದ್ದಲಗಳು ಹಾಗೂ ಕಥೆಯ ಸ್ಫೂರ್ತಿ ಇವೆಲ್ಲವೂ ಇನ್ನಷ್ಟು ಸ್ಫುಟವಾಗಿ ಕಣ್ಣಮುಂದೆ ಮೂಡಿದವು.

ಶೆಫ್ಚ್ಯಾವೆನ್‌ದಲ್ಲಿ ನೀಲಿ ವರ್ಣದಿಂದ ಕಂಗೊಳಿಸುವ ರಸ್ತೆಗಳನ್ನು ಅನ್ವೇಷಿಸಿ.

ಸಹಾರಾದಲ್ಲಿ ರಾತ್ರಿ ತಂಗಿದ್ದು ಚುಕ್ಕಿಗಳಿಂದ ಮಿನುಗುವ ಆಗಸವನ್ನು ಕಣ್ತುಂಬಿಕೊಳ್ಳಿ.

**ಮೌಂಟ್ ಕೆನ್ಯಾ– ಸಾಹಸದ ಸವಾಲು**

ನನ್ನ ಸಹೋದ್ಯೋಗಿ ಪ್ರಶಾಂತ್ ಇತ್ತೀಚೆಗೆ ನನಗೆ 'ನೊ ಪಿಕ್ನಿಕ್ ಆನ್ ಮೌಂಟ್ ಕೆನ್ಯಾ' ಪುಸ್ತಕ ನೀಡಿದರು. ಇದು ಪರ್ವತವನ್ನು ಏರಬೇಕೆಂಬ ತೀವ್ರ ಸೆಳೆತಕ್ಕೊಳಗಾಗಿ ಎರಡನೇ ವಿಶ್ವಯುದ್ಧದ ಶಿಬಿರದಿಂದ ಪರಾರಿಯಾದ ಇಟಲಿಯ ಕೈದಿಗಳ ಬಗೆಗಿನ ಕಥೆಯಾಗಿದೆ. ನಾನು ಇದನ್ನು ಇನ್ನೂ ಓದಿಲ್ಲವಾದರೂ ಅದರ ಕಥಾವಸ್ತುವು ನನ್ನ ಆಸಕ್ತಿಯನ್ನು ಸೆಳೆದುಬಿಟ್ಟಿದೆ.

ನಾನು 2016ರಲ್ಲಿ ಟಾಂಜನಿಯಾದ ಕಿಲಿಮಾಂಜಾರೋದ ಚಾರಣ ಮಾಡಿದೆ. ಪರ್ವತಗಳು ಏಕೆ ಜನರನ್ನು ಸೆಳೆಯುತ್ತವೆ ಎಂಬುದು ನನಗೆ ಅರ್ಥವಾಗಿದ್ದು ಆಗಲೇ. ಅವು ನಮಗೆ ಸವಾಲೊಡ್ಡುತ್ತವೆ, ವಿನೀತರನ್ನಾಗಿಸುತ್ತವೆ ಹಾಗೂ ನಾವು ಸಣ್ಣವರಾದರೂ ನಮ್ಮೊಳಗಿರುವ ಗಟ್ಟಿತನದ ಹಿರಿಮೆಯನ್ನು ನಮಗೆ ಅರ್ಥ ಮಾಡಿಸುತ್ತವೆ. ಪರ್ವತಗಳು ತೀವ್ರವಾಗಿ ಸೆಳೆಯುತ್ತವೆ ಎನ್ನುವುದು ನಿಜವೇ ಸರಿ.

ನೀವು ಮೌಂಟ್ ಕೆನ್ಯಾವನ್ನು ಏರದಿದ್ದರೂ ಮಸಾಯ್ ಮಾರಾ ಬಯಲು ಪ್ರದೇಶದಲ್ಲಿ ಪಯಣಿಸುವಾಗ ಅದರ ಸೊಬಗನ್ನು ಮೆಚ್ಚಬಹುದು.

**ಅರೌಂಡ್ ದಿ ವರ್ಲ್ ಇನ್ 80 ಡೇಸ್– ಮುಗಿಯದ ಪಯಣ**

ಲೇಖಕ ಜೂಲ್ಸ್‌ವರ್ನ್ ಬಗ್ಗೆ ಉಲ್ಲೇಖಿಸದಿದ್ದರೆ ಅಪಚಾರವಾದೀತು. ಅವರ 'ಅರೌಂಡ್ ದಿ ವರ್ಲ್ಡ್ ಇನ್ 80 ಡೇಸ್' ಬರಿಯ ಪುಸ್ತಕವಲ್ಲ. ಅದು ಓದುಗರನ್ನು ಪರ್ಯಟನೆಯ ಅನ್ವೇಷಣೆಗೆ ಪ್ರೇರೇಪಿಸುವ ಕೃತಿ. ಲಂಡನ್‌ನ ಮಂಜಿನಿಂದ ಹಿಡಿದು ಭಾರತದ ವೈವಿಧ್ಯಮಯ ಸಂಸ್ಕೃತಿಯವರೆಗೆ, ಹಡಗಿನಿಂದ ಹಿಡಿದು ರೈಲುಗಳವರೆಗೆ ಅದು ಪರ್ಯಟನೆಯನ್ನು, ಕುತೂಹಲವನ್ನು ಹಾಗೂ ಮುನ್ನಡೆಯುತ್ತಾ ಸಾಗುವ ರೋಮಾಂಚನವನ್ನು ಸಂಭ್ರಮಿಸುತ್ತದೆ.

ಪುಸ್ತಕಗಳ ತಾಕತ್ತೇ ಅಂತಹುದು. ಅವು ನಮ್ಮನ್ನು ಕನಸುಗಳನ್ನು ಕಾಣುವಂತೆ ಮಾಡುತ್ತವೆ; ಸಂಚಾರಿಗಳನ್ನಾಗಿಸುತ್ತವೆ; ಮುಂದಿನ ಪುಟಕ್ಕೆ ಓದು ಮುಂದುವರಿಸಲೋ ಅಥವಾ ಪರ್ಯಟನೆಗೆ ವಿಮಾನ ಹತ್ತಿಬಿಡಲೋ ಎಂಬ ಹುರುಪು ಮೂಡಿಸುತ್ತವೆ.

ನೀವು ಪ್ರಪಂಚವನ್ನು 80 ದಿನಗಳಲ್ಲಿ ಪರ್ಯಟನೆ ಮಾಡಲು ಆಗದಿರಬಹುದು. ಆದರೆ, 'ವೀಣಾ ವರ್ಲ್ಡ್'ನ 50–ಕಂಟ್ರಿ ಚಾಲೆಂಜ್‌ನೊಂದಿಗೆ ಈ ಭೂಗೋಳದ ಬಹಳಷ್ಟು ಭಾಗವನ್ನು ಸಂಚರಿಸಬಹುದು.

ಇವೆಲ್ಲವನ್ನೂ ಅವಲೋಕಿಸಿದಾಗ, ಕೆಲವು ಪುಸ್ತಕಗಳು ನನ್ನನ್ನು ಪಯಣಕ್ಕೆ ದೂಡಿವೆ; ಹಾಗೆಯೇ ಕೆಲವು ಪ್ರಯಾಣಗಳು ಇನ್ನಷ್ಟು ಓದಲು ಉತ್ತೇಜಿಸಿವೆ. ಇವೆರಡೂ ಅನುಭವಗಳು ಪರಸ್ಪರ ಅರ್ಥವನ್ನು ಹೆಚ್ಚಿಸಿಕೊಂಡಿವೆ ಎಂಬುದು ನನಗೆ ನಿಚ್ಚಳವಾಗುತ್ತದೆ.

ಕಥೆಗಳು ವಾಸ್ತವದ ಸ್ಥಳಗಳನ್ನು ಸಂಧಿಸಿದಾಗ ಉಂಟಾಗುವ ಮೋಡಿಯು ಮರೆಯಲಾಗದಂಥದ್ದು.

ಈಗ ಹೇಳಿ– ನಿಮ್ಮ ಮುಂದಿನ ಪಯಣವನ್ನು ಪ್ರೇರೇಪಿಸಲು ಕಾದು ಕೂತಿರುವ ಪುಸ್ತಕವಾದರೂ ಯಾವುದು?